ಕರ್ನಾಟಕ ವಿಧಾನ ಪರಿಷತ್ತು

(158ನೇ ಮುಂದುವರೆದ ಅಧಿವೇಶನ)

ಗುರುವಾರ, 12ನೇ ಮಾರ್ಚ್ 2026

# ವಿಷಯಾನುಕ್ರಮಣಿಕೆ (INDEX)

01. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

1079– ಅಬಕಾರಿ ಇಲಾಖೆಯಿಂದ ಸಂಗ್ರಹಿಸಲಾದ ಆದಾಯದ ಬಗ್ಗೆ.

– ಶ್ರೀ ಎಂ.ನಾಗರಾಜು
– ಶ್ರೀ ಆರ್.ಬಿ.ತಿಮ್ಮಾಪೂರ (ಅಬಕಾರಿ ಸಚಿವರು)

1122– ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಂದ ಸಾರ್ವಜನಿಕ ಸೇವೆಗಳಲ್ಲಿ ಸಮಸ್ಯೆಗಳು ಹೆಚ್ಚುತ್ತಿದ್ದು ಶೀಘ್ರವಾಗಿ ನೇಮಕಾತಿಗಳನ್ನು ಮಾಡುವ ಕುರಿತು.

– ಶ್ರೀ ಶಶೀಲ್ ಜಿ.ನಮೋಶಿ
– ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

1081– ಆಡಳಿತ ಸುಧಾರಣೆ ಕುರಿತಂತೆ ಹಾರನಹಳ್ಳಿ ರಾಮಸ್ವಾಮಿ ಆಯೋಗದ ವರದಿ ಕುರಿತು.

– ಶ್ರೀಮತಿ ಭಾರತಿ ಶೆಟ್ಟಿ
– ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

1102–ಜಿ.ಬಿ.ಎ. ವ್ಯಾಪ್ತಿಯ ಸಾರ್ವಜನಿಕ ಶೌಚಾಲಯಗಳ ಅವ್ಯವಸ್ಥೆ ಕುರಿತು

– ಡಾ: ಆರತಿ ಕೃಷ್ಣ
– ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

1126– ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಬಾಗಲಕೋಟೆ ನಗರದಲ್ಲಿನ ಮುಸ್ಲಿಂ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿರುವ ಕುರಿತು.

– ಶ್ರೀ ಪಿ.ಹೆಚ್.ಪೂಜಾರ್
– ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

1054– ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬರುತ್ತಿರುವ ಕುರಿತು.

- ಶ್ರೀ ಮಧು ಜಿ.ಮಾದೇಗೌಡ
- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

1082– ಪೊಲೀಸ್ ನೇಮಕಾತಿ ಬಗ್ಗೆ

- ಶ್ರೀ ಕಿಶೋರ ಕುಮಾರ್ ಪುತ್ತೂರು
- ಡಾ: ಜಿ.ಪರಮೇಶ್ವರ (ಗೃಹ ಸಚಿವರು)

1005– ರಾಜ್ಯದಲ್ಲಿ ಸೈಬರ್ ಅಪರಾಧಗಳು ಹೆಚ್ಚಾಗಿರುವ ಬಗ್ಗೆ.

- ಶ್ರೀ ಗೋವಿಂದ ರಾಜು
- ಡಾ: ಜಿ.ಪರಮೇಶ್ವರ (ಗೃಹ ಸಚಿವರು)

1117– ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ಇನ್ನಿತರ ಯೋಜನೆಗಳ ಬಗ್ಗೆ

- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

1007–2017ನೇ ಸಾಲಿನ ಡಿ.ವೈ.ಎಸ್.ಪಿ ಗಳಿಗೆ ಪದೋನ್ನತಿ ನೀಡುವ ಬಗ್ಗೆ.

- ಶ್ರೀ ಪುಟ್ಟಣ್ಣ
- ಡಾ: ಜಿ.ಪರಮೇಶ್ವರ (ಗೃಹ ಸಚಿವರು)

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

2. ಪ್ರಕಟಣೆ

"ಮಾನ್ಯ ಸಭಾಪತಿಯವರ ಹಾಗೂ ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡಲು ಮಾನ್ಯ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ಬಗ್ಗೆ."

3. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು.

ಅ) ಮಧ್ಯಪ್ರಾಚ್ಯದಲ್ಲಿ ಯುದ್ಧ ಭೀತಿ ಹೆಚ್ಚಾಗುತ್ತಿರುವುದರಿಂದ, ಕೊಲ್ಲಿ ರಾಷ್ಟ್ರಗಳಲ್ಲಿ ಉದ್ಯೋಗನಿರತ ಅನಿವಾಸಿ ಕನ್ನಡಿಗರ ಹಿತಾಸಕ್ತಿ ಕಾಪಾಡುವ ಕುರಿತು.

- ಡಾ: ಆರತಿ ಕೃಷ್ಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಸನ್ನತ್ತಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದ ಹಿನ್ನೀರಿನಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡುವ ಕುರಿತು.**

- ಡಾ: ಬಿ.ಜಿ.ಪಾಟೀಲ್
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿ)

**ಇ) ಊಟದಲ್ಲಿ ನೊಣ, ಜಿರಳೆ, ಕೂದಲು ಇರುವ ಬಗ್ಗೆ ಡಿಸಿ ಕಛೇರಿ ಎದುರು ವಸತಿ ನಿಲಯದ ವಿದ್ಯಾರ್ಥಿಗಳು ತಡರಾತ್ರಿ ಪ್ರತಿಭಟನೆ ನಡೆಸುತ್ತಿರುವ ಕುರಿತು.**

- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್)
- ಡಾ: ಎಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**ಈ) ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯಲ್ಲಿನ ಆಡಳಿತಾತ್ಮಕ ಗೊಂದಲ, ವಿವಾದಾತ್ಮಕ ನೇಮಕಾತಿಗಳು ಮತ್ತು ನಿರಂತರ ವಿಳಂಬ ಯೋಜನೆಯಿಂದ "ಕೇಂದ್ರದ ಯೋಜನೆ ಕೈ ತಪ್ಪುವ ಭೀತಿ" ಕುರಿತು.**

- ಶ್ರೀ ಎಂ.ನಾಗರಾಜು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ರಾಜ್ಯದ ವಸತಿ ಯೋಜನೆಗಳಿಗೆ ಗ್ರಹಣ ಬಡಿದಿದೆ, ಹತ್ತಾರು ವಸತಿ ಯೋಜನೆಗಳಿದ್ದರೂ ಬಡವರಿಗೆ ನಿವೇಶನ, ಮನೆ ಮಾತ್ರ ಸಿಕ್ಕಿಲ್ಲದಿರುವ ಕುರಿತು.**

- ಶ್ರೀ ಗೋವಿಂದ ರಾಜು
- ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

**ಊ) ರಾಜ್ಯದ ೨೩೦ ಸಮುದಾಯ ಆರೋಗ್ಯ ಕೇಂದ್ರಗಳನ್ನು ಕೆಳದರ್ಜೆಗೆ ಇಳಿಸುವ ಮತ್ತು ತಜ್ಞ ವೈದ್ಯರ ವರ್ಗಾವಣೆಯಿಂದ ಗ್ರಾಮೀಣ ಆರೋಗ್ಯ ಸೇವೆಯ ಮೇಲಾಗುವ ದುಷ್ಪರಿಣಾಮಗಳ ಕುರಿತು.**

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಋ) ಕರ್ನಾಟಕ ರಾಜ್ಯದ ಯುವ ಜನಾಂಗದ ಆಶೋತ್ತರಗಳಿಗೆ ಅನುಗುಣವಾಗಿ ಮತ್ತು ಮಾಧ್ಯಮಗಳ ವರದಿಗೆ ಪೂರಕವಾಗಿ ರಾಜ್ಯ ಯುವ ಆಯೋಗವನ್ನು ಸ್ಥಾಪಿಸುವ ಕುರಿತು.**

- ಶ್ರೀ ರಮೇಶ್ ಬಾಬು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಎ) ಕಲ್ಯಾಣ ಕರ್ನಾಟಕದ ಅತಿಥಿ ಶಿಕ್ಷಕರ ೯ ತಿಂಗಳ ಗೌರವಧನ ಬಾಕಿ ಬಿಡುಗಡೆ ಹಾಗೂ ವೇತನ ತಾರತಮ್ಯ ನಿವಾರಣೆ ಕುರಿತು.**

- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

ಏ) ತುಂಗಭದ್ರಾ ಜಲಾಶಯದ 33 ಗೇಟ್‌ಗಳನ್ನು ಅಳವಡಿಸುವ ಮೂಲಕ ದುರಸ್ತಿ ಕಾರ್ಯವನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸುವ ಕುರಿತು.

- ಶ್ರೀ ಟಿ.ಎ.ಶರವಣ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

ಐ) ಡಿಡಿಪಿಐ ಲಾಗಿನ್ ಕದ್ದು ಮಾನ್ಯತೆ ನವೀಕರಣ! ಸರ್ಕಾರಿ ಆನ್‌ಲೈನ್ ವ್ಯವಸ್ಥೆಗಿಲ್ಲ ಭದ್ರತೆ, ಸಮಗ್ರ ತನಿಖೆಗಾಗಿ ಪೋಲೀಸರ ಮೊರೆ! ಮತ್ತು ಮಾನ್ಯತೆ ನವೀಕರಣದ ಹಗರಣದ ಬಗ್ಗೆ.

- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಎಸ್. ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು)

ಒ) ವಿದ್ಯುತ್ ಸಂಪರ್ಕ ಪಡೆಯಲು ಓಸಿ ವಿನಾಯಿತಿಗಾಗಿ ಪ್ರತಿಭಟನೆ ಮಾಡುತ್ತಿರುವ ಕುರಿತು.

- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

4. ಗಮನ ಸೆಳೆಯುವ ಸೂಚನೆಗಳು ಹಾಗೂ ನಿಯಮ 330ರ ಮೇರೆಗೆ ಪ್ರಸ್ತಾಪಿಸಬೇಕಾಗಿರುವ ಬಹಳಷ್ಟು ವಿಷಯಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರಗಳು ಬಾರದಿರುವ ಕುರಿತು.

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

5. ಗಮನ ಸೆಳೆಯುವ ಸೂಚನೆಗಳು

ಅ) ಬೆಳಗಾವಿಯಲ್ಲಿ ಐ.ಟಿ ಮತ್ತು ಬಿ.ಟಿ ಪಾರ್ಕ್ ಸ್ಥಾಪಿಸಲು ಒತ್ತು ನೀಡುವುದರೊಂದಿಗೆ ಇನ್ನಷ್ಟು ಉದ್ಯಮಗಳು ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುವ ಕುರಿತು ಹಾಗೂ ಉತ್ತರ ಕರ್ನಾಟಕ ಭಾಗದ ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ.

- ಶ್ರೀ ಎಂ.ನಾಗರಾಜು
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**ಆ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಹೂವು ಬೆಳೆಯುವ ರೈತರಿಗೆ ಆಗುತ್ತಿರುವ ನಷ್ಟ ತಪ್ಪಿಸಲು ಚಿಕ್ಕ ಬಳ್ಳಾಪುರದ ನಂದಿ ಕ್ರಾಸ್ ಬಳ 46 ಎಕರೆ ಪ್ರದೇಶದಲ್ಲಿ ಹೈಟೆಕ್ ಹೂವಿನ ಮಾರುಕಟ್ಟೆ, ಅಂತರಾಷ್ಟ್ರೀಯ ಮಟ್ಟದ ಶೈತ್ಯಾಗಾರ' ಸ್ಥಾಪಿಸುವ ಬಗ್ಗೆ.**

- ಶ್ರೀ ಗೋವಿಂದ ರಾಜು
- ಶ್ರೀ ಶಿವಾನಂದ ಎಸ್. ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು)

6. ನಿಯಮ 330ರ ಮೇರೆಗೆ **ಚರ್ಚೆ**

**ಅ) ಕೃಷ್ಣ ಮೇಲ್ದಂಡೆ ಯೋಜನೆಗೆ ಒಳಪಡುವ ಸಂತ್ರಸ್ತ ರೈತ ಕುಟುಂಬಗಳಿಗೆ ಪುನರ್ವಸತಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು.**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)
- ಶ್ರೀ ಪಿ.ಹೆಚ್.ಪೂಜಾರ್

**ಆ) ಇಂದನ ಮತ್ತು ಅಡುಗೆ ಅನಿಲಗಳ ಮಾರಾಟದಲ್ಲಿ ಕೇಂದ್ರ ಸರ್ಕಾರದ ನಿಯಂತ್ರಣವಿಲ್ಲದ ಕಾರಣ ಯುದ್ಧದ ಹೆಸರಿನಲ್ಲಿ ಕಪ್ಪು ಮಾರುಕಟ್ಟೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿರುವ ಕುರಿತು.**

- ಶ್ರೀ ರಮೇಶ್ ಬಾಬು
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಶಿವಕುಮಾರ್ ಕೆ.
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎಂ ನಾಗರಾಜು
- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಐವನ್ ಡಿ'ಸೋಜಾ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಕೆ.ಎಚ್.ಮುನಿಯಪ್ಪ (ಆಹಾರ ಮತ್ತು ನಾಗರಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು)
- ಶ್ರೀ ಕೇಶವ ಪ್ರಸಾದ ಎಸ್.
- ಶ್ರೀ ಸಿ.ಟಿ.ರವಿ
- ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
- ಶ್ರೀ ಕೆ.ಎಸ್.ನವೀನ್

ಇ) ರಾಜ್ಯದಲ್ಲಿ ಮಂಗಳಮುಖಿಯರು ಸಮಾಜದ ಮುಖ್ಯವಾಹಿನಿಯಲ್ಲಿ ಶೋಷಣೆಗಳಗೆ ಒಳಪಡುತ್ತಿರುವುದರಿಂದ ಅವರ ಬದುಕನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಲು ಮತ್ತು ಸದರಿಯವರ ಮೇಲೆ ನಡೆಯುತ್ತಿರುವ ಶೋಷಣೆಯನ್ನು ತಪ್ಪಿಸಲು ಪ್ರತ್ಯೇಕ ನಿರ್ದೇಶನಾಲಯವನ್ನು ಹಾಗೂ ಗೃಹ ಇಲಾಖೆಯಲ್ಲಿ ಪ್ರತ್ಯೇಕ ಸೆಲ್ ಅನ್ನು ಸ್ಥಾಪಿಸುವ ಕುರಿತು.

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಶಿವಕುಮಾರ್ ಕೆ.
- ಡಾ:ಜಿ.ಪರಮೇಶ್ವರ (ಗೃಹ ಸಚಿವರು)

7. ಪ್ರಕಟಣೆ

"ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ ಕುರಿತು"

8. ವಿತ್ತೀಯ ಕಾರ್ಯಕಲಾಪ

2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.

- ಡಾ: ತಳವಾರ್ ಸಾಬಣ್ಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಎಂ.ಬಿ.ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಸಚಿವರು)
- ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.)

- - - - -

(330)12.03.2026.11.00ಟಿಸಿಹೆಚ್-ಆರ್ಎನ್

ಕರ್ನಾಟಕ ವಿಧಾನ ಪರಿಷತ್ತು

ಗುರುವಾರ, 12ನೇ ಮಾರ್ಚ್ 2026

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 01 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಡಾ: ಆರತಿ ಕೃಷ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.1102 ಅನ್ನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಕೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈ ಪ್ರಶ್ನೆಗೆ ಯಾರು ಉತ್ತರ ಕೊಡುತ್ತಾರೆ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಬರುತ್ತಿದ್ದಾರೆ, ಉತ್ತರ ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಶ್ನೆ ಸಂಖ್ಯೆ.1079
(ಉತ್ತರವನ್ನು ಲಗತ್ತಿಸಿದೆ)

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನನ್ನ ಮೂಲತಃ ಪ್ರಶ್ನೆ ಇರುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಕಳೆದ ಬಾರಿ Excise ನಿಂದ ಯಾವ expected income ಇತ್ತೋ ಆ income ಇವರು target reach ಆಗಲಿಲ್ಲ ಎಂದು ನನಗೆ ಅರ್ಥವಾಗಿದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ ನನಗೆ ಏನು ಅನಿಸಿದ್ದು ಎಂದರೆ, ಎಲ್ಲೋ ಒಂದು ಕಡೆ ಕರ್ನಾಟಕದಲ್ಲಿ ಕುಡಿಯತಕ್ಕಂಥ ಕುಡುಕರು ಕಡಿಮೆಯಾಗಿದ್ದಾರೆಂದು ಬಹಳ ಸಂತೋಷವಾಗಿದ್ದೆನು. Whether reached the target or not? ಆದರೆ ನಾನು ವಿಚಾರ ಬೇರೆ ತಿಳಿದುಕೊಂಡಿದ್ದು ಏನೆಂದರೆ, ನಕಲಿಯಾಗಿ ತಯಾರು ಮಾಡುತ್ತಿರುವ illicit liquor ಜಾಸ್ತಿಯಾಗಿದೆ. ಸಿ.ಹೆಚ್. ಪೌಡರ್ ಅನ್ನು mix ಮಾಡಿಕೊಂಡು ಮಾಡುತ್ತಿರತಕ್ಕಂಥ illicit liquor ಮತ್ತು ಗೋವಾದಿಂದ ರಾಯಚೂರು ಮತ್ತು ಬೆಳಗಾವಿಗೆ illegal ಆಗಿ ಬರುತ್ತಿರುವ ಹಲವಾರು ಪ್ರಕರಣಗಳು register ಆಗಿವೆಯೆಂದು ಉತ್ತರದಲ್ಲಿ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಇವೆಲ್ಲವನ್ನೂ ನೋಡಿದಾಗ ಎಲ್ಲೋ ಒಂದುಕಡೆ ಕುಡುಕರ ಸಂಖ್ಯೆಯಂತೂ ಕಡಿಮೆಯಾಗಲಿಲ್ಲ, ಸಮಾಜ ಸುಧಾರಣೆ ಆಗಲಿಲ್ಲ, ಇನ್ನೊಂದು ಕಡೆ target ಕೂಡ reach ಆಗಲಿಲ್ಲ. ಹೊರ ರಾಜ್ಯದಲ್ಲಿರತಕ್ಕಂಥ Excise ನವರು ಈ ಕಡೆಗೆ ಮದ್ಯವನ್ನು ಸರಬರಾಜು ಮಾಡುತ್ತಿದ್ದಾರೆ ಅಥವಾ ನಮ್ಮ ರಾಜ್ಯದ ಜನ ಆ ಕಡೆ ಹೋಗಿ ಕುಡಿದುಕೊಂಡು ಬರುವುದಾಗಲೀ ಅಥವಾ ಅಲ್ಲಿಂದ ಲಿಕ್ಕರ್ ತಂದು ಇಲ್ಲಿ ಮಾರಾಟ ಮಾಡುವುದಾಗಲೀ, ಉತ್ತರ ಕರ್ನಾಟಕದ ರಾಯಚೂರು ಮತ್ತು ಬೆಳಗಾವಿಯಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದು, ಇದನ್ನು ತಡೆಗಟ್ಟುವುದಕ್ಕೋಸ್ಕರ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಎಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅಷ್ಟು ಕ್ರಮಗಳನ್ನು ಕೈಗೊಂಡಿಲ್ಲ ಎಂದು ನಾನು ಮಾನ್ಯ ಸಭಾಪತಿಯವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಏಕೆಂದರೆ, ನಮ್ಮ ಸಮಾಜದಲ್ಲಿರುವ ಯುವಕರು ಯಾರಾದರೂ ದಾರಿ ತಪ್ಪುತ್ತಿದ್ದಾರೆಂದರೆ, ಈ liquor is one of the biggest source ಎಂದು ಹೇಳುತ್ತೇನೆ. ಗಡಿಭಾಗಗಳಲ್ಲಿ ಜನ ವಲಸೆ ಹೋಗುವುದು ಬಹಳ ಜಾಸ್ತಿಯಾಗಿದೆ. ಏಕೆಂದರೆ ಆ ಭಾಗದಲ್ಲಿರತಕ್ಕಂಥ infrastructure ಇನ್ನೂ ಸ್ವಲ್ಪ develop ಆಗಿದ್ದರೆ ಯಾರೂ ಕೂಡ ವಲಸೆ ಹೋಗುತ್ತಿರಲಿಲ್ಲ. ಈಗ ಏನಾಗಿದೆಯೆಂದರೆ ಉದ್ಯೋಗಕ್ಕೋಸ್ಕರ ಪಕ್ಕದ ರಾಜ್ಯಗಳಿಗೆ ಹೋದಾಗ ನಮ್ಮ ಯುವಕರು ಅಲ್ಲಿನ ಮದ್ಯದ ಚಟಗಳಿಗೆ ಬಲಿಯಾಗುತ್ತಿರುವುದನ್ನು ನೋಡಿದಾಗ, ಈ ಅಬಕಾರಿ ಇಲಾಖೆಗೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಆ ಟಾಸ್ಕ್‌ಫೋರ್ಸ್‌ಗಳು ಇನ್ನೂ ಜವಾಬ್ದಾರಿಯುತವಾಗಿ ಕೆಲಸ ಮಾಡುವುದಕ್ಕೆ ಅನುವು ಮಾಡಿಕೊಡಬೇಕು. ಇನ್ನೊಂದು ವಿಚಾರಧಾರೆ ಏನೆಂದರೆ, specially ರಾಯಚೂರು, ಬೆಳಗಾವಿ ಮತ್ತು

ಚಾಮರಾಜನಗರದಂತಹ ಗಡಿ ಭಾಗಗಳಲ್ಲಿ ಬಹಳ ಶೋಷಿತ ವರ್ಗಗಳು ಮತ್ತು ಅಲ್ಲಿರತಕ್ಕಂಥ ಯುವಕರುಗಳು ಇಂತಹ ಚಟಗಳಿಗೆ ಬಲಿಯಾಗುತ್ತಿರುವುದರಿಂದ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಅದು ಆಗುತ್ತಿಲ್ಲ ಎನ್ನುವ ಕಾರಣಕ್ಕೋಸ್ಕರ ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ. ಮಾನ್ಯ ಅಬಕಾರಿ ಸಚಿವರು ಮುಂದಿನ ದಿನಗಳಲ್ಲಿ ಏನು ಕ್ರಮಗಳನ್ನು ಕೈಗೊಳ್ಳುತ್ತಾರೆಂದು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅಬಕಾರಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, ಈಗಾಗಲೇ excise ಗೆ ಇನ್‌ಕಮ್ ಕಡಿಮೆಯಾಗಿದೆಯೆಂದು ಹೇಳಿದರು. ಕಳೆದ ವರ್ಷ 2025 ರಿಂದ 2026ರ ಅಂತ್ಯಕ್ಕೆ ಇಲಾಖೆಯು ಗಳಿಸಿರುವ ಆದಾಯ ರೂ. 33,370.54 ಕೋಟಿ ಆಗಿರುತ್ತದೆ. ಈ ವರ್ಷದಲ್ಲಿ ಫೆಬ್ರವರಿ-2026ರ ಅಂತ್ಯಕ್ಕೆ ರೂ.36,492.47 ಕೋಟಿಗಳಷ್ಟು ಆಗಿರುತ್ತದೆ. ನಿನ್ನೆವರೆಗೂ ಆಗಿರತಕ್ಕಂಥ figure ತೆಗೆದುಕೊಂಡಾಗ ರೂ.37,521 ಕೋಟಿ ಆಗಿದೆ. ಅಂದರೆ ರೂ. 4,298 ಕೋಟಿಗಳು ಕಳೆದ ವರ್ಷಕ್ಕಿಂತ ಈ ವರ್ಷ ಜಾಸ್ತಿ income ನಿನ್ನೆವರೆಗೂ ಆಗಿದೆ. ಎರಡನೆಯದಾಗಿ, ಮದ್ಯ ಮಾರಾಟದಲ್ಲಿ ಕುಸಿತ ಆಗಿರುವುದರ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅತಿ ಮುಖ್ಯವಾಗಿ ಇದಕ್ಕೆ ಈಗಾಗಲೇ ಎರಡು-ಮೂರು ಬಾರಿ cabinet ನಲ್ಲೂ ಕೂಡ ಚರ್ಚೆಯಾಗಿದೆ. ಆಂಧ್ರಪ್ರದೇಶದ ಬಾರ್ಡರ್‌ನಲ್ಲಿ ಆಂಧ್ರ ಪ್ರದೇಶದ ಮುಖ್ಯಮಂತ್ರಿಯವರಾದ ಶ್ರೀ ಚಂದ್ರಬಾಬು ನಾಯ್ಡುರವರು Excise Policy change ಮಾಡಿದ ನಂತರ, ಮದ್ಯದ rate ಎಲ್ಲಾ ಕಡಿಮೆಯಾಯಿತು. ಈ ಮೊದಲು ಅಲ್ಲಿ ಮದ್ಯದ rate ಜಾಸ್ತಿ ಇತ್ತು. ಆಂಧ್ರ ಪ್ರದೇಶದ ಬಾರ್ಡರ್‌ನಲ್ಲಿರತಕ್ಕಂಥ ಕೆಲವರು ನಮ್ಮ ಕರ್ನಾಟಕ ಬಾರ್ಡರ್‌ನಲ್ಲಿರುವ ಜಿಲ್ಲೆಗಳಿಗೆ ಬಂದು ಕುಡಿದು ಹೋಗುತ್ತಿದ್ದರು. ಈಗ ಅಲ್ಲಿ ಅವರು policy change ಮಾಡಿದ ಮೇಲೆ ಆ ಭಾಗದ ಜನರು ನಮ್ಮ ಗಡಿಭಾಗದ ಜಿಲ್ಲೆಗಳಿಗೆ ಬರುವುದು ಕಡಿಮೆಯಾಗಿದೆ. ಹಾಗಾಗಿ, ಇವತ್ತಿನ ದಿವಸ ಮದ್ಯ ಮಾರಾಟದಲ್ಲಿ ಕುಸಿತವಾಗಿದೆ. ಮತ್ತೆ ಬಿಯರ್ ಮತ್ತು ಬೇರೆ ಬೇರೆ ಮದ್ಯದ ಬಗ್ಗೆ ಎಲ್ಲಾ ಕೇಳಿದ್ದಾರೆ. ಈ ವರ್ಷ ಜಾಸ್ತಿ ಮಳೆಯಾಗಿದೆ ಮತ್ತು ಚಳಿ ಕೂಡ ಜಾಸ್ತಿಯಾಗಿದೆ. ಹಾಗಾಗಿ, ಬಿಯರ್ ಖರ್ಚಾಗುವುದು ಕಡಿಮೆಯಾಗಿದೆ ಎಂದು ಇಲಾಖೆ ಹೇಳುತ್ತಿದೆ. ಮೂರನೆಯದಾಗಿ, ಬೆಳಗಾವಿ ಮತ್ತು ರಾಯಚೂರು ಜಿಲ್ಲೆಯ ಬಾರ್ಡರ್‌ನಲ್ಲಿ ಒಳಹರಿವನ್ನು ತಡೆಯಲು ಪ್ರಶ್ನೆ ಕೇಳಿದ್ದಾರೆ. ಈಗಾಗಲೇ ರಾಯಚೂರು ಜಿಲ್ಲೆಯಲ್ಲಿ ಸಿ.ಹೆಚ್. ಪೌಡರ್ ಮಾರಾಟ ಮಾಡತಕ್ಕಂಥ 5 ಜನರ ಮೇಲೆ ಗೂಂಡಾ ಕೇಸ್ ದಾಖಲಿಸಲಾಗಿದೆ. ಈಗಾಗಲೇ ಒಬ್ಬರನ್ನು ಗಡಿಪಾರು ಮಾಡಲಾಗಿದೆ. 4 ಜನರಿಗೆ ಕೋರ್ಟ್‌ನಲ್ಲಿ stay ಸಿಕ್ಕಿದ್ದು, ಅದು ಕೇಸ್ ನಡೆಯುತ್ತಿದೆ. ಹಾಗಾಗಿ, ಈಗ complicated ಜಿಲ್ಲೆಗಳಲ್ಲಿ ಡಿ.ಸಿ., ಸಿ.ಇ.ಓ ಮತ್ತು ಅರಣ್ಯ ಇಲಾಖೆಯ ಡಿ.ಎಫ್.ಓ ಈ ಮೂರು ಅಧಿಕಾರಿಗಳ co-ordination committee ಮಾಡಿ ಇವರೆಲ್ಲರೂ ಸೇರಿ ಈ ರೀತಿಯಾಗಿ raid ಮಾಡುವುದು ಇರತಕ್ಕಂಥದ್ದು. ಇದರ ಜೊತೆಗೆ ಕಲಬುರಗಿ ಡಿವಿಜನ್‌ನಲ್ಲಿ ಅಬಕಾರಿ ಇಲಾಖೆಯಲ್ಲಿ ಡಿ.ಸಿ.ಯವರ ನೇತೃತ್ವದಲ್ಲಿ ಎಷ್ಟೆಷ್ಟು case raid ಮಾಡಿದ್ದಾರೆ. ಅದು ಏನೇನಾಗಿದೆ, ಎಷ್ಟು ಲೀಟರ್ seize ಮಾಡಿದ್ದಾರೆ. ಎಷ್ಟು ಅಮೌಂಟ್

ಬಂದಿದೆ ಎಂಬ ಎಲ್ಲಾ details ತಮಗೆ ಕೊಟ್ಟಿದ್ದಾರೆ. ಹಾಗಾಗಿ, ಎಲ್ಲಾ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆಮೇಲೆ ಶ್ರೀ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚನೆ ಮಾಡಿದ್ದಾರೆ. ಆ ಕಮಿಟಿ ರಿಪೋರ್ಟ್ ಬಂದನಂತರ ಉಳಿದಂತಹ ಸುಧಾರಣೆ ಮಾಡತಕ್ಕಂಥ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಸಿ.ಹೆಚ್. ಪೌಡರ್ ವಿಚಾರದಲ್ಲಿ ಹೇಳುವುದಾದರೆ, ಬ್ಲೀಚಿಂಗ್ ಪೌಡರ್ mix ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಬ್ಲೀಚಿಂಗ್ ಪೌಡರ್ ಅನ್ನು ಲಿಕ್ಕರ್‌ನಲ್ಲಿ mix ಮಾಡುವುದರಿಂದ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ. ಒಂದುಕಡೆ ನಾವು Excise ನಿಂದ income ಬಯಸುತ್ತೇವೆ. ಅದೇ B.P.L card ಹೊಂದಿದ್ದು ಬಡತನದಲ್ಲಿರತಕ್ಕಂಥ ಬಡವರು ಸಿಹೆಚ್ ಪೌಡರ್ mix ಆಗಿರುವ ಲಿಕ್ಕರ್‌ಅನ್ನು ಕುಡಿದು ಆರೋಗ್ಯ ಕೇಂದ್ರಗಳಿಗೆ ಹೋದಾಗ ಅಲ್ಲಿ ಸರ್ಕಾರ ಮತ್ತೆ ಅವರಿಗೆ ದುಡ್ಡು ಖರ್ಚು ಮಾಡಬೇಕಾಗುತ್ತದೆ. ಒಂದುಕಡೆ ವರಮಾನ ಬರುತ್ತದೆ. ಮತ್ತೊಂದು ಕಡೆ ಖರ್ಚಾಗುತ್ತದೆ. ಈ ಸಿ.ಹೆಚ್ ಪೌಡರ್‌ನ್ನು ಆ ಬ್ಲೀಚಿಂಗ್ ಪೌಡರ್ mix ಮಾಡಿ ಮಾಡುತ್ತಿರುವ illicit liquor ಅನ್ನು ನಾವು ಯಾವುದೇ ಕಾರಣಕ್ಕೂ allow ಮಾಡಬಾರದು. ಅಂತಹ ವ್ಯವಹಾರಗಳನ್ನು ಮಾಡತಕ್ಕಂಥವರ ಮೇಲೆ ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕು. ಮತ್ತೆ ಬೆಂಗಳೂರು ನಗರದ ವಿಚಾರಕ್ಕೆ ಬಂದಾಗ C.L-7, C.L-2 ಮತ್ತು C.L-9 ಎಂಬ ಲೈಸೆನ್ಸ್ ಕೊಡತಕ್ಕಂಥದ್ದನ್ನು ನಾವು ನೋಡಿದ್ದೇವೆ. ಅವರು ಲೈಸೆನ್ಸ್ ತೆಗೆದುಕೊಂಡು ಮಾಡಲಿ. ಆದರೆ ವಿಚಾರ ಬಂದಿರತಕ್ಕಂಥದ್ದು Wine Store ಗೆ licence ತೆಗೆದುಕೊಂಡು, ಅಲ್ಲಿ ಅವರು ಬರೀ parcel ಕೊಡುವುದಕ್ಕೆ ಮಾತ್ರ ಅವಕಾಶ ಇರುತ್ತದೆ. ಆದರೆ ಎಲ್ಲಾ wine store ಗಳಲ್ಲಿ Bar ಗಳಂತೆ ಪಕ್ಕದಲ್ಲೇ ಇನ್ನೊಂದು shelter ಇಟ್ಟುಕೊಂಡು ಅಲ್ಲಿ ಕುಡಿದುಕೊಂಡು ಕುಳಿತಿರುತ್ತಾರೆ. ಸುಮಾರು 25 ರಿಂದ 30 ಅಡಿಗಳ ಸಣ್ಣ ರಸ್ತೆಗಳಲ್ಲಿ ಎರಡೆರಡು ಬಸ್‌ಗಳು ಓಡಾಡುವುದಕ್ಕೆ ಕಷ್ಟವಾಗುತ್ತಿದೆ. ಅಂತಹ ಜಾಗದಲ್ಲಿ 50-50 two wheeler ನಿಲ್ಲಿಸಿಕೊಂಡರೆ ಅಲ್ಲಿ ಜನ ಓಡಾಡುವುದಕ್ಕೆ ಆಗುವುದಿಲ್ಲ. ಹೆಣ್ಣುಮಕ್ಕಳು footpath ಮೇಲೆ walk ಮಾಡುವುದಕ್ಕೆ ಆಗುವುದಿಲ್ಲ. Wine Store ಗಳಿಗೆ loose ಕೊಡತಕ್ಕಂಥದ್ದನ್ನು ನಿಲ್ಲಿಸುವುದಕ್ಕೆ ಯಾವ ಕಾರಣಕ್ಕೆ ಆಗುತ್ತಿಲ್ಲ ಎಂದು ಕೇಳುತ್ತಿದ್ದೇನೆ. ಬಾರ್‌ಗಳಿಗೋಸ್ಕರವೇ C.L-9 ಕೊಟ್ಟಿರುತ್ತಾರೆ. ಬೇಕಾದರೆ ಅಲ್ಲಿ ಸರಬರಾಜು ಮಾಡಿಕೊಂಡು ಕುಡಿಯಬಹುದು. ಆದರೆ Wine Store ನಲ್ಲಿ ಕುಡಿಯುವುದು ಘೋರ ಅಪರಾಧವಾಗಿರುವುದರಿಂದ ಸಮಾಜದಲ್ಲಿ ಸಮಾಜಘಾತುಕ ಶಕ್ತಿಗಳು ರಸ್ತೆಯಲ್ಲಿ ನಿಂತುಕೊಂಡು ಹೆಣ್ಣುಮಕ್ಕಳಿಗೆ ತೊಂದರೆ ಮಾಡುತ್ತಿರುವವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಬಕಾರಿ ಇಲಾಖೆ ವಿಫಲವಾಗಿರುವುದರಿಂದ ಅದಕ್ಕೆ ಏನು ಮಾಡುತ್ತಾರೆ ಎಂದು ಕೇಳುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ನಾಗರಾಜು ರವರು ಹೇಳಿರತಕ್ಕಂಥ ವಿಷಯಗಳ ಬಗ್ಗೆ ಸಾಕಷ್ಟು ದೂರುಗಳು ಬಂದಿರುವುದರಿಂದ, ಇಲಾಖೆಯವರು ಇದನ್ನೆಲ್ಲಾ ತಡೆಗಟ್ಟಲು ಈಗಾಗಲೇ ನೂತನ ನಿಯಮಗಳನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಮುಂಬರುವ ದಿನಗಳಲ್ಲಿ ಅವರು ಹೇಳಿದ ವಿಷಯಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇಲಾಖೆಯ ಪರವಾಗಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆಂದು ತಮಗೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ.ನಮೋಶಿಯವರೇ, ತಾವು ತಮ್ಮ ಪ್ರಶ್ನೆ ಕೇಳಿ. ಮಾನ್ಯ ಭೋಜೇಗೌಡ ರವರು ಮಾತನಾಡಿದ್ದು ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಮಾನ್ಯ ಭೋಜೇಗೌಡ ರವರು ಮಾತನಾಡಿದ್ದನ್ನು ನಡವಳಿಕೆಯಲ್ಲಿ ದಾಖಲಿಸಿರುವುದಿಲ್ಲ)**

**ಸಭಾಪತಿಯವರು:-** ಮಾನ್ಯ ಶಶೀಲ್ ಜಿ.ನಮೋಶಿಯವರೇ, ತಮ್ಮ ಪ್ರಶ್ನೆ ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ದಯಮಾಡಿ ನೋಟೀಸ್ ಕೊಡಬೇಡಿ.

**ಸಭಾಪತಿಯವರು:-** ಆಯಿತು, ಬೋಜೇಗೌಡರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಮಾತನಾಡಿ ನಾಳೆ ಕರೆಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಪ್ರತಿ ಬಾರಿ ಹೇಳುತ್ತೇನೆ. ಮಾನ್ಯ ಸಚಿವರ ಕೆಲಸ ಏನು? ಇಷ್ಟು ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಮಾನ್ಯ ಸದಸ್ಯರು ಹೇಳುವುದು ಸರಿಯಾಗಿದೆ. ಈ ರೀತಿ ಆದರೆ ಏನು ಮಾಡುವುದು?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಮಾಹಿತಿ ತರುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಏನು ಮಾಹಿತಿ ತರುತ್ತೀರಿ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅರ್ಧ ಗಂಟೆ ಕಾಲ ಸದನವನ್ನು adjourn ಮಾಡಿ. ಅವರೆಲ್ಲರೂ ಬರಲಿ. ಮಾನ್ಯ ಸಚಿವರೆಲ್ಲರೂ ಬಂದನಂತರ ಸದನ ಪ್ರಾರಂಭ ಮಾಡೋಣ. ನಾವು ಯಾರಿಗಾಗಿ ಮಾಡಬೇಕು?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಎಲ್ಲಾ ಮಾತನಾಡಿ ಕಳುಹಿಸಿಕೊಡುತ್ತೇವೆ.

**(ಮುಂದು)**

(331)12.3.2026/11.10/ಎಂ.ಎಂ-ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಅವರ ಪರವಾಗಿ ಯಾವ ಮಂತ್ರಿಗಳು ಬರುತ್ತಾರೆ ಎಂಬುದನ್ನಾದರೂ ತಿಳಿಸಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾಳೆ ಮಾಹಿತಿ ಕೊಡುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು capable ಇದ್ದಾರೆ ಅವರು ಉತ್ತರ ಕೊಟ್ಟರೆ ನಾವು ಒಪ್ಪಿಕೊಳ್ಳುತ್ತೇವೆ. ಹಾಗಾದರೆ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳ ಈ ನೋಟಿಸ್ ಏತಕ್ಕೆ ಕೊಡಬೇಕು? ಇದನ್ನು ಕೊಡುವುದೇ ಬೇಡ?

**ಸಭಾಪತಿಯವರು:-** ಈಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು . . .

**ಸರ್ಕಾರದ ಮುಖ್ಯ ಸಚೇತಕರು:-** ಮಾನ್ಯ ಸಭಾಪತಿಯವರೇ, ಅವರು ಚೇಂಬರ್‌ನಲ್ಲಿದ್ದಾರೆ.

**ಸಭಾಪತಿಯವರು:-** ಇಲ್ಲಿ ಉತ್ತರ ಕೊಡಬೇಕಲ್ಲವೇ? ಚೇಂಬರ್‌ನಲ್ಲಿದ್ದಾರೆ ಹೇಗೆ? ಹಾಗಾದರೆ ಸದನವನ್ನು ಹತ್ತು ನಿಮಿಷ ಮುಂದೂಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಗೃಹ ಸಚಿವರು ಸದನಕ್ಕೆ ಆಗಮಿಸಿದರು)**

ಮಾನ್ಯ ಸಭಾನಾಯಕರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನೀವೇ ಉತ್ತರ ಕೊಡುತ್ತೀರಲ್ಲವೇ?

**ಶ್ರೀ ಎನ್.ಎಸ್. ಬೋಸರಾಜು:-** ಆಯಿತು ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ: 1122

(ಉತ್ತರವನ್ನು ಲಗತ್ತಿಸಿದೆ)

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರದ ಹಂತದಲ್ಲಿ ಪ್ರಸ್ತುತ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.84 ಲಕ್ಷಕ್ಕಿಂತಲೂ ಅಧಿಕ ಹುದ್ದೆಗಳು ಖಾಲಿ ಇರುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಉತ್ತರದಲ್ಲಿ ಹೌದು ಎಂದು ಒಪ್ಪಿಕೊಂಡು ಗುತ್ತಿಗೆ ಆಧಾರದ ಮೇಲೆ ಕೆಲವು ಕಡೆ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಮೂರು ವರ್ಷ ವಿಳಂಬವಾಗಿದೆ. ನಾವು ಮೊದಲೂ ಕೂಡ ವಿನಂತಿ ಮಾಡಿದ್ದೆವು. ಒಳಮೀಸಲಾತಿಯ ಕಾರಣಕ್ಕಾಗಿ ನೇಮಕಾತಿ ಮಾಡುವುದನ್ನು ನಿಲ್ಲಿಸಬೇಡಿ. ಕೊನೆಗೆ ಕೋರ್ಟ್ ಅದನ್ನೇ ಆದೇಶ ಮಾಡಿ ಮೊದಲು ಹೇಗಿತ್ತೋ ಹಾಗೇ ಮಾಡಿ ಎಂದು ಹೇಳಿತು. ನೀವು ಕೋರ್ಟ್‌ನಿಂದ ಪೂರ್ತಿ ಇತ್ಯರ್ಥ ಮಾಡಿಕೊಂಡು ಎಲ್ಲವನ್ನೂ ಸರಿ ಮಾಡಿಕೊಂಡು ಬಂದಿದ್ದರೆ ಈ ಮೂರು ವರ್ಷ ನೇಮಕಾತಿ ಪ್ರಕ್ರಿಯೆ ನಿಲ್ಲುತ್ತಿರಲಿಲ್ಲ. ಇದು ಏಕೋ ಸರಿ ಅನಿಸಲಿಲ್ಲ. ಇದನ್ನು ಹೇಳಬೇಕಾಗುತ್ತದೆ. ಇದರಿಂದ ನಿರುದ್ಯೋಗಿಗಳಿಗೆ ಬಹಳ ತೊಂದರೆಯಾಗಿದೆ. 8,157 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. 8,157 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದಾರೆ ಆದರೆ ಯಾವ ಆಧಾರದ ಮೇಲೆ ಅದನ್ನು ಸಂವಿಧಾನದ ಅನುಚ್ಛೇದ 371ಜೆ ಅನ್ನು implement ಮಾಡುತ್ತಿದ್ದೀರಿ? ಅದರಲ್ಲಿ ಬಹಳ ದೊಡ್ಡ ತಪ್ಪನ್ನು ಮಾಡುತ್ತಿದ್ದೀರಿ. ಇನ್ನೊಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಧಾರವಾಡದಲ್ಲಿ 40,000 ಹುದ್ದೆಗಳನ್ನು ತುಂಬಿದ್ದೇವೆ ಎಂದು ಒಂದು ಹೇಳಿಕೆ ಕೊಡುತ್ತಾರೆ. ಅದರ ಬಗ್ಗೆ ಸ್ವಲ್ಪ ಸ್ಪಷ್ಟೀಕರಣ ಕೊಡಬೇಕು. ಮುಖ್ಯಮಂತ್ರಿಗಳು ಈ ರೀತಿ ಹೇಳಿಕೆ ಕೊಟ್ಟಿದ್ದು ಪತ್ರಿಕೆಯಲ್ಲಿ ಬಂದಿದ್ದ ಈ ವಿಚಾರವನ್ನು ನಾನು ಜೆರಾಕ್ಸ್ ತೆಗೆದುಕೊಂಡಿದ್ದನ್ನು ಹೇಳುತ್ತಿದ್ದೇನೆ. 8,157 ಹುದ್ದೆಗಳನ್ನು ನಾವು ತುಂಬಿದ್ದೇವೆ ಅಥವಾ ಪೂರ್ಣಗೊಂಡಿದೆ ಎಂದು ಹೇಳುತ್ತಿದ್ದಾರಲ್ಲಾ ಇಲ್ಲಿ ಬಹಳ ತಪ್ಪುಗಳನ್ನು ಮಾಡುತ್ತಿದ್ದಾರೆ. ನಾನು ಪದೇ ಪದೇ ಹೇಳುತ್ತಿದ್ದೇನೆ. ಸಂವಿಧಾನದ ಅನುಚ್ಛೇದ 371-ಜೆ ಅಡಿಯಲ್ಲಿ implementation ಸರಿಯಾಗುತ್ತಿರಲಿಲ್ಲ. ಕೊನೆಗೆ ದಿನಾಂಕ 6.3.2025ಕ್ಕೆ ಒಂದೇ ಪಟ್ಟಿಯನ್ನು ಮಾಡಿ ಈ ರೀತಿ ಮಾಡಬೇಕೆಂದು ಡಿ.ಪಿ.ಎ.ಆರ್. ಆದೇಶ ಮಾಡಿದೆ. There is a clear cut direction regarding how it should be done. ಆದರೂ ಕೂಡ ಮೊನ್ನೆ 310 ಪ್ರಾಂಶುಪಾಲರುಗಳ ನೇಮಕಾತಿಯಾಯಿತು. ಅಲ್ಲಿ ಕೂಡ ಉಲ್ಲಂಘನೆ ಮಾಡಿದ್ದಾರೆ. ಒಂದೇ ಪಟ್ಟಿ ಇದ್ದಾಗ ಏನು ಮಾಡಬೇಕೆಂದು ಸ್ಪಷ್ಟವಾಗಿ ಡಿ.ಪಿ.ಎ.ಆರ್. ಸುತ್ತೋಲೆ ಹೊರಡಿಸಿ ಒಂದೇ ಪಟ್ಟಿ ಮಾಡಿದಲ್ಲಿ ಮೊದಲು ಮೆರಿಟ್ ಲಿಸ್ಟನ್ನು ಪ್ರಕಟಣೆ ಮಾಡಿ, ಆ ಮೆರಿಟ್ ಲಿಸ್ಟ್‌ನಲ್ಲಿ ಜನರಲ್ ಕೋಟಾ ಎಷ್ಟಿದೆ ಅದರ ಅನುಸಾರ:

**ಸಭಾಪತಿಯವರು:-** ಮಾನ್ಯ ಸಚಿವರೆ, ಉತ್ತರ ಹೇಳಿ. ನೀವು ಆಮೇಲೆ ಕ್ಲಾರಿಫಿಕೇಷನ್ ಕೇಳಿ. ಇದು ಪ್ರಶ್ನೋತ್ತರ ವೇಳೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ. ಇಲ್ಲಿ ತಪ್ಪಾಗಿದೆ ಎಂದು ಹೇಳಿದರೂ ಇದನ್ನು ಸರಿ ಮಾಡುವುದಕ್ಕೆ ತಯಾರಿಲ್ಲ.

**ಶ್ರೀ ಎನ್.ಎಸ್. ಬೋಸರಾಜು(ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ವಿವರವಾದ ಉತ್ತರವನ್ನು ಕೊಟ್ಟಿದ್ದೇವೆ. 56,432 ಹುದ್ದೆಗಳನ್ನು 30 ದಿನಗಳೊಳಗಾಗಿ ತುಂಬಿಸಬೇಕೆಂದು ದಿನಾಂಕ 27-2-2026ರಂದು ನಿರ್ಧಾರ ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಏನಾಯಿತು ಎಂದು ಕೋರ್ಟ್‌ನಲ್ಲಿ ಬಂದಿರುವ ವಿಷಯವನ್ನು ಮಾನ್ಯ ಸದಸ್ಯರು ಮಾತನಾಡಿದ್ದಾರೆ. 'ಸಂವಿಧಾನ'ದ ಅನುಚ್ಛೇದ 371-ಜೆ ಪ್ರಕಾರ ಮಾಡುತ್ತಿಲ್ಲ ಎಂದು ಮಾತನಾಡಿದರು. ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ನಾನು ಸದಸ್ಯನಾಗಿದ್ದೇನೆ. ಈಗಾಗಲೇ ಮುಖ್ಯಕಾರ್ಯದರ್ಶಿಯವರನ್ನು ಮತ್ತು ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳನ್ನು ಸಭೆಗೆ ಕರೆಸಿ ಸ್ಪಷ್ಟವಾಗಿ strict instructions ಗಳನ್ನು ಕೊಟ್ಟಿದ್ದೇವೆ. ಯಾವುದೇ ಉಲ್ಲಂಘನೆಗಳಾದರೆ concerned Principal Secretary will take the responsibility ಎಂದು ಸಹ ಮೀಟಿಂಗ್‌ನಲ್ಲಿ ಮುಖ್ಯ ಕಾರ್ಯದರ್ಶಿಯವರಿಗೆ ತಿಳಿಸಿದ್ದೇವೆ. ಏನಾದರೂ ಹೆಚ್ಚು ಕಡಿಮೆಯಾಗಿರುವುದು ಇವರ ಗಮನಕ್ಕೆ ಬಂದರೆ ಅದರ ಮಾಹಿತಿ ಕೊಟ್ಟರೆ ಅದನ್ನು ಸಹ ಮತ್ತೊಂದು ಸಲ ವೆರಿಫೈ ಮಾಡುತ್ತೇವೆ. ಈ ತಿಂಗಳಿನಲ್ಲಿಯೇ ಮತ್ತೊಂದು ಕ್ಯಾಬಿನೆಟ್ ಸಬ್-ಕಮಿಟಿ ಸಭೆ ಸೇರುತ್ತಿದ್ದೇವೆ. ಅಲ್ಲಿ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ. ನಾವಂತೂ ಎಲ್ಲವನ್ನೂ ವೆರಿಫೈ ಮಾಡುತ್ತಿದ್ದೇವೆ. ನಮಗೆ ಏನೇನು ಮಾಹಿತಿ ಬಂದಿದೆ, ಕೆಲವು ಅಧಿಕಾರಿಗಳು ಮಾಹಿತಿ ಕೊಡುತ್ತಾರೆ ಆ ಮಾಹಿತಿಗಳನ್ನೆಲ್ಲಾ ಅವರ ಹತ್ತಿರ ಪ್ರಶ್ನೆ ಮಾಡಿ ಕ್ಲಾರಿಫಿಕೇಷನ್ ಮಾಡುತ್ತಿದ್ದೇವೆ. ತಮ್ಮ ಹತ್ತಿರ ಇರುವ ಮಾಹಿತಿ ಏನಾದರೂ ಕೊಟ್ಟರೆ ಅದನ್ನು ಸರಿ ಪಡಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನನ್ನ ವಿನಂತಿಯೇನೆಂದರೆ, ಇದನ್ನು ಸ್ಟೇ ಮಾಡಿ. 310 ಪ್ರಾಂಶುಪಾಲರ ನೇಮಕಾತಿಗೆ ತಾವು ಏನು ಆದೇಶ ಕೊಟ್ಟಿದ್ದಿರಿ ಅದನ್ನು ಸ್ಟೇ ಮಾಡಿ. ಏಕೆಂದರೆ ಸ್ಟೇ ಮಾಡಲಿಲ್ಲ ಎಂದರೆ ಗೊಂದಲವಾಗುತ್ತದೆ. ತಪ್ಪು ಮಾಡಿದ್ದಾರೆ ಎಂದು ಬಹಳ ಸ್ಪಷ್ಟವಾಗಿ ನಾನು ನಿಮ್ಮ ಆದೇಶಗಳ ಪ್ರತಿಯನ್ನು ಮತ್ತು ಮನವಿಯನ್ನು ಕಮಿಷನರ್‌ರವರಿಗೆ, ಡಿ.ಪಿ.ಎ.ಆರ್. ಕಾರ್ಯದರ್ಶಿಯವರಿಗೆ, ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರಿಗೆ ಕೊಟ್ಟಿದ್ದೇನೆ. ಆದರೂ ಕೂಡ ಇನ್ನೂ ಒಪ್ಪುತ್ತಿಲ್ಲ. ಇನ್ನೂ ನೀವು ಇದೇ ರೀತಿ ತಪ್ಪು ಮಾಡಿದರೆ ಹೇಗೆ ಇದು ಮೊದಲು ಇತ್ಯರ್ಥವಾಗಬೇಕು.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಹತ್ತಿರ ಮಾಹಿತಿ ಪಡೆಯುತ್ತೇನೆ. ಆ ರೀತಿ ಏನಾದರೂ ತಪ್ಪುಗಳಿದ್ದರೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ತೆಗೆದುಕೊಂಡು ಹೋಗಿ ತಕ್ಷಣ ಅದನ್ನು ಸ್ಟೇ ಮಾಡಿಸುತ್ತೇನೆ. ನಿಮ್ಮ ಜೊತೆ ಮಾತನಾಡುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, 'ಸಂವಿಧಾನ'ದ ಅನುಚ್ಛೇದ 371ಜೆ ಅಡಿಯಲ್ಲಿ ಖಾಲಿ ಹುದ್ದೆಗಳಿಗೆ financial concurrence ಬೇಕಿಲ್ಲ. That order is very clear. ಇಲ್ಲದಿದ್ದರೆ ರೂಲ್ಸ್ ಮಾಡಿದ್ದು ತಪ್ಪು ಎಂದು ಹೇಳಿ. ನಾನು ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಹತ್ತಿರವೇ ಕೇಳುತ್ತೇನೆ. ರೂಲ್ಸ್ ಮಾಡಿದಾಗ ಅವರು ಸಚಿವರಾಗಿದ್ದರು.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ರೂಲ್ಸ್ ಮಾಡಿರುವುದು ತಪ್ಪು ಎಂಬ ಪ್ರಶ್ನೆ ಬಂದಿಲ್ಲ. ಇಲ್ಲಿ ಖರ್ಗೆ ಸಾಹೇಬರ ಪ್ರಶ್ನೆ ಬರುವುದಿಲ್ಲ. ಎಲ್ಲಾ ರೂಲ್ಸ್ ಅನ್ನು ಬಹಳ strict ಆಗಿ ಶ್ರೀ ಹೆಚ್.ಕೆ. ಪಾಟೀಲರ ನೇತೃತ್ವದಲ್ಲಿ ಮಾಡಿದ್ದೇವೆ. ಏನಿದೆ ನಮಗೆ ಅದರ ಮಾಹಿತಿ ಕೊಡಲಿ, ನಾವು-ನೀವು ಚರ್ಚೆ ಮಾಡೋಣ.

**ಶ್ರೀ ಶಶೀಲ್ ಜಿ. ನಮೋಶಿ:-** ಅಲ್ಲಿ ಖಾಲಿ ಇರುವ ಹುದ್ದೆಗಳಿಗೆ there is no ban and not required financial concurrence at anytime.

**ಸಭಾಪತಿಯವರು:-** ಮಾನ್ಯ ಶಶೀಲ್ ನಮೋಶಿಯವರೇ, ಸ್ವಲ್ಪ ಕೇಳಿ. ಮಾನ್ಯ ಸಭಾನಾಯಕರೇ, ಅವರು ಹೇಳಿದಂತೆ ಸಂವಿಧಾನದ ಅನುಚ್ಛೇದ 371ಜೆ ಬಗ್ಗೆ ಗಂಭೀರವಾದ ಚಿಂತನೆಯನ್ನು ಮಾಡಿ. ಅವರು ಪದೇ ಪದೇ ಹೇಳುತ್ತಿರುತ್ತಾರೆ. ಅದಾಗಬಾರದು. ಅವರು ಕೇಳಿದಂತಹ ಮಾಹಿತಿ ಕೊಡಿ ಮತ್ತು ಸರಿ ಮಾಡಿಸಿ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರ ಜೊತೆ ಚರ್ಚೆ ಮಾಡಿ ಆ ರೀತಿ ಏನಾದರೂ ತಪ್ಪಾಗಿದ್ದರೆ ಅದನ್ನು ಸ್ಟೇ ಮಾಡಿಸುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, financial ban ಇಲ್ಲ. ತುಂಬಿ ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ನಮೋಶಿಯವರೆ, ನಿಮಗೆ ಕನ್ನಡ ತಿಳಿಯುವುದಿಲ್ಲವೇ? ಅವರು ಸರಿ ಮಾಡುತ್ತಾರೆ. ಮಾನ್ಯ ರಾಮೋಜಿಗೌಡರೆ ತಮ್ಮ ಪ್ರಶ್ನೆ ಸಂಖ್ಯೆ: 1048ಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ.

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರವನ್ನು ತೆಗೆದುಕೊಂಡಿದ್ದೇನೆ. 4 ವಾರ ಎಂದರೆ ಸಮಯ ಸಿಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ರಾಮೋಜಿಗೌಡರೆ, ಕಾಲಾವಕಾಶ ಕೇಳಿದ್ದಾರೆ ಎಂದರೆ ನಿಮಗೆ ತಿಳಿಯುವುದಿಲ್ಲವೇ? ಅರ್ಥವಾಗುವುದಿಲ್ಲವೇ?

**ಶ್ರೀ ರಾಮೋಜಿಗೌಡ:-** ಮಾನ್ಯ ಸಭಾಪತಿಯವರೇ, ನನ್ನ ಮಾಹಿತಿಯನ್ನು ಮಾನ್ಯ ಸಭಾನಾಯಕರಿಗೆ ತಿಳಿಸುತ್ತೇನೆ.

**ಸಭಾಪತಿಯವರು:-** ಈಗ ಮಾನ್ಯ ಭಾರತಿ ಶೆಟ್ಟಿಯವರೇ, ಪ್ರಶ್ನೆ ಕೇಳಿ. ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು ಉತ್ತರ ಹೇಳುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಏನಿದು, ಉಪ ಮುಖ್ಯಮಂತ್ರಿಗಳೂ ಇಲ್ಲ. ಎಲ್ಲದಕ್ಕೂ ಅವರು ಉತ್ತರ ಕೊಟ್ಟರೆ ನಮಗೆಲ್ಲಿ ಸರಿಯಾದ ಉತ್ತರ ಸಿಗುತ್ತದೆ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾನಾಯಕರು ಸಮರ್ಥರಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮುಂದೆ ಅವರೇ ಉಪ ಮುಖ್ಯಮಂತ್ರಿಯಾಗಲಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, 'ಸರ್ವ ಖಾತೆಗಳ ಪ್ರಮುಖರು' ಎಂದು ಮಾಡಲಿ. ಎಲ್ಲಾ ಖಾತೆಗಳಿಗೂ ಉತ್ತರವನ್ನು ಸಭಾನಾಯಕರು ಕೊಡುತ್ತಾರೆ ಎಂದು ಮಾಡಿ.

**ಸಭಾಪತಿಯವರು:-** ಪ್ರಶ್ನೆ ಕೇಳಿ.

**ಚುಕ್ಕೆ ಪ್ರಶ್ನೆ ಸಂಖ್ಯೆ: 1081**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದಾರೆ. ಬಹಳ ಪ್ರಮುಖವಾಗಿ ಮೂರು ಆಯೋಗಗಳು ಸರ್ಕಾರಕ್ಕೆ ವರದಿ ಕೊಟ್ಟಿವೆ. ಹಾರನಹಳ್ಳಿ ರಾಮಸ್ವಾಮಿ ಆಯೋಗವು ವರದಿ ಕೊಟ್ಟು 25 ವರ್ಷಗಳಾಯಿತು. ಅದೇ ರೀತಿ ಶ್ರೀ ಟಿ.ಎಂ.ವಿಜಯಭಾಸ್ಕರ್‌ರವರು ಸಹ ಬಹಳ ಚೆನ್ನಾಗಿ ವರದಿ ಕೊಟ್ಟಿದ್ದಾರೆ. ಏಳು ಬಾರಿ ವರದಿಯನ್ನು ಕೊಟ್ಟಿದ್ದಾರೆ. ನಮಗೆ ಗೊತ್ತಿದ್ದ ಹಾಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ ಅಧಿಕಾರಿಗಳ ಅಗತ್ಯ ಇದೆಯೇ, ಎಷ್ಟು ಹಣ ಉಳಿತಾಯವಾಗಬಹುದು, ಆಮೇಲೆ ಶ್ರೀ ದೇಶಪಾಂಡೆಯವರು ವರದಿಯನ್ನು ಸಹ ಕೊಟ್ಟಿದ್ದಾರೆ. ಅನುಬಂಧಗಳನ್ನು ನೋಡಿದರೆ ಇವರ ವರದಿಗಳು ಕಪಾಟಿನಲ್ಲಿ ಹೋಗಿ ಕುಳಿತಿದೆಯೇ ಎಂದು ಅನಿಸುತ್ತದೆ. ಏಕೆಂದರೆ ಜನರ ಸಮಸ್ಯೆಗಳನ್ನು ಬಗೆಹರಿಸಲು ಕೊಟ್ಟಂತಹ ವರದಿಗಳವು. ಆದರೆ ಅನುಬಂಧವನ್ನು ನೋಡಿದರೆ recommendations ಕೊಟ್ಟಿರುವುದರಲ್ಲಿ ಕೆಲವು ರಿಜೆಕ್ಟ್ ಆಗಿವೆ ಅದನ್ನು ಒಪ್ಪಿಕೊಳ್ಳಬಹುದು. ಆದರೆ 10 ಪರ್ಸೆಂಟೇಜ್ ಪ್ರಕಾರ ನೋಡಿದರೆ ಶೇ.15ರಷ್ಟು ಮಾಡಿರುತ್ತಾರೆ. ಉಳಿದವೆಲ್ಲಾ examination ಎಂದಿದೆ. ಅವರು ಕೊಟ್ಟ ಉತ್ತರದಲ್ಲಿಯೂ ಕೂಡ ಯಾವುದು merge ಯಾಗಿದೆ ಎಂದು ಕೇಳಿದ್ದರಲ್ಲಿ ಒಂದನ್ನು ಬಿಟ್ಟು ಉಳಿದವೆಲ್ಲಾ ಜಾರಿಗೆ ತರಲಾಗುತ್ತದೆ, ಅನುಷ್ಠಾನ ಪರಿಗಣನೆಯಲ್ಲಿದೆ, ಅವಲಂಬಿಸಿರುತ್ತದೆ ಈ ರೀತಿ ಕೊಟ್ಟಿದ್ದಾರೆ. ನನ್ನ ಕಾಳಜಿ ಇಷ್ಟೇ. ಈಗ Artificial Intelligence ಬಂದಿದೆ. ನಮಗೆ ಬೇಕಾಗಿರುವುದು ಕಾರ್ಯನಿರ್ವಹಣೆಗಾಗಿ ಇಲಾಖೆಯ ನೌಕರರಿರಬಾರದು. ಇಲಾಖೆಗೋಸ್ಕರ ಕಾರ್ಯನಿರ್ವಹಣೆ ಮಾಡುವುದಕ್ಕೋಸ್ಕರ ಇರುವುದೇ ನೌಕರರು. ಆದರೆ ನೌಕರರಿಗೋಸ್ಕರವೇ ಇಲಾಖೆ ಇದ್ದ ಹಾಗಿದೆ. ಕೆಲವು ಇಲಾಖೆಗಳಲ್ಲಿ ತಿಂಗಳಿನಲ್ಲಿ ಒಂದೇ ಸಲ ಅವರಿಗೆ ಕೆಲಸ ಇರುತ್ತದೆ ಅದು ಬಿಲ್ ಮಾಡುವುದು ಮಾತ್ರ. ಅಷ್ಟೇ ಕೆಲಸ ಇರುವುದು. ರೂ. 70,000/- ರಿಂದ 80,000/- ವೇತನ ತೆಗೆದುಕೊಳ್ಳುತ್ತಾರೆ.

(ಮುಂದು)

(332) 12-03-2026 11-20 KH/VK (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**

ಇವತ್ತು Artificial Intelligence ಬಂದಿದೆ. ಇದರಲ್ಲಿ ಜಾಕ್ ಮತ್ತು ಜೆಮಿನಿ ಎಂದು ಬಂದಿದೆ. ಇದನ್ನು ಸರ್ಕಾರ ಯಾವಾಗ ಅಳವಡಿಸುತ್ತದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಶ್ರೀಮತಿ ಭಾರತಿ ಶೆಟ್ಟಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಹೇಳಲಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇತ್ತೀಚೆಗೆ ಬಂದಿರುವಂತಹ ಜಾಕ್ ಎನ್ನುವುದು ಎಷ್ಟು implement ಆಗಿದೆ ಎಂದರೆ, ಅದು ಎಲ್ಲಾ ಭಾಷೆಯಲ್ಲಿಯೂ ಕೂಡ ಉತ್ತರ ಕೊಡುತ್ತದೆ. ಕನ್ನಡ ಭಾಷೆಯಲ್ಲಿ ಹೇಳಿದರೂ ಆಗುತ್ತದೆ. ಮಂಗಳೂರು ಕನ್ನಡ, ಹುಬ್ಬಳ್ಳಿ ಕನ್ನಡ, ಬೇರೆ ಬೇರೆ ಕನ್ನಡ ಭಾಷೆಯಲ್ಲಿ ಹೇಳಿದರೂ ಕೂಡ ಉತ್ತರವನ್ನು ಕೊಡುತ್ತದೆ.

**ಸಭಾಪತಿಯವರು:-** ಮಾನ್ಯ ಭಾರತಿ ಶೆಟ್ಟಿಯವರೇ, ಏನು ಮಾಡಬೇಕೆಂದು ಹೇಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ಸಾಫ್ಟ್‌ವೇರ್ ಅನ್ನು ಯಾವಾಗ ತರುತ್ತಾರೆ? ಇದ್ದರಿಂದ ತಮ್ಮ ಇಲಾಖೆಗೆ ಎಷ್ಟು ಉಳಿತಾಯವಾಗುತ್ತದೆ? ಉದಾಹರಣೆಗೆ ಕಂದಾಯ ಇಲಾಖೆಯಲ್ಲಿ . . . ಇದು ಯಾವಾಗ ಬರುತ್ತದೆ?

**ಸಭಾಪತಿಯವರು:-** ಮಾನ್ಯ ಶ್ರೀಮತಿ ಭಾರತಿ ಶೆಟ್ಟಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಹೇಳಲಿ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು) (ಬೃಹತ್ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರಾಭಿವೃದ್ಧಿ ಸಚಿವರು (ಬಿ.ಬಿ.ಎಂ.ಪಿ., ಬಿ.ಡಿ.ಎ., ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬಿ.ಎಂ.ಆರ್.ಡಿ.ಎ., ಬಿ.ಎಂ.ಆರ್.ಸಿ.ಎಲ್., ಪ್ರಾಧಿಕಾರಗಳು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಹೊಸ ಯುಗವಾದ Artificial Intelligence ಕಡೆಗೆ ಹೋಗುತ್ತಿದ್ದೇವೆ. ಇದರ ಬಗ್ಗೆ ದೇಶದಲ್ಲಿ ಮತ್ತು ಪ್ರಪಂಚದಲ್ಲಿಯೇ ದೊಡ್ಡ ಚರ್ಚೆ ನಡೆಯುತ್ತಿದೆ. ನಾವು Davos, Switzerland ಗೆ ಹೋದಾಗಲೂ ಇದರ ಬಗ್ಗೆ ಬೇಕಾದಷ್ಟು ಚರ್ಚೆ ಬಂದಿತು. ಇದರ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳು ಕೂಡ ದೆಹಲಿಯಲ್ಲಿ ದೊಡ್ಡ summit ಮಾಡಿದರು. ನ್ಯಾಯಾಲಯದಲ್ಲಿ ಹೇಗೆ ಉಪಯೋಗ ಮಾಡಬೇಕೆಂಬ ಬಗ್ಗೆ ಕೆಲವು ವಿಚಾರಗಳು ಬಂದಿತು. ಸಿ.ಬಿ.ಎಸ್.ಇ., ಯವರು ೩ನೇ ತರಗತಿಯಿಂದ ಹೈಸ್ಕೂಲ್‌ವರೆಗೂ ಈ AI subject ಸೇರಿಸಬೇಕೆಂದು ಹೇಳಿದ್ದಾರೆ. ಈಗ ಮನುಷ್ಯರು ಮಾಡಿರುವುದನ್ನೇ ಏನು ಎನ್ನುವ ಬಗ್ಗೆ ನಿರ್ದಿಷ್ಟವಾಗಿ ಮಾಡುವುದಕ್ಕೆ ಆಗುತ್ತಿಲ್ಲ. ಇದರ ಬಗ್ಗೆ ದೊಡ್ಡ research ಆಗಬೇಕು. ಯಾವುದೇ ಸರ್ಕಾರ ಆಗಲಿ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದರೆ, ಒಂದು document ಬಗ್ಗೆ ತೀರ್ಮಾನ ಮಾಡಬೇಕಾದರೆ, ಒಂದು prescription ತೀರ್ಮಾನ ಮಾಡಬೇಕಾದರೆ research ಆಗಬೇಕು. ಇದರ ಬಗ್ಗೆ Research ಮಾಡದೇ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. Karnataka Legislative Council ನ Chairman ರವರು ಈಗ ಇರುವಂತಹ ಎಲ್ಲಾ ಡಾಕ್ಯುಮೆಂಟ್ ಅನ್ನು ಪೂರ್ತಿಯಾಗಿ ಸ್ಕ್ಯಾನ್ ಮಾಡಿಸಿ ಹಾಕಿದ ಮೇಲೆ ತಾನೇ ಬರುವುದು, ಕಂಪ್ಯೂಟರ್ ಬಂದಾಗ

ಕಂಪ್ಯೂಟರ್‌ಗೆ ಎಲ್ಲಿಂದ ಮಾಹಿತಿಗಳು ಬರುತ್ತದೆ? If the property has been loaded inside, you will get it. ಹಾಗೆಯೇ Artificial Intelligence ಕೂಡ ಮಾಡಬೇಕಾಗುತ್ತದೆ. ಇದನ್ನು ಹೊಸದಾಗಿ ತಯಾರು ಮಾಡುವುದಕ್ಕೆ ಆಗುವುದಿಲ್ಲ. ತಾವು ಏನು ಲೋಡ್ ಮಾಡುತ್ತೀರೋ, ಅದು ಈಚೆಗೆ ಬರುತ್ತದೆ ಅಷ್ಟೇ. Therefore, they can't take a decision. ಇದರ ಬಗ್ಗೆ ನಾವು research ಮಾಡಿಸುತ್ತೇವೆ. ಒಂದು ದಿನ debate ಮಾಡಿಸಿ. ಉಳಿದಿರುವುದು ನಂತರ ಮಾಡೋಣ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಕರ್ನಾಟಕ ಆಡಳಿತ ಟ್ರಿಬ್ಯೂನಲ್ ನಲ್ಲಿ ಇದನ್ನು ಅಳವಡಿಸಿದರೆ ಬಹಳ ಒಳ್ಳೆಯದು ಆಗುತ್ತದೆಯಲ್ಲವೇ? ಮಾನ್ಯ ತುಷಾರ್ ಗಿರಿನಾಥ್‌ನವರಂತಹ ಅಧಿಕಾರಿಗಳು ಅಲ್ಲಿ ಕುಳಿತಿದ್ದಾರೆ. ಅವರಿಗೆ ಇದನ್ನು ಫೀಡ್ ಮಾಡಬಹುದು. ಅದರಲ್ಲಿ ನಾನು ಒಂದು ಪ್ರಶ್ನೆ ಎಲ್ಲಿ ಸಿಗುತ್ತದೆ ಎಂದು ಕೇಳಿದರೆ ತಕ್ಷಣವೇ ಉತ್ತರ ಕೊಡುತ್ತದೆ. ಇದು ಏಕೆ ಬೇಕು ಎಂದು ಕೂಡ ಹೇಳುತ್ತದೆ. ನಾನು ಯಾವ ಕಡೆ ಹೋದರೆ ಉತ್ತಮ ಎಂದು ಕೂಡ ಹೇಳುತ್ತದೆ. ದಯಮಾಡಿ ಇದಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಪ್ರಯತ್ನ ಮಾಡಿದ್ದೇವೆ. ಇದಕ್ಕೆ ನಾನು ಸಭೆಯೊಂದರ ಬಗ್ಗೆ ಭಾಷಣದಲ್ಲಿ ಏನು ಮಾತನಾಡಬೇಕೆಂದು ಕೇಳುತ್ತಿದ್ದೆ. ನನ್ನ ಮಗಳು "ನೀನು ಏಕೆ ಅದನ್ನು ಕೇಳುತ್ತೀಯಾ? ನೀನು ChatGPT" ಗೆ ಹಾಕು ಎಂದು ಹೇಳಿದಳು. I got lot of information and ಅದರ ಮೇಲೆ ಬೇಕಾದಷ್ಟು ಪ್ರಯತ್ನ ಮಾಡಿದ್ದೇನೆ. But, authentication ಇದೆಯಲ್ಲವೇ, ಅದು ಬಹಳ ಹೆಚ್ಚು-ಕಡಿಮೆಯಾಗಿದೆ. ಮಾನ್ಯ ಸಭಾಪತಿಯವರು ಇದರ ಬಗ್ಗೆ ಒಂದು research ಮಾಡಲಿ. ಇದರ ಬಗ್ಗೆ Assembly and Council House debates ಆಗಿದೆಯಲ್ಲವೇ? ಇದನ್ನು ಲೋಡ್ ಮಾಡದೇ ನಿಮಗೆ ಹೇಗೆ ಮಾಹಿತಿ ಬರುತ್ತದೆ? I think Hon'ble Home Minister might have explored a lot about it. ಕೆಲವರು technical education ಇರುವವರು explore ಮಾಡಿರಬಹುದು. ನ್ಯಾಯಾಲಯದಲ್ಲಿಯೂ ಕೂಡ ಇದರ ಬಗ್ಗೆ ದೊಡ್ಡ ಡಿಬೆಟ್ ಆಗುತ್ತಿದೆ. ನ್ಯಾಯಾಲಯದಲ್ಲಿ ಏನು Rulings ಬಂದಿದೆ, ಅದನ್ನು ಲೋಡ್ ಮಾಡಿದಾಗ they can take it up. But, they can't write judgments depending on whatever is there in the Artificial Intelligence. This is the biggest problem. ಇನ್ನು ನಡೆಯುತ್ತಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ . . .

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ಮುಂದಕ್ಕೆ ಹೇಳುತ್ತೇನೆಲ್ಲವೇ? ಇಡೀ ಪ್ರಪಂಚದದಲ್ಲಿ ಎಷ್ಟು ಜಾಬ್ ಕಳೆದುಕೊಳ್ಳುತ್ತೇವೆ, ಎಷ್ಟು ಅನುಕೂಲವಾಗುತ್ತದೆ, better ಏನು ಆಗುತ್ತದೆ, ಇವೆಲ್ಲವೂ ಕೂಡ ಚರ್ಚೆ ನಡೆಯುತ್ತಿದೆ. Definitely ನಾವು ಮುಂದಕ್ಕೆ ಹೋಗಿದ್ದೇವೆ. ಈಗಾಗಲೇ AI ಗೆ adopt ಮಾಡಿಕೊಳ್ಳುತ್ತಿದ್ದೇವೆ. ಇಂತಹ ಕೇಸ್‌ಗಳಲ್ಲಿ ಕೆಲವು ಆಸ್ತಿಗಳ ಬಗ್ಗೆ ತೀರ್ಮಾನ ಮಾಡಬೇಕಾದರೆ, ಇನ್ಯಾವುದಾದರೂ ಮಾಡಬೇಕಾದರೆ, inputs ಕೊಡಲಿಲ್ಲವೆಂದರೆ, ತಮಗೆ ಯಾವುದರಲ್ಲಿಯೂ ಕೂಡ ರಿಸಲ್ಟ್ ಬರುವುದಿಲ್ಲ. ನಾನು ಅಸ್ಸಾಂಗೆ ಚುನಾವಣೆ ವಿಚಾರಕ್ಕೆ ಹೋಗಿದ್ದೆ. How to win Assam Election ಎಂದು ಹಾಕಿದೆ. ಅವರದೇ ಆದಂತಹ ಒಂದು ರಿಪೋರ್ಟ್ ಬಂದಿತು. ಅದರ ಮೇಲೆ ನಾವು ಚುನಾವಣೆ ಮಾಡುವುದಕ್ಕೆ ಆಗುತ್ತದೆಯೇ? It is not possible.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಶ್ರೀಮತಿ ಭಾರತಿ ಶೆಟ್ಟಿಯವರೇ, ಸಾಕಮ್ಮ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಚುನಾವಣೆ ಗೆಲ್ಲುವುದಕ್ಕೆ ನಿಮ್ಮದೇ ಆದಂತಹ strategy ಬೇರೆನೇ ಇದೆ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ, ಬಿಡಿ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಎನ್.ರವಿಕುಮಾರ್‌ರವರೇ, ನೀವು ಅಲ್ಲಿ ಹಾಕಿ ನೋಡಿ. ನಾವು, ನೀವು ಹೊರಗಡೆ ಹೋಗಿ ಕುಳಿತುಕೊಳ್ಳೋಣ. We both will sit outside, ಎಲ್ಲರೂ ಅಲ್ಲಿಗೆ ಬನ್ನಿ. ಸದನದಲ್ಲಿ ಫೋನ್ ಉಪಯೋಗಿಸುವ ಆಗಿಲ್ಲ. ಅಲ್ಲಿ ಹೊರಗಡೆ ಕುಳಿತುಕೊಳ್ಳೋಣ. you go to Karnataka Model and you will win Assam Election ಎಂದು ಹೇಳುತ್ತದೆ. ಆ ರೀತಿ ಮಾಡುವುದಕ್ಕೆ ಆಗುತ್ತದೆಯೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈಗ ತಮ್ಮನ್ನು ಅಲ್ಲಿಗೆ ಕರೆಸಿದ್ದಾರೆ. ಅಸ್ಸಾಂನಲ್ಲಿ ಏನಾಗುತ್ತದೆ ಎಂದು ನೋಡೋಣ.

ಪ್ರಶ್ನೆ ಸಂಖ್ಯೆ: 1102

(ಉತ್ತರವನ್ನು ಲಗತ್ತಿಸಲಾಗಿದೆ)

**ಡಾ॥ ಆರತಿ ಕೃಷ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಧನ್ಯವಾದಗಳು. ಮಾನ್ಯ ಸಚಿವರ ಗಮನಕ್ಕೆ ಕೆಲವೊಂದು ವಿಚಾರಗಳನ್ನು ತರುವುದಕ್ಕೆ ಇಚ್ಛಿಸುತ್ತೇನೆ. ಕೆಲವು ಸಂಸ್ಥೆಗಳು ವರದಿ ಮಾಡಿರುವಂತೆ, ಬೆಂಗಳೂರಿನ ಆಯ್ದ 21 ವಾರ್ಡ್‌ಗಳಲ್ಲಿನ 38 ಶೌಚಾಲಯಗಳನ್ನು ಪರಿಶೋಧಿಸಿದಾಗ ತಾಂತ್ರಿಕವಾಗಿ ಮುಕ್ತವಾಗಿದೆ. ನಾಗರೀಕರ ಉಪಯುಕ್ತತೆ, ಘನತೆ ಮತ್ತು ಸುರಕ್ಷತೆಗೆ ಸಾರ್ವಜನಿಕ ಶೌಚಾಲಯಗಳಲ್ಲಿ ಆತಂಕಕಾರಿಯಾಗಿ ಕಳಪೆಯಾಗಿವೆ ಎಂದು ಹೇಳಲಾಗಿದೆ. ಈ ಶೌಚಾಲಯಗಳನ್ನು ಮಹಿಳೆಯರು, ಅಂಗವಿಕಲರು, ವೃದ್ಧ ನಾಗರೀಕರು ಅಥವಾ ತೃತೀಯ ಲಿಂಗಗಳಿಗೆ ಸ್ನೇಹಪರವಾಗಿಲ್ಲ ಎಂದು ಪರಿಶೋಧನೆಯಿಂದ ತಿಳಿದು ಬಂದಿದೆ. ಸಮೀಕ್ಷೆ ಮಾಡಲಾದ 38 ಶೌಚಾಲಯಗಳಲ್ಲಿ . . .

**ಸಭಾಪತಿಯವರು:-** ಮಾನ್ಯ ಆರತಿ ಕೃಷ್ಣ ರವರೇ, ಪ್ರಶ್ನೆ ಕೇಳಿ. ಅದನ್ನು ಓದಬೇಡಿ.

**ಡಾ॥ ಆರತಿ ಕೃಷ್ಣ:-** ಮಾನ್ಯ ಸಭಾಪತಿಯವರೇ, ಕೇವಲ 17 ಶೌಚಾಲಯಗಳು. ಇದರಲ್ಲಿ ಶೇಕಡಾ 44.7 ರಷ್ಟು ಬಳಸಲು ಯೋಗ್ಯವಾಗಿದೆ.

**ಸಭಾಪತಿಯವರು:-** ಮಾನ್ಯ ಆರತಿ ಕೃಷ್ಣ ರವರೇ, ಅದರಲ್ಲಿ ಇದೆ. ಅದನ್ನು ಬಿಟ್ಟು ಬೇರೆ ಕೇಳಮ್ಮ.

**ಡಾ॥ ಆರತಿ ಕೃಷ್ಣ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಶೇಕಡಾ 10.5 ರಷ್ಟು ಭಾಗಶಃ ಕಾರ್ಯನಿರ್ವಹಿಸುತ್ತಿಲ್ಲ. ಸುಮಾರು ಶೇಕಡಾ 55 ರಷ್ಟು ಭಾಗಶಃ ಕಾರ್ಯನಿರ್ವಹಿಸುತ್ತಿವೆ. ಕಳಪೆ ನಿರ್ವಹಣೆಯಿಂದ ಬಳಸಲಾಗದ ರೀತಿಯಲ್ಲಿ ಇವೆ. ಶೇಕಡಾ 95 ರಷ್ಟು ಬಳಸಲು ಯೋಗ್ಯವಾಗಿಲ್ಲ. ಶೇಕಡಾ 92 ರಷ್ಟು ಪ್ರವೇಶವನ್ನು ನಿರ್ಬಂಧಿಸುವ ಹಂತಗಳನ್ನು ಹೊಂದಿವೆ. ಯಾವುದು ವಿಕಲಚೇತನರು ಬಳಸಬಹುದಾದ ಶೌಚಾಲಯಗಳಿಗೆ ramp ವ್ಯವಸ್ಥೆಯನ್ನು ಹೊಂದಿದೆ.

**ಸಭಾಪತಿಯವರು:-** ಮಾನ್ಯ ಆರತಿ ಕೃಷ್ಣ ರವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರವನ್ನು ಹೇಳುತ್ತಾರೆ. ಆಮೇಲೆ ಪ್ರಶ್ನೆಯನ್ನು ಕೇಳಿ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು) (ಬೃಹತ್ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರಾಭಿವೃದ್ಧಿ ಸಚಿವರು (ಬಿ.ಬಿ.ಎಂ.ಪಿ., ಬಿ.ಡಿ.ಎ., ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬಿ.ಎಂ.ಆರ್.ಡಿ.ಎ., ಬಿ.ಎಂ.ಆರ್.ಸಿ.ಎಲ್., ಪ್ರಾಧಿಕಾರಗಳು):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಆರತಿ ಕೃಷ್ಣ ರವರೇ, ಹೇಳಿ.

**ಡಾ॥ ಆರತಿ ಕೃಷ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು SHE Toilets ಬಗ್ಗೆ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, SHE Toilets ನ ಸ್ವಚ್ಛತೆಯನ್ನು ಕಾಪಾಡುತ್ತಿಲ್ಲ. ನನ್ನ ಮನವಿಯೇನೆಂದರೆ, ಬೆಂಗಳೂರು ಅಭಿವೃದ್ಧಿಗೆ ಬಹಳಷ್ಟು ಒತ್ತು ಕೊಡುತ್ತಿದ್ದಾರೆ. ಅನೇಕ ಯೋಜನೆಗಳನ್ನು ತಂದು ಕಾರ್ಯಗತಗೊಳಿಸುತ್ತಿದ್ದಾರೆ. ಈ ಒಂದು ಸ್ವಚ್ಛತೆಯನ್ನು ಕಾಪಾಡುವಲ್ಲಿ AI use ಮಾಡಿ, monitor ಮಾಡುವ ರೀತಿಯಲ್ಲಿ ಮಾಡಿದರೆ, ಸ್ವಚ್ಛತೆ ಕಾಪಾಡುವುದಕ್ಕೆ ಅನುಕೂಲವಾಗುತ್ತದೆ. ಇದನ್ನು monitor ಮಾಡುವುದಕ್ಕೆ supervisor ಕೊಡುವ ದುಡ್ಡು ಕೂಡ ಉಳಿಯುತ್ತದೆ. ಕೆಲವು ರಾಜ್ಯಗಳಲ್ಲಿ ಇದೆ. ದೆಹಲಿಯಲ್ಲಿ ಸುಮಾರು ಕಡೆಗಳಲ್ಲಿ ನಾನು ನೋಡಿದ್ದೇನೆ. ಏಕೆಂದರೆ, ಅಲ್ಲಿನ ಮಹಿಳೆಯರಿಗೆ ಸ್ವಚ್ಛತೆ ಬಹಳ ಮುಖ್ಯ. ಅಲ್ಲಿ ಅನೇಕ ಬಾರಿ urine infection ಗೆ suffer ಆಗುವುದರಲ್ಲಿ ಮಹಿಳೆಯರು ಜಾಸ್ತಿಯಾಗಿದ್ದಾರೆ. ಬೆಂಗಳೂರಿನಲ್ಲಿ ಮಹಿಳೆಯರ ಸಂಖ್ಯೆ ಜಾಸ್ತಿ ಇದೆ. ಹಾಗಾಗಿ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಹೊಸ ಸದಸ್ಯರಾದ ಆರತಿ ಕೃಷ್ಣ ರವರು ಸಾರ್ವಜನಿಕ ಶೌಚಾಲಯಗಳಿಂದ ಹೆಣ್ಣು ಮಕ್ಕಳಿಗೆ ಈ ರೀತಿ ಆಗುತ್ತಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ನಮ್ಮ ದಾಖಲೆಗಳ ಪ್ರಕಾರ ಈಗಾಗಲೇ 388 ಶೌಚಾಲಯಗಳು ಇವೆ. 383 ಶೌಚಾಲಯಗಳು ಸಾರ್ವಜನಿಕರಿಗೆ ಮತ್ತು 5 ಸಮುದಾಯದ ಶೌಚಾಲಯಗಳನ್ನು ಇಟ್ಟುಕೊಂಡಿದ್ದೇವೆ. ಇದರಲ್ಲಿ 65 retired pourakarmikas ರವರಿಗೆ ಕೊಟ್ಟಿದ್ದೇವೆ. 20 physically challenged ರವರಿಗೆ ಪ್ರತ್ಯೇಕವಾಗಿ ಇಟ್ಟಿದ್ದೇವೆ. 303 Build–Operate–Transfer model ರವರಿಗೆ ಮಾಡಿದ್ದೇವೆ. ಈಗ ಹೊಸದಾಗಿ ಸರ್ಕಾರದ ವತಿಯಿಂದ ಶುಭ್ರ ಬೆಂಗಳೂರು ಎನ್ನುವ ಸ್ಕೀಮ್ ಇದೆ. ಅದರಲ್ಲಿ 60 units ಅನ್ನು ತೆಗೆದುಕೊಳ್ಳುತ್ತಿದ್ದೇವೆ. ಸರ್ಕಾರದ ನಿಯಮದ ಪ್ರಕಾರ 191 ಹೊಸದಾಗಿ construction ನಡೆಯುತ್ತಿದೆ. ಭಾರತ ಸರ್ಕಾರದವರು ಸ್ವಚ್ಛ ಭಾರತ್ ಮಿಷನ್ ನಲ್ಲಿ 13,500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ 95 ಶೌಚಾಲಯಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಜಿ.ಬಿ.ಎ.ನಲ್ಲಿ Brand Bengaluru ಎಂದು ಒಂದು ಕಾರ್ಯಕ್ರಮವನ್ನು ಮಾಡಿ, 15 ವರ್ಷಗಳ ನಿರ್ವಹಣೆ ಸಮೇತ 100 ಅನ್ನು PPP model ಗೆ ತೆಗೆದುಕೊಳ್ಳುತ್ತಿದ್ದೇವೆ. ಇದನ್ನು ಹೆಣ್ಣು ಮಕ್ಕಳಿಗೋಸ್ಕರ

ಶೌಚಾಲಯಗಳನ್ನು ಮಾಡುತ್ತಿದ್ದೇವೆ. ಈಗ ಹೊಸ 441 ಶೌಚಾಲಯಗಳು ಸೇರಿ ಒಟ್ಟು 388+441 ಅನ್ನು ಶೌಚಾಲಯಗಳನ್ನು ತೆಗೆದುಕೊಳ್ಳುತ್ತಿದ್ದೇವೆ. 6 ತಿಂಗಳನಲ್ಲಿ ಇವುಗಳ ಎಲ್ಲಾ ನಿರ್ವಹಣೆ ಪೂರ್ಣಗೊಳ್ಳುತ್ತದೆ. ಹೊಸದಾಗಿ important locations ಬಗ್ಗೆ ಮಾನ್ಯ ಶಾಸಕರು, ಸಾದ್ವಿಕರು ಸಲಹೆ ಮಾಡಿದರೆ, ಅದನ್ನು ನೋಡಿ ಎಷ್ಟೆಷ್ಟು ದೂರಕ್ಕೆ ಒಂದೊಂದು ಇಡಬೇಕೆಂದು ನೋಡುತ್ತೇವೆ. ಜಾಗದ ಲಭ್ಯತೆಯನ್ನು ನೋಡಿಕೊಂಡು ಮಾಡುತ್ತೇವೆ. ಫುಟ್‌ಪಾತ್‌ಗೆ ತೊಂದರೆಯಾಗಬಾರದು. ಕೆಲವೆಲ್ಲಾ advertisement ಗೆ ಉಪಯೋಗಿಸುತ್ತಿದ್ದಾರೆ. ಮುಂದೆ advertisement ಹಾಕಿಕೊಳ್ಳುವುದು, ಹಿಂದೆ toilet ಇರುವಂತಹ ಸ್ಕೀಮ್‌ಗಳೆಲ್ಲಾ ಬಂದಿದೆ. ಮಾನ್ಯ ಸದಸ್ಯರೇ, ತಮ್ಮದೇನಾದರೂ ಬೇರೆ ಸಲಹೆಗಳು ಇದ್ದರೆ ಬರೆದುಕೊಡಿ and we will take it forward.

**ಡಾ|| ಆರತಿ ಕೃಷ್ಣ:-** ಮಾನ್ಯ ಸಭಾಪತಿಯವರೇ, ಕೆಲವು ವಾರ್ಡ್‌ಗಳಲ್ಲಿ ತೃತೀಯ ಲಿಂಗಿಗಳಗೆ ಮೀಸಲಾದ ಶೌಚಾಲಯಗಳು ಇಲ್ಲ ಎಂದು ತಿಳಿದು ಬಂದಿದೆ. ಅದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸದಸ್ಯರೇ, ಆಗಬಹುದು.

(ಮುಂದು)

(333) 12.3.2026 11.30 ಪಿಕೆ:ವಿಕೆ (ಸಭಾಪತಿಗಳ ಉಪಸ್ಥಿತಿ)

ಪ್ರಶ್ನೆ ಸಂಖ್ಯೆ: 1126

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಸಾಕಷ್ಟು ಮಾಹಿತಿಗಳನ್ನು ಕೊಟ್ಟಿದ್ದಾರೆ. ಆ ಮಾಹಿತಿಗಳ ಒಳಹೊಕ್ಕು ನೋಡುವ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ಅದರಲ್ಲಿ ಬಹಳಷ್ಟು ತಪ್ಪಿದೆ. ನನಗೆ ನಿರ್ದಿಷ್ಟವಾದ ವರದಿ ಸಿಕ್ಕಿದರೆ ಆ ಕುರಿತು ನಾನು ಪ್ರಶ್ನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ನಾಳೆ ಬಾಗಲಕೋಟೆ ಜಿಲ್ಲೆಗೆ ಹೋಗುತ್ತಿದ್ದಾರೆ ಎಂದು ವರದಿಯಾಗಿದೆ. ಉಪ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಅಲ್ಲಿನ ಸಂತ್ರಸ್ತರನ್ನು ಅತ್ಯಂತ ಕೀಳಾಗಿ, ಭಿಕ್ಷುಕರಂತೆ ನಡೆಸಿಕೊಳ್ಳುತ್ತಿರುವ ಸ್ಥಿತಿ ಇದೆ. ಯಾವುದೇ ರೀತಿಯ ಗೌರವ ಕೊಡುತ್ತಿಲ್ಲ. ಹಾಕಿಕೊಂಡಿರುವಂತಹ ಚಪ್ಪಲಿ ಹರಿದು ಹೋಗಿದ್ದರೂ ಅಲ್ಲಿ ಅವರಿಗೆ ಇ-ಖಾತಾ ಸಿಗುತ್ತಿಲ್ಲ. ಕಂಪ್ಯೂಟರ್ ಬರುವುದಕ್ಕಿಂತ ಮುಂಚೆ, ಮ್ಯಾನ್ಯುಯಲ್ ಆಗಿ ದಾಖಲೆಗಳನ್ನು ಕೊಡುವಂತಹ ಸಂದರ್ಭದಲ್ಲಿ ಸ್ವಲ್ಪ ಅರ್ಜಿಗಳು ಪೆಂಡಿಂಗ್ ಇರುತ್ತಿತ್ತು. ಇವತ್ತು ಸಾವಿರಾರು ಅರ್ಜಿಗಳು ಪೆಂಡಿಂಗ್ ಇವೆ. ಇದನ್ನು ಪ್ರಶ್ನಿಸಿದರೆ, ಸರ್ವರ್ ಡೌನ್ ಎಂದು ಹೇಳುತ್ತಾರೆ. ನಿಮ್ಮ ಮೂಡಾದ ಬಗ್ಗೆ ನಾವು ಮೇಲಿಂದ ಮೇಲೆ ವರದಿಗಳನ್ನು ಕೇಳುತ್ತಿರುತ್ತೇವೆ. ಆ ಕುರಿತು ಒಬ್ಬರಲ್ಲ ಒಬ್ಬರು ಆ ಪ್ರಶ್ನೆಯನ್ನು ಕೇಳುತ್ತಿರುತ್ತಾರೆ. ಭ್ರಷ್ಟಾಚಾರ, ಅವ್ಯವಸ್ಥೆ, ದಾಖಲೆಗಳನ್ನು ತಿದ್ದುವುದು ಆಗುತ್ತಿರುತ್ತದೆ. ಇದೇರೀತಿ ಅಲ್ಲೂ ಕೂಡ ಅದರ ಹತ್ತು ಪಟ್ಟು ಭ್ರಷ್ಟಾಚಾರ ನಡೆಯುತ್ತಿರುವ ವಾತಾವರಣ ಸೃಷ್ಟಿಯಾಗಿದೆ. ತಾವು ಅಲ್ಲಿಗೆ ಭೇಟಿ ಕೊಡುತ್ತಿದ್ದೀರಿ. ಈ ಕುರಿತು ರಿವ್ಯೂ ಮಾಡಿ. ಅಲ್ಲಿ ಏನೇನಾಗಿದೆ ಎಂದು ನೋಡಿ, ವಾಸ್ತವವನ್ನು ಹೊರತೆಗೆದು ಅಲ್ಲಿನ ಕರ್ಮಕಾಂಡವನ್ನು ಹೊರಗೆಳೆಯುವಂತಹ ಕೆಲಸ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು) :-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳಿರುವುದನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇನೆ. ಮಾನ್ಯ ಸದಸ್ಯರು, ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯಗಳಿಗೆ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ ಎಂದು ತಮ್ಮ ಪ್ರಶ್ನೆಯಲ್ಲಿ ಕೇಳಿದ್ದಾರೆ. ಆ ಕುರಿತು ಉತ್ತರ ಕೊಟ್ಟಿದ್ದೇನೆ ಮತ್ತು ಅದು ಅವರಿಗೆ ಸಮಾಧಾನ ಕೂಡ ಆಗಿದೆ. ಮಾನ್ಯ ಸದಸ್ಯರು ಏನು ಕೆಲವು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದರೋ, ಅದರ ಬಗ್ಗೆ ಪರಿಶೀಲನೆ ಮಾಡಲು ಒಂದು ದಿನ ಅಲ್ಲಿಗೆ ಭೇಟಿ ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನಿಮ್ಮ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1072ಕ್ಕೆ ಉತ್ತರ ಕೊಡಲು ಮಾನ್ಯ ಮುಖ್ಯಮಂತ್ರಿಗಳು ಸಮಯವನ್ನು ಕೇಳಿದ್ದಾರೆ. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಜೊತೆ ಮಾತನಾಡಿದ್ದಾರೆ ಎಂದು ನೀವೇ ಹೇಳಿದ್ದೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಹೌದು, ಆದರೆ ಈ ಅಧಿವೇಶನದ ಅವಧಿಯಲ್ಲಿಯೇ ಉತ್ತರ ಕೊಡಿಸುತ್ತೀರಾ?

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ ಈ ಅಧಿವೇಶನದ ಒಳಗೆ ಉತ್ತರ ಕೊಡಿಸುವ ವ್ಯವಸ್ಥೆ ಮಾಡಿ. ಮಾನ್ಯ ಭೋಜೇಗೌಡರೇ ನಾಳೆ ನಿಮ್ಮ ಪ್ರಶ್ನೆಗೆ ಉತ್ತರ ಕೊಡಿಸುತ್ತೇನೆ. ಮುಂದಿನ ಪ್ರಶ್ನೆ ಸಂಖ್ಯೆ 1007 ಮಾನ್ಯ ಪುಟ್ಟಣ್ಣನವರದ್ದು. ಅವರು ಉಪಸ್ಥಿತರಿಲ್ಲ. ಮುಂದಿನ ಪ್ರಶ್ನೆ ಸಂಖ್ಯೆ 1012 ಮಾನ್ಯ ಕೆ.ಗೋವಿಂದರಾಜು ಅವರದ್ದು. ಆ ಪ್ರಶ್ನೆ ಗೃಹ ಮಂತ್ರಿಗಳಿಗೆ ವರ್ಗಾವಣೆಯಾಗಿದೆ. ಮಾನ್ಯ ಗೃಹ ಮಂತ್ರಿಗಳೇ ಈಗ ನೀವು ಉತ್ತರ ಕೊಡುತ್ತೀರಾ?

**ಶ್ರೀ ಜಿ.ಪರಮೇಶ್ವರ (ಗೃಹ ಸಚಿವರು):-** ನಾಳೆ ಉತ್ತರ ಕೊಡುತ್ತೇನೆ.

**ಸಭಾಪತಿಯವರು:- ಮುಂದಿನ** ಪ್ರಶ್ನೆ ಸಂಖ್ಯೆ 1050, ಮಾನ್ಯ ಕೆ.ವಿವೇಕಾನಂದ ಅವರದ್ದು. ಅವರು ಉಪಸ್ಥಿತರಿಲ್ಲ.

ಪ್ರಶ್ನೆ ಸಂಖ್ಯೆ: 1054

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಮಧು ಜಿ.ಮಾದೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಉತ್ತರದಲ್ಲಿ, ಕೆ.ಎಂ.ಎಫ್.ಗೆ ಪೂರೈಕೆ ಆಗುತ್ತಿರುವ ಹಾಲಿನಲ್ಲಿ ಮತ್ತು ಖಾಸಗಿ ಕಂಪನಿಗಳ ಹಾಲಿನಲ್ಲಿ ಶೇಕಡ 0.20ರಷ್ಟು ಕಲಬೆರಕೆ ಆಗುತ್ತಿದೆ ಎಂದು ತಿಳಿಸಿದ್ದಾರೆ. ಆದರೆ ಮಾನ್ಯ ಪಶುಸಂಗೋಪನಾ ಸಚಿವರು ಮೊನ್ನೆ ಮೈಸೂರಿನಲ್ಲಿ ಮಾತನಾಡುತ್ತಾ, ಒಂದು ಪತ್ರಿಕಾ ಹೇಳಿಕೆಯಲ್ಲಿ, ಕೆ.ಎಂ.ಎಫ್.ಗೆ ಸರಬರಾಜು ಆಗುವ ಹಾಲಿನಲ್ಲಿ ಶೇಕಡ 16ರಷ್ಟು ಕಲಬೆರಕೆ ಆಗುತ್ತಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಬರುವಂತಹ ಹಾಲಿನಲ್ಲಿ ಕಲಬೆರಕೆ ಆಗಿರುತ್ತದೆ. ಇಂತಹ ಹಾಲನ್ನು ಪರೀಕ್ಷೆಗೆ ಒಳಪಡಿಸುವ ಕೆಲಸವನ್ನು ಸರ್ಕಾರದ ಮಟ್ಟದಲ್ಲಿ ಮಾಡಬೇಕಾಗುತ್ತದೆ. ಈಗಾಗಲೇ, ಮಿಲ್ಕೋಸ್ಕ್ರೀನ್ ಎನ್ನುವ ಯಂತ್ರಗಳು ಬಂದಿವೆ. ಸರ್ಕಾರದ ವತಿಯಿಂದ ಆ ಯಂತ್ರಗಳನ್ನು ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಸರಬರಾಜು ಮಾಡಿದರೆ ಹಾಲಿನ ಕಲಬೆರಕೆ ತಡೆಗಟ್ಟುವುದು ಕಡಿಮೆಯಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೆ, ಹಾಲಿನಲ್ಲಿ ಕಲಬೆರಕ್ಕೆ ಮಾಡುತ್ತಿರುವುದರ ಬಗ್ಗೆ ನಮ್ಮಲ್ಲಿ ಮಾಹಿತಿ ಇದೆ. ಇಂತಹ ತಪ್ಪುಗಳನ್ನು ಮಾಡಬಾರದು ಎಂದು ಹೇಳಿ, ಆ ಕುರಿತು ಅರಿವು ಮೂಡಿಸಬೇಕಾಗುತ್ತದೆ. ಈಗಾಗಲೇ 15,15,575 ಹಾಲಿನ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಅದರಲ್ಲಿ 3,049 ಕೇಸ್‌ಗಳಲ್ಲಿ ಕಲಬೆರಕೆ ಕಂಡುಬಂದಿದ್ದು, ಶೇಕಡ 0.20 ರಷ್ಟು ಕಲಬೆರಕೆ ಇರುವುದು ಕಂಡುಬಂದಿರುತ್ತದೆ. ದೊಡ್ಡ ಖಾಸಗಿ ಹಾಲಿನ ಸಂಸ್ಥೆಯ ಹಾಲಿನಲ್ಲೂ ಈ ರೀತಿಯ ಕಲಬೆರಕೆ ಕಂಡುಬಂದಿದೆ. ಈ ಸಂಸ್ಥೆಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಈಗಾಗಲೇ ತಿಳಿಸಲಾಗಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಸೆಕ್ಷನ್ 59 ರನ್ವಯ ಯಾವುದೇ ಆಹಾರ ಮಾದರಿಯು ಅಸುರಕ್ಷಿತ ಎಂದು ಕಂಡು ಬಂದಲ್ಲಿ ಸದರಿ ಪ್ರಕರಣಗಳಿಗೆ ತೀವ್ರತೆಯನ್ನಾಧರಿಸಿ ಕನಿಷ್ಟ 3 ತಿಂಗಳ ಜೈಲು ಶಿಕ್ಷೆಯಿಂದ ಗರಿಷ್ಠ ಜೀವಾವಧಿ ಶಿಕ್ಷೆ ವಿಧಿಸಬಹುದಾಗಿದೆ. ಮತ್ತೆ, ಹೊಸ ಯಂತ್ರಗಳು ಏನು ಬಂದಿವೆಯೋ ಅವುಗಳನ್ನು ನಂದಿನಿಯವರು ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಸರಬರಾಜು ಮಾಡಿ, ಕಲಬೆರಕೆ ಆಗುವುದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಾನ್ಯ ಸದಸ್ಯರು ಇನ್ನೂ ಹೆಚ್ಚಿನ ಸಲಹೆಗಳನ್ನು ಕೊಟ್ಟರೆ, ಅವುಗಳನ್ನು ಅಳವಡಿಸಿಕೊಂಡು ಕಲಬೆರಕೆ ತಡೆಯುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಮಧು ಜಿ.ಮಾದೇಗೌಡ:-** ಮಾನ್ಯ ಸಭಾಪತಿಗಳೆ, 16% ಕಲಬೆರಕೆ ಆಗುತ್ತಿದೆ ಎಂದು ಮಾನ್ಯ ಸಚಿವರೇ ಹೇಳಿದ್ದಾರೆ. ಆದರೆ ಉತ್ತರದಲ್ಲಿ ಕೇವಲ 0.20% ಎಂದು ಹೇಳುತ್ತಿದ್ದಾರೆ. ಹಾಗಾದರೆ, ಮಾನ್ಯ ಸಚಿವರು ಹೇಳುತ್ತಿರುವುದರಲ್ಲಿ ತಪ್ಪಿದೆಯೇ? ಮಾನ್ಯ ಸಚಿವರು ಹೇಳಿದ್ದು ಪತ್ರಿಕೆಯಲ್ಲಿ ಬಂತು.

**ಶ್ರೀ ಎನ್.ಎಸ್.ಬೋಸರಾಜು:-** ಸಚಿವರು ಯಾವ ಹಿನ್ನೆಲೆಯಲ್ಲಿ ಈ ರೀತಿ ಹೇಳಿದ್ದಾರೋ ಗೊತ್ತಿಲ್ಲ. ಆದರೆ ಇಲಾಖೆಯ ದಾಖಲೆಗಳ ಪ್ರಕಾರ ಉತ್ತರ ನೀಡಲಾಗಿದೆ.

ಪ್ರಶ್ನೆ ಸಂಖ್ಯೆ: 1082

(ಉತ್ತರ ಲಗತ್ತಿಸಲಾಗಿದೆ)

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಂಗಳೂರಿನ ಪೋಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿರುವ ಸಿಬ್ಬಂದಿ ಕೊರತೆಯ ಬಗ್ಗೆ ಪ್ರಶ್ನೆ ಕೇಳಿದ್ದೆ. ನಾನು ಮಾನ್ಯ ಸಚಿವರಿಗೆ ಕೆಲವು ಮನವಿಗಳನ್ನು ಕೂಡ ಕೊಟ್ಟಿದ್ದೇನೆ. ಸುಮಾರು 801 ಪೋಲೀಸ್ ಕಾನ್ಸ್‌ಟೇಬಲ್‌ಗಳು ಇರಬೇಕಾದ ಕಡೆ ಬಹಳ ಕಡಿಮೆ ಪ್ರಮಾಣದಲ್ಲಿ ಆ ಸಿಬ್ಬಂದಿಯವರು ಇದ್ದಾರೆ. 114 ಹುದ್ದೆಗಳು ಖಾಲಿ ಇವೆ. ಮತ್ತೆ, ಇತರ ಘಟಕಗಳಿಗೆ ವರ್ಗಾವಣೆ ಹೊಂದಿ ಹೋಗುವ ಸಿಬ್ಬಂದಿಗಳ ರಿಕ್ತ ಸ್ಥಾನ ಸೇರಿದಂತೆ ಶೇಕಡಾ 15 ಕ್ಕಿಂತ ಹೆಚ್ಚಿರಬಾರದು ಎಂದು ನಿಯಮ ಇದೆ. ಆದರೆ, ಉತ್ತರ ಕರ್ನಾಟಕದಿಂದ ಬಂದವರು ಅಲ್ಲಿ ಪೋಲೀಸ್ ಕಾನ್ಸ್‌ಟೇಬಲ್ ಆದನಂತರ, ತಮ್ಮ 10 ವರ್ಷದ ಅವಧಿಯನ್ನು ಮುಗಿಸಿ, ಅನುಭವ ಪಡೆದುಕೊಂಡ ನಂತರ ಅವರ ಊರುಗಳಿಗೆ ಹೋಗುತ್ತಾರೆ. ಈಗಾಗಲೇ 64 ಜನ ಕಾನ್ಸ್‌ಟೇಬಲ್‌ಗಳು ವರ್ಗಾವಣೆ ಕೋರಿ ಮನವಿ ಸಲ್ಲಿಸಿದ ಮೇಲೆ ಡಿ.ಜಿ.ಪಿ.ಯವರು ಆ ಕುರಿತು ಆದೇಶ ಹೊರಡಿಸಿದ್ದಾರೆ. ಆದರೆ ಆ 64 ಜನ ಹೋದರೆ ಸುಮಾರು 22% ಕೊರತೆಯಾಗುತ್ತದೆ. ಆ ಕಾರಣಕ್ಕೆ ಅವರನ್ನು ಅಲ್ಲೇ ಉಳಿಸಬೇಕು. ಮಂಗಳೂರು ಎಂದ ತಕ್ಷಣ, ಪ್ರವಾಸೋದ್ಯಮದ ತಾಣವಾಗಿ, ಶೈಕ್ಷಣಿಕ ಕೇಂದ್ರವಾಗಿ ಇಡೀ ದೇಶದಾದ್ಯಂತ ಪ್ರಸಿದ್ಧಿ ಪಡೆದಿದೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕೂಡ ಇದೆ. ಕೇರಳ ರಾಜ್ಯದ ಗಡಿ ಭಾಗ ಕೂಡ ಮಂಗಳೂರಿನ ದಕ್ಷಿಣ ಭಾಗಕ್ಕೆ ಬರುತ್ತದೆ. ಈಗಾಗಲೇ ಪೋಲೀಸ್ ವ್ಯವಸ್ಥೆಯಲ್ಲಿ ಅತ್ಯಂತ ಕಠಿಣವಾದ ಕ್ರಮವನ್ನು ಕೈಗೊಳ್ಳುವ ಕೆಲಸ ಮಾಡಿದ್ದಾರೆ. ನಶೆಮುಕ್ತ ಭಾರತವಾಗಲು ಕ್ರಮ ಕೈಗೊಳ್ಳುತ್ತಿದ್ದಾರೆ, ಅಕ್ರಮ ನುಸುಳುಕೋರರನ್ನು ಹಿಡಿದಿದ್ದಾರೆ, ಅಕ್ರಮವಾಗಿ ನೆಲೆಸಿರುವ ವಿದೇಶಿಗರನ್ನು ಬಂಧಿಸಿದ್ದಾರೆ, ನಕಲಿ ಅಂಕಪಟ್ಟಿ ಜಾಲವನ್ನು ಪತ್ತೆ ಮಾಡಿದ್ದಾರೆ, ಸೈಬರ್ ಕ್ರೈಮ್‌ಗೆ ಸಂಬಂಧಪಟ್ಟಂತೆ ಡಿಜಿಟಲ್ ಅರೆಸ್ಟ್ ಎನ್ನುವ ವ್ಯವಸ್ಥೆಯನ್ನು ತಂದಿದ್ದಾರೆ. ಆದರೆ, ಸಿಬ್ಬಂದಿ ಕೊರತೆ ಇರುವುದರಿಂದ ಅಂದರೆ, ಒಂದೊಂದು ಸ್ಟೇಷನ್‌ಗಳಲ್ಲಿ 40 ಜನ ಇರಬೇಕಾದ ಕಡೆ 20 ಜನ ಇದ್ದಾರೆ. ಮಾನ್ಯ ಸಚಿವರು ತಕ್ಷಣ ಒಂದು ಕ್ರಮವಹಿಸಿ, ಸಿಬ್ಬಂದಿಗಳ ಕೊರತೆಯನ್ನು ನೀಗಿಸಬೇಕು. ಅಪರಾಧದ ಪ್ರಕರಣಗಳು ಕಡಿಮೆಯಾಗಿವೆ. ಜನಸಂಖ್ಯೆ ಜಾಸ್ತಿಯಾದಾಗ ಅಪರಾಧ ಪ್ರಕರಣಗಳೂ ಕೂಡ ಹೆಚ್ಚಾಗುತ್ತವೆ. 2023ನೇ ಸಾಲಿನಲ್ಲಿ 3354 ಪ್ರಕರಣಗಳಾಗಿತ್ತು. 2024ನೇ ಸಾಲಿನಲ್ಲಿ 3813 ಪ್ರಕರಣಗಳಾಗಿತ್ತು.

**ಶ್ರೀ ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಗಳೆ, ಸಿಬ್ಬಂದಿ ಕೊರತೆಯ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ನಮ್ಮ ಇಲಾಖೆಯಲ್ಲಿ ಕಾನ್ಸ್‌ಟೇಬಲ್‌ಗಳ ಹುದ್ದೆಗಳನ್ನು ತುಂಬುವ ಕೆಲಸ ಆಗಿರಲಿಲ್ಲ. ನಮ್ಮ ಸರ್ಕಾರ ಬಂದಮೇಲೆ ನಾವು ಇಲ್ಲಿಯವರೆಗೆ 5,000 ಕಾನ್ಸ್‌ಟೇಬಲ್‌ಗಳನ್ನು ಭರ್ತಿ ಮಾಡಿಕೊಂಡಿದ್ದೇವೆ. ತಾವೆಲ್ಲರೂ ಪಿ.ಎಸ್.ಐ. ಹಗರಣದ ಬಗ್ಗೆ ಕೇಳಿರಬಹುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು"

(334) 12-3-2026 11.40 ಡಿಎಸ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಡಾ॥ ಜಿ.ಪರಮೇಶ್ವರ್ (ಮುಂದು):-**

545 ಜನರನ್ನು ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಏನೆಲ್ಲಾ ಆಯಿತು ಎಂದು ನಾನು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಬಗೆಹರಿಸಿ ಕೋರ್ಟ್‌ಗಳು ಏನು intervention ಆಗಿತ್ತು, ಅದನ್ನು ಕೂಡ ಬಗೆಹರಿಸಿಕೊಂಡು 545 ಸಬ್ ಇನ್ಸ್‌ಪೆಕ್ಟರ್‌ಗಳನ್ನು ನೇಮಕಾತಿ ಮಾಡಿ ಈಗಾಗಲೇ ಅವರು ತರಬೇತಿಯನ್ನು ಮುಗಿಸಿ ಇನ್ನು ಒಂದು ವಾರದಲ್ಲಿ ಅವರಿಗೆ passing out parade ಮಾಡಿ ಇಂಥಿಂಥ ಪೋಲೀಸ್ ಸ್ಟೇಷನ್‌ಗೆ ಎಂದು ಅವರನ್ನು ತೋರಿಸಿದ್ದೇವೆ. ಅದರ ಜೊತೆಗೆ 402 ಸಬ್ ಇನ್ಸ್‌ಪೆಕ್ಟರ್‌ಗಳನ್ನು ಕೂಡ ನೇಮಕಾತಿ ಮಾಡಿ ಅವರು ತರಬೇತಿಯಲ್ಲಿದ್ದಾರೆ. ಅವರು ಇನ್ನು ಎರಡು ತಿಂಗಳನಲ್ಲಿ ಹೊರಗಡೆ ಬರುತ್ತಾರೆ. ಈಗ ಹೊಸದಾಗಿ 56,000 ಜನರನ್ನು ನೇಮಕಾತಿ ಮಾಡುತ್ತೇವೆ ಎಂದು ನಾವು ಮೊನ್ನೆ ಸಚಿವ ಸಂಪುಟದಲ್ಲಿ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ 8,000 ಪೋಲೀಸ್ ಕಾನ್ಸ್‌ಟೇಬಲ್‌ಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಹಾಗಾಗಿ ನೇಮಕಾತಿ ಬಗ್ಗೆ ನಾವು ಹೆಚ್ಚು ಕ್ರಮ ತೆಗೆದುಕೊಳ್ಳುವಂತಹ ಕೆಲಸ ಮಾಡುತ್ತಿದ್ದೇವೆ. ಈಗ ನೇಮಕಾತಿಯಾದವರು ಉದಾಹರಣೆಗೆ, ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲೆಗೆ ಅರ್ಜಿಗಳನ್ನು ಕರೆದರೆ ಬೇರೆ ರಾಜ್ಯಗಳಿಂದ ಹೆಚ್ಚು ಅರ್ಜಿಗಳು ಬರುತ್ತಿರುವಂಥದ್ದು. ದಕ್ಷಿಣ ಕನ್ನಡ ಜಿಲ್ಲೆಯವರು ಅರ್ಜಿ ಹಾಕುವುದಿಲ್ಲ. ಶೇಕಡ 10 ರಷ್ಟು ಅರ್ಜಿ ಹಾಕಿದರೆ ನಮ್ಮ ಪುಣ್ಯ. ಆ ರೀತಿಯ ಪರಿಸ್ಥಿತಿ ಇದೆ. ಅದು ಏಕೋ ಏನೋ ಗೊತ್ತಿಲ್ಲ. ಪೋಲೀಸ್ ಕಾನ್ಸ್‌ಟೇಬಲ್ ಹುದ್ದೆ ಒಳ್ಳೆಯ ಹುದ್ದೆ ಎಂದು ಅವರಿಗೆ ಅನಿಸಿಲ್ಲ ಎಂದು ನಾನು ತಿಳಿದುಕೊಳ್ಳುತ್ತೇನೆ. ಅವರಿಗೆ ಬೇರೆ ಬೇರೆ ಅವಕಾಶಗಳು ಹೊರಗಡೆ ಸಿಗಬಹುದು. ಹಾಗಾಗಿ ದಕ್ಷಿಣ ಕನ್ನಡ ಜಿಲ್ಲೆಯವರು ಹೆಚ್ಚು ಅರ್ಜಿ ಹಾಕುವುದಿಲ್ಲ, ಹೊರಗಡೆಯವರು ಅರ್ಜಿ ಹಾಕುತ್ತಿದ್ದಾರೆ. ನಾನು ಮಂಗಳೂರಿಗೆ ಹೋಗಿ ನೋಡಿದರೆ ಅಲ್ಲಿರುವವರೆಲ್ಲಾ ಹೆಚ್ಚು ಜನ ಬಿಜಾಪುರ, ರಾಯಚೂರು, ಈ ಭಾಗಗಳಿಂದ ಬಂದಿರುವವರೇ ಹೆಚ್ಚು ಜನರಿದ್ದಾರೆ. ಅವರ ಸಮಸ್ಯೆ ಏನೆಂದರೆ, ಅವರಿಗೆ ತುಳು ಮಾತನಾಡುವುದಕ್ಕೆ ಬರುವುದಿಲ್ಲ. ಅವರು ತುಳು ಕಲಿಯುವಷ್ಟರಲ್ಲಿ ಅವರಿಗೆ ವಯಸ್ಸು ಆಗಿರುತ್ತದೆ. ಆದರೆ ಅವರಿಗೆ ಸಮಸ್ಯೆ ಏನೆಂದರೆ, ನಮ್ಮ ಜಿಲ್ಲೆಗೆ ಹೋಗಬೇಕು ಎನ್ನುವುದು ಅವರ ಬೇಡಿಕೆಯಾಗಿದೆ. ನಾವು ಅದಕ್ಕೆ ಕಾನೂನಿನಲ್ಲಿ ಪ್ರಾವಿಷನ್ ಮಾಡಿದ್ದೇವೆ. 7 ವರ್ಷಗಳಾದ ಮೇಲೆ ಅವರ ಜಿಲ್ಲೆಯನ್ನು ಕೇಳಕೊಳ್ಳುತ್ತಾರೆ, ನಾವು ಕೊಡಬಹುದು ಎಂದು ಕಾನೂನು ಮಾಡಿದ್ದೇವೆ. ಬಹಳ ಜನ ಒಂದೇ ಸಲ ಹಾಕಿಬಿಡುತ್ತಾರೆ. ಅದಕ್ಕೆ ನಾವು ಸೀನಿಯಾರಿಟಿ ಲಿಸ್ಟ್ ಮಾಡಿ, ಆ ಸೀನಿಯಾರಿಟಿ ಪ್ರಕಾರ ಮಾಡುತ್ತೇವೆ. ಅದಕ್ಕಿಂತ ಮೊದಲು ಪತಿ-ಪತ್ನಿ ಪ್ರಕರಣಗಳಿಗೆ ಆದ್ಯತೆಯನ್ನು ಕೊಟ್ಟು ಮಾಡುತ್ತೇವೆ. ಮೂರು ವರ್ಷಗಳಲ್ಲಿ 4,967 ನೇಮಕಾತಿ ಮಾಡಿದ್ದೇವೆ. ಅದರಲ್ಲಿ 1,189 ಜನರಿಗೆ ಅವರ ಜಿಲ್ಲೆಗಳಿಗೆ ಹೋಗುವುದಕ್ಕೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಹೆಚ್ಚು ಜನರನ್ನು ಕೊಟ್ಟರೆ ಇಲ್ಲಿ ಖಾಲಿ ಆಗಿಬಿಡುತ್ತದೆ. ಈಗಾಗಲೇ ಮಿನಿಮಮ್ ಏನಿದೆ ಅದರಲ್ಲಿ ನಡೆಯುತ್ತಿದೆ.

ಅಂಥದ್ದರಲ್ಲಿ ಇನ್ನೂ ಕೊಟ್ಟರೆ ಸಮಸ್ಯೆಯಾಗುತ್ತದೆ. ಈಗ 63 ಜನರಿಗೆ ಕ್ಲಿಯರೆನ್ಸ್ ಕೊಟ್ಟಿದ್ದೇವೆ. ಆದರೆ, ಇಲ್ಲಿ ಕಡಿಮೆಯಾಗುತ್ತದೆಂದು ಅವರನ್ನು ಬಿಡುಗಡೆ ಮಾಡುವುದಕ್ಕಾಗುತ್ತಿಲ್ಲ. ಅಲ್ಲಿನ ಕಮಿಷನರ್‌ರವರು ಬಿಡುಗಡೆ ಮಾಡಿದರೆ ಕಡಿಮೆಯಾಗಿಬಿಡುತ್ತದೆ, ಆದ್ದರಿಂದ ನಾವು ಸದ್ಯಕ್ಕೆ ಬಿಡುಗಡೆ ಮಾಡುವುದು ಬೇಡ ಎಂದು ಅವರು ಹಾಗೆ ಇಟ್ಟಿದ್ದಾರೆ. ಅದಕ್ಕೆ ದಿನಾಂಕ 15.07.2024ರಲ್ಲಿ ಹೊಸ ಕಾನೂನನ್ನು ತಂದಿದ್ದೇವೆ. ಶೇಕಡ 15 ಕ್ಕಿಂತ ಮೇಲೆ ನೀವು ವರ್ಗಾವಣೆ ಮಾಡಬಾರದು ಎಂದು ಕಾನೂನನ್ನು ತಂದಿದ್ದೇವೆ. ಆದ್ದರಿಂದ ಎಲ್ಲಾ ರೀತಿಯಲ್ಲೂ ಕೂಡ ಅದಕ್ಕೆ ಕ್ರಮ ತೆಗೆದುಕೊಂಡು ಒಂದು ಸ್ಟೇಷನ್‌ನಲ್ಲಿ ಎಷ್ಟು ಮಿನಿಮಮ್ ಸಿಬ್ಬಂದಿ ಇರಬೇಕು ಎನ್ನುವುದರ ಬಗ್ಗೆ ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇವತ್ತು ಅದರ ಪ್ರಕಾರ ಮಾಡುತ್ತೇವೆ. ಮಾನ್ಯ ಸದಸ್ಯರು ಮತ್ತೊಂದು ಪ್ರಶ್ನೆ ಕೇಳಿದ್ದಾರೆ. ಇಲಾಖೆಯ ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಒಂದೇ ಜಿಲ್ಲೆ/ಘಟಕದಲ್ಲಿ ಕರ್ತವ್ಯ ನಿರ್ವಹಿಸಲು ನಿಯಮಾವಳಿಯಲ್ಲಿ ಅಥವಾ ನೇಮಕಾತಿ ಅಧಿಸೂಚನೆಯಲ್ಲಿ ತಿದ್ದುಪಡಿ ತರುತ್ತಾರೆಯೇ ಎಂದು ಪ್ರಶ್ನೆ ಕೇಳಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ನಾವು ಅದಕ್ಕೆ ಯಾವುದೇ ಬದಲಾವಣೆಯನ್ನು ತರುವುದಕ್ಕಾಗುವುದಿಲ್ಲ. ಇದೇ ರೀತಿ ಬಳ್ಳಾರಿ ಜಿಲ್ಲೆಯಲ್ಲಿ ಶೇಕಡ 25 ರಷ್ಟು ಆಗಿಬಿಟ್ಟಿದೆ. ನಮ್ಮ ಸರ್ಕಾರ ಬಂದ ಮೇಲೆ ಅಷ್ಟೆ ಅಲ್ಲ, ನಾನು ಒಟ್ಟಾರೆ ಹೇಳುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ನಗರ ಬಿಟ್ಟು ಆಚೆ ಹೋಗುವ ಹಾಗೆ ಇಲ್ಲ. ನೇಮಕಾತಿ ನಗರಕ್ಕೆ ಪ್ರತ್ಯೇಕವಾಗಿ ಮಾಡುವುದರಿಂದ ಅಲ್ಲಿ ಯಾರು ಬದಲಾವಣೆಯನ್ನು ಕೇಳುವುದಿಲ್ಲ. 2022-23ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಶೇಕಡ 34 ರಷ್ಟು ಆಗಿದೆ. ರಾಯಚೂರು ಜಿಲ್ಲೆಯಲ್ಲಿ ಶೇಕಡ 72 ರಷ್ಟು ಆಗಿಬಿಟ್ಟಿದೆ. ಒಂದು ಕಡೆ ಸಿಬ್ಬಂದಿಗಳನ್ನು ಸ್ಟೇಷನ್‌ಗಳಲ್ಲಿ ಸರಿಯಾದ ಸಂಖ್ಯೆಯಲ್ಲಿ ಇಟ್ಟುಕೊಳ್ಳಬೇಕು. ಮತ್ತೊಂದು ಕಡೆ ನೇಮಕಾತಿಯನ್ನು ಆಗಿಂದಾಗ್ಗೆ ಮಾಡುತ್ತಿರಬೇಕು. ನೇಮಕಾತಿಯನ್ನು ಮಾಡುತ್ತಿದ್ದರೆ ತೊಂದರೆಯಾಗುವುದಿಲ್ಲ. ಯಾವಾಗ ನಾವು ನೇಮಕಾತಿಯನ್ನು 4 ವರ್ಷ, 5 ವರ್ಷ ನೇಮಕಾತಿ ಮಾಡದಿದ್ದರೆ ಸ್ವಾಭಾವಿಕವಾಗಿ ನಿವೃತ್ತಿಯಾದಾಗ ಹುದ್ದೆಗಳು ಖಾಲಿಯಾಗುತ್ತವೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಶೇಕಡ 15 ರಷ್ಟು ನಿಯಮ ಏನಿದೆ ಅದರ ಮೇಲೆ ನಾವು ಮಾಡಿಕೊಡುವುದಿಲ್ಲ ಎನ್ನುವ ಮಾತನ್ನು ನಾನು ಅವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದಿಂದ ಶೇಕಡ 95 ರಷ್ಟು ಮಂಗಳೂರಿಗೆ ಬಂದಿದ್ದಾರೆ. ಹತ್ತು ವರ್ಷಗಳಾದ ನಂತರ ನಮ್ಮ ಮಂಗಳೂರಿನ ಎಲ್ಲಾ ವಿಚಾರಗಳು ಅವರಿಗೆ ಗೊತ್ತಿರುತ್ತವೆ. ಅವರು ಊರಿಗೆ ಹೋದಾಗ 200 ಹುದ್ದೆಗಳು ಖಾಲಿ ಇವೆ. ಈಗ ಇರುವಂತಹ 150 ಹೆಡ್ ಕಾನ್ಸ್‌ಟೇಬಲ್‌ಗಳಲ್ಲಿ 44 ಜನರು P.S.I. (Police Sub Inspector) ವೇತನ ಶ್ರೇಣಿಗೆ ಬಂದಿದ್ದಾರೆ. ಅದರ ಜೊತೆಗೆ 16 ಪಿ.ಎಸ್.ಐ. ಬೇಕು. 44 A.S.I (Assistant Sub Inspector) ನಲ್ಲಿ 16 ಜನರನ್ನು ಅದರಲ್ಲೇ ಪಿ.ಎಸ್.ಐ ಮಾಡಬಹುದು. ಅವರಿಗೆ ಅರ್ಹತೆ ಇದೆ. ಅವರನ್ನು ಮಾಡಿ ಪೊಲೀಸ್ ಕಾನ್ಸ್‌ಟೇಬಲ್

ಗಳನ್ನು ತಕ್ಷಣ ಕೊಟ್ಟರೆ ಇನ್ನೂ ಕಾನೂನು ಸುವ್ಯವಸ್ಥೆಯನ್ನು ಗಟ್ಟಿ ಮಾಡಬಹುದು ಎಂದು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಈಗ ಖಂಡಿತವಾಗಿಯೂ ಅದರ ಬಗ್ಗೆಯೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದರೆ ಎಲ್ಲವೂ ಕೂಡ ಸರಿಯಾಗುತ್ತದೆ.

## ಪ್ರಶ್ನೆ ಸಂಖ್ಯೆ 1005

## (ಉತ್ತರ ಲಗತ್ತಿಸಲಾಗಿದೆ)

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಇಲ್ಲಿಯವರೆಗೂ ಎಷ್ಟು ಸೈಬರ್ ಅಪರಾಧ ಪ್ರಕರಣಗಳು ನಡೆದಿವೆ ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ ಪಟ್ಟಿಯಲ್ಲಿ ಕರ್ನಾಟಕವು ಸೈಬರ್ ಅಪರಾಧ ಪ್ರಕರಣಗಳಲ್ಲಿ ಪ್ರಥಮ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಹೌದು ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಅದಕ್ಕೆ ಏನು ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಬಹಳ ವಿವರವಾಗಿ ಉತ್ತರ ಕೊಟ್ಟಿದ್ದಾರೆ. ಈಗ ಸೈಬರ್ ಅಪರಾಧಗಳು ಜಾಸ್ತಿಯಾದ ನಂತರ ಡಿ.ಜಿ.ಪಿ. ಸೈಬರ್ ಕಮಾಂಡ್ ಹುದ್ದೆಯನ್ನು ಸೃಷ್ಟಿ ಮಾಡಿದ್ದೇವೆ ಎಂದು ಹೇಳಿದ್ದಾರೆ. C.E.N. ಪೊಲೀಸ್ ಠಾಣೆಗಳನ್ನು ಸೈಬರ್ ಅಪರಾಧ ಪೊಲೀಸ್ ಠಾಣೆಗಳಾಗಿ ಪರಿವರ್ತನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ನನ್ನ ಆತಂಕವೇನೆಂದರೆ, ಎಲ್ಲಾ ಹುದ್ದೆಗಳನ್ನು ಸೃಷ್ಟಿ ಮಾಡಿದ್ದಾರೆ. ಈಗ ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ಮೊದಲು ಇನ್ಸ್‌ಪೆಕ್ಟರ್ ಕೇಡರ್‌ನಲ್ಲಿ ಇದ್ದವರನ್ನು ಡಿವೈ.ಎಸ್.ಪಿ. ಕೇಡರ್‌ಗೆ ಅಪ್‌ಗ್ರೇಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಅಲ್ಲಿ ಯಾರು ಆ ಜಾಗಕ್ಕೆ ಸರಿಯಾದ ಅಧಿಕಾರಿಗಳು ಬಂದು ರಿಪೋರ್ಟ್ ಮಾಡಿಕೊಳ್ಳುತ್ತಿಲ್ಲ. ನಮ್ಮ ರಾಜ್ಯದಲ್ಲಿ ಎಷ್ಟು ಸೈಬರ್ ಅಪರಾಧ ಪೊಲೀಸ್ ಠಾಣೆಗಳು ಇವೆ ಎಂದು ನನ್ನ ಹತ್ತಿರ ಮಾಹಿತಿ ಇದೆ. ಅದನ್ನು ಮಾನ್ಯ ಸಚಿವರು ತೆಗೆದುಕೊಳ್ಳಬಹುದು. ನಮ್ಮ ರಾಜ್ಯದಲ್ಲಿ ಎಷ್ಟು ಸೈಬರ್ ಅಪರಾಧ ಪೊಲೀಸ್ ಠಾಣೆಗಳು ಇವೆ, ಅದರಲ್ಲಿ ಎಷ್ಟು ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ, ಎಷ್ಟು ಠಾಣೆಗಳಲ್ಲಿ ಅಧಿಕಾರಿಗಳ ಹುದ್ದೆ ಖಾಲಿ ಇವೆ ಎನ್ನುವ ಮಾಹಿತಿಯನ್ನು ಮಾನ್ಯ ಸಚಿವರು ಕೊಟ್ಟರೆ ಒಳ್ಳೆಯದು.

**ಡಾ|| ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿನಗಳಲ್ಲಿ ಸುಮಾರು 15-20 ವರ್ಷಗಳಿರಬಹುದು, ಅಲ್ಲಿಂದೀಚೆಗೆ ನಮ್ಮ dependency technology and computers ಮೇಲೆ ಆಗುವುದಕ್ಕೆ ಪ್ರಾರಂಭವಾಯಿತು ಅದರಲ್ಲಿ ಅಪರಾಧ ಮಾಡುವವರು ಯಾವ ರೀತಿ ಫ್ರಾಡ್‌ಗಳನ್ನು ಮಾಡಬಹುದು, ಕಳ್ಳತನ ಮಾಡಬಹುದು ಎಂಬುದನ್ನು ಕೂಡ ಸೃಷ್ಟಿ ಮಾಡಿಕೊಂಡರು. ಅದು ಬಹಳ ದೊಡ್ಡ ಪ್ರಮಾಣದಲ್ಲಿ all over the world ನಡೆಯುತ್ತಿದೆ. ನಮ್ಮ ಭಾರತದಲ್ಲೂ ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ ಈ ಟೆಕ್ನಾಲಜಿಯಲ್ಲಿ ಏನು loopholes ಇದೆ ಅದನ್ನು ಉಪಯೋಗ ಮಾಡಿಕೊಂಡು ಈ ಫ್ರಾಡ್‌ಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಾನು ಹೆಚ್ಚಿಗೆ ಹಿಂದಕ್ಕೆ ಹೋಗುವುದಿಲ್ಲ. ಕರ್ನಾಟಕದಲ್ಲಿ ಇದರ ಬಗ್ಗೆ ಟೆಕ್ನಾಲಜಿಯನ್ನು ಉಪಯೋಗ ಮಾಡಿ ಈ ಅಪರಾಧಗಳನ್ನು ಮಾಡಿರುವವರನ್ನು ಹಿಡಿದು ಅವರಿಗೆ ಶಿಕ್ಷೆ ಕೊಡುವುದನ್ನು ಪ್ರಾರಂಭ ಮಾಡಿರುವುದು ಇಡೀ ದೇಶದಲ್ಲಿ ನಾವೇ ಮೊದಲು. ಈ ದೇಶದಲ್ಲಿ ನಾವೇ ಮೊದಲು ಸೈಬರ್ ಪೊಲೀಸ್ ಠಾಣೆಗಳನ್ನು ಪ್ರಾರಂಭ ಮಾಡಿದ್ದೇವೆ. ನಾನು ಇನ್‌ಫೋಸಿಸ್ ಸಂಸ್ಥೆಯವರಿಗೆ

ಧನ್ಯವಾದಗಳನ್ನು ಹೇಳುತ್ತೇನೆ. ಅವರು ನಮಗೆ ಆ ಪ್ರಾಜೆಕ್ಟ್‌ಗೆ 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. C.I.D. head quarters ಒಳಗೆ ನಾವು ಒಂದು ಸೈಬರ್ ಠಾಣೆಯನ್ನು ಮಾಡಿದ್ದೇವೆ. ಅಲ್ಲಿಂದ ಪ್ರಾರಂಭ ಮಾಡಿ ನಮ್ಮ cyber security laboratory ಇರಬಹುದು. Center for Cyber crime Investigation Training and Research (CCITR) ಏನಿದೆ, it is one of the best Institutes in the Country. ಕಳೆದ ವಾರವೇ ನಾವು ನ್ಯಾಷನಲ್ ಕಾನ್ಫರೆನ್ಸ್ ಅನ್ನು ಮಾಡಿದ್ದೇವೆ. ಇಡೀ ದೇಶದ ಎಲ್ಲಾ ರಾಜ್ಯಗಳಿಂದ ಡಿ.ಜಿ.ಗಳು, ಹಿರಿಯ ಅಧಿಕಾರಿಗಳು ಬಂದಿದ್ದರು. ಮತ್ತು ಬೇರೆ ಬೇರೆಯವರು ಅಮೇರಿಕಾದಿಂದ ಬಂದು ಪ್ರೆಸೆಂಟೇಷನ್‌ಗಳನ್ನು ಮಾಡಿ ವರ್ಕ್‌ಶಾಪ್‌ಗಳಲ್ಲಿ ಭಾಗವಹಿಸಿದರು. ಅವರೆಲ್ಲರೂ ಕೂಡ, 'this is one of the best facilities in India' ಎನ್ನುವ ಮಾತನ್ನು ಹೇಳಿದರು.

(ಮುಂದು)

**(335) 12/03/2026 11:50 ಎಸ್‌ಪಿಆರ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಡಾ॥ ಜಿ.ಪರಮೇಶ್ವರ (ಮುಂದು):-**

ಇದನ್ನು ನಾವು ಮಾಡಿದ್ದೇವೆ. ನಮಗೆ ಯಾವಾಗ ನಮ್ಮ ರಾಜ್ಯದಲ್ಲಿ ಅತೀ ಹೆಚ್ಚು ಸೈಬರ್ ಅಪರಾಧಗಳ ಸಂಖ್ಯೆಗಳು ಆದವೋ.... ಇದರ ಬಗೆಗಿನ ಅಂಕಿ ಅಂಶಗಳನ್ನು ನಾವು ಸದಸ್ಯರಿಗೆ ಒದಗಿಸಿದ್ದೇನೆ. ಆದರೂ ಅದನ್ನು ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. 2021 ನೇ ಇಸ್ವಿಯಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ಸಂಖ್ಯೆ 8,396. 2022 ನೇ ಇಸ್ವಿಯಲ್ಲಿ 12,920 ಪ್ರಕರಣಗಳು ದಾಖಲಾಗಿದೆ. ಆದರೆ, ಈ ಸಂಖ್ಯೆ 2023 ನೇ ಇಸ್ವಿಯಲ್ಲಿ ಡಬಲ್ ಆಗಿ 22,255 ರಷ್ಟು ಆಗಿದೆ. 2024 ನೇ ಇಸ್ವಿಯಲ್ಲಿ 22,483 ಆಗಿದೆ. ಹೀಗಾಗಿ ನಾವು ಇದನ್ನು ಬಹಳ ಗಂಭೀರವಾಗಿ ಗಮನಿಸಿದ್ದೇವೆ. ಇದು ಎಲ್ಲಿಯವರೆಗೆ ಆಗಿದೆ ಎಂದರೆ, ಯಾರದ್ದೇ ಬ್ಯಾಂಕ್ ಖಾತೆಯನ್ನು ಬೇರೆಯವರು ಹ್ಯಾಕ್ ಮಾಡಿ, ಡಿಜಿಟಲ್ ಅರೆಸ್ಟ್ ಮಾಡಿ, ಅವರುಗಳ ಖಾತೆಗಳಿಂದ ಹಣವನ್ನು ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ. ಇದನ್ನು ಬೇರೆ ಬೇರೆ ರೂಪದಲ್ಲಿಯೂ ಸಹ ಮಾಡುತ್ತಾರೆ. ಇವರುಗಳು ಎಷ್ಟರಮಟ್ಟಿಗೆ ಮಾಡುತ್ತಾರೆಂದರೆ, ನಾಟಕವೊಂದರಲ್ಲಿ ನಾವು ಸೀನ್‌ಗಳನ್ನು ಕ್ರಿಯೇಟ್ ಮಾಡುತ್ತೇವೆ; ಆ ರೀತಿಯಾಗಿ ರೂಮ್‌ವೊಂದರಲ್ಲಿ ಸಿ.ಬಿ.ಐ. ಅಧಿಕಾರಿಯ ಮಾದರಿಯನ್ನು ಸೃಷ್ಟಿಸುತ್ತಾರೆ. ಅಥವಾ ಜಾರಿ ನಿರ್ದೇಶನಾಲಯ ಅಧಿಕಾರಿಯ ತರಹ ಹಿಂಬದಿಯಲ್ಲಿ ಕಛೇರಿಯ ಲೋಗೋ, ಸಿಂಬಲ್‌ಗಳನ್ನು ಹಾಕುತ್ತಾರೆ. ಅದೇ ರೀತಿಯಾಗಿ ಐ.ಟಿ. ಅಧಿಕಾರಿಗಳ ಕಛೇರಿಯನ್ನು ಸೃಷ್ಟಿಸುತ್ತಾರೆ. ಯಾರೋ ಮುಗ್ಧ ಜನರಿಗೆ ಕರೆ ಮಾಡಿ, ಅವರನ್ನು ಡಿಜಿಟಲ್ ಅರೆಸ್ಟ್ ಎಂಬುದಾಗಿ ಮಾಡುತ್ತಾರೆ. ಡಿಜಿಟಲ್ ಅರೆಸ್ಟ್ ಅಂದರೆ, ಅವರು ಎಲ್ಲಿದ್ದಾರೆಯೋ ಅಲ್ಲಿಯೇ ಒಂದು ರೂಮಿನಲ್ಲಿ ಅವರನ್ನು ಕೂಡಿ ಹಾಕುವುದು; ಅಂದರೆ ಅವರು ಎಲ್ಲಿಯೂ ಹೊರಗೆ ಹೋಗುವಂತಿಲ್ಲ; ಅಥವಾ ಒಳಗೆ ಬರುವಂತಿಲ್ಲ. ಅವರು ತಮಗೆ ಬೇಕಾದ್ದೆಲ್ಲವನ್ನೂ ಹೇಳುತ್ತಾರೆ. ಕರೆ ಮಾಡಿ ತಾವು ಸಿ.ಬಿ.ಐ. ನ ನಿರ್ದೇಶಕರು ಅಥವಾ ಉಪ ನಿರ್ದೇಶಕರು ಎಂಬುದಾಗಿ ಪರಿಚಯಿಸಿಕೊಂಡು, ನಿಮ್ಮ ಮೇಲೆ

ಈ ರೀತಿಯ ಕೇಸ್ ಬಂದಿದೆ. ಹೀಗಾಗಿ ಈಗ ನಿಮ್ಮನ್ನು ಅರೆಸ್ಟ್ ಮಾಡಬೇಕಾಗಿದ್ದು, ನೀವು ಎಲ್ಲಿಯೂ ಹೋಗಕೂಡದು; ನಾವು ಹೇಳಿದಂತೆಯೇ ಕೇಳಬೇಕು. ನೀವು ಯಾರಿಗೂ ಕರೆ ಮಾಡುವಂತಿಲ್ಲ, ಯಾರೊಂದಿಗೂ ಸಂಪರ್ಕವನ್ನು ಹೊಂದುವಂತಿಲ್ಲ ಎಂಬಿತ್ಯಾದಿಯಾಗಿ ಸೂಚನೆಗಳನ್ನು ನೀಡುತ್ತಾರೆ. ಸ್ವಾಭಾವಿಕವಾಗಿ ಮನುಷ್ಯನಿಗೆ ಆ ರೀತಿಯಾಗಿ ಹೇಳಿದಾಗ ಅವರಿಗೆ ಭಯ ಬಂದೇ ಬರುತ್ತದೆ. ಆ ಸಂದರ್ಭದಲ್ಲಿ ಅವರಿಗೆ ಏನು ಹೇಳುತ್ತಾರೆಯೋ, ಅದನ್ನೇ ಕೇಳುತ್ತಾರೆ. ಇತ್ತೀಚೆಗೆ ಘಟನೆಯೊಂದು ಆಗಿದೆ. ಒಂದು ಕಂಪನಿ ಇದೆ; ನಾನು ಅದರ ಹೆಸರನ್ನು ಹೇಳಬಾರದು. ಆ ಕಂಪನಿಯಲ್ಲಿ ಕೆಲಸ ಮಾಡುವ ಮಹಿಳಾ ಸಿಬ್ಬಂದಿಯೊಬ್ಬರು administration ನಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಸಿ.ಇ.ಓ. ಸ್ಥಾನಕ್ಕೆ ಹೋಗುವವರಿದ್ದು, ಇಂತಹ ಹಿರಿಯ ಸ್ಥಾನದಲ್ಲಿ ಅವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. She is an expert in technology. ಅವರೇನೂ ದಡ್ಡರು, ಅನಕ್ಷರಸ್ಥರು ಅಥವಾ ಏನೂ ಗೊತ್ತಾಗುವುದೇ ಇಲ್ಲ ಎನ್ನುವಂತಿಲ್ಲ. ಅವರು ಒಂದು ದೊಡ್ಡ ಕಂಪನಿಯಲ್ಲಿ ಎರಡನೇ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುವವರಾಗಿದ್ದಾರೆ. ಇಂತಹವರನ್ನು ಡಿಜಿಟಲ್ ಅರೆಸ್ಟ್ ಮಾಡಿ, ಇವರಿಂದ 32 ಕೋಟಿ ರೂಪಾಯಿಗಳನ್ನು ಕಿತ್ತುಕೊಂಡಿದ್ದಾರೆ. ಇಲ್ಲಿಯವರೆಗೆ ಆದ ಡಿಜಿಟಲ್ ಅರೆಸ್ಟ್ ಪ್ರಕರಣಗಳಲ್ಲಿಯೇ ಇದು highest ಹಣ ಕಿತ್ತುಕೊಂಡಿರುವ ಪ್ರಕರಣವಾಗಿದೆ. ಒಬ್ಬ ಅಕ್ಷರಸ್ಥ, technically savvy ಆದವರಿಗೆ ಆ ರೀತಿಯಾಗಿ ಮಾಡುತ್ತಾರೆ ಎಂದರೆ, ನಾವು ಬೇರೆಯವರ ಪರಿಸ್ಥಿತಿಯನ್ನು ಲೆಕ್ಕ ಹಾಕಿಕೊಳ್ಳಬೇಕು. Of course, ಈಗ ನಾವು ಆ ತಪ್ಪಿತಸ್ಥರನ್ನು ಅರೆಸ್ಟ್ ಮಾಡಿ, ಅವರ ವಿರುದ್ಧ ಕಾನೂನು ರೀತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇವತ್ತಿನ ದಿವಸ ಆ ಮಟ್ಟಕ್ಕೆ ಫ್ರಾಡ್‌ಗಳು ನಡೆಯುತ್ತಿವೆ. ಇವತ್ತಿನ ದಿವಸ ಯಾರದ್ದೇ ಬ್ಯಾಂಕ್ ಖಾತೆಗಳು ಸುರಕ್ಷಿತವಾಗಿಲ್ಲ. Anytime anybody can hack. ನಾನು ಯಾವುದೇ ರಾಜ್ಯದ ಹೆಸರನ್ನು ಹೇಳಲಿಚ್ಛಿಸುವುದಿಲ್ಲ. ಹೊರ ರಾಜ್ಯವೊಂದರಲ್ಲಿ, ಪೂರ್ತಿಯಾದ ಒಂದು ಹಳ್ಳಿಯೇ ಈ ರೀತಿಯಾದ ಕೆಲಸವನ್ನು ಮಾಡುತ್ತದೆ. ಆ ಹಳ್ಳಿಯ ಪ್ರತಿಯೊಂದು ಮನೆಯಲ್ಲಿಯೂ ಸಹ ಈ ರೀತಿಯ ಬ್ಯಾಂಕ್ ಖಾತೆಗಳನ್ನು ಹ್ಯಾಕ್ ಮಾಡುವ ಅಥವಾ ಇನ್ಯಾವುದೇ ಫ್ರಾಡ್‌ಗಳನ್ನು ಮಾಡುವ ಒಂದು ರೀತಿಯ ದೊಡ್ಡ ದಂಧೆಯೇ ಅಲ್ಲಿ ನಡೆಯುತ್ತಿದೆ. ರೆಗ್ಯೂಲರ್ ಆದ ಅಪರಾಧಿಗಳು ಕೊಲೆ, ಅತ್ಯಾಚಾರಗಳಂತಹ ಅಪರಾಧಗಳನ್ನು ಮಾಡಿದರೆ, ಇವರುಗಳು ಇಂತಹ ಕೆಲಸವನ್ನು ಮಾಡುತ್ತಾರೆ. ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಯಾವ ರೀತಿಯಾಗಿ ಬಂಧೀಖಾನೆಗೆ, ಸಿ.ಐ.ಡಿ. ವಿಭಾಗಗಳಿಗೆ ಪ್ರತ್ಯೇಕವಾದ ಡಿ.ಜಿ.ಪಿ. ಹುದ್ದೆಯ ಅಧಿಕಾರಿಗಳು ಇರುತ್ತಾರೆಯೋ, ಆ ರೀತಿಯಾಗಿ ಸೈಬರ್ ಸೆಕ್ಯೂರಿಟಿ ವಿಭಾಗಕ್ಕೂ ಸಹ ಒಂದು ಡಿ.ಜಿ.ಪಿ. ಹುದ್ದೆಯನ್ನು vertical ಮಾದರಿಯಲ್ಲಿ ಸೃಜಿಸಲಾಗಿದೆ. For the first time in the Country, we have created D.G.P. post for looking after cyber crime. ಈ ರೀತಿಯಾದ ವ್ಯವಸ್ಥೆಯನ್ನು ನಾವು ಮಾಡಿದ್ದು, ಇದರಡಿ ಇವತ್ತಿನ ದಿವಸ ಕೆಲಸಗಳನ್ನು ಮಾಡಲಾಗುತ್ತಿದೆ. 2024 ನೇ ಇಸ್ವಿಯಲ್ಲಿ 22,483 ಪ್ರಕರಣಗಳು ಆಗಿದ್ದರೆ, 2025 ನೇ ಇಸ್ವಿಯಲ್ಲಿ 14,899 ಪ್ರಕರಣಗಳು ದಾಖಲಾಗಿವೆ. So much it is

reduced. ಏಕೆಂದರೆ, ನಾವು ಈ ವಿಚಾರದಲ್ಲಿ ಬಹಳ ಗಂಭೀರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅಪರಾಧಿಕ ಪ್ರಕರಣಗಳನ್ನು ನೋಂದಣಿ ಮಾಡುತ್ತಿದ್ದೇವೆ. ಈ ಪ್ರಕರಣಗಳಲ್ಲಿ conviction rate ಕಡಿಮೆ ಇರಬಹುದು. ಹೀಗಾಗಿ ಈ ವಿಚಾರದಲ್ಲಿ ನಾವು ಹೆಚ್ಚಿನ ಗಮನವನ್ನು ಹರಿಸಿ, ಶಿಕ್ಷೆಯಾಗುವ ಪ್ರಕರಣಗಳ ಸಂಖ್ಯೆಯನ್ನೂ ಸಹ ಜಾಸ್ತಿ ಮಾಡಬೇಕೆಂದು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಈ ಸಂದರ್ಭದಲ್ಲಿ ನಾನು ಮಾಹಿತಿಯೊಂದನ್ನು ನೀಡುತ್ತೇನೆ. 2021 ನೇ ಇಸ್ವಿಯಲ್ಲಿ ದಾಖಲಾದ 8,396 ಪ್ರಕರಣಗಳಲ್ಲಿ 446 ಕೋಟಿ ರೂಪಾಯಿಗಳು ಫ್ರಾಡ್ ಆಗಿದೆ. ಈ ಪೈಕಿ ಇಲಾಖೆಯು 97 ಕೋಟಿ ರೂಪಾಯಿಗಳನ್ನು ರಿಕವರಿ ಮಾಡಲಾಗಿದೆ. ಅದೇ ರೀತಿಯಾಗಿ 2024 ನೇ ಇಸ್ವಿಯಲ್ಲಿ 2,399 ಕೋಟಿ ರೂಪಾಯಿಗಳು ಫ್ರಾಡ್ ಆಗಿದೆ. ಈ ಪೈಕಿ 395 ಕೋಟಿ ರೂಪಾಯಿಗಳನ್ನು ರಿಕವರಿ ಮಾಡಲಾಗಿದ್ದು, ಈಗ ಇವುಗಳು ಪ್ರೊಸೆಸ್‌ನಲ್ಲಿವೆ. ಹೀಗಾಗಿ ಸಾಕಷ್ಟು ಫ್ರಾಡ್ ಆದ ಹಣ ರಿಕವರಿ ಆಗುತ್ತದೆ. ಇದೇ ಪ್ರಕಾರ, 2025 ಇಸ್ವಿಯಲ್ಲಿ 2,200 ಕೋಟಿ ರೂಪಾಯಿಗಳು ಫ್ರಾಡ್ ಆಗಿದ್ದು, ಈ ಪೈಕಿ 231 ಕೋಟಿ ರೂಪಾಯಿಗಳು ರಿಕವರಿ ಮಾಡಲಾಗಿದೆ.

ಡಿಜಿಟಲ್ ಅರೆಸ್ಟ್ ಬಗ್ಗೆ ಹೇಳುವುದಾದರೆ, 2025 ನೇ ಇಸ್ವಿಯಲ್ಲಿ 345 ಪ್ರಕರಣಗಳಲ್ಲಿ ಸುಮಾರು 215 ಕೋಟಿ ರೂಪಾಯಿಗಳಷ್ಟು ವಂಚನೆ ಆಗಿದೆ. ಇದು ಬಹಳ danger. ಇನ್ನು ಮುಂದೆ ನಮಗೆ ಬ್ಯಾಂಕ್ ಖಾತೆಗಳಲ್ಲಾಗಲೀ ಅಥವಾ ಯಾವುದೇ ರೀತಿಯ financial transactions ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಟೆಕ್ನಾಲಜಿ ಎಷ್ಟರಮಟ್ಟಿಗೆ ಬೆಳೆದಿದೆ ಎಂದರೆ, ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡುವಾಗ ಕೃತಕ ಬುದ್ಧಿಮತ್ತೆ (ಎ.ಐ.) ಬಗ್ಗೆ ಪ್ರಸ್ತಾಪಿಸಿದರು. ಇದು ಯಾವ ಮಟ್ಟಕ್ಕೆ ಹೋಗುತ್ತದೆ ಎಂದು ಹೇಳಿದರೆ, ಇನ್ನು ಮುಂದೆ ನಾವು ಯಾವುದೇ ರೀತಿಯ ವ್ಯವಹಾರಗಳನ್ನು ಮಾಡುವುದಕ್ಕೆ ಹಾಗೂ ಬಿಸಿನೆಸ್ ಮಾಡುವುದಕ್ಕೂ ಸಹ ಕಷ್ಟವಾಗುತ್ತದೆ. ಇಂತಹ ಮಟ್ಟಕ್ಕೆ ಇದು ಹೋಗುತ್ತಿದೆ. ಅದಕ್ಕಾಗಿ ನಾವು ಪೊಲೀಸ್ ಇಲಾಖೆಯಲ್ಲಿ ಮಾಡಿದ internal discussion ನಲ್ಲಿ, ಇದರ ಬಗ್ಗೆ ನಾವು ಹೆಚ್ಚಿನ ಗಮನವನ್ನು ಕೊಡಬೇಕು ಹಾಗೂ ನಮ್ಮ ಇಡೀ ದೇಶದಲ್ಲಿ ಕೇವಲ ನಾವೊಬ್ಬರೇ ಮಾಡಿದರೆ, ಸಾಲದು. ಇದಕ್ಕೆ ಯಾವುದೇ ರೀತಿಯಾದ ರಾಜ್ಯ, ರಾಷ್ಟ್ರ ಅಥವಾ ಅಂತರಾಷ್ಟ್ರೀಯ ಗಡಿಗಳ ಸೀಮೆ ಇಲ್ಲ. ಅಪರಾಧಿಯು ಎಲ್ಲಿಯೋ ಕುಳಿತುಕೊಂಡು, ಅಪರಾಧಿಕ ಕೃತ್ಯಗಳನ್ನು ಎಸಗುತ್ತಾನೆ. ನಮ್ಮ ಬೆಂಗಳೂರು ನಗರದಲ್ಲಿಯೇ ಕುಳಿತುಕೊಂಡು, ಅಪಾರಾಧಿಗಳು ದೂರದ ಅಮೇರಿಕಾದಲ್ಲಿರುವ ಖಾತೆಯನ್ನು ಹ್ಯಾಕ್ ಮಾಡಿದ್ದಾರೆ. ಅಂದರೆ, ಅಂತರಾಷ್ಟ್ರೀಯ ಗಡಿ ಸೀಮೆಯ ಸಂಬಂಧ ಇದಕ್ಕೆ ಇಲ್ಲ. ಆದ್ದರಿಂದ ಸರ್ಕಾರವು ಇದನ್ನು ಗಂಭೀರವಾಗಿ ತೆಗೆದುಕೊಂಡಿದೆ. ಈ ವಿಚಾರದಲ್ಲಿ ನಾವು ಏನೆಲ್ಲಾ ಮಾಡುತ್ತಿದ್ದೇವೆ ಎನ್ನುವುದನ್ನು ವಿವರವಾಗಿ ಉತ್ತರದಲ್ಲಿ ತಿಳಿಸಿ ಕೊಟ್ಟಿದ್ದೇನೆ. ಇದನ್ನೆಲ್ಲಾ ಓದುತ್ತಾ ಹೋದರೆ, ಇನ್ನೂ ಅರ್ಧಗಂಟೆಯ ಕಾಲಾವಕಾಶ ಬೇಕಾಗುತ್ತದೆ.

ಈ ವಿಚಾರದಲ್ಲಿ ಮ್ಯೂಲ್ ಅಕೌಂಟ್ಸ್ ಎಂಬುದಾಗಿ ಇರುತ್ತದೆ. ಅಂದರೆ ಅವುಗಳು ಸುಳ್ಳು ಖಾತೆಗಳಾಗಿರುತ್ತವೆ. ಇಂತಹವುಗಳನ್ನೂ ಕಂಡು ಹಿಡಿದಿದ್ದೇವೆ. ಹೆಚ್ಚು ಕಡಿಮೆ 42,000 ಮ್ಯೂಲ್

ಅಕೌಂಟ್‌ಗಳನ್ನು ಗುರ್ತಿಸಿ, ಸೀಜ್ ಮಾಡಿದ್ದೇವೆ. It is one of the great achievements of our department. ಈ ವಿಚಾರದಲ್ಲಿ ಸುಮಾರು 500 ಜನರನ್ನು ಅರೆಸ್ಟ್ ಮಾಡಿದ್ದು, ಇವರುಗಳು ಮ್ಯೂಲ್ ಅಕೌಂಟ್‌ಗಳನ್ನು ಆಪರೇಟ್ ಮಾಡುತ್ತಿದ್ದರು. ಇವರುಗಳಿಗೆ ಶಿಕ್ಷೆ ಕೊಡಿಸುವ ಪ್ರೊಸೀಜರ್ ನಡೆಯುತ್ತಿದೆ. ಇದು ಬಹಳ ಇತ್ತೀಚಿನ ದಿನಗಳಲ್ಲಿ ಅಂದರೆ, modern days ನಲ್ಲಿ ಸೈಬರ್ ಫ್ರಾಡ್‌ನಿಂದಾಗಿ ಟೆಕ್ನಾಲಜಿಯಲ್ಲಿ ನೆಗೆಟಿವ್ ಆಗಿ ಬಹಳ ದೊಡ್ಡ ಬದಲಾವಣೆ ಆಗುತ್ತಿದೆ. ಈ ಎಲ್ಲಾ ಅಂಶಗಳನ್ನು ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

(ಮುಂದು)

(336)12-03-2026 /12-00/**bkp-md** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಗೋವಿಂದರಾಜು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಂತ್ರಿಗಳು ಇದಕ್ಕೆ ಸಂಬಂಧಪಟ್ಟಂತೆ ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಅಧಿಕಾರಿಗಳಿಗೆ Drone Forensics, RAID Forensics ಇದರ ಬಗ್ಗೆ ತರಬೇತಿಯನ್ನು ಕೊಡುತ್ತಿದ್ದೇವೆಂದು ಹೇಳಿದ್ದೀರಿ. ಬಹಳ ಸಂತೋಷ. ಅಂದರೆ, ನೀವು ಸೈಬರ್ ಪೋಲೀಸ್ ಸ್ಟೇಷನ್‌ಗೆ ನೀವು ಯಾರನ್ನು ಪೋಸ್ಟಿಂಗ್ ಮಾಡುತ್ತೀರಿ, ಇಷ್ಟೆಲ್ಲಾ ತರಬೇತಿಯನ್ನು ಕೊಟ್ಟಾದ ಮೇಲೆ ಅವರುಗಳನ್ನು ಅಲ್ಲಿಯೇ ಮುಂದುವರಿಸುವಂತಹ ವ್ಯವಸ್ಥೆಯನ್ನು ಮಾಡಿದರೆ, ನೀವು ಕೊಟ್ಟಂತಹ ತರಬೇತಿಯಿಂದ ಅವರಲ್ಲಿ ಬರು-ಬರುತ್ತಾ ಅವರುಗಳಿಗೂ ಸಹ ಅ ಸಂಬಂಧ ಜ್ಞಾನ ಬೆಳೆದು ಹೆಚ್ಚಿಗೆ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ತಾವೇ ಒಪ್ಪಿಕೊಂಡಿರುವಂತೆ ಈ ಅಪರಾಧಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಇದೆ. ಅಂದರೆ, 0.01 ಮಾತ್ರ ಶಿಕ್ಷೆಯಾಗಿದೆ. ಇದರ ಬಗ್ಗೆಯೂ ಸಹ ತಾವು ಗಮನಹರಿಸಬೇಕು. ಅದಲ್ಲದೇ 2025 ರಲ್ಲಿ ಸೆಪ್ಟೆಂಬರ್ 30 ರ ತನಕ 1385 ಕೋಟಿ ರೂಪಾಯಿಗಳಷ್ಟು ಹಣವನ್ನು ಕಳೆದುಕೊಂಡಿದ್ದಾರೆನ್ನುವ ಮಾಹಿತಿ ಇದೆ. ಅದರ ಪೈಕಿ 146 ಕೋಟಿ ರೂಪಾಯಿಗಳನ್ನು freeze ಮಾಡಿದ್ದೇವೆಂದು ಹೇಳಿದ್ದೀರಿ. ಅದನ್ನು freeze ಮಾಡಿದ್ದು, 39 ಕೋಟಿ ರೂಪಾಯಿಗಳು ಮಾತ್ರ ಕೆಲವು ಗ್ರಾಹಕರಿಗೆ ಹಿಂದುರುಗಿಸಿದ್ದೀರಿ ಎಂದು ತಿಳಿದು ಬಂದಿದೆ. ಈ freeze ಮಾಡಿರುವ ಹಣ ಎಂದರೇನು ಅದನ್ನು ಯಾವಾಗ ಗ್ರಾಹಕರಿಗೆ ಕೊಡುತ್ತೀರಿ ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

**ಡಾ॥ ಜಿ. ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಅವರಿಗೆ ಕೆಲವು ಮಾಹಿತಿಗಳನ್ನು ಕೊಟ್ಟಿದ್ದೇನೆ. ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ಆಗಿರುವಷ್ಟು ಕೆಲಸ ಬೇರೆ ರಾಜ್ಯದಲ್ಲಿ ಆಗಿರಲಿಕ್ಕೆ ಸಾಧ್ಯವಿಲ್ಲ. ನಾವು ಇಡೀ ನಮ್ಮ ರಾಜ್ಯದಲ್ಲಿ 43 ಸ್ಟೇಷನ್‌ಗಳನ್ನು ಇದಕ್ಕಾಗಿಯೇ ಮಾಡಿರುತ್ತೇವೆ. ಸೈಬರ್ ಅಪರಾಧಿಗಳನ್ನು ಹಿಡಿಯುವುದಕ್ಕಾಗಿಯೇ 43 ಸ್ಟೇಷನ್‌ಗಳನ್ನು ಮಾಡಿದ್ದೇವೆ. ಅಂದರೆ, ಈ ವಿಚಾರ ಬೇರೆ ಸ್ಟೇಷನ್‌ಗಳಲ್ಲಿ ನೋಂದಣಿಯಾಗುವುದಿಲ್ಲವೆಂದು ಹೇಳುತ್ತಿಲ್ಲ. ಬೇರೆ ಸ್ಟೇಷನ್‌ಗಳಲ್ಲಿ ನೋಂದಣಿ

ಮಾಡಿಕೊಂಡು ಈ 43 ಸ್ಟೇಷನ್‌ಗೆ ಆ ಪ್ರಕರಣಗಳನ್ನು ವರ್ಗಾವಣೆ ಮಾಡಲಾಗುತ್ತದೆ. ಇದರಲ್ಲಿ ನಾವು ಕೆಲವರನ್ನೂ.... ಎಲ್ಲರನ್ನು ಮಾಡಲಿಕ್ಕೆ ಆಗುವುದಿಲ್ಲ. ನೀವು ಹೇಳಿದ ಹಾಗೆ ಅಲ್ಲಿಗೆ ಎಲ್ಲರನ್ನು ವರ್ಗಾವಣೆ ಮಾಡಲಿಕ್ಕೆ ಆಗುವುದಿಲ್ಲ. ಯಾರಿಗೆ ನಾವು ತರಬೇತಿಯನ್ನು ಕೊಡುತ್ತೇವೆ. ಅವರನ್ನು ನಾವು ಅಲ್ಲಿಗೆ ಹಾಕುತ್ತೇವೆ. ನಿಮ್ಮ ಪ್ರಶ್ನೆ ಏನೆಂದರೆ, ಅವರನ್ನು ಅಲ್ಲಿಯೇ ಇರಿಸಬೇಕು, ಅವರನ್ನು ತಕ್ಷಣ ತಕ್ಷಣ ವರ್ಗಾವಣೆ ಮಾಡಬಾರದು ಎಂದು ಹೇಳಿ ಅದಕ್ಕಾಗಿಯೇ ಅವರನ್ನು ಅಲ್ಲಿಯೇ ಎರಡು ವರ್ಷಗಳ ಕಾಲ ಮುಂದುವರಿಸಬೇಕೆಂದು ಮಾಡಿದ್ದೇವೆ. ಇನ್ಸ್‌ಪೆಕ್ಟರ್‌ಗಳಿಗೆ ಎರಡು ವರ್ಷಗಳ ಕಾಲ ವರ್ಗಾವಣೆ ಮಾಡುವುದಿಲ್ಲ. ಒಂದು ವೇಳೆ emergency ಇದ್ದಾಗ ಅಥವಾ ಅವರನ್ನು ಇನ್ನು ಎಲ್ಲಿಯಾದರೂ ಬೇರೆ ಕಡೆ ನಿಯೋಜನೆ ಮಾಡಬಹುದೇ ಹೊರತು ಅವರನ್ನು ಎರಡು ವರ್ಷಗಳ ಕಾಲ ಬೇರೆ ಕಡೆ ವರ್ಗಾವಣೆ ಮಾಡುವುದಿಲ್ಲ. ಜೊತೆಗೆ ಪ್ರತಿಯೊಂದು SP Headquarters ನಲ್ಲಿ ಈ ಸೈಬರ್‌ಗಾಗಿಯೇ ಒಂದು laboratory ಮಾಡಿ ಅದರಲ್ಲಿ ಯಾರು ಇರುತ್ತಾರೆ, Constable ನಿಂದ ಹಿಡಿದು Inspector ರವರೆಗೂ ತರಬೇತಿಯನ್ನು ಕೊಡುತ್ತೇವೆ. ಅವರುಗಳನ್ನು ತಕ್ಷಣ ತಕ್ಷಣ ಬದಲಾವಣೆ ಮಾಡಲಿಕ್ಕೆ ಬರುವುದಿಲ್ಲ. ನೀವು ಹೇಳಿದ ಹಾಗೆ ತರಬೇತಿ ಕೊಟ್ಟವರಿಗೆ ಅಲ್ಲಿಂದ ಬೇರೆ ಕಡೆ ಹಾಕಿದರೆ, ಆ ಸ್ಥಳಕ್ಕೆ ಮತ್ತೆ ಎಲ್ಲಿಂದ ತರಬೇತಿ ಪಡೆದವರನ್ನು ತಂದು ಹಾಕಲಿಕ್ಕೆ ಸಾಧ್ಯ? ಆದ್ದರಿಂದ, ಆ ಕೆಲಸವನ್ನು ಸಹ ನಾವು ವ್ಯವಸ್ಥಿತವಾಗಿ ಮಾಡುತ್ತಿದ್ದೇವೆ.

ಪ್ರಶ್ನೆ ಸಂಖ್ಯೆ 1117

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಎತ್ತಿನಹೊಳೆ, ಕೃಷ್ಣಾ ಮೇಲ್ದಂಡೆ ಯೋಜನೆಯ ವಿಷಯವಾಗಿ ಸರ್ಕಾರ ಧಾರವಾಡದ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ವಿಳಂಬದ ಹಿನ್ನೆಲೆಯಲ್ಲಿ ಇದನ್ನು ನ್ಯಾಯಾಲಯ ವಜಾ ಮಾಡಿತ್ತು. ತದನಂತರ ಮಾನ್ಯ ಉಪ ಮುಖ್ಯಮಂತ್ರಿಗಳ ಮುತುವರ್ಜಿಯಿಂದ ದಕ್ಷತೆ ಮತ್ತು ಪ್ರಮಾಣಿಕತೆಯಿಂದ ಅವರು ಸರ್ವೋಚ್ಛ ನ್ಯಾಯಾಲಯದಲ್ಲಿ ವಾದ ಮಂಡಿಸಿದ ಸಂದರ್ಭದಲ್ಲಿ ಈ ನ್ಯಾಯಾಲಯದ ಐತಿಹಾಸಿಕ ತೀರ್ಪಿನಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಸುಮಾರು 10,000 ಕೋಟಿ ರೂಪಾಯಿಗಳ ಹಣ ಉಳಿತಾಯವಾಗಿದೆ. ಈ ಉಳಿದಂತಹ ಬಾಕಿ ಹಣ, ಕೃಷ್ಣಾ ಮೇಲ್ದಂಡೆ ಯೋಜನೆ ಅಥವಾ ಎತ್ತಿನಹೊಳೆ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಕ್ಕೆ ಮರು ಹಂಚಿಕೆ ಮಾಡುವ ಯೋಚನೆ ಸರ್ಕಾರದ ಮುಂದೆ ಇದೆಯೇ? ಎನ್ನುವುದು ಒಂದು ವಿಚಾರ.

ಎರಡನೆಯ ವಿಚಾರ ಧಾರವಾಡ ಹೈಕೋರ್ಟ್ ವಿಚಾರದಲ್ಲಿ 120 ದಿನಗಳ ವಿಳಂಬದ ಅಧಾರದ ಮೇಲೆ ಸುಮಾರು 981 ಮೇಲ್ಮನವಿಗಳನ್ನು ವಜಾಗೊಳಿಸಲಾಗಿತ್ತು. ಮುಂದೆ ಇಂತಹ ಪ್ರಮುಖ ನೀರಾವರಿ ಯೋಜನೆಗಳ ವಿಚಾರವಾಗಿ ಕಾನೂನು ಪ್ರಕ್ರಿಯೆಗಳು ವಿಳಂಭವಾಗದಂತೆ ತಡೆಯಲು ಮತ್ತು ನಿಗದಿತ ಕಾಲಮಿತಿಯೊಳಗೆ ಮೇಲ್ಮನವಿಯನ್ನು ಸಲ್ಲಿಸಲು ಜಲಸಂಪನ್ಮೂಲ ಇಲಾಖೆಯ ಕಾನೂನು ಕೋಶವನ್ನು ಮತ್ತೊಷ್ಟು ಆಧುನಿಕರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ಎನ್ನುವುದು ನನ್ನ ಎರಡನೆಯ ಪ್ರಶ್ನೆಯಾಗಿದೆ.

ಈ ತೀರ್ಪಿನಿಂದಾಗಿ ಜಿಲ್ಲಾ ನ್ಯಾಯಾಲಯಗಳು ನೀಡಿದ ಹೆಚ್ಚುವರಿ ಪರಿಹಾರದ ಆರ್ಥಿಕ ಹೊರೆ ತಪ್ಪಿದಂತಾಗಿದೆ. ಈ ಹಿನ್ನೆಲೆಯಲ್ಲಿ ಹಣಕಾಸಿನ ಅಡೆತಡೆಯಿಲ್ಲದೆ, ಕೃಷ್ಣಾ ಮೇಲ್ದಂಡೆ ಯೋಜನೆ, ಸಿಂಗಟಾಲೂರು ಮತ್ತು ಎತ್ತಿನಹೊಳೆ ಯೋಜನೆಗಳನ್ನು ಯಾವ ಒಂದು ನಿರ್ದಿಷ್ಟ ಕಾಲ ಮಿತಿಯೊಂದಿಗೆ ಪೂರ್ಣಗೊಳಿಸಲು ಸರ್ಕಾರ ಗುರಿಯನ್ನು ಹಾಕಿಕೊಂಡಿದೆ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ನನಗೆ ಈ ಅವಧಿಯಲ್ಲಿ ನೀರಾವರಿ ಮಂತ್ರಿಯಾಗಿರುವ ಸಂದರ್ಭದಲ್ಲಿ ಈ ಎರಡು ಪ್ರಮುಖವಾದಂತಹ ತೀರ್ಪುಗಳು ರಾಜ್ಯದ ಹಿತಕ್ಕೆ ಸಿಕ್ಕಿದೆ. ಈ ಸಂದರ್ಭದಲ್ಲಿ ನಾನು ನೀರಾವರಿ ಸಚಿವನಾಗಿರುವುದಕ್ಕೆ ನನಗೂ ಸಹ ಒಂದು ಸಮಾಧಾನ ಸಿಕ್ಕಿದೆ. ನಮ್ಮ ಒತ್ತಡದ ಮೇಲೆ ನಮ್ಮದೇ ಆದಂತಹ strategy ಮೇಲೆ Advocates Team ಮಾಡಿ ಮೇಕೆದಾಟು ವಿಚಾರದಲ್ಲಿ ಕೇಂದ್ರ ಸರ್ಕಾರ ತಮಿಳುನಾಡಿಗೆ ಹಕ್ಕು ಇಲ್ಲವೆಂದು ಅವರಿಗೆ ಏನು 177 ಟಿ.ಎಂ.ಸಿ. ನೀರನ್ನು ಕೊಡಬೇಕು, ಅಷ್ಟು ಮಾತ್ರ ಕೊಡಿ. ಉಳಿದುದನ್ನು ನಿಮ್ಮ ಜಾಗದಲ್ಲಿ ಅವರು ಮಾಡಿಕೊಳ್ಳಲಿ

ಎಂದು ಹೇಳಿ ಇದನ್ನು Central Water Commission ಗೆ ಕೊಟ್ಟಿರುವುದು ಒಂದು ವಿಚಾರ. That is a great achievement for us.

ಎರಡನೆಯದಾಗಿ, ಮಾನ್ಯ ಸದಸ್ಯರಾದ ಮಾನ್ಯ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ಏನು ಪ್ರಶ್ನೆಯನ್ನು ಹಾಕಿದ್ದಾರೆ, ಇದು ಕೂಡ, it is a historic judgement. ಇಡೀ ದೇಶಕ್ಕೆ ಅನುಕೂಲವಾಗುವಂತಹ ಒಂದು ತೀರ್ಪು ಸಿಕ್ಕಿದೆ. ಹೀಗಾಗಿ, ನಮ್ಮ ಸರ್ಕಾರ ಇಲ್ಲಿಂದಲೇ ಸುಪ್ರೀಂ ಕೋರ್ಟ್ ನ್ಯಾಯಾಲಯಕ್ಕೆ ತಲೆಬಾಗುತ್ತದೆ. ಏಕೆಂದರೆ, ಈ ವಿಚಾರ ಮಾನ್ಯ ಸದಸ್ಯರಾದ ಶ್ರೀಮಾನ್ ಪೂಜಾರ್‌ರವರಿಗೆ ಗೊತ್ತಿದೆ. 20,000 ಹೆಚ್ಚು ಕೇಸ್‌ಗಳು ಸುಪ್ರೀಂ ಕೋರ್ಟ್‌ಗೆ ಹೋಗುವಂತಹ ಸಂದರ್ಭ ಈ limitation ವಿಚಾರದಲ್ಲಿ, enhancement ವಿಚಾರದಲ್ಲಿ ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್ ರವರು ಒತ್ತಾಯ ಮಾಡಿ fair fixation ಮಾಡಿ 40 ಲಕ್ಷ ಮತ್ತು 35 ಲಕ್ಷ ಎಂದು ನಿಗದಿ ಮಾಡಿದರು. ಈ ಮಧ್ಯದಲ್ಲಿ ಧಾರವಾಡ ಬೆಂಚ್‌ನಿಂದ ಈ limitation ಮೇಲೆ ನಿಮಗೆ ಸಮಯ ಇಲ್ಲವೆಂದು ಹೇಳಿ ಕೊನೆಗೆ ಅವರೆಲ್ಲರೂ match fixing ಮಾಡಿಕೊಂಡರು. ನಮ್ಮ ಅಧಿಕಾರಿಗಳೆಲ್ಲರೂ match fixing, Advocates ಸಹ match fixing ಮಾಡಿಕೊಂಡರು. ಇನ್ನು judiciary fixing ಎಂದು ನಾನು ಹೇಳಲಿಕ್ಕೆ ಆಗುವುದಿಲ್ಲ. ಅದರ ಮೇಲೆ ಎಲ್ಲಾ ಮಾಡಿಕೊಂಡು adjustment ಮಾಡಿದರು. ಆದರೆ, ಆ ಸುಪ್ರೀಂ ಕೋರ್ಟ್ ಇಡೀ ದೇಶಕ್ಕೆ ನಮ್ಮದೇ ಅದಂತಹ ಒಂದು ಬೆಂಗಳೂರು ಕೇಸ್ ಅನ್ನು ತಗೆದುಕೊಂಡು ಇದನ್ನು ನೀವು ಸರ್ಕಾರಕ್ಕೆ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳಿ ಒಂದು ತೀರ್ಪನ್ನು –permissible limit ಮೇಲೆ reject ಮಾಡಿ ವಾಪಸ್ಸು ನೀವೇ ಇದನ್ನು ಮಾಡಿಕೊಳ್ಳಿ ಎಂದು ಒಂದು ತೀರ್ಮಾನವನ್ನು ಮಾಡಿದರು. ಏಕೆಂದರೆ, 120 ದಿನಗಳ ನಂತರ M.F.A. (Miscellaneous First Appeal) ಏನಿದೆ, ಅದನ್ನೆಲ್ಲಾ ವಾಪಸ್ಸು ಕಳುಹಿಸಿಕೊಟ್ಟಿದ್ದಾರೆ. ಹಾಗಾಗಿ, ಇದು ಈಗ ನಮಗೆ 900 ಕೇಸ್‌ಗಳು K.N.N.L. (Karnataka Neeravari Nigam Limited) ನಲ್ಲಿ ಮತ್ತು K.B.J.N.L. (Karnataka Bhagya Jala Nigam Limited) ನಲ್ಲಿ 380 ಕೇಸ್‌ಗಳು ಒಂದೇ ದಿನ ನಮಗೆ ವಾಪಸ್ಸು ಬಂದಿವೆ. Delay condoned ಮಾಡಿದ್ದಾರೆ. ಹಾಗಾಗಿ, ಇದಕ್ಕೆ ಬಹುತೇಕ ನಮಗೆ 365 ಕೋಟಿ ರೂಪಾಯಿಗಳ ಠೇವಣಿ ಮಾಡಬೇಕಾಯಿತು. ಇದು ತೀರ್ಪಿಗೆ ಅಲ್ಲ. ಕೆಲವು ಕಡೆ 50% ಕಟ್ಟಿ ಎಂದು ಹೇಳುತ್ತಾರೆ. ಕೆಲವು ಕಡೆ 25% ಕಟ್ಟಿ ಎಂದು ಹೇಳುತ್ತಾರೆ. ಕೊನೆಯದಾಗಿ ನಮ್ಮ Additional Chief Secretary ಚರ್ಚೆ ಮಾಡಿದಾಗ ಕೊನೆಯದಾಗಿ 10% ಕಟ್ಟಿ ಎಂದೆಲ್ಲಾ ಹೇಳಿದರು. ಹಾಗಾಗಿ, ಇದು ವಾಪಸ್ಸು ಬಂದಿದೆ. ಇದೊಂದು historic judgement. ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಪಟ್ಟಂತೆ Global Mills ಗೆ ಸಂಬಂಧಪಟ್ಟ ಒಂದು major case ಇತ್ತು. ಈ time lapse ಆಗಿ ಹೋಯಿತು ಎಂದು ಹೇಳಿ ಒಂದು ವಿಷಯ ಇದ್ದು, ಅದನ್ನು ಕೊಟ್ಟಿದ್ದಾರೆ. ಇನ್ನು ಮುಂದಕ್ಕೆ ಇದರ ಬಗ್ಗೆಯೇ ಒಂದು ಪ್ರತ್ಯೇಕವಾದ team ಒಂದನ್ನು ಮಾಡಿ, ನಮ್ಮ ಕಾನೂನು ಸಚಿವರು ಸೇರಿಕೊಂಡು ಪ್ರತ್ಯೇಕ

Advocates' Team ಅನ್ನು engage ಮಾಡುತ್ತಿದ್ದೇವೆ. ಈ ರೀತಿಯಲ್ಲಿ ಮಾಡುವುದರ ಮೂಲಕ ನಾನು ಇವತ್ತು ಕೆಳಮನೆಯಲ್ಲಿ ನೀರಾವರಿ ಇಲಾಖೆಯ ಬಗ್ಗೆಯೇ ಒಂದು ಹೇಳಿಕೆಯನ್ನು ಮಾಡುತ್ತಿದ್ದೇನೆ. ನಾನು ಮತ್ತು ಶ್ರೀಮಾನ್ ಹೆಚ್.ಕೆ. ಪಾಟೀಲ್ ರವರು, ಶ್ರೀಮಾನ್ ಎಂ.ಬಿ. ಪಾಟೀಲ್‌ರವರು ಸೇರಿದಂತೆ 3 ಜನರು ಮಂಗಳವಾರ ದೆಹಲಿಗೆ ಹೋಗುತ್ತಿದ್ದೇವೆ. ಅಲ್ಲಿ ರಾಜ್ಯದ ಎಲ್ಲಾ ಎಂ.ಪಿ.ಗಳನ್ನು ಭೇಟಿಯಾಗುತ್ತೇವೆ. ನಮ್ಮ ರಾಜ್ಯದ್ದು ಏನೇನು ವಿಚಾರ ಇದೆ, ಈ ವಿಚಾರವನ್ನು ನಮ್ಮ ಸಂಸತ್ ಸದಸ್ಯರಿಗೂ ತಿಳಿಸುತ್ತೇನೆ. ಏಕೆಂದರೆ, ಈ ರೀತಿಯಲ್ಲಿ ಕೆಲವು ವಿಷಯಗಳಿವೆ. Krishna Water Dispute 3ನೇ ಅವಾರ್ಡ್‌ಗೆ ಈ ಕಡೆ ಆಂಧ್ರ ಪ್ರದೇಶದವರು ತಕರಾರು ಹಾಕಿಬಿಟ್ಟಿದ್ದಾರೆ. ನಾವು ಮಾಡಿರುವಂತಹ ತೀರ್ಪಿಗೆ ಮತ್ತು ನಮ್ಮ ಕ್ಯಾಬಿನೆಟ್‌ನ ತೀರ್ಮಾನದ ಪ್ರಕಾರ ನೀವು ಭೂಮಿ ಸ್ವಾಧೀನ ಮಾಡಬಾರದೆಂದು ಹೇಳಿ ಕೇಂದ್ರ ಸರ್ಕಾರಕ್ಕೆ objection ಹಾಕಿದ್ದಾರೆ. ಈ ಎಲ್ಲಾ ವಿಚಾರಗಳಿಗೆ ಸಂಬಂಧಪಟ್ಟಂತೆ ಒಂದು ಹೇಳಿಕೆಯನ್ನು ಮಾಡಿ ಮಂಗಳವಾರದಂದು ನಾವು 3 ಜನರು ಸೇರಿಕೊಂಡು ದೆಹಲಿಗೆ ಹೋಗಿ ಎಂ.ಪಿ.ಗಳನ್ನು ಭೇಟಿ ಮಾಡುತ್ತೇವೆ. ಈ ವಿಚಾರವಾಗಿ ನಾನು ಮಾನ್ಯ ಸದಸ್ಯರಿಗೆ ಏನು ಹೇಳಲಿಕ್ಕೆ ಬಯಸುತ್ತೇನೆಂದರೆ ಏನು ತಾವು ಹೇಳಿದ್ದೀರಿ, ಇದಕ್ಕೆ ಒಂದು ಹೊಸ ರೂಪ ಬಂದಿದೆ. ಇದು ನಮ್ಮ ರಾಜ್ಯಕ್ಕೆ ಅಲ್ಲ, ಇಡೀ ರಾಷ್ಟ್ರಕ್ಕೆ ಇದು ಒಂದು ದುರುಪಯೋಗವಾಗುವಂತಹದ್ದು ಮುಂದಿನ ದಿನಗಳಲ್ಲಿ ನಿಲ್ಲುತ್ತದೆ ಎನ್ನುವ ಭಾವನೆ ಇದೆ. ಹಾಗಾಗಿ, ತಾವು ಏನು ಭಾವನೆಗಳನ್ನು ವ್ಯಕ್ತ ಮಾಡಿದ್ದೀರಿ, ಇದನ್ನು ಕಾನೂನಿನ ಪ್ರಕಾರ ನಮ್ಮ ರಾಜ್ಯದ ಹಿತವನ್ನು ಕಾಪಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಈ ವಿಚಾರವಾಗಿ ಎದ್ದು ನಿಲ್ಲಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ನಿಮ್ಮ ಆಡಳಿತ ಅವಧಿಯಲ್ಲಿ ಇಂತಹ ಒಂದು ಮಹತ್ವವಾದಂತಹ ತೀರ್ಪು ಬಂದಿದೆ. ಸರ್ಕಾರದ ಪರವಾಗಿ ನನ್ನ ಪರವಾಗಿ, ಈ ಸದನದ ಪರವಾಗಿ ನಿಮಗೆ ಹಾರ್ಧಿಕವಾದಂತಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್ನೊಂದು ವಿಚಾರ ಏನೆಂದರೆ ಸರ್ಕಾರದ ಪರವಾಗಿ ಬಂದಿರುವ ತೀರ್ಪು ಬಂದಿದೆ. ಇದೇ ವೇಳೆ ಭೂಮಿ ಕಳೆದುಕೊಂಡ ಪ್ರಮಾಣಿಕ ರೈತರಿಗೆ ಸಿಗಬೇಕಾದ ನ್ಯಾಯಯುತ ಪರಿಹಾರ ವಿಳಂಬವಾಗದಂತೆ ನೋಡಿಕೊಳ್ಳಲು ಮತ್ತು merit ಅಧಾರಿತ ವಿಚಾರಣೆಯನ್ನು ಶೀಘ್ರವಾಗಿ ಮುಗಿಸಲು ಸರ್ಕಾರ ವಿಶೇಷ ವಕೀಲರ ತಂಡವನ್ನು ನೇಮಿಸಿರುವುದು ಒಂದು ವಿಚಾರ.

(ಮುಂದು)

(337) 12.03.2026 12.10 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ಮುಂದು):-**

ಈ ತೀರ್ಪು ಕೇವಲ ಜಲಸಂಪನ್ಮೂಲ ಇಲಾಖೆಗೆ ಮಾತ್ರವಲ್ಲದೆ, ನಗರಾಭಿವೃದ್ಧಿ, ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಇಲಾಖೆಗಳಿಗೂ ಅನ್ವಯವಾಗುತ್ತದೆಯೆಂದು ಉತ್ತರಿಸಲಾಗಿದೆ. ಆಯಾ ಇಲಾಖೆಗಳಲ್ಲಿ ಬಾಕಿಯಿರುವ

ಇದೇ ಮಾದರಿಯ ಪ್ರಕರಣಗಳನ್ನು ಗುರುತಿಸಿ ಸುಪ್ರೀಂ ಕೋರ್ಟ್ ತೀರ್ಪಿನ ಲಾಭವನ್ನು ಪಡೆಯಲು ಒಂದು ಸಮನ್ವಯ ಸಮಿತಿಯನ್ನು ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರಿಸಬೇಕು.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾವು legally examine ಮಾಡುತ್ತಿದ್ದೇವೆ. ಏಕೆಂದರೆ ಇದನ್ನು internally legal ಆಗಿಯೇ ಮಾಡಬೇಕಾಗುತ್ತದೆ. It is very simple. According to the Limitation Act, prescribed type ನಲ್ಲಿ ನಾವು ಅರ್ಜಿಯನ್ನು ಹಾಕಿಕೊಳ್ಳಬೇಕಾಯಿತು. 120 ದಿನ, 160 ದಿನ ಹೀಗೆ ಸಮಯವನ್ನು ಕೊಟ್ಟಿರುತ್ತಾರೆ. 120 ದಿನಗಳ ನಂತರ 121ನೇ ದಿನವಾಯಿತು ಎಂದರೆ ನಿಮ್ಮ ಸಮಯ ಮುಗಿಯಿತು ಎಂದು bar ಮಾಡುತ್ತಾರೆ. ನಮ್ಮ ಸಿಬ್ಬಂದಿಯನ್ನು, Advocates adjustment ಮಾಡಿಕೊಂಡು ಹೀಗಾಗುತ್ತಿತ್ತು. Limitation Act, 1963, ನಲ್ಲಿ ಇದು ಇತ್ತು, ಇದನ್ನು open ಮಾಡಿಕೊಟ್ಟಿದ್ದಾರೆ. ರೈತರ ವಿಚಾರ ಏನಿದೆ, The Right to Fair Compensation and Transparency in Land Acquisition, Rehabilitation and Resettlement Act ಪ್ರಕಾರ ಹಣ ಕೊಡಬೇಕೆಂದು ನಾವೇನು ಪಾಸ್ ಮಾಡಿದ್ದೇವೆ. ಆ ಪ್ರಕಾರವಾಗಿ ನಾವು ಕೊಡಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಸರ್ಕಾರ ದುಡ್ಡು ಇಟ್ಟಿದೆ. ಈಗ ಬಾಗಲಕೋಟೆ ಜಿಲ್ಲೆಗೆ ಹೋಗುತ್ತಿದ್ದೇವೆ. ಅಲ್ಲಿ ಒಂದಷ್ಟು ಚೆಕ್‌ಗಳನ್ನು release ಮಾಡುವುದಕ್ಕೆ ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ.

**ಸಭಾಪತಿಯವರು:-** ಮಾನ್ಯ ಗೃಹ ಸಚಿವರೇ, ಮಾನ್ಯ ಕೆ.ಗೋವಿಂದ ರಾಜ್ ಅವರ ಪ್ರಶ್ನೆಗೆ ಉತ್ತರವನ್ನು ಹೇಳುತ್ತೀರಾ?

**ಡಾ: ಜಿ. ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಅದು ವರ್ಗಾವಣೆಯಾಗಿರುವ ವಿಷಯ ನನಗೆ ಈಗ ತಿಳಿಯಿತು.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು..

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣ ಅವರೆ, ನಿಮ್ಮ ಪ್ರಶ್ನೆಯನ್ನು ಕೇಳಿ.

ಪ್ರಶ್ನೆ ಸಂಖ್ಯೆ 1007

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನನ್ನ ಪ್ರಶ್ನೆಯೇನೆಂದರೆ ದಿನಾಂಕ 08.07.1960ರಲ್ಲಿ ಡಿವೈಎಸ್‌ಪಿ ಹುದ್ದೆಗಳ ವೃಂದ ಮತ್ತು ನೇಮಕಾತಿಯಲ್ಲಿ 50:50 ಅನುಪಾತವಿತ್ತು. ಅದಾದ ನಂತರ ದಿನಾಂಕ 06.10.1967ರಲ್ಲಿ 33.1/3 : 66.2/3 ಅನುಪಾತದಲ್ಲಿ ನೇಮಕಾತಿ ಮಾಡಬೇಕೆಂದು ಆಯಿತು. ಅದಾದ ನಂತರ ದಿನಾಂಕ 23.12.2004ರಲ್ಲಿ ಇದನ್ನು 20:80ಕ್ಕೆ ಮಾಡಲಾಗಿದೆ. ಇದಕ್ಕೆ ಕಾರಣ ನನಗೆ ಗೊತ್ತಿಲ್ಲ. ಇದನ್ನು ಮಾಡುವುದಕ್ಕೆ ಕಾರಣವೇನು ಎಂದು ನನಗೆ ಅರ್ಥವಾಗುತ್ತಿಲ್ಲ. ಇದುವರೆವಿಗೂ ಡಿವೈಎಸ್‌ಪಿ ಹುದ್ದೆಯಿಂದ ಮುಂಬಡ್ತಿಯನ್ನು ಕೊಡುವುದಕ್ಕೆ ಎಂಟೂವರೆ ವರ್ಷಗಳಾಗಿವೆ. ಇದುವರೆವಿಗೂ ಕೂಡ ಮುಂಬಡ್ತಿ ಕೊಟ್ಟಿಲ್ಲ. ಈ 20%ಗೆ ಇಳಸಲಿಕ್ಕೆ ಕಾರಣವೇನೆಂದರೆ ಐ.ಪಿ.ಎಸ್. ಲಾಬಿ. ಡಿವೈಎಸ್‌ಪಿಗಳಾಗುವ ಕರ್ನಾಟಕದ ಅಭ್ಯರ್ಥಿಗಳನ್ನು ತಡೆಯುವ ಪ್ರಯತ್ನ ಇದು. ಅವರು ಆಗಬಾರದು. ಅವರು ಸೇವೆಗೆ ಬಂದು ಒದ್ದಾಡಿ ಒದ್ದಾಡಿ ಮುಂಬಡ್ತಿ ತೆಗೆದುಕೊಳ್ಳಬೇಕು. ಅವರು ಎಸ್.ಪಿ.ಗೋ ಅಥವಾ ಡಿ.ಐ.ಜಿ.ಗೋ ನಿಂತು ಹೋಗಬೇಕು. ಐ.ಪಿ.ಎಸ್ ಮಾಡಿ ಬಂದಿರುವವರಿಗೆ ಎಲ್ಲವೂ ಸಿಗಬೇಕು. ಇಲ್ಲಿನವರಿಗೆ ಸಿಗಬಾರದು ಎನ್ನುವ ಉದ್ದೇಶದಿಂದಲೇ ಮಾಡಲಾಗಿದೆ. 112 ಎ.ಎಸ್.ಪಿ ಹುದ್ದೆಗಳಿವೆ. ಇದರಲ್ಲಿ ಮುಂಬಡ್ತಿ ಹೊಂದಿರುವವರು ಕೇವಲ 50 ರಿಂದ 60 ಜನ. ಇನ್ನೂ 50-60 ಹುದ್ದೆಗಳಲ್ಲಿ ಐ.ಪಿ.ಎಸ್. ಅಧಿಕಾರಿಗಳೇ ಆವರಿಸಿಕೊಂಡು ಕುಳತಿದ್ದಾರೆ. ಇವರಿಗೆ ಜಾಗ ಇಲ್ಲ ಎಂದರೆ ಕೇಂದ್ರಕ್ಕೆ ಕಳುಹಿಸಿ, ಹೋಗಿ ಬರಲಿ. ಅಲ್ಲಿ ಕೆಲಸ ಮಾಡಿಕೊಂಡು ಬರಲಿ. ಇಲ್ಲಿ ಇವರಿಗೆ ಕೊಡದ ಹಾಗೆ ತಡೆಯುತ್ತಾ ಎಂಟೂವರೆ ವರ್ಷ ಆಗಿದೆ. ಜೊತೆಗೆ ಮುಂಬಡ್ತಿಗಾಗಿ ಮಾಡಲಾಗಿರುವ ಜ್ಯೇಷ್ಠತಾ ಪಟ್ಟಿಯಲ್ಲಿ ಇವರ ಹೆಸರನ್ನು ಎರಡೆರಡು ಬಾರಿ ಸೇರಿಸಿದ್ದಾರೆ. ಸತ್ತು ಹೋಗಿರುವವರನ್ನು ಸೇರಿಸಿದ್ದಾರೆ. ನಿವೃತ್ತಿ ಹೊಂದಿದವರನ್ನು ಸೇರಿಸಿದ್ದಾರೆ. ಮಾನ್ಯ ಸಚಿವರು ಬಂದ ಮೇಲೆ ಅದನ್ನು ಸರಿಪಡಿಸಬೇಕೆನ್ನುವ ದೃಷ್ಟಿಯಿಂದ ಅದನ್ನು ಸರಿಪಡಿಸುವುದಕ್ಕೆ ಹೇಳಿದರು. ಅಷ್ಟರಲ್ಲಿ ನ್ಯಾಯಾಲಯಕ್ಕೆ ಹೋಗಿದ್ದರಿಂದ ಅದು quash ಆಯಿತು. ಪುನಃ ಅದನ್ನು ಸರಿಪಡಿಸಬೇಕೆಂದು ಹೇಳಿ ಮಾನ್ಯ ಸಚಿವರು ಸಮಿತಿಯನ್ನು ರಚಿಸಿದ್ದಾರೆ. ಎಂಟೂವರೆ ವರ್ಷ ಆಗಿದೆ. ಅದರಲ್ಲಿ ನ್ಯಾಯ ಯಾವಾಗ ಸಿಗುತ್ತದೆ ಎಂದು ಮಾನ್ಯ ಸಚಿವರನ್ನು ನೇರವಾಗಿ ಕೇಳಬಯಸುತ್ತೇನೆ.

**ಡಾ: ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಈ service matters ಗಳಲ್ಲಿ ನುರಿತವರಾಗಿದ್ದಾರೆ. ಏಕೆಂದರೆ ಬಹಳಷ್ಟು ಜನ ಅವರ ಒಡನಾಡಿಗಳು, ಮತದಾರರು ಇರುವುದರಿಂದ service matters ಗಳಲ್ಲಿ ಅವರಿಗೆ ಸ್ವಲ್ಪ ಅನುಭವ ಜಾಸ್ತಿಯಿದೆ. ಅವರು ಹೇಳಿದಂತೆ ಈ recruitment process ನಲ್ಲಿ entry point ಅಂದರೆ ಜ್ಯೂನಿಯರ್ ಇಂಜಿನಿಯರ್ಸ್ ಅನ್ನು recruitment ಮಾಡುವಾಗ ಅವರಿಗೆ promotional aspect ಸಿಗಬೇಕೆಂದು ಹೇಳಿ ಇಷ್ಟು ಪರ್ಸೆಂಟೇಜ್

ಅನ್ನು promotional aspect ಗಾಗಿ ಮೀಸಲಿಡುತ್ತಾರೆ. ಇಂಜಿನಿಯರ್ಸ್ ಬಗ್ಗೆ ಏಕೆ ಹೇಳಿದೆನೆಂದರೆ ಅದು large number ನಲ್ಲಿ recruitment ನಡೆಯುತ್ತದೆ. ಜ್ಯೂನಿಯರ್ ಇಂಜಿನಿಯರ್‌ರವರಿಂದ ಅಸಿಸ್ಟೆಂಟ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್‌ರಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್‌ರಿಂದ ಸೂಪರಿಂಟೆಂಡೆಂಟ್ ಇಂಜಿನಿಯರ್, ಸೂಪರಿಂಟೆಂಡೆಂಟ್ ಇಂಜಿನಿಯರ್‌ರಿಂದ ಚೀಫ್ ಇಂಜಿನಿಯರ್ ಈ ರೀತಿ ಇರುತ್ತದೆ. ಅದು promotional aspect ಸಿಗಬೇಕು. ಅದೇ ರೀತಿ ಇಲ್ಲಿ ಕೂಡ ಪೊಲೀಸ್ ಇಲಾಖೆಯಲ್ಲಿ ಹೇಗೆ ನಡೆಯುತ್ತದೆಯೆಂದರೆ ಸಬ್ ಇನ್ಸ್‌ಪೆಕ್ಟರ್ recruitment ಮಾಡಿದಾಗ ಇಷ್ಟು ಪರ್ಸೆಂಟ್ ನೇರ ನೇಮಕಾತಿ, ಇಷ್ಟು ಪರ್ಸೆಂಟ್ promotions. ನಾವು ಆ ಅನುಪಾತವನ್ನು ಇಟ್ಟುಕೊಂಡು ನೇಮಕಾತಿ ಮಾಡುತ್ತೇವೆ. ಅದರಲ್ಲಿ 1960ರಲ್ಲಿ ಈ recruitment process ನಲ್ಲಿ 50:50 ಅಂದರೆ 50 ನೇರ ನೇಮಕಾತಿ, 50 ಮುಂಬಡ್ತಿ. ಎ.ಎಸ್.ಐ ನಿಂದ ಪಿ.ಎಸ್.ಐ ಆಗುವುದು ಹಾಗೆ. ಅದೇ ಪ್ರಕಾರ 1967ರಲ್ಲಿ ಅದನ್ನು modify ಮಾಡಿ 33.13 : 66.23 ಎಂದು ಮಾಡಿದರು. ಆ point percentage ಏಕೆ ಮಾಡಿದರೆಂದು ನನಗೆ ಗೊತ್ತಿಲ್ಲ. ಆದರೆ 1967ರಲ್ಲಿ ಆ ಒಂದು ಅನುಪಾತವನ್ನು ಮಾಡಿದ್ದಾರೆ. ಪುನಃ modify ಮಾಡಿ 2004ರಲ್ಲಿ 20% ನೇರ ನೇಮಕಾತಿ, 80% ಮುಂಬಡ್ತಿ ಎಂದು ಮಾಡಿದ್ದಾರೆ. 33 ಇದ್ದುದನ್ನು 20ಕ್ಕೆ ತಂದಿದ್ದಾರೆ. ಮೊದಲು ಇದ್ದದ್ದು 50. 50 ರಿಂದ 33, 33ರಿಂದ 20ಕ್ಕೆ ಬಂದಿದೆ. 80 ಮುಂಬಡ್ತಿ, 20 ಮಾತ್ರ ನೇರ ನೇಮಕಾತಿ.

ಮಾನ್ಯ ಸಭಾಪತಿಯವರೆ, ಏಕೆ ಇದನ್ನು ಮಾಡಲಾಗಿದೆಯೆಂದರೆ ಬಹಳ ಜನರಿಗೆ ಅಂದರೆ ಪಿ.ಎಸ್.ಐ ಆದವರಿಗೆ upto S.P (Superintendent of Police) ವರೆಗೆ ಹೋಗುವುದಕ್ಕೆ ಅವಕಾಶ ಸಿಗುತ್ತದೆ. ಮುಂದಕ್ಕೂ ಹೋಗಬಹುದು. ಡಿ.ಐ.ಜಿ ಆಗಬಹುದು. Promotional aspects ಕಡಿಮೆ ಮಾಡಿ, ನೇರ ನೇಮಕಾತಿ ಹೆಚ್ಚು ಮಾಡಿದರೆ ಸಂಖ್ಯೆ ಇರುವುದಿಲ್ಲ. ಎಷ್ಟು ಜನ ಸಬ್ ಇನ್ಸ್‌ಪೆಕ್ಟರ್ ಅನ್ನು ಮಾಡುತ್ತೇವೆಯೋ ಅಷ್ಟು ಸಂಖ್ಯೆಯಲ್ಲಿ ಡಿವೈ.ಎಸ್.ಪಿ ಇರುವುದಿಲ್ಲ. ಆದ್ದರಿಂದ ಇಲ್ಲಿ ನಾವು ಅವರಿಗೆಲ್ಲರಿಗೂ ಹೆಚ್ಚು ಅವಕಾಶ ಕೊಡಬೇಕೆಂದು ಆ ಸಂಖ್ಯೆ ಹೆಚ್ಚಾಗುವುದಕ್ಕಾಗಿ promotional aspect ಅನ್ನು 80% ಮಾಡಿದ್ದಾರೆ. ನೇರ ನೇಮಕಾತಿಯನ್ನು 20%ಗೆ ಇಳಿಸಲಾಗಿದೆ. ಆ ಕಾರಣಕ್ಕೆ ಮಾಡಿದ್ದಾರೆ ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಇವತ್ತು ಚಾಲ್ತಿಯಲ್ಲಿರುವುದು 20% ನೇರ ನೇಮಕಾತಿ, 80% ಮುಂಬಡ್ತಿ. ಈ ಮಧ್ಯೆ ಏನಾಗಿದೆಯೆಂದರೆ ಮುಂಬಡ್ತಿ ಕೊಡುವಾಗ ಜ್ಯೇಷ್ಠತಾ ಪಟ್ಟಿಯನ್ನು ಮಾಡುತ್ತಾರೆ. ಮಾನ್ಯ ಪುಟ್ಟಣ್ಣ ಅವರು ಹೇಳಿದಂತೆ ಜ್ಯೇಷ್ಠತಾ ಪಟ್ಟಿ ಮಾಡುವಾಗ ಕೆಲವರ ಹೆಸರನ್ನು ಎರಡೆರಡು ಬಾರಿ ಸೇರಿಸಲಾಗಿದೆ. ಕೆಲವರು ನಿವೃತ್ತರಾದವರನ್ನು ಸೇರಿಸಿದ್ದಾರೆ. ಈ ರೀತಿ ದೂರುಗಳು ಬಂದ ಮೇಲೆ ಅದೇ ಸಂದರ್ಭದಲ್ಲಿ ಶ್ರೀಮತಿ ಅನೂಷಾ ಎನ್ನುವವರು ಒಬ್ಬರು ನ್ಯಾಯಾಲಯಕ್ಕೆ ಹೋಗುತ್ತಾರೆ. 2022ರಲ್ಲಿ ಈ ರೀತಿಯ anomaly ಆಗಿದ್ದು, ಇದನ್ನು ಸರಿಪಡಿಸಬೇಕೆಂದು ನ್ಯಾಯಾಲಯಕ್ಕೆ ಹೋಗುತ್ತಾರೆ. ಆಗ ಕೋರ್ಟ್ ಈ ಕೆಳಕಂಡಂತೆ ಆದೇಶ ಮಾಡುತ್ತದೆ.

> *" The impugned seniority list bearing No. HD 268 PEG 2021, dated: 07.03.2022 placed at Annexure-A10 prepared by respondent No.1 is quashed.*
>
> *Respondents are directed to consider the objections raised by the applicants and redo the seniority list in accordance with guidelines issued by Government in Official Memorandum dated: 06.07.1976 and 14.12.1987."*

ಹೀಗೆ ಆದೇಶ ಆಗುತ್ತದೆ.

(ಮುಂದು)

(338) 12.03.2026, 12.20, ಕೆಜಿ : ಎಕೆ (ಸಭಾಪತಿಯವರ ಉಪಸ್ಥಿತಿ)

**ಡಾ॥ ಜಿ.ಪರಮೇಶ್ವರ (ಮುಂದು):-**

ಅದು ಆದೇಶ ಮಾಡಿದ್ದಾರೆ. ಅದಾದ ಮೇಲೆ, *'Respondent No.1 is directed not to issue any promotion from the cadre of Deputy Superintendent to Superintendent of Police on the basis of impugned Seniority List dated 07/03/2022."* ಅದಾದ ಮೇಲೆ ನಾನು ಮತ್ತೆ ಪುನರ್‌ಪರಿಶೀಲನೆ ಮಾಡಬೇಕೆಂದು ಒಂದು ಸಮಿತಿಯನ್ನು ಮಾಡಿದ್ದೇನೆ. ಸಾಮಾನ್ಯವಾಗಿ ಈ Seniority List, reservation ಇದನ್ನೆಲ್ಲಾ DPAR and Social Welfare Department ನವರು ನೋಡುತ್ತಾರೆ. ಅವರಿಗೆ ಹೆಚ್ಚು ಮಾಹಿತಿ ಹಾಗೂ ಹೆಚ್ಚು ಪರಿಣಿತಿ ಸಹ ಇರುತ್ತದೆ. ಅದಕ್ಕೆ ನಾನು ಶ್ರೀ ವಿ.ಕೆ.ಚಿನ್ನಮಾರಯ್ಯ ಎಂಬ ನಿವೃತ್ತ ಸಮಾಜ ಕಲ್ಯಾಣ ಅಧಿಕಾರಿಯನ್ನು ನೇಮಿಸಿ ಈ Seniority List ಅನ್ನು ಪುನರ್ ಪರಿಶೀಲನೆ ಮಾಡಿ ಎಂದು ನಾವು ಅವರಿಗೆ ಜವಾಬ್ದಾರಿಯನ್ನು ದಿನಾಂಕ 08-05-2025 ರಿಂದ ಕೊಟ್ಟಿದ್ದೇವೆ. ಈಗ ಅವರು ಆ ಕೆಲಸವನ್ನು ಮಾಡುತ್ತಿದ್ದಾರೆ. ಒಂದು ಬಾರಿ ಆ Seniority List verification ಆಗಿ ಮಾನ್ಯ ಚಿನ್ನಮಾರಯ್ಯನವರು ಮಾಹಿತಿ/ವರದಿಯನ್ನು ಕೊಟ್ಟ ಮೇಲೆ ನಾವು ಈ promotions ಅನ್ನು ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ಆದ್ದರಿಂದ, ಮಾನ್ಯ ಸದಸ್ಯರು ಹೇಳುವ ಪ್ರಕಾರ, ಹಿಂದೆಯಲ್ಲಾ ನಡೆದಿದೆ. ಒಂದು ಬಾರಿ 50:50 ಕೊಟ್ಟರು, ಒಂದು 33 ಕೊಟ್ಟರು. ಮತ್ತೆ ಒಂದು 20 ಕೊಟ್ಟರು. ಇವೆಲ್ಲಾ ಕಾರಣಗಳನ್ನು ಸಹ ಕೊಟ್ಟಿದ್ದಾರೆ. ಆದ್ದರಿಂದ, ಇವತ್ತು ಹೆಚ್ಚು promotional aspects ಅನ್ನು ಕೊಡಬೇಕು. ಈಗ ಮಾನ್ಯ ಸದಸ್ಯರು ಕರ್ನಾಟಕದವರು, ಕನ್ನಡಿಗರಿಗೆ ಹೆಚ್ಚು IPS ಕೊಡಬೇಕೆಂದು ಹೇಳಿದರು. ಇವರಿಗೆ IPS ಸಹ ಸಿಗುತ್ತದೆ. ನಾವು ಯಾರಿಗೆ ಈ promotions ಅನ್ನು 80% ಇಟ್ಟುಕೊಂಡು regular ಆಗಿ promotion ಮಾಡಿಕೊಂಡು ಹೋಗುತ್ತೇವೆ, ಅವರಿಗೆ IPS ಸಹ ಸಿಗುತ್ತದೆ. ಆದ್ದರಿಂದ, ಆ aspects, ಆ opportunities ಅವರಿಗೆ ಸಿಗಲಿ ಎನ್ನುವ ಕಾರಣಕ್ಕಾಗಿ ಹೆಚ್ಚು ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ

ಬಯಸುತ್ತೇನೆ. ಮುಂದೆ ಒಂದು ಬಾರಿ Seniority List accept ಆದಮೇಲೆ ಆ promotions ಅನ್ನು ನಾವು ಮಾಡುತ್ತೇವೆ. ಮಾನ್ಯ ಸದಸ್ಯರು ಕಳೆದ 8 ವರ್ಷಗಳಿಂದ ಮುಂಬಡ್ತಿಯನ್ನು ಕೊಡಲಿಲ್ಲ ಏಕೆ ಎಂದು ಕೇಳಿದ್ದಾರೆ. ಶ್ರೀಮತಿ ಅನುಷಾ ಎಂಬುವರ ಪ್ರಕರಣದಲ್ಲಿ 2022ನೇ ಸಾಲಿನಲ್ಲಿ ನ್ಯಾಯಾಲಯ ಆದೇಶ ಮಾಡಿದೆ. ಆ ಕಾರಣಕ್ಕಾಗಿ ಅದನ್ನು pending ಇಡಲಾಗಿದೆ ಮತ್ತು Seniority List ಸಹ pending ಆಗಿದೆ. ಇದಾದ ಮೇಲೆ promotions ಅನ್ನು immediate ಆಗಿ ಕೊಡುತ್ತೇವೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದು ಸರಿ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. 20:80 ಅನುಪಾತದಲ್ಲಿ ಏನು ಕೊಟ್ಟಿದ್ದಾರೆ ಅದು promotional aspects ನಲ್ಲಿ ಈ Sub-Inspector ಹುದ್ದೆಯಿಂದ ಯಾರು ಹೋಗುತ್ತಾರೆ, ಅವರಿಗೆ ಹೆಚ್ಚು ಅನುಕೂಲವಾಗುತ್ತದೆ. ಆದರೆ, ಒಂದು ಏನೆಂದರೆ, ಈ Sub-Inspector ಹುದ್ದೆಯಿಂದ ಮುಂದೆ ಯಾರು ಹೋಗುತ್ತಾರೆ, ಅವರೆಲ್ಲರೂ ಸಹ SP ಹುದ್ದೆಗೆ ನಿಂತು ಹೋಗುತ್ತಾರೆ. ಇವರು direct SP ಕೊಡುವುದಿಲ್ಲ. ಇದು ಮಾನ್ಯ ಸಚಿವರಿಗೆ ಗೊತ್ತಿದೆ. ಆದರೆ, ಈ ನೇರ ನೇಮಕಾತಿ ಆಗುವಂತಹ DySP ಇವರುಗಳು IPS, ADGP ಹುದ್ದೆಗಳ level ಗೆ ಹೋಗುತ್ತಾರೆ. ಇವರು ADGP level ವರೆಗೂ ಹೋಗುತ್ತಾರೆ. ಅದನ್ನು ತಡೆಯುವಂತಹ ಪ್ರಯತ್ನವೇ ಈ ಇಳಿಕೆ ಪ್ರಮಾಣ. ಅವರು ಆಗಬಾರದು. ಅವರು ಬರಬಾರದು. ನಮಗೆ ಅವರಿಂದ fight ಬರಕೂಡದು. ಈ ರಾಜ್ಯದವರು ನಮಗೆ fight ಗೆ ಬರಬಾರದು. ಈಗ AC post ಗೆ ಎಷ್ಟು ಇದೆ ಎಂದರೆ, 50:50 ಅನುಪಾತ ಇದೆ. ಎಲ್ಲಾ ರಾಜ್ಯಗಳಲ್ಲಿಯೂ ಸಹ ಕನಿಷ್ಠವಾಗಿರುವಂತಹದ್ದು 33.1/3, 66.2/3. ಇದೇ ಮಾನದಂಡ ಎಲ್ಲಾ ಬೇರೆ ಬೇರೆ ರಾಜ್ಯಗಳಲ್ಲಿಯೂ ಇದೆ. ಇವರು ಏಕೆ 20% ಅನ್ನು ಕಳುಹಿಸಿದರು? ಇವರಿಗೆ ವೈಜ್ಞಾನಿಕವಾಗಿ ಕಾರಣ ಏನು? ಇವರಿಗೆ ಇದರಲ್ಲಿ ಏನು ಕಾಣಿಸಿತು? ಅದು ನನ್ನ ಮೂಲ ಭೂತವಾಗಿರುವಂತಹ ಪ್ರಶ್ನೆ. ಎಂಟೂವರೆ ವರ್ಷಗಳ ಕಾಲ ಆಗದಿರುವುದಕ್ಕೆ ಕಾರಣವನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸಚಿವರು ಹೇಳುವುದು ಸರಿ ಇದೆ. ಮಾನ್ಯ ಸಚಿವರು ಅದನ್ನು ತಡೆದಿಲ್ಲ. ಅದು ಈ ಕಾರಣಗಳಿಂದ ಅದು ನಿಂತಿದೆ. ನಾನು ಹೇಳುವುದು ಏನೆಂದರೆ, ಇದರಿಂದ ಏನಾಗುತ್ತದೆ ಎಂದರೆ, 50 ರಿಂದ 60 ಹುದ್ದೆಗಳನ್ನು ಇವರಿಗೆ ಏನು ಕೊಡಬೇಕಾಗಿತ್ತು, ಇದರಲ್ಲಿ IPS ನವರು ಬಂದು ಕುಳಿತಿದ್ದಾರೆ. ಇವರಿಗೆ opportunity ಸಿಕ್ಕಿದೆ. ಇವರು IPS ಇಷ್ಟು ಬೇಗ ಆಗುತ್ತಿದ್ದರು. ಇವರಿಗೆ 5 ವರ್ಷಗಳು ಆದ ತಕ್ಷಣ ಕೊಟ್ಟಿದ್ದರೆ. ಇವರು ಸಹ ADGP ಅಥವಾ DG level ಗೆ ಬಂದು ಕುಳಿತುಕೊಳ್ಳುತ್ತಿದ್ದರು. ನಮ್ಮ ರಾಜ್ಯದ ಯಾರೋ ಹುಡುಗರು ಬಂದು ಕುಳಿತುಕೊಳ್ಳುತ್ತಿದ್ದರು. ಇವರು 20% ಏಕೆ ಮಾಡಿದರು ಎಂದರೆ, ಕೆಲವರು ಡಿಗ್ರಿ ಮುಗಿದ ತಕ್ಷಣ KAS exam ಅನ್ನು ಬರೆಯುತ್ತಾರೆ. ಅಂತಹವರು 24 ನೇ ವಯಸ್ಸಿಗೆ ಆಯ್ಕೆ ಆಗಿ ಬಿಡುತ್ತಾರೆ. ಇನ್ನೊಬ್ಬ 25 ನೇ ವಯಸ್ಸಿಗೆ ಆಯ್ಕೆ ಆಗುತ್ತಾನೆ. ಇನ್ನೊಬ್ಬ 32 ನೇ ವಯಸ್ಸಿಗೆ ಆಯ್ಕೆ ಆಗುತ್ತಾನೆ.

**ಸಭಾಪತಿಯವರು:-** ಶ್ರೀ ಪುಟ್ಟಣ್ಣನವರೇ, ಇದು Question Hour ಸಾಕು ಬಿಡಿ. ತಾವು ಭಾಷಣ ಮಾಡಬೇಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಾವು ದಯವಿಟ್ಟು ಕೇಳಬೇಕು. ಇದು ಬಹಳ important. ಇನ್ನೊಬ್ಬ 33 ನೇ ವಯಸ್ಸಿಗೆ ಆಯ್ಕೆ ಆಗುತ್ತಾನೆ. ಆದರೆ, 30 ನೇ ವರ್ಷಕ್ಕೆ, 32 ಮತ್ತು 33 ನೇ ವರ್ಷಗಳಿಗೆ ಯಾರು ಆಯ್ಕೆ ಆಗಿರುತ್ತಾರೆ, ಅವರು ADGP level ಗೆ reach ಆಗುವುದಕ್ಕೆ ಆಗುವುದಿಲ್ಲ. ಆದರೆ, 24 ನೇ ವರ್ಷಕ್ಕೆ DySP ಆಗಿ ಯಾರು reach ಆಗುತ್ತಾರೆ, ಅವರು ADGP ಆಗಬಹುದು. DG ಸಹ ಆಗಬಹುದು. ಅದನ್ನು ತಡೆಯಬೇಕೆಂದರೆ, ಇಲ್ಲಿಯೇ ಅದನ್ನು ಎಳೆದು ಬಿಡುವುದು, 20% ಗೆ ತಂದು ನಿಲ್ಲಿಸಿ ಬಿಟ್ಟರೆ ಮುಗಿದು ಹೋಯಿತು. ಆದ್ದರಿಂದ, ಬೇರೆ ರಾಜ್ಯಗಳಲ್ಲಿ ಯಾವ ತರಹ ಇದೆ, ಆ ರೀತಿ ಕೊಡಿ ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ. ಆಮೇಲೆ ಎಲ್ಲಾ promotion ಗಳು IPS ನವರಿಗೆ on time ಆಗಿಬಿಡುತ್ತದೆ. IAS ನವರಿಗೆ on time ಗೆ promotion ಆಗುತ್ತದೆ. ಒಂದು ದಿವಸವು ಬಿಡುವುದಿಲ್ಲ. ಮೊದಲೇ ಬೇಕೆಂದರೆ, ಮಾಡಿಕೊಳ್ಳುತ್ತಾರೆ. ಅದೇರೀತಿ ಕೆಳಗಿನ ಹುದ್ದೆಗಳಿಗೆ ಏಕೆ ಕೊಡಬಾರದು? ಅವರು ಅಧಿಕಾರಿಗಳು ಅಲ್ಲವೇ? ಅವರು ಮೇಲಾಧಿಕಾರಿಗಳ ಕೈಕೆಳಗಡೆ ಕೆಲಸ ಮಾಡುವವರು ಅಲ್ಲವೇ? ಅವರಿಗೂ ನ್ಯಾಯ ಕೊಡಬೇಕು ಅಲ್ಲವೇ? ಡಾ॥ ಜಿ.ಪರಮೇಶ್ವರ್‌ರವರು ಬಹಳ ಒಳ್ಳೆಯ ಸಚಿವರಾಗಿದ್ದು, ಅವರು ಎಲ್ಲರಿಗೂ ನ್ಯಾಯ ಕೊಡುವಂತಹವರು ಆಗಿದ್ದಾರೆ. ಈ ವಿಷಯದಲ್ಲಿ ನಮ್ಮ ಕನ್ನಡದ ಹುಡುಗರಿಗೆ, ನಮ್ಮ ಕನ್ನಡದ ಜನರಿಗೆ, ನಮ್ಮ ಅಭ್ಯರ್ಥಿಗಳಿಗೆ ಅನ್ಯಾಯವಾಗಬಾರದು. ಮಾನ್ಯ ಸಚಿವರ ಅವಧಿಯಲ್ಲಿ ಈ ಹಿಂದೆ ಏನು ಮಾಡಿದ್ದಾರೆ ಅದನ್ನು ದಯವಿಟ್ಟು ಸರಿಪಡಿಸಿಕೊಡಬೇಕು.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪುಟ್ಟಣ್ಣನವರಿಗೆ service matters ನಲ್ಲಿ ಪರಿಣಿತಿ ಇದ್ದು, ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆಂದು ನಾನು ಹೇಳಿದ್ದೇನೆ. ನಮ್ಮಲ್ಲಿ ವಿಧವಿಧವಾದ procedures ಇದೆ. ಆದರೆ, ಬೇರೆ ಬೇರೆ ರಾಜ್ಯಗಳಲ್ಲಿ ಅವರಿಗೆ ಯಾವುದು ಅನುಕೂಲವಾಗುತ್ತದೆಯೋ ಅದನ್ನು ಅವರು ಮಾಡಿಕೊಂಡಿದ್ದಾರೆ. ನಾನು 2015 ರಲ್ಲಿ ಗೃಹ ಸಚಿವನಾದ ಸಂದರ್ಭದಲ್ಲಿ ಬಹುಶಃ ಸುಮಾರು 10 ವರ್ಷಗಳಲ್ಲಿ promotion ಗಳನ್ನು ಕೊಟ್ಟಿರಲಿಲ್ಲ. ಇದರಿಂದ DySP ನಿಂದ SP ಆಗಿರಲಿಲ್ಲ. ನಾನು 30 ಜನರಿಗೆ IPS ಹುದ್ದೆಗೆ promotion ಕೊಡಬೇಕೆಂದು ದೆಹಲಿಗೆ ಹೆಸರುಗಳನ್ನು ಕಳುಹಿಸಿದ್ದೆ. ಆದರೆ, ಅವರಲ್ಲಿ 27 ಜನರಿಗೆ promotion ಸಿಕ್ಕಿದೆ. ಅವರಿಗೆ 10 ವರ್ಷಗಳ ಕಾಲ IPS ಆಗುವುದಕ್ಕೆ ಅವಕಾಶ ಮಾಡಿಕೊಟ್ಟಿರಲಿಲ್ಲ. ಅಲ್ಲಿ ಒಂದಲ್ಲ, ಒಂದು ಪ್ರಶ್ನೆಗಳನ್ನು ಹಾಕಿ KSRP ರವರನ್ನು include ಮಾಡಬೇಕು. CAR ನವರನ್ನು include ಮಾಡಬೇಕೆಂದು ಈ ರೀತಿ ಅನೇಕ ಪ್ರಶ್ನೆಗಳನ್ನು ಮಾಡಿ 10 ವರ್ಷಗಳ ಕಾಲ ಅವರಿಗೆ IPS ಹುದ್ದೆಗೆ promotion ಕೊಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಆದ್ದರಿಂದ, ನನ್ನ commitment ಏನಿದೆ ಎಂದರೆ, ನಾವು ಒಂದು ವೇಳೆ ಈ 20% ಅನ್ನು ಹೆಚ್ಚಿಗೆ ಮಾಡಿದರೆ, promotion

ಅನ್ನು ಕಡಿಮೆ ಮಾಡಿ direct recruitment ರವರನ್ನು ಹೆಚ್ಚಿಗೆ ಮಾಡಿದರೆ ಇನ್ನು ಹೆಚ್ಚು ಜನರು ADGP ಆಗುವುದಕ್ಕೆ ಆಗುತ್ತದೆ. ನಾವು ಅದನ್ನು ಅವರಿಗೆ promotion ಸಿಗಲಿ ಎನ್ನುವ ಉದ್ದೇಶದಿಂದ ಕಡಿಮೆ ಮಾಡಿದ್ದೇವೆ. ಇವರು SP ಆಗಬಹುದು, ADGP ಆಗಬಹುದು, ಮೊನ್ನೆ 23 ಜನರಿಗೆ DIG ಯಾಗಿ promotion ಕೊಟ್ಟಿದ್ದೇವೆ. ಅದರಲ್ಲಿ ಹೆಚ್ಚು ಜನ 90% ಕನ್ನಡಿಗರು ಇದ್ದಾರೆ. ಅದರಲ್ಲಿ ಹೊರಗಿನವರು ಒಬ್ಬರೂ ಸಹ ಇಲ್ಲ. ಅದರಲ್ಲಿ 100% ಎಲ್ಲಾ ಕನ್ನಡಿಗರು ಇದ್ದಾರೆ. ಕಳೆದ 3 ತಿಂಗಳ ಹಿಂದೆ 23 ಜನರಿಗೆ promotion ಕೊಟ್ಟಿದ್ದೇವೆ. ಆದ್ದರಿಂದ, ಯಾವುದೇ ರೀತಿಯಿಂದಲೂ ಸಹ ನಮ್ಮವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದರ ಜೊತೆಗೆ ಹೊರ ರಾಜ್ಯದಲ್ಲಿ ಯಾವ ರೀತಿ ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಿ ಎಂಬ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ಅಧ್ಯಯನ ಮಾಡುತ್ತೇನೆ. ಹೊರ ರಾಜ್ಯಗಳಲ್ಲಿ ಯಾವ ಯಾವ ರೀತಿಯಲ್ಲಿ ಯಾವುದೇ ಗೊಂದಲ ಇಲ್ಲದಂತೆ ಮಾಡಿದ್ದಾರೆಯೇ ಎಂಬುದನ್ನು ತರಿಸಿಕೊಂಡು ನೋಡುತ್ತೇನೆ. ಬಹುಶಃ ಒಂದು ವೇಳೆ, ನಮಗೆ ಅದರಿಂದ ಉಪಯೋಗವಾಗುತ್ತದೆ, ನಮಗೆ ಒಳ್ಳೆಯದು ಆಗುತ್ತದೆ ಎಂದರೆ, ಅದನ್ನು ಸಹ consider ಮಾಡುತ್ತೇವೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.

**ಸಭಾಪತಿಯವರು:-** ಶ್ರೀ ಪುಟ್ಟಣ್ಣನವರೇ, ಸಾಕು ಬಿಡಿ. 15 ನಿಮಿಷಗಳು ಆಯಿತು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ. ಒಂದೇ ಪ್ರಶ್ನೆ. ಬೇರೆ ಏನು ಕೇಳುವುದಿಲ್ಲ. ಮಾನ್ಯ ಸಚಿವರು ಕಳೆದ ಮೂರು ತಿಂಗಳ ಹಿಂದೆ ನಮ್ಮ DySP ಗಳಿಗೆ DIG ಗೆ ಮುಂಬಡ್ತಿಯನ್ನು ಕೊಟ್ಟಿದ್ದಾರೆ. ಆದರೆ, ಎಷ್ಟು ದಿವಸಗಳಲ್ಲಿ ಕೊಡುತ್ತಾರೆ ಎನ್ನುವುದು ಬೇಕಲ್ಲವೇ; ಏಕೆಂದರೆ, ಈಗ Social Welfare Department ನವರು ಮಾಡಿರುವುದು ಸರಿ ಇದೆ. ಅದು DPAR, Social Welfare Department ನವರಿಗೆ ಗೊತ್ತಿದೆ. ಅವರು ಸರಿಯಾಗಿ ಮಾಡಿದ್ದಾರೆ. ನಮಗೆ ಏನೆಂದರೆ, ಆದಷ್ಟು ಶೀಘ್ರವಾಗಿ ಅವರ ಹತ್ತಿರ ವರದಿಯನ್ನು ತೆಗೆದುಕೊಂಡು ಅದನ್ನು implement ಮಾಡಬೇಕು ಎನ್ನುವುದಷ್ಟೆ ಆಗಿದೆ. ಅದಕ್ಕೆ ಒಂದು time limit ಅನ್ನು fix ಮಾಡಬೇಕೆಂದು ವಿನಂತಿಸುತ್ತೇನೆ.

**ಡಾ॥ ಜಿ.ಪರಮೇಶ್ವರ್:-** ಮಾನ್ಯ ಸಭಾಪತಿಯವರೇ, ಶ್ರೀ ಚಿನ್ನಮಾರಯ್ಯ ಎಂಬ ನಿವೃತ್ತಿ ಅಧಿಕಾರಿಯವರನ್ನು ನೇಮಕ ಮಾಡಿದ್ದೇವೆ. ಅವರಿಂದ ವರದಿ ಬಂದ ತಕ್ಷಣ ಮಾಡುತ್ತೇವೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 12 ಮಾರ್ಚ್, 2026, ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 128 ಪ್ರಶ್ನೆಗಳ ಪೈಕಿ 45 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರಗಳನ್ನು ಲಗತ್ತಿಸಲಾಗಿದೆ)

## ೨. ಪ್ರಕಟಣೆ

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ ೯ರ ಮೇರೆಗೆ ಮಾನ್ಯ ಸಭಾಪತಿಯವರ ಹಾಗೂ ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡಲು ಈ ಮುಂದಿನ ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ.

ಶ್ರೀ ಪಿ.ಹೆಚ್.ಪೂಜಾರ್, ಶ್ರೀ ಮಂಜುನಾಥ್ ಭಂಡಾರಿ, ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ ಹಾಗೂ ಶ್ರೀ ತಿಪ್ಪಣ್ಣ ಕಮಕನೂರ.

(ಮುಂದು)

(339) 12.03.2026/12.30/ಎಂವಿ-ಎಕೆ (ಸಭಾಪತಿಯವರ ಉಪಸ್ಥಿತಿ)

## ೩. ನಿಯಮ ೭೨ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ವಿಷಯ:- ಮಧ್ಯಪ್ರಾಚ್ಯದಲ್ಲಿ ಯುದ್ಧ ಭೀತಿ ಹೆಚ್ಚಾಗುತ್ತಿರುವುದರಿಂದ, ಕೊಲ್ಲಿ ರಾಷ್ಟ್ರಗಳಲ್ಲಿ ಉದ್ಯೋಗನಿರತ ಅನಿವಾಸಿ ಕನ್ನಡಿಗರ ಹಿತಾಸಕ್ತಿ ಕಾಪಾಡುವ ಕುರಿತು.**

---

**ಡಾ: ಆರತಿ ಕೃಷ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕಳೆದ ಹಲವಾರು ದಿನಗಳಿಂದ ನಿರಂತರವಾಗಿ ಎಲ್ಲಾ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವಂತೆ, ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧಭೀತಿ ಉಲ್ಬಣವಾಗುತ್ತಿದ್ದು, ಇದರಿಂದಾಗಿ ಪ್ರಪಂಚದಾದ್ಯಂತ ಎಲ್ಲಾ ದೇಶಗಳಿಗೂ ಒಂದಲ್ಲಾ ಒಂದು ರೀತಿಯಲ್ಲಿ ಸಮಸ್ಯೆಯಾಗುತ್ತಿರುವುದನ್ನು ಕಾಣಬಹುದಾಗಿದೆ.

ಮಧ್ಯಪ್ರಾಚ್ಯ ದೇಶಗಳಲ್ಲಿ ಉದ್ಯೋಗನಿರತ ಅನಿವಾಸಿ ಕನ್ನಡಿಗರು ಯುದ್ಧಭೀತಿಯಿಂದ ಉದ್ಯೋಗ ಕಳೆದುಕೊಳ್ಳುವ ಮತ್ತು ಅಸುರಕ್ಷತೆ ಇರುವ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಹಿಂತಿರುಗಲು ಸೂಕ್ತ ವ್ಯವಸ್ಥೆ ಇಲ್ಲದೆ ಅತಂತ್ರ ಪರಿಸ್ಥಿತಿಯಲ್ಲಿರುವುದರಿಂದ, ಇವರುಗಳ ಕುಟುಂಬ ವರ್ಗದವರು ಅತ್ಯಂತ ಆತಂಕ ಸ್ಥಿತಿಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನದಲ್ಲಿದೆ ಎಂದು ನಾನು ಭಾವಿಸಿದ್ದೇನೆ..

ಇಂತಹ ಪರಿಸ್ಥಿತಿಯಲ್ಲಿ ಅನಿವಾಸಿ ಕನ್ನಡಿಗರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದಲ್ಲಿ ಇರುವ ವ್ಯವಸ್ಥೆ ಎಂದರೆ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ. ಈ ಸಮಿತಿಯು ವಿದೇಶಗಳಲ್ಲಿರುವ ಭಾರತೀಯ ರಾಯಭಾರಿಗಳ ಕಛೇರಿಯನ್ನು ಸಂಪರ್ಕಿಸಿ, ಪರಿಣಾಮಕಾರಿಯಾಗಿ ಅವರೊಂದಿಗೆ ನಿರಂತರ ಸಂಪರ್ಕವನ್ನಿಟ್ಟುಕೊಂಡು ಕಾರ್ಯನಿರ್ವಹಣೆ ಮಾಡಬೇಕಾದಲ್ಲಿ ಈ ಸಮಿತಿಯನ್ನು ಸಚಿವಾಲಯವನ್ನಾಗಿ ಮಾರ್ಪಡಿಸಿ ಮಾನವ ಸಂಪನ್ಮೂಲ ಹಾಗೂ ಅವಶ್ಯ ಅನುದಾನ ನೀಡಿ ಬಲವರ್ಧನೆ ಮಾಡುವುದು ತುಂಬಾ ಅನಿವಾರ್ಯವಾಗಿದೆ. ಹಾಗೂ ನಾನು ಈ ಹಿಂದೆ ಸದರಿ ಸಮಿತಿಯ ಉಪಾಧ್ಯಕ್ಷೆಯಾಗಿದ್ದ ಸಂದರ್ಭದಲ್ಲಿ ಅನಿವಾಸಿ ಕನ್ನಡಿಗರ ಪಾಲಿಸಿಯನ್ನು ಮಾಡಿಸಿ, ಅದರಲ್ಲಿ ಅನಿವಾಸಿ ಕನ್ನಡಿಗರ ಹಿತರಕ್ಷಣೆ ಮಾಡಲು ಅವಕಾಶಗಳನ್ನು ಕಲ್ಪಿಸಲಾಗಿತ್ತು.

ಕನ್ನಡಿಗ ಅನಿವಾಸಿ ಭಾರತೀಯರು, ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಅವಿಭಾಜ್ಯ ಆಧಾರಸ್ತಂಭವಾಗಿದ್ದಾರೆ ಮತ್ತು ಮುಂದೆಯೂ ಇರುತ್ತಾರೆ. ಅವರ ಹಣ ರವಾನೆ, ಲೋಕೋಪಕಾರಿ

ಚಟುವಟಿಕೆಗಳು, ಕೌಶಲ್ಯ ಕೊಡುಗೆಗಳು ಮತ್ತು ಜಾಗತಿಕ ಖ್ಯಾತಿಯ ಬೆಂಬಲವು ರಾಜ್ಯದ ಅಭಿವೃದ್ಧಿಯಲ್ಲಿ ಮೌನವಾದರೂ ಗಣನೀಯ ಪಾತ್ರವನ್ನು ವಹಿಸುತ್ತಿದೆ. ಆದ್ದರಿಂದ, ಮೇಲಿನ ಎಲ್ಲಾ ಸಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಅನಿವಾಸಿ ಕನ್ನಡಿಗರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಅನಿವಾಸಿ ಭಾರತೀಯರ ಸಚಿವಾಲಯ ಸ್ಥಾಪನೆ ಮಾಡಿ, ಎಲ್ಲಾ ಅನಿವಾಸಿ ಕನ್ನಡಿಗರ ಹಿತರಕ್ಷಣೆ ಕಾಪಾಡುವಂತೆ ಹಾಗೂ ಪ್ರಸ್ತುತ ಯುದ್ಧಪೀಡಿತ ಪ್ರದೇಶದಲ್ಲಿರುವ ಅನಿವಾಸಿ ಕನ್ನಡಿಗರ ರಕ್ಷಣೆಗೆ ಸರ್ಕಾರ ತುರ್ತಾಗಿ ಸ್ಪಂದಿಸಲು ಅನುವಾಗುವಂತೆ 24/7 ಸಹಾಯವಾಣಿ ಕೋಶ ರಚಿಸುವಂತೆ ಮಾನ್ಯ ಮುಖ್ಯಮಂತ್ರಿಯವರಿಗೆ ವಿನಂತಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ:- ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಸನ್ನತ್ತಿ ಬ್ರಿಡ್ಜ ಕಂ ಬ್ಯಾರೇಜ್ ನಿರ್ಮಾಣದ ಹಿನ್ನೀರಿನಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡುವ ಕುರಿತು.**

-------

**ಡಾ: ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ತಮಗೆ ವಂದಿಸುತ್ತಾ, 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಪ್ರಕಟವಾದ "ಹಿನ್ನೀರ ಭೂಸಂತ್ರಸ್ತರಿಗೆ ಪರಿಹಾರ ಮರೀಚಿಕೆ" ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಸನ್ನತ್ತಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದಿಂದ ಹಿನ್ನೀರಿನಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡುವಂತೆ ಕಲಬುರಗಿಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 2023ರಲ್ಲಿ ಆದೇಶ ಮಾಡಿದರೂ ಸಹ ಇದುವರೆಗೂ ಪರಿಹಾರ ನೀಡಿರುವುದಿಲ್ಲ. ಸನ್ನತಿ, ಕನಗನಹಳ್ಳಿ, ತರಕಸ್ಪೇಟ್ ಗ್ರಾಮಗಳ ಒಟ್ಟು 5 ಭೂಸ್ವಾಧೀನ ಪ್ರಕರಣಗಳಿಗೆ ಬಾಕಿ ರೂ.2.78 (ಎರಡು ಕೋಟಿ ಎಪ್ಪತ್ತೆಂಟು ಲಕ್ಷ ರೂಪಾಯಿ) ಗಳನ್ನು ಭೂಸಂತ್ರಸ್ತ ರೈತರಿಗೆ ಪಾವತಿಸಲು ಜಿಲ್ಲಾಡಳಿತ ಕೃಷ್ಣ ಭಾಗ್ಯ ಜಲ ನಿಗಮಕ್ಕೆ ಸೂಚಿಸಿದರು. ಪರಿಹಾರ ಮಾತ್ರ ಕೈಸೇರಿಲ್ಲ ಎಂದು ಸಂತ್ರಸ್ತ ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಆದ ಕಾರಣ ಸರ್ಕಾರ ಕೂಡಲೇ ಹಿನ್ನೀರ ಭೂಸಂತ್ರಸ್ತರಿಗೆ ಬಾಕಿ ನೀಡಬೇಕಾಗಿರುವ ಪರಿಹಾರದ ಹಣವನ್ನು ಬಿಡುಗಡೆ ಮಾಡುವಂತೆ ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಶೂನ್ಯ ವೇಳೆಯಲ್ಲಿ ಆಗ್ರಹಿಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ:ಬಿ.ಜಿ.ಪಾಟೀಲ್‌ರವರು ಕೆ.ಬಿ.ಜೆ.ಎನ್‌ಎಲ್.ನಲ್ಲಿ ಐದು ಭೂಸ್ವಾಧೀನದ ಪ್ರಕರಣದ ಬಗ್ಗೆ ಸುಮಾರು 2.78 ಕೋಟಿ ರೂಪಾಯಿಗಳನ್ನು ರೈತರಿಗೆ ಕೊಡಬೇಕೆಂದು ಕೇಳಿದ್ದಾರೆ. ನಾನು ಅದರ ಕಡತವನ್ನು ತರಿಸಿಕೊಂಡು ಕೂಡಲೇ ಅದನ್ನು clear ಮಾಡಿಸಿಕೊಡುತ್ತೇನೆ.

**ಇ) ವಿಷಯ:- "ಊಟದಲ್ಲಿ ನೋಣ, ಜಿರಳೆ, ಕೂದಲು ಇರುವ ಬಗ್ಗೆ ಡಿ.ಸಿ. ಕಛೇರಿ ಎದುರು ವಸತಿ ನಿಲಯದ ವಿದ್ಯಾರ್ಥಿಗಳು ತಡರಾತ್ರಿ ಪ್ರತಿಭಟನೆ" ನಡೆಸಿರುವ ಕುರಿತು.**

---

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಜರೂರು ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ತಮಗೆ ವಂದಿಸುತ್ತಾ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ "ಊಟದಲ್ಲಿ ನೊಣ, ಡಿ.ಸಿ. ಕಛೇರಿ ಎದುರು ವಿದ್ಯಾರ್ಥಿಗಳ ತಡರಾತ್ರಿ ಪ್ರತಿಭಟನೆ" ಎಂಬ ವಿಷಯವು ಪ್ರಕಟವಾಗಿದ್ದು, ಕೊಪ್ಪಳ ಜಿಲ್ಲೆಯ ಹಮಾಲರ ಕಾಲೋನಿಯಲ್ಲಿರುವ ಪರಿಶಿಷ್ಟ ಜಾತಿ 3ನೇ ವಸತಿ ನಿಲಯದಲ್ಲಿ ಸಮಸ್ಯೆಗಳು ತಾಂಡವವಾಡುತ್ತಿದ್ದು, ವಿದ್ಯಾರ್ಥಿಗಳಿಗೆ ಕೊಳೆತ ತರಕಾರಿಯಲ್ಲಿ ಅಡುಗೆ ಮಾಡಲಾಗುತ್ತಿದೆ. ಊಟ ಅವ್ಯವಸ್ಥೆಯಿಂದ ಕೂಡಿರುತ್ತದೆ, ಎಂದು ಆರೋಪಿಸಿ ವಿದ್ಯಾರ್ಥಿಗಳು ಜಿಲ್ಲಾಡಳಿತ ಭವನದ ಎದುರು ಸೋಮವಾರ ತಡರಾತ್ರಿ ದಿಢೀರ್ ಪ್ರತಿಭಟನೆ ನಡೆಸಿದ್ದಾರೆ. ವಿದ್ಯಾರ್ಥಿಗಳಿಗೆ ಸರಿಯಾಗಿ ಬಾಳೆಹಣ್ಣು ಕೊಟ್ಟಿಲ್ಲ, ಶೌಚಾಲಯಗಳು ಸ್ವಚ್ಛವಾಗಿಲ್ಲ, ಊಟ ರುಚಿ ಇರಲ್ಲ, ಹೀಗೆ ವ್ಯವಸ್ಥೆ ಸರಿಯಾಗಿ ನಿರ್ವಹಣೆ ಮಾಡದ ವಾರ್ಡನ್ ಅವರನ್ನು ತಕ್ಷಣವೇ ವರ್ಗಾವಣೆ ಮಾಡಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಿಗೆ ದೂರಿದ್ದಾರೆ.

ವಾರ್ಡನ್ ಅವರ ಬದಲಾವಣೆಗೆ ಒಂದು ವಾರ ಸಮಯ ಕೇಳಿದ ಅಧಿಕಾರಿಯ ಮನವಿಗೆ ವಿದ್ಯಾರ್ಥಿಗಳು ತಕ್ಷಣವೇ ವಾರ್ಡನ್ ಬದಲಾಗಬೇಕು ಎಂದು ಪಟ್ಟು ಹಿಡಿದರು. ವಾರ್ಡನ್ ಅವರ ಬದಲಾವಣೆ ಆಗದ ತನಕ ಸ್ಥಳ ಬಿಟ್ಟು ಹೋಗುವುದಿಲ್ಲ ಎಂದು ಊಟದಲ್ಲಿ ಕೂದಲು ಮತ್ತು ಜಿರಳೆ ಬೀಳುವುದು ಸಾಮಾನ್ಯವಾಗಿದೆ. ಸರಿಯಾಗಿ ಮೊಟ್ಟೆ ನೀಡುವುದಿಲ್ಲವೆಂದು ವಿದ್ಯಾರ್ಥಿಗಳು ದೂರಿ, ಕೆಲವು ವಿದ್ಯಾರ್ಥಿಗಳು ತಟ್ಟೆ ಸಮೇತ ಬಂದು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಕೆಲ ಹೊತ್ತಿನ ನಂತರ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಬಂದು ವಿದ್ಯಾರ್ಥಿಗಳನ್ನು ಸಮಾಧಾನಪಡಿಸಿದ್ದಾರೆ.

ಆದ್ದರಿಂದ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಂಡು ಈ ರೀತಿಯ ಘಟನೆಗಳು ಮರುಕಳಿಸದಂತೆ ಇಲಾಖೆಯಿಂದ ಸೂಕ್ತ ನಿರ್ದೇಶನಗಳನ್ನು ನೀಡಲು ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಡಾ: ಹೆಚ್.ಸಿಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಸದ್ಯಕ್ಕೆ ಇದರ ವಿವರ ನನ್ನ ಬಳಿ ಇಲ್ಲ. ಅಲ್ಲಿನ ಹಾಸ್ಟೆಲ್‌ನಲ್ಲಿ ಆಗುವಂತಹ ಅವ್ಯವಹಾರ ಮತ್ತು ನಿರ್ಲಕ್ಷ್ಯ ಮತ್ತು ಕಳಪ ಗುಣಮಟ್ಟದ ಆಹಾರ ಕೊಡುತ್ತಿದ್ದಾರೆ ಎಂದು ಮಾನ್ಯ ಶಾಸಕರು ಶೂನ್ಯವೇಳೆಯಲ್ಲಿ ಗಮನ ಸೆಳೆದಿದ್ದಾರೆ. ಅಲ್ಲಿಗೆ ಒಬ್ಬ ಹಿರಿಯ ಅಧಿಕಾರಿಯನ್ನು ಸ್ಥಳಕ್ಕೆ ಕಳುಹಿಸಿ, ಅಲ್ಲಿನ ಎಲ್ಲಾ ವಿವರಗಳನ್ನು ಸಂಗ್ರಹಿಸಿ, ಆ ರೀತಿ ಏನಾದರು ಇದ್ದರೆ, ಅದನ್ನು ಸರಿಪಡಿಸುವುದು ಮತ್ತು ತಪ್ಪಿತಸ್ಥ ಅಧಿಕಾರಿ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳುವುದಕ್ಕೆ ಕ್ರಮವಹಿಸುತ್ತೇನೆ.

**ಈ) ವಿಷಯ:- ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯಲ್ಲಿನ ಆಡಳಿತಾತ್ಮಕ ಗೊಂದಲ, ವಿವಾದಾತ್ಮಕ ನೇಮಕಾತಿಗಳು ಮತ್ತು ನಿರಂತರ ವಿಳಂಬ ಯೋಜನೆಯಿಂದ "ಕೇಂದ್ರದ ಯೋಜನೆ ಕೈ ತಪ್ಪುವ" ಬಗ್ಗೆ.**

---

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ದಿನಾಂಕ: 09.03.2026 ರಂದು "ಕೇಂದ್ರದ ಯೋಜನೆ ಕೈ ತಪ್ಪುವ ಭೀತಿ" ಎಂದು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. "ದೇಶದ ಆಯ್ದ ಸ್ಮಾರ್ಟ್ ನಗರಗಳಿಗೆ ಮಾತ್ರ ದೊರೆಯುವ ಕೇಂದ್ರ ಸರ್ಕಾರದ ಪ್ರತಿಷ್ಠಿತ 'ಸಿಟೀಸ್ 2.0'ಗೆ ಕರ್ನಾಟಕದಿಂದ ಆಯ್ಕೆಯಾದ ಏಕೈಕ ನಗರ ಎಂಬ ಹೆಗ್ಗಳಿಕೆ ಪಡೆದಿದ್ದ ಬೆಳಗಾವಿ, ಇದೀಗ ಆ ಮಹತ್ವದ ಯೋಜನೆ ಕಳೆದುಕೊಳ್ಳುವ ಅಂಚಿನಲ್ಲಿದೆ ಎಂಬ ಆತಂಕ ವ್ಯಕ್ತವಾಗಿದೆ. ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಸ್ಥೆಯಲ್ಲಿನ ಆಡಳಿತಾತ್ಮಕ ಗೊಂದಲ, ವಿವಾದಾತ್ಮಕ ನೇಮಕಾತಿಗಳು ಮತ್ತು ನಿರಂತರ ವಿಳಂಬ ಯೋಜನೆಯ ಭವಿಷ್ಯವೇ ಅನುಮಾನಕ್ಕೆ ದೂಡಿದೆ.

ಸ್ಮಾರ್ಟ್ ಸಿಟಿ ಅಧಿಕಾರಿಗಳು ನಗರಾಭಿವೃದ್ಧಿ ಇಲಾಖೆಗೆ ಈ ವಿಷಯದಲ್ಲಿ ಬೆಳಗಾವಿ ಮಹಾನಗರ ಪಾಲಿಕೆ ಸಹಕಾರ ಕೊಡುತ್ತಿಲ್ಲ ಎನ್ನುವ ಪತ್ರ ಬರೆದಿದ್ದಾರೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ. 2024ರ ಫೆಬ್ರವರಿಯಲ್ಲಿ ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಆಯ್ಕೆ ಸಮಿತಿಯ ಮುಂದೆ ಬೆಳಗಾವಿ ಮಹಾನಗರ ಪಾಲಿಕೆ ಮತ್ತು ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ಸಂಯುಕ್ತವಾಗಿ ತಯಾರಿಸಿದ ಯೋಜನೆ ಮಂಡನೆಯಾಗಿ ಆಯ್ಕೆಯಾದದ್ದು ಬೆಳಗಾವಿಗೆ ದೊಡ್ಡ ಸಾಧನೆ ಎಂದು ಪರಿಗಣಿಸಲಾಗಿತ್ತು. ಆದರೆ, ಯೋಜನೆ ಮುಂದುವರೆಯಬೇಕಾದ ಹಂತದಲ್ಲೇ ಹಲವು ಆಡಳಿತಾತ್ಮಕ ಅಡಚಣೆಗಳು ಎದುರಾದವು. ಯೋಜನೆ ನಿರ್ವಹಣೆಗೆ ಯೋಜನಾ ಸಂಯೋಜಕ, ಪರಿಸರ ಹಾಗೂ ಸಾಮಾಜಿಕ ಸುರಕ್ಷತಾ ನೋಡಲ್ ಅಧಿಕಾರಿ ಹಾಗೂ ಯೋಜನಾ ಸಂಪರ್ಕ ಅಧಿಕಾರಿ ಎಂಬ ಮೂರು ಪ್ರಮುಖ ಹುದ್ದೆ ನೇಮಕ ಮಾಡಬೇಕೆಂದು ಕೇಂದ್ರ ಸರ್ಕಾರ ಸೂಚನೆ ನೀಡಿತ್ತು. ಆದರೆ, ಈ ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇಲ್ಲದಿರುವುದಾಗಿ ಆರೋಪಗಳು ಕೇಳಿ ಬಂದಿವೆ. ಮಾಹಿತಿ ಹಕ್ಕು ಕಾಯ್ದೆ ಮೂಲಕ ಲಭಿಸಿದ ದಾಖಲೆಗಳ ಪ್ರಕಾರ, ಅರ್ಹ ಅಭ್ಯರ್ಥಿಗಳನ್ನು ಕಡೆಗಣಿಸಿ ಈಗಾಗಲೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಲವರನ್ನು ಪ್ರಮುಖ ಹುದ್ದೆಗಳಿಗೆ ನೇಮಕ ಮಾಡಲಾಗಿದೆ ಎಂಬ ಆರೋಪಗಳು ವ್ಯಕ್ತವಾಗಿದೆ. ವಿಶೇಷವಾಗಿ ಯೋಜನಾ ಸಂಯೋಜಕ ಹುದ್ದೆಗೆ ಅನುಭವದ ಮಾನದಂಡವಿಲ್ಲದ ವ್ಯಕ್ತಿಯನ್ನು ನೇಮಕ ಮಾಡಲಾಗಿದೆ ಎಂಬ ಪ್ರಶ್ನೆಗಳು ಉದ್ಭವಿಸಿವೆ." ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ತಕ್ಷಣವೇ ಆಡಳಿತಾತ್ಮಕ ಗೊಂದಲಗಳನ್ನು

ಸರಿಪಡಿಸಿ ನೇಮಕಾತಿಗಳಲ್ಲಿ ಪಾರದರ್ಶಕತೆ ಕ್ರಮಗಳನ್ನು ಕೈಗೊಂಡು ಈ ಮಹತ್ವಕಾಂಕ್ಷಿ ಯೋಜನೆಯನ್ನು ಬೆಳಗಾವಿ ನಗರದಲ್ಲಿ ಅನುಷ್ಠಾನಗೊಳ್ಳುವಂತೆ ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- "ರಾಜ್ಯದ ವಸತಿ ಯೋಜನೆಗಳಿಗೆ ಗ್ರಹಣ ಬಡಿದಿದೆ, ಹತ್ತಾರು ವಸತಿ ಯೋಜನೆಗಳಿದ್ದರೂ ಬಡವರಿಗೆ ನಿವೇಶನ, ಮನೆ ಸಿಕ್ಕಿಲ್ಲದಿರುವ" ಕುರಿತು.**

---

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ವಸತಿ ಯೋಜನೆಗಳಿಗೆ ಗ್ರಹಣ ಬಡಿದಿದೆ. ಹತ್ತಾರು ವಸತಿ ಯೋಜನೆಗಳಿದ್ದರೂ ಬಡವರಿಗೆ ನಿವೇಶನ, ಮನೆ ಮಾತ್ರ ಸಿಕಿಲ್ಲ. ಗ್ರಾಮೀಣ ಮತ್ತು ನಗರ ಪ್ರದೇಶ ಸೇರಿದಂತೆ ಒಟ್ಟು 37,48,766 ಕುಟುಂಬಗಳಿಗೆ ಮನೆಗಳು ಇಲ್ಲ. ಈ ಪೈಕಿ 17,31,633 ಕುಟುಂಬಗಳಿಗೆ ಇನ್ನೂ ನಿವೇಶನವೇ ಸಿಕ್ಕಿಲ್ಲ. ಪ್ರಧಾನಮಂತ್ರಿ ಅವಾಸ್ ಯೋಜನೆ, ರಾಜೀವ್ ಗಾಂಧಿ ಅವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ, ಬಸವ ವಸತಿ ಯೋಜನೆ, ಇಂದಿರಾ ಅವಾಸ್ ಯೋಜನೆ, ದೇವರಾಜ ಅರಸು ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ, ನಿರ್ಮಲ ನಗರ ವಸತಿ ಯೋಜನೆ ಸೇರಿದಂತೆ ಸಾಕಷ್ಟು ವಸತಿ ಯೋಜನೆಗಳಿವೆ. ಆದರೆ ಬಡವರಿಗೆ "ಸ್ವಂತ ಸೂರು ಕಲ್ಪಿಸುವ" ಉದ್ದೇಶ, ಗುರಿ ಸಾಧನೆ ಮಾತ್ರ ಆಗಿಲ್ಲ. ಹೀಗಾಗಿ ನಗರ ಮತ್ತು ಗ್ರಾಮೀಣ ಭಾಗದ ಲಕ್ಷಾಂತರ ಕುಟುಂಬಗಳು ಸ್ವಂತ ಸೂರಿನ ಆಸರೆಗಾಗಿ ಕಾಯುತ್ತಿವೆ.

ರಾಜ್ಯ ಸರಕಾರ 3,27,747 ಮನೆಗಳಿಗೆ ಅನುಮೋದನೆ ನೀಡಿದೆ. ಅದರಲ್ಲಿ ಸದ್ಯಕ್ಕೆ ನಿರ್ಮಾಣವಾಗಿರುವುದು 9,839 ಮನೆ ಮಾತ್ರ. 46,540 ಮನೆ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 2,70,977 ಮನೆ ನಿರ್ಮಾಣ ಕಾರ್ಯ ಆರಂಭಿಸಲು ಇನ್ನೂ ಮುಹೂರ್ತ ಕೂಡಿ ಬಂದಿಲ್ಲ. 391 ಮನೆಗಳ ನಿರ್ಮಾಣ ಕಾರ್ಯವನ್ನು ತಾತ್ಕಾಲಿಕವಾಗಿ ತಡೆಯೊಡ್ಡಲಾಗಿದೆ. ಸ್ವಾತಂತ್ರ್ಯ ಬಂದು 75 ವರ್ಷವಾದರೂ ಸ್ವಂತ ಸೂರು ಕಟ್ಟಿಕೊಳ್ಳುವ ಭಾಗ್ಯ ಸಿಕ್ಕಿಲ್ಲ. ರಾಜ್ಯದಲ್ಲಿ 37.48 ಲಕ್ಷ ಕುಟುಂಬಗಳಿಗೆ ಸೂರಿಲ್ಲ ಎಂಬುದು ನಿಜಕ್ಕೂ ನೋವಿನ ಸಂಗತಿ ಹಾಗೂ ಸೂರು ಕಲ್ಪಿಸದಿರುವುದು ಹಕ್ಕಿನಿಂದ ವಂಚಿಸಿದಂತಾಗುತ್ತದೆ. ಈ ಕಾರಣದಿಂದ ಸರಕಾರ ಇದರ ಬಗ್ಗೆ ಗಮನಹರಿಸಿ, ಬಡವರಿಗೆ ಸೂರನ್ನು ಕಟ್ಟಿಕೊಡಬೇಕೆಂದು ಒತ್ತಾಯಿಸುತ್ತೇನೆ. ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕೆ ತಮಗೆ ಧನ್ಯವಾದಗಳು.

**ಶ್ರೀ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ (ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಅದರ ಮಾಹಿತಿಯನ್ನು ತೆಗೆದುಕೊಂಡು ಆಮೇಲೆ ಉತ್ತರವನ್ನು ನೀಡುತ್ತೇನೆ.

(ಮುಂದು)

(೩೪೦) ೧೨.೦೩.೨೦೨೬ ೧೨.೪೦ LL-RN (ಸಭಾಪತಿಯವರ ಉಪಸ್ಥಿತಿ)

**ಊ) ವಿಷಯ:- ರಾಜ್ಯದ ೨೩೦ ಸಮುದಾಯ ಆರೋಗ್ಯ ಕೇಂದ್ರಗಳನ್ನು ಕೆಳದರ್ಜೆಗೆ ಇಳಿಸುವ ಮತ್ತು ತಜ್ಞ ವೈದ್ಯರ ವರ್ಗಾವಣೆಯಿಂದ ಗ್ರಾಮೀಣ ಆರೋಗ್ಯ ಸೇವೆಯ ಮೇಲಾಗುವ ದುಷ್ಪರಿಣಾಮಗಳ ಕುರಿತು**

- - -

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ದಿನಾಂಕ ೧೨.೦೩.೨೦೨೬ ರ 'ಕನ್ನಡಪ್ರಭ' ದಿನಪತ್ರಿಕೆಯಲ್ಲಿ ಪ್ರಕಟಿಸಿರುವ ವಿಷಯಕ್ಕೆ ಪ್ರತಿ ತಿಂಗಳು ೩೦ ಹೆರಿಗೆ ಮಾನದಂಡವನ್ನು ಆಧಾರವಾಗಿಟ್ಟುಕೊಂಡು ರಾಜ್ಯದ ೨೩೦ ಸಮುದಾಯ ಆರೋಗ್ಯ ಕೇಂದ್ರಗಳನ್ನು (ಸಿ.ಎಚ್.ಸಿ.) ಕೆಳದರ್ಜೆಗಿಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಈ ಕೇಂದ್ರದಲ್ಲಿರುವ ವೈದ್ಯರು ಮತ್ತು ಸಿಬ್ಬಂದಿಯನ್ನು ತಾಲ್ಲೂಕು ಆಸ್ಪತ್ರೆಗಳಿಗೆ ವರ್ಗಾಯಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ರಾಜ್ಯದಲ್ಲಿ ಸದ್ಯ ೨೩೦ ಕಡಿಮೆ ಕಾರ್ಯಕ್ಷಮತೆ ಹೊಂದಿರುವ ಸಮುದಾಯ ಆರೋಗ್ಯ ಕೇಂದ್ರಗಳನ್ನು ಪಟ್ಟಿ ಮಾಡಲಾಗಿದೆ. ಇಲ್ಲಿರುವ ಸ್ತ್ರೀರೋಗ ತಜ್ಞರು, ಅರವಳಿಕೆ ತಜ್ಞರು, ಮಕ್ಕಳ ತಜ್ಞರ ಹುದ್ದೆಗಳನ್ನು ಕಡಿತಗೊಳಿಸಿ, ಅವುಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಪರಿವರ್ತಿಸುವುದಕ್ಕೆ ಹೊರಟಿದ್ದು, ಗ್ರಾಮೀಣ ಜನರಿಗೆ ಉತ್ತಮ ಆರೋಗ್ಯ ಸೇವೆ ಇನ್ನಷ್ಟು ದೂರವಾಗುವ ಆತಂಕ ಎದುರಾಗಿದೆ.

ತಾಲ್ಲೂಕು ಆಸ್ಪತ್ರೆಗಳಲ್ಲಿ ಖಾಲಿ ಇರುವ ತಜ್ಞರ ಹುದ್ದೆಗಳನ್ನು ಭರ್ತಿ ಮಾಡಲಾಗದೆ ರಾಜ್ಯ ಸರ್ಕಾರ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿರುವ ತಜ್ಞ ವೈದ್ಯರನ್ನು ವರ್ಗಾಯಿಸಲು ಮುಂದಾಗಿದೆ. ಪಿ.ಎಚ್.ಸಿ. ಗಳಲ್ಲಿ ತಜ್ಞರು ಇಲ್ಲದೆಯೂ ತಿಂಗಳಿಗೆ ೩೦ ಹೆರಿಗೆ ಸಾಧಿಸಬಹುದಾಗಿದೆ. ಹಾಗಾಗಿ, ಸಿ.ಹೆಚ್.ಸಿ. ಗಳಿಗೆ ತ್ರಿವಳಿ ತಜ್ಞರು ಅನಗತ್ಯ. ಈ ಕೇಂದ್ರಗಳಲ್ಲಿ ಎಂ.ಬಿ.ಬಿ.ಎಸ್. ವೈದ್ಯರು ಮತ್ತು ಪ್ರಸವಪೂರ್ವ ಆರೈಕೆ, ಸಾಮಾನ್ಯ ಹೆರಿಗೆ ಮತ್ತು ಶಿಶು ಆರೈಕೆಯಲ್ಲಿ ತರಬೇತಿ ಪಡೆದ ಶುಶ್ರೂಷಕರು ಇದ್ದರೆ ಸಾಕು ಎಂದು ಸರ್ಕಾರ ನಿರ್ಧರಿಸಿದೆ. ಇದಕ್ಕೆ ವೈದ್ಯಕೀಯ ವಲಯ ಮತ್ತು ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಸಿ.ಎಚ್.ಸಿ. ಗಳಿಗೆ ನಿತ್ಯ ವಿವಿಧ ರೋಗಗಳಿಗೆ ಸಂಬಂಧಿಸಿದಂತೆ ೩೦೦ ಹೊರರೋಗಿಗಳು ಬರುತ್ತಾರೆ. ಇವನ್ನೂ ಗಣನೆಗೆ ತೆಗೆದುಕೊಳ್ಳದೆ ಕೇವಲ ಹೆರಿಗೆ ಸಂಖ್ಯೆ ಮಾನದಂಡವನ್ನಾಗಿ ಪರಿಗಣಿಸಿರುವುದು ಸರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಹಲವು ಸಿ.ಎಚ್.ಸಿ. ಗಳು ೨ ರಿಂದ ೩ ಎಕರೆ ವಿಸ್ತೀರ್ಣದಲ್ಲಿವೆ. ಆ ಕಟ್ಟಡಗಳನ್ನು ಏನು ಮಾಡಲಾಗುತ್ತದೆ?. ತಜ್ಞ ವೈದ್ಯರುಗಳಿಲ್ಲದೆ ಎಂ.ಬಿ.ಬಿ.ಎಸ್. ವೈದ್ಯರಿಂದ ಆರೋಗ್ಯ ಕೇಂದ್ರವನ್ನು ಸಮರ್ಥವಾಗಿ ಮುನ್ನಡೆಸಲು ಸಾಧ್ಯವೇ? ಎಂಬ ಪ್ರಶ್ನೆ ಎದುರಾಗಿದೆ.

147 ತಾಲ್ಲೂಕು ಆಸ್ಪತ್ರೆಗಳಲ್ಲಿ ಕೇವಲ 1 ತ್ರಿವಳ ತಜ್ಞರ ಹುದ್ದೆ, 98 ಆಸ್ಪತ್ರೆಗಳಲ್ಲಿ 1 ಸ್ತ್ರೀರೋಗ ತಜ್ಞರ ಹುದ್ದೆ ಮಂಜೂರಾಗಿದ್ದು, ಇವುಗಳಲ್ಲಿ 11 ಹುದ್ದೆಗಳು ಖಾಲಿ ಇವೆ. 275 ಸಿ.ಎಚ್.ಸಿ. ಗಳ ಪೈಕಿ 114 ಸ್ತ್ರೀರೋಗ ತಜ್ಞರು ಕಡಿಮೆ ಕಾರ್ಯಕ್ಷಮತೆಯುಳ್ಳ 233 ಸಿ.ಹೆಚ್.ಸಿ. ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿ 109 ಆಸ್ಪತ್ರೆಗಳಲ್ಲಿ ಒಬ್ಬರೇ ಅರವಳಿಕೆ ತಜ್ಞರಿದ್ದು, 21 ಆಸ್ಪತ್ರೆಗಳಲ್ಲಿ ಹುದ್ದೆಗಳು ಖಾಲಿ ಇವೆ. 233 ಸಿ.ಹೆಚ್.ಸಿ. ಗಳಲ್ಲಿ 86 ಅರವಳಿಕೆ ತಜ್ಞರು, 233 ಸಿ.ಹೆಚ್.ಸಿ. ಗಳಲ್ಲಿ 119 ಮಕ್ಕಳ ತಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್ಲಾ ತಾಲ್ಲೂಕು ಆಸ್ಪತ್ರೆಗಳು 1 ರ ಬದಲಿಗೆ ಕನಿಷ್ಠ 2 ತ್ರಿವಳ ತಜ್ಞರನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ಆದ್ದರಿಂದ ಇದೊಂದು ರಾಜ್ಯದ ಸಾರ್ವಜನಿಕರ ಆರೋಗ್ಯದ ವಿಷಯವಾಗಿರುದರಿಂದ, ಈ ಬಗ್ಗೆ ಕೂಡಲೇ ಗಮನಹರಿಸಿ ಪ್ರತಿ ತಿಂಗಳು 30 ಹೆರಿಗೆ ಮಾನದಂಡವನ್ನು ಆಧಾರವಾಗಿಟ್ಟುಕೊಂಡು ರಾಜ್ಯದ 230 ಸಮುದಾಯ ಆರೋಗ್ಯ ಕೇಂದ್ರಗಳನ್ನು (ಸಿ.ಎಚ್.ಸಿ.) ಕೆಳದರ್ಜೆಗಿಳಿಸಲು ಮುಂದಾಗಿರುವುದನ್ನು ಕೈಬಿಟ್ಟು ಖಾಲಿ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳುವಂತೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ರಾಜ್ಯ ಸರ್ಕಾರವು ಇತ್ತೀಚೆಗೆ ಕೈಗೊಂಡಿರುವ ನಿರ್ಧಾರದಂತೆ, ತಿಂಗಳಿಗೆ 30 ಹೆರಿಗೆಗಳ ಮಾನದಂಡವನ್ನು ಆಧರಿಸಿ ರಾಜ್ಯದ ಸುಮಾರು 230 ಸಮುದಾಯ ಆರೋಗ್ಯ ಕೇಂದ್ರಗಳನ್ನು (C.H.C.) ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ (P.H.C.H) ಕೆಳದರ್ಜೆಗೆ ಇಳಿಸಲು ಮುಂದಾಗಿರುವುದು ಅತ್ಯಂತ ಆತಂಕಕಾರಿ ವಿಷಯವು ಇಂದಿನ 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಸಮುದಾಯ ಆರೋಗ್ಯ ಕೇಂದ್ರಗಳು ಗ್ರಾಮೀಣ ಭಾಗದ ಜನರಿಗೆ ಜೀವನಾಡಿಯಾಗಿವೆ. ಇವುಗಳನ್ನು ಕೆಳದರ್ಜೆಗೆ ಇಳಿಸುವುದರಿಂದ ಗ್ರಾಮೀಣ ಭಾಗದ ಬಡ ಜನರಿಗೆ ದೊರೆಯುತ್ತಿದ್ದ ತುರ್ತು ಚಿಕಿತ್ಸೆ ಮತ್ತು ತಜ್ಞ ವೈದ್ಯರ ಸೇವೆ ಮರೀಚಿಕೆಯಾಗಲಿದೆ. ವರದಿಯ ಪ್ರಕಾರ, ಈ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ತ್ರೀರೋಗ ತಜ್ಞರು, ಅರಿವಳಿಕೆ ತಜ್ಞರು ಮತ್ತು ಮಕ್ಕಳ ತಜ್ಞರನ್ನು ತಾಲ್ಲೂಕು ಆಸ್ಪತ್ರೆಗಳಿಗೆ ವರ್ಗಾಯಿಸಲು ಸರ್ಕಾರ ನಿರ್ಧರಿಸಿದೆ. ಇದರಿಂದ ಗ್ರಾಮೀಣ ಭಾಗದ ಆಸ್ಪತ್ರೆಗಳು ಕೇವಲ ನಾಮಮಾತ್ರದ ಕೇಂದ್ರಗಳಾಗಿ ಉಳಿಯಲಿವೆ. ಕೇವಲ 'ಹೆರಿಗೆಗಳ ಸಂಖ್ಯೆ'ಯನ್ನು ಆಧರಿಸಿ ಆಸ್ಪತ್ರೆಯ ದರ್ಜೆಯನ್ನು ನಿರ್ಧರಿಸುವುದು ಸರಿಯಲ್ಲ. ಸಮುದಾಯ ಆರೋಗ್ಯ ಕೇಂದ್ರಗಳಿಗೆ ಪ್ರತಿದಿನ ನೂರಾರು ಹೊರರೋಗಿಗಳು ವಿವಿಧ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಬರುತ್ತಾರೆ. ಕೇವಲ ಒಂದು ಮಾನದಂಡದ ಮೇಲೆ ಇಡೀ ವ್ಯವಸ್ಥೆಯನ್ನು ಬದಲಿಸುವುದು ಅವೈಜ್ಞಾನಿಕವಾಗಿದೆ. ಬೆಳಗಾವಿ (17), ಕಲ್ಬುರ್ಗಿ (18), ತುಮಕೂರು (6), ಮಂಡ್ಯ (10) ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ

ಹೆಚ್ಚಿನ ಸಂಖ್ಯೆಯ ಕೇಂದ್ರಗಳು ಮುಚ್ಚುವ ಹಂತದಲ್ಲಿವೆ. ಇದು ರಾಜ್ಯದ ಒಟ್ಟಾರೆ ಆರೋಗ್ಯ ಸೂಚ್ಯಂಕದ ಮೇಲೆ ತೀವ್ರ ಪರಿಣಾಮ ಬೀರಲಿದೆ.

ಈ ವಿಷಯದಲ್ಲಿ ತಕ್ಷಣವೇ ಸ್ಪಂದಿಸಿ, ಗ್ರಾಮೀಣ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಈ 230 ಸಮುದಾಯ ಆರೋಗ್ಯ ಕೇಂದ್ರಗಳನ್ನು ಕೆಳದರ್ಜೆಗೆ ಇಳಿಸುವ ನಿರ್ಧಾರವನ್ನು ಕೈಬಿಡಬೇಕು ಮತ್ತು ಖಾಲಿ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

**ಖ) ವಿಷಯ:- ಕರ್ನಾಟಕ ರಾಜ್ಯದ ಯುವ ಜನಾಂಗದ ಆಶೋತ್ತರಗಳಿಗೆ ಅನುಗುಣವಾಗಿ ಮತ್ತು ಮಾಧ್ಯಮಗಳ ವರದಿಗೆ ಪೂರಕವಾಗಿ ರಾಜ್ಯ ಯುವ ಆಯೋಗವನ್ನು ಸ್ಥಾಪಿಸುವ ಕುರಿತು**

- - -

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಇವೊತ್ತಿನ ದಿವಸ ನಾನು ಬಹಳ ಮುಖ್ಯವಾದಂತಹ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಬೇಕೆಂದು ಬಯಸಿರುತ್ತೇನೆ. ಅಲ್ಲದೇ, ಈ ಸದನದ ಗ್ಯಾಲರಿಯಲ್ಲಿ ಬಹಳಷ್ಟು ವಿದ್ಯಾರ್ಥಿಗಳು/ಯುವಕರು ಇದ್ದರು. ಅವರ ಉಪಸ್ಥಿತಿಯಲ್ಲಿ, ಯುವ ಜನರಿಗೆ ಸಂಬಂಧಪಟ್ಟ ವಿಷಯವನ್ನು ಪ್ರಸ್ತಾಪಿಸಬೇಕೆಂದು ಇಚ್ಛಿಸಿದ್ದೆನು. ಆದರೆ, ನಮ್ಮ ಸಿಬ್ಬಂದಿಗಳು ಅವರನ್ನು ಹೊರಗೆ ಕಳುಹಿಸಿರುತ್ತಾರೆ. ಆದಾಗ್ಯೂ, ಯುವ ಜನರಿಗೆ ವಿಶೇಷವಾದ ಧನ್ಯವಾದಗಳನ್ನು ಹೇಳುತ್ತೇನೆ.

ಕರ್ನಾಟಕ ರಾಜ್ಯವು ಯುವ ಜನಾಂಗದ ಸಂಖ್ಯೆ ಹೆಚ್ಚಿರುವ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಅತ್ಯಂತ ಪ್ರಮುಖವಾಗಿದೆ. ಆದರೆ, ಯುವಕರ ಸಮಸ್ಯೆಗಳು, ಉದ್ಯೋಗ, ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆರೋಗ್ಯ ಹಾಗೂ ಸಾಮಾಜಿಕ ಭದ್ರತೆ ಕುರಿತಾಗಿ ಸಮಗ್ರವಾಗಿ ಗಮನ ಹರಿಸುವ ವಿಶೇಷ ಸಂಸ್ಥೆಯಾಗಿ ರಾಜ್ಯ ಯುವ ಆಯೋಗದ ಅವಶ್ಯಕತೆಯಿದ್ದು, ಕರ್ನಾಟಕದಲ್ಲಿ ಇಲ್ಲಿಯವರೆಗೆ ಆಯೋಗವನ್ನು ರಚಿಸಿರುವುದಿಲ್ಲ. ಯುವಕರ ಹಿತಾಸಕ್ತಿಗಳನ್ನು ರಕ್ಷಿಸಲು, ಯುವಕರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ಕರ್ನಾಟಕ ರಾಜ್ಯ ಯುವ ಆಯೋಗವನ್ನು ಸ್ಥಾಪಿಸುವುದು ಅತ್ಯಗತ್ಯವಾಗಿದೆ.

ಕರ್ನಾಟಕದಲ್ಲಿ ಸುಮಾರು 15 ರಿಂದ 29 ವರ್ಷದೊಳಗಿನ ಯುವಕರ ಸಂಖ್ಯೆ ಸುಮಾರು 2.1 ಕೋಟಿ ಇರುತ್ತದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇಕಡಾ 29 ರಷ್ಟು ಯುವಕರು ಇರುತ್ತಾರೆ. ಕರ್ನಾಟಕದಲ್ಲಿ ಯುವಕರು ನಿರುದ್ಯೋಗ ಸಮಸ್ಯೆ, ಶಿಕ್ಷಣ ಮತ್ತು ಉದ್ಯಮಗಳಲ್ಲಿ ಕೌಶಲ್ಯದ ಅಗತ್ಯತೆ, ತಂತ್ರಜ್ಞಾನ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಹೊಸ ಕೌಶಲ್ಯಗಳ ಅಗತ್ಯತೆ, ಗ್ರಾಮೀಣ ಪ್ರದೇಶದಲ್ಲಿ ತರಬೇತಿ ಮತ್ತು ಮಾರ್ಗದರ್ಶನದ ಅವಶ್ಯಕತೆ ಇತ್ಯಾದಿಗಳನ್ನು ಹೊಂದಿರುತ್ತಾರೆ. ಇದರೊಂದಿಗೆ, ಸಾಮಾಜಿಕ ಮತ್ತು ಆರೋಗ್ಯ ಸಮಸ್ಯೆಗಳು, ಮಾನಸಿಕ ಆರೋಗ್ಯ ಸಮಸ್ಯೆಗಳು, ಮಾದಕ ವಸ್ತುಗಳ ಬಳಕೆಯ ಸಮಸ್ಯೆ ಅನುಭವಿಸುತ್ತಿದ್ದಾರೆ. ಆದ್ದರಿಂದ, ಯುವಕರ ಸಮಸ್ಯೆಗಳನ್ನು ಸಮಗ್ರವಾಗಿ ಪರಿಹರಿಸಲು ಮತ್ತು ಅವರ ಸಾಮರ್ಥ್ಯವನ್ನು ರಾಷ್ಟ್ರ ನಿರ್ಮಾಣದಲ್ಲಿ ಬಳಸಲು ಕರ್ನಾಟಕ ರಾಜ್ಯ ಯುವ ಆಯೋಗವನ್ನು ಸ್ಥಾಪಿಸುವುದು ಅವಶ್ಯಕವಾಗಿದೆ.

ಯುವಕರಲ್ಲಿ ಆರೋಗ್ಯ ಜಾಗೃತಿ ಮತ್ತು ಜೀವನ ಕೌಶಲ್ಯಗಳ ಕೊರತೆ ಇದೆ. ರಾಜ್ಯದ ಯುವಕರು ಉದ್ಯೋಗದಿಂದ ಹಿಡಿದು ಹಲವಾರು ಸಮಸ್ಯೆಗಳನ್ನು ಸಮಾಜದ ಹಲವಾರು ಸ್ತರಗಳಲ್ಲಿ ಅನುಭವಿಸುತ್ತಿದ್ದು,

ಇವುಗಳನ್ನು ಸಮಗ್ರವಾಗಿ ಪರಿಹರಿಸುವ ನಿಟ್ಟಿನಲ್ಲಿ ಕರ್ನಾಟಕದಲ್ಲಿ ರಾಜ್ಯ ಯುವ ಆಯೋಗದ ಅವಶ್ಯಕತೆಯಿದ್ದು, ಅನೇಕ ಮಾಧ್ಯಮಗಳು ಲೇಖನ ಮತ್ತು ವರದಿಗಳ ಮೂಲಕ ಆಯೋಗದ ಅವಶ್ಯಕತೆಯನ್ನು ಪ್ರತಿಪಾದಿಸಿರುತ್ತವೆ. ಆದುದರಿಂದ, ಕರ್ನಾಟಕ ರಾಜ್ಯದ ಯುವ ಜನಾಂಗದ ಆಶೋತ್ತರಗಳಿಗೆ ಅನುಗುಣವಾಗಿ ಮತ್ತು ಮಾಧ್ಯಮಗಳ ವರದಿಗೆ ಪೂರಕವಾಗಿ ರಾಜ್ಯ ಯುವ ಆಯೋಗವನ್ನು ಸ್ಥಾಪಿಸಲು ಶೂನ್ಯವೇಳೆಯಲ್ಲಿ ಸದನದಲ್ಲಿ ಪುಸ್ತಾಪಿಸುವ ಮೂಲಕ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಲು ಕೋರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

(ಮುಂದು)

(341) 12.03.2026 ವೈಎಲ್-ಆರ್‌ಎನ್ 12.50 (ಸಭಾಪತಿಯವರ ಉಪಸ್ಥಿತಿ)

**ಎ) ವಿಷಯ:- ಕಲ್ಯಾಣ ಕರ್ನಾಟಕದ ಅತಿಥಿ ಶಿಕ್ಷಕರ 9 ತಿಂಗಳ ಗೌರವಧನ ಬಾಕಿ ಬಿಡುಗಡೆ ಹಾಗೂ ವೇತನ ತಾರತಮ್ಯ ನಿವಾರಣೆ ಕುರಿತು.**

- - - - -

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ: 10.03.2026 ರಂದು 'ಪ್ರಜಾವಾಣಿ' ದಿನ ಪತ್ರಿಕೆಯಲ್ಲಿ ಪ್ರಕಟಗೊಂಡ ಅತಿಥಿಗಳ ಗೌರವಧನ ಬಿಡುಗಡೆ ಮಾಡಿ ಎಂಬ ಶೀರ್ಷಿಕೆಯಡಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಕ್ಷರ ಆವಿಷ್ಕಾರ ಯೋಜನೆಯಡಿಯಲ್ಲಿ ಕಲ್ಯಾಣ ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಪ್ರಾರಂಭವಾದ ಎಲ್.ಕೆ.ಜಿ., ಯು.ಕೆ.ಜಿ. ಮತ್ತು ದ್ವಿತೀಯ ತರಗತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು ಹಾಗೂ ಆಯಾಗಳಿಗೆ ಜೂನ್ ತಿಂಗಳಿನಿಂದ ಇಂದಿನವರೆಗೂ ಸಂದಾಯವಾಗದೇ ಇರುವ ಗೌರವಧನವನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಜೇಷನ್ (ಎಐಡಿವೈಒ)ನ ರಾಯಚೂರು ಜಿಲ್ಲಾ ಸಮಿತಿಯ ಪದಾಧಿಕಾರಿಗಳು ನಗರದ ನೂತನ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನ ನಡೆಸಿದರು, 09 ತಿಂಗಳಿನಿಂದ ಅತಿಥಿ ಶಿಕ್ಷಕರ ಗೌರವಧನ ಬಿಡುಗಡೆ ಆಗದಿರುವುದರಿಂದ ಬಹಳಷ್ಟು ತೊಂದರೆಗೆ ಸಿಲುಕಿದ್ದಾರೆ. ಹಲವಾರು ಕುಟುಂಬ ನಿರ್ವಹಣೆಗೆ ಪರದಾಡುತ್ತಿದ್ದಾರೆ. ಆರ್ಥಿಕ ವರ್ಷ ಮುಗಿಯಲು ಬಂದರೂ ಸಹ ಗೌರವಧನ ದೊರೆಯದೆ ಇರುವುದರಿಂದ ಮತ್ತಷ್ಟು ಆತಂಕಕ್ಕೆ ಒಳಗಾಗಿದ್ದಾರೆ ಎಂದು ಅಸಮಾಧಾನ ಹೊರಹಾಕಿದರು.

ಮಾನ್ಯ ಮುಖ್ಯಮಂತ್ರಿಗಳು 2025-26ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಅತಿಥಿ ಶಿಕ್ಷಕರ ಗೌರವಧನವನ್ನು ರೂ.2,000/- ಕ್ಕೆ ಹೆಚ್ಚಿಸುವುದಾಗಿ ಘೋಷಣೆ ಮಾಡಿ ಆದೇಶ ಹೊರಡಿಸಿದ್ದರೂ, ಅದು ಕಲ್ಯಾಣ ಕರ್ನಾಟಕ ಭಾಗದ ಅತಿಥಿ ಶಿಕ್ಷಕರಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಎಲ್ಲಾ ಅತಿಥಿ ಶಿಕ್ಷಕರಿಗೆ ರೂ.12,000/- ಗಳ ಗೌರವಧನವನ್ನು ನೀಡಬೇಕು ಎಂದು ಆದೇಶವಿದ್ದರೂ ರೂ.10,000/- ಗಳ ಗೌರವಧನ ನೀಡುವುದು ಒಂದೇ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರ ನಡುವೆ ತಾರತಮ್ಯ ತೋರಿಸಿದಂತಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆದುದರಿಂದ, ಸದರಿ ಅತಿಥಿ ಶಿಕ್ಷಕರುಗಳ 09 ತಿಂಗಳ ಬಾಕಿ ವೇತನ ಪಾವತಿ ಸೇರಿದಂತೆ, ಹಿಂದಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಅವರ ಗೌರವಧನವನ್ನು ರೂ.10,000/- ಗಳಿಂದ ರೂ.12,000/- ಕ್ಕೆ ಪರಿಷ್ಕರಣೆ ಮಾಡುವ ಕುರಿತು ತಮ್ಮ ಮೂಲಕ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಮಧು ಬಂಗಾರಪ್ಪನವರೇ, ಯಾವಾಗ ಉತ್ತರವನ್ನು ಒದಗಿಸುತ್ತೀರಿ?

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ಆಮೇಲೆ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಗೌರವಧನ ನೀಡಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಿಮ್ಮ ಪರವಾಗಿ ನಾನು ಮಾನ್ಯ ಸಚಿವರಿಗೆ ಹೇಳಿದ್ದೇನೆ.

ಐ) ವಿಷಯ:- ತುಂಗಭದ್ರಾ ಜಲಾಶಯದ 33 ಗೇಟ್‌ಗಳನ್ನು ಅಳವಡಿಸುವ ಮೂಲಕ ದುರಸ್ತಿ ಕಾರ್ಯವನ್ನು ಶೀಘ್ರದಲ್ಲಿ ಮುಕ್ತಾಯಗೊಳಿಸುವ ಕುರಿತು.

- - - - -

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ವಿಜಯ ಕರ್ನಾಟಕ' ದಿನ ಪತ್ರಿಕೆಯ ಸಂಪಾದಕೀಯದಲ್ಲಿ ಪ್ರಕಟವಾಗಿರುವಂಥ ವಿಚಾರವನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಇವತ್ತು ತುಂಗಾಭದ್ರ ಅಚ್ಚುಕಟ್ಟು ಪ್ರದೇಶದ ರೈತರ ಬದುಕು ಮೂರಾಬಟ್ಟೆಯಾಗಿದೆ. 33 ಗೇಟ್‌ಗಳ ದುರಸ್ತಿ ಕಾರ್ಯವನ್ನು ಹಂತಹಂತವಾಗಿ ಕೈಗೊಳ್ಳಲು ಬೇಡಿಕೊಂಡರೂ, ಸರ್ಕಾರ ಎಲ್ಲಾ ಗೇಟ್‌ಗಳನ್ನು ಕಿತ್ತು ಹಾಕಿದೆ. ಮುಂಗಾರು ಮಳೆ ಆರಂಭವಾಗುವ ಮುನ್ನಾ ಎಲ್ಲಾ ಗೇಟ್‌ಗಳನ್ನು ಅಳವಡಿಸಬೇಕು. ಇಲ್ಲಿಯವರೆಗೆ ಕೇವಲ 12 ಗೇಟುಗಳ ಅಳವಡಿಕೆ ಕಾರ್ಯ ಮುಗಿದಿದೆ. ಇಲ್ಲದಿದ್ದರೆ, ಕಾಲುವೆ ಮೂಲಕ ನೀರು ಹರಿದು ಬರುವುದಿಲ್ಲ. ನದಿಯಲ್ಲಿ ಹರಿಯುವ ನೀರು ಆಂಧ್ರ ಮತ್ತು ತೆಲಂಗಾಣಕ್ಕೆ ಹರಿದು ಹೋಗುತ್ತದೆ. ಅವರಿಗೆ ಗೇಟ್ ಅಳವಡಿಕೆ ನಿಧಾನವಾದಷ್ಟು ಅನುಕೂಲವಾಗಿದ್ದು, ನಮ್ಮ ನೀರು ಅವರ ಪಾಲಾಗುತ್ತದೆ. ಆಂಧ್ರ ಮತ್ತು ತೆಲಂಗಾಣ ಶೇಕಡ 60 ರಷ್ಟು ಹಣ ತೊಡಗಿಸಿದರೆ, ನಮ್ಮ ಪಾಲು ಶೇಕಡ 40 ರಷ್ಟಾಗಿದೆ. ಇನ್ನೂ ನವಿಲೆ ಸಮನಾಂತರ ಜಲಾಶಯ ನಿರ್ಮಾಣ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಇದರಲ್ಲಿ ಆಂಧ್ರ ಮತ್ತು ತೆಲಂಗಾಣಕ್ಕೆ ಆಸಕ್ತಿ ಇಲ್ಲ. ಇದಕ್ಕೆ ಸುಮಾರು ರೂ.15,000 ಕೋಟಿ ಬೇಕು. ರಾಯಚೂರು, ಕೊಪ್ಪಳ, ಬಳ್ಳಾರಿಯಲ್ಲಿ 350 ಕ್ಕೂ ಹೆಚ್ಚು ಅಕ್ಕಿ ಗಿರಣಿಗಳು ಬಹುತೇಕ ಬಂದ್ ಆಗಿವೆ. ರೈತರಿಗೆ ಗುಳೆ ಹೋಗುವುದು ಅನಿವಾರ್ಯವಾಗಿದ್ದು, ತುಂಗಭದ್ರ ಜಲಾಶಯಕ್ಕೆ ಎಲ್ಲಾ 33 ಗೇಟ್ ಕೂಡಿಸುವವರೆಗೆ ಅವರು ಹಿಂತಿರುಗಿ ಬರುವುದಿಲ್ಲ. ಸರ್ಕಾರಕ್ಕೆ ಈ ಪರಿಸ್ಥಿತಿ ಮೊದಲೇ ತಿಳಿದಿದ್ದು, ಪರ್ಯಾಯ ಯೋಜನೆ ರೂಪಿಸಲು ಸಮಯವಿತ್ತು. ಕೇಂದ್ರದ ನರೇಗಾ ಯೋಜನೆ ವಿರುದ್ಧ ಹೋರಾಟ ನಡೆಸಿದವರಿಗೆ ಈ ಪ್ರದೇಶದ ರೈತರ ಬವಣೆ ಅರ್ಥವಾಗಲಿಲ್ಲ, ಇದೊಂದು ದುರಂತದ ಸಂಗತಿ. ಕೇರಳದಿಂದ ಬಂದ ಜನರಿಗೆ ಬೆಂಗಳೂರಿನಲ್ಲಿ ಮನೆ ಕಟ್ಟಿಸಿಕೊಡುವುದರಲ್ಲಿ ಆಸಕ್ತಿ ಇದೆಯೇ ಹೊರತು, ಮತ ನೀಡಿದವರ ಬಗ್ಗೆ ಆಸಕ್ತಿ ಇಲ್ಲ. ನೆರೆಯ ಆಂಧ್ರ ಮತ್ತು ತೆಲಂಗಾಣ ಸರ್ಕಾರ ಅಲ್ಲಿಯ ರೈತರಿಗೆ ಎಲ್ಲಾ ಸವಲತ್ತು ಕಲ್ಪಿಸಿಕೊಟ್ಟಿದೆ. ಅಲ್ಲಿಯ ರೈತರ ಮಕ್ಕಳು ನಮ್ಮಲ್ಲಿ ಮೆಡಿಕಲ್ ಸೀಟ್ ಖರೀದಿ ಮಾಡಲು ಬಂದರೆ ನಮ್ಮ ರೈತರು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಾ, ಮಕ್ಕಳನ್ನು ಬೀದಿಯಲ್ಲಿ ಆಟವಾಡಲು ಬಿಡುವ ಪರಿಸ್ಥಿತಿ ಬಂದಿದೆ. ತುಂಗಾಭದ್ರ ಅಚ್ಚುಕಟ್ಟು ಪ್ರದೇಶವು ವಿಜಯನಗರದ ಕೃಷ್ಣದೇವರಾಯರ ಕಾಲದಲ್ಲಿಯೇ ನೀರಾವರಿ ಕಂಡ ಪ್ರದೇಶವಾಗಿದೆ. ಆಂಧ್ರ ರೈತರಿಗೂ ನಮ್ಮ ರೈತನ ಪ್ರಗತಿಗೂ ಹೋಲಿಕೆ ಮಾಡಲು ಬರುವುದಿಲ್ಲ. ವಿಪರ್ಯಾಸವಾದರೂ ನಿಜ. ಅಲ್ಲಿನ ರಾಜಕಾರಣಿಗಳು ಒಂದು ಹನಿ ನೀರು ಇದ್ದರೂ ಅವರಿಗೆ ಸಿಗುವಂತೆ ನೋಡಿಕೊಳ್ಳುತ್ತಾರೆ. ರೈತರು ಮತ್ತೆ ನರಗುಂದ ಬಂಡಾಯ ನಡೆಸಬೇಕಾದ ಕಾಲ ಬರಬಹುದು. ಆದ್ದರಿಂದ ಸರ್ಕಾರವು ತಕ್ಷಣವೇ ಎಚ್ಚೆತ್ತುಕೊಂಡು,

ಅತೀ ಶೀಘ್ರದಲ್ಲಿ ಎಲ್ಲಾ 33 ಗೇಟುಗಳನ್ನು ಅಳವಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ಮಾನ್ಯ ಶರವಣನವರು ಹಿರಿಯ ಸದಸ್ಯರಾಗಿದ್ದು, ಬಹಳ ಬುದ್ಧಿವಂತರು ಎನ್ನುವುದು ನನ್ನ ಲೆಕ್ಕ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅದರಲ್ಲಿ ಏನೇನೂ ಬದಲಾವಣೆಗಳಲ್ಲ, ಹಾಗೆಯೇ ಇದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಚಿನ್ನವನ್ನು ಹೊರಗೆ ತೆಗೆದು, ಅದನ್ನು ಬೆಂಕಿಗೆ ಹಾಕಿ ಕರಗಿಸಿ, ಬೇಕಾದ ರೂಪದ ಆಕಾರಕ್ಕೆ ತರುತ್ತಾರೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರ ಲೆಕ್ಕವು ತಪ್ಪೇನಿಲ್ಲ, ಸರಿಯಾಗಿಯೇ ಆಲೋಚನೆ ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಉಪ ಮುಖ್ಯಮಂತ್ರಿಯವರೇ, ತಾವು ಏನೇ ಬೇಕಾದಷ್ಟು ಅವರ ಬಗ್ಗೆ ಮಾತನಾಡಿದರೂ, ಅವರೇನು ಚಿನ್ನ ಕೊಡುವುದಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ತುಂಗಾಭದ್ರ ಜಲಾಶಯಕ್ಕೆ ಹೊಸ ಕ್ರಸ್ಟ್ ಗೇಟ್ ಅಳವಡಿಸುವ ಕಾಮಗಾರಿ ಬಗ್ಗೆ 'ವಿಜಯ ಕರ್ನಾಟಕ' ದಿನ ಪತ್ರಿಕೆಯಲ್ಲಿ ವರದಿಯಾಗಿದ್ದು, it is a serious issue ಆಗಿರುವುದರಿಂದ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದರಲ್ಲಿ ತಪ್ಪೇನಿಲ್ಲ. ಅದೇ ವಿಚಾರವನ್ನು ತೆಗೆದುಕೊಂಡು 'ಕೇರಳದಿಂದ ಬಂದ ಜನರಿಗೆ ಬೆಂಗಳೂರಿನಲ್ಲಿ ಮನೆ ಕಟ್ಟಿಸಿಕೊಡುವುದರಲ್ಲಿ ಆಸಕ್ತಿ ಇದೆಯೇ ಹೊರತು ಮತ ನೀಡಿದವರ ಬಗ್ಗೆ ಆಸಕ್ತಿ ಇಲ್ಲ ಎಂದು ಪ್ರಸ್ತಾಪ ಮಾಡಿದ್ದಾರೆ. ಹಾಗೆಯೇ ಗೋವಾದಿಂದ ಕರೆದುಕೊಂಡು ಬರುತ್ತಾರೆ, ಜೊತೆಗೆ ರೈತರಿಗೆ ಗುಳೆ ಹೋಗುವುದು ಅನಿವಾರ್ಯ ಮತ್ತು ಮೆಡಿಕಲ್ ಸೀಟು ಖರೀದಿ ಮಾಡಲು ಬಂದರೆ ನಮ್ಮ ರೈತರು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಾ ಮಕ್ಕಳನ್ನು ಬೀದಿಯಲ್ಲಿ ಆಟವಾಡಲು ಬಿಡುವ ಪರಿಸ್ಥಿತಿ ಬಂದಿದೆ ಎಂದೆಲ್ಲಾ' ಉಲ್ಲೇಖ ಮಾಡಿದ್ದಾರೆ.

**ಸಭಾಪತಿಯವರು:–** ಇನ್ನೂ ಎರಡು ರಾಜ್ಯವನ್ನು ಉಲ್ಲೇಖ ಮಾಡುವುದನ್ನು ಬಿಟ್ಟಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ತುಂಗಾಭದ್ರ ಜಲಾಶಯ ವಿಚಾರವಾಗಿ topics ಗಳನ್ನು ಹಾಕಿ ಕಳುಹಿಸಿಕೊಡುತ್ತೇನೆ. ಬೇಕಾದರೆ ಅಲ್ಲಿಗೆ ಹೋಗಿ ನೋಡಿಕೊಂಡು ಬರಲಿ. ನಾನು ಏನು ಹೇಳಲು ಬಯಸುತ್ತೇನೆಂದರೆ, ಈಗಾಗಲೇ ಆಡಳಿತ ಪಕ್ಷದ ಸದಸ್ಯರಿಗೂ ಹಾಗೂ ವಿರೋಧ ಪಕ್ಷದ ಸದಸ್ಯರಿಗೂ ಅಲ್ಲಿ ಏನಾಗಿತ್ತು ಎಂಬುದು ಗೊತ್ತಿದೆ. ತುಂಗಾಭದ್ರ ಜಲಾಶಯಕ್ಕೆ ಹೋದರೆ ಗೇಟ್ ಗಡಗಡ ಎಂದು ಬಹಳ shake ಆಗುತ್ತಿತ್ತು. ಮಾನ್ಯ ಶಿವರಾಜ್ ಎಸ್.ತಂಗಡಿಯವರು ಸದನದಲ್ಲಿಲ್ಲ. ಆ ರೀತಿ ಗಡಗಡ ಎಂದು

shake ಆಗುವುದನ್ನು 7 ದಿವಸಗಳೊಳಗಾಗಿ ಗೇಟ್-19 ಅನ್ನು ಸರಿಪಡಿಸಿದ್ದೆವು. ಮಾನ್ಯ ಜನಾರ್ಧನ್ ರೆಡ್ಡಿರವರು ಏನೆಂದು ಹೇಳಿಕೆ ಕೊಟ್ಟಿದ್ದಾರೆ ಎಂಬುದು ನನ್ನ ಹತ್ತಿರ ಇದ್ದು, ಆ ಸಮಯದಲ್ಲಿ ನಾನು 'ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ' ಎಂದು ಒಂದೇ ಮಾತನ್ನು ಹೇಳಿದ್ದೆನು. ಶ್ರೀ ಕನ್ನಯ್ಯ್ಯ ನಾಯ್ಡುರವರನ್ನು ಕರೆದುಕೊಂಡು ಬಂದು 'ಆಯ್ತಪ್ಪಾ, ಏನೋ ಟೆಕ್ನಾಲಜಿ ಕಂಡು ಹಿಡಿದಿದ್ದೀಯಾ' ಎಂದು ಹೇಳಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ಸಹ ನೀಡಲಾಗಿತ್ತು. ಆದಾದ ಮೇಲೆ ಎಲ್ಲಾ ರಾಜ್ಯದ ಅಣೆಕಟ್ಟುಗಳನ್ನು ಪರಿಶೀಲನೆ ಮಾಡಿ, ಎಲ್ಲೆಲ್ಲಿ ಸುಮಾರು 50 ವರ್ಷಗಳಿಂದ ಗೇಟ್ ಅಳವಡಿಸಲಾಗಿದೆ, ಎಲ್ಲವನ್ನೂ ತೆರವುಗೊಳಸಬೇಕೆಂದು ತೀರ್ಮಾನ ಕೈಗೊಂಡಿದ್ದೆವು. ಅದರನ್ವಯ ತುಂಗಾಭದ್ರ ಅಣೆಕಟ್ಟಿನ ಬಗ್ಗೆ ಮೊದಲ ತೀರ್ಮಾನ ಕೈಗೊಳ್ಳಲಾಗಿತ್ತು. ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ 'ಜಲಾಶಯದ ಒಟ್ಟು 33 ಕ್ರಸ್ಟ್ ಗೇಟ್ ಪೈಕಿ ಮಾರ್ಚ್ 10ನೇ ತಾರೀಖಿನವರೆಗೂ 14 ಗೇಟುಗಳನ್ನು ಪೂರ್ಣಗೊಳಸಲಾಗಿದೆ. ತಜ್ಞರ ಪ್ರಕಾರ ಒಂದು ಕ್ರಸ್ಟ್ ಗೇಟ್ ಅಳವಡಿಸಲು 7 ದಿನಗಳು ಬೇಕು, ಆದರೆ, ಏಕಕಾಲದಲ್ಲಿ ಹಲವು ಕ್ರಸ್ಟ್ ಗೇಟ್‌ಗಳಲ್ಲಿ ಕೆಲಸ ನಡೆದರೆ ಮಾತ್ರ ಗುರಿ ತಲುಪಲು ಸಾಧ್ಯ. 'ಬಾಕಿ 19 ಕ್ರಸ್ಟ್ ಗೇಟ್ ಅಳವಡಿಸಲು ಒಟ್ಟು 133 ಮಾನವ ದಿನ ಬೇಕೆಂದು' ವರದಿ ಕೊಟ್ಟಿದ್ದಾರೆ. ಈಗಾಗಲೇ ತುಂಗಾಭದ್ರ ವಿಚಾರವಾಗಿ ಎಲ್ಲಾ ಗೇಟ್‌ಗಳನ್ನು ಬದಲಾವಣೆ ಮಾಡಬೇಕೆಂದು ನಾವು ತೀರ್ಮಾನವನ್ನು ಕೈಗೊಂಡಿದ್ದೇವೆ. Stop log ಗೇಟ್, ಹೊಸ spill over ಗೇಟ್ ಅಳವಡಿಸಲು ತೀರ್ಮಾನ ಮಾಡಿದ್ದೇವೆ. **Hardware Tools and Machinery Projects Private Limited,** ಅಹಮದಾಬಾದ್ ಇವರಿಗೆ ಕೆಲಸವನ್ನು ವಹಿಸಲಾಗಿದ್ದು, ದಿನಾಂಕ: 23.04.2025 ರಲ್ಲಿಯೇ ಎರಡು ತಿಂಗಳಿಗೆ ಒಂದು ಗೇಟ್ ಅಳವಡಿಸಬೇಕೆಂದು ಒಪ್ಪಂದ ಮಾಡಿಕೊಟ್ಟಿದ್ದೇವೆ.

(ಮುಂದು)

**(342) 12.03.2026/1.00/ ಎಸ್‌ಕೆ.ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಡಿ.ಕೆ. ಶಿವಕುಮಾರ್ (ಮುಂದು):-**

ಮತ್ತೆ ಕೂಡ ಟಿ.ಬಿ. ಡ್ಯಾಂನಲ್ಲಿ ಕೂಡ 32 ಗೇಟ್‌ಗಳಿಗೆ ಕೂಡ ಕಾಮಗಾರಿಯನ್ನು ಅವರಿಗೆ ಕೊಟ್ಟಿದ್ದು, 34 ಕೋಟಿ ರೂಪಾಯಿಗಳಿಗೆ ಅಗ್ರಿಮೆಂಟ್‌ನ್ನು ದಿನಾಂಕ 10.06.2025 ರಂದು ಮಾಡಿದ್ದು, ಹದಿನೈದು ದಿನಗಳ ಕಾಲ ಸಮಯವನ್ನು ಕೊಟ್ಟಿದ್ದೇವೆ. ಈಗ 33 ಗೇಟ್‌ಗಳಿಗೆ ಈಗಾಗಲೇ material ಬಂದಿದೆ, fabrication ಕೂಡ ಆಗುತ್ತಿದೆ. ಈಗಾಗಲೇ 25 ಗೇಟ್‌ಗಳಿಗೆ fabrication ಪೂರ್ಣಗೊಂಡಿದೆ. ಇನ್ನೂ ಎರಡು ಗೇಟ್‌ಗಳು ಉಳಿದುಕೊಂಡಿದೆ. ಒಂದು ಗೇಟ್ ಹೊಸಪೇಟೆ ಮತ್ತು ಇನ್ನೊಂದು ಗೇಟ್ ಗದಗ್‌ದಲ್ಲಿ ಉಳಿದುಕೊಂಡಿದೆ. ಅದು ಅಲ್ಲಿ ನಡೆಯುತ್ತಿದೆ. ಈಗ 26 ಗೇಟ್‌ಗಳನ್ನು dismantle ಮಾಡಿಬಿಟ್ಟಿದ್ದೇವೆ. ಈಗ ಕೆಲಸ progress ಕೂಡ ಆಗುತ್ತಿದೆ. Erection status 18, 19 ಗೇಟ್‌ಗಳು trial run ಕೂಡ ಈಗ successful ಆಗಿದೆ. ಇನ್ನು 14

ಗೇಟ್‌ಗಳು erection complete ಆಗಬೇಕಾಗಿದೆ. ಒಂದು, ಎರಡು, ಮೂರು, ನಾಲ್ಕು, ಹನ್ನೊಂದು, ಹದಿನೇಳು, ಇಪ್ಪತ್ತು, ಇಪ್ಪತ್ತಾಲ್ಕು, ಇಪ್ಪತ್ತೈದು, ಇಪ್ಪತ್ತಾರು, ಇಪ್ಪತ್ತೇಳು, ಇಪ್ಪತ್ತೆಂಟು, ಮೂವತ್ತೆರಡು ಮೂವತ್ಮೂರು ಗೇಟ್‌ಗಳು progress ನಲ್ಲಿದ್ದು, ಇನ್ನೂ ಮೂರು ಗೇಟ್‌ಗಳಾದ ಐದು, ಮೂವತ್ತು, ಮೂವತ್ತೊಂದು ಗೇಟ್‌ಗಳು ಆಗಬೇಕಾಗಿದೆ. ಎಲ್ಲಾ ಗೇಟ್‌ಗಳು ಮೇ ತಿಂಗಳೊಳಗೆ ಪೂರ್ಣಗೊಳಸುವುದಕ್ಕೆ ನಾವು ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆ. ತುಂಗಾಭದ್ರಾ ನದಿಯ ಬಗ್ಗೆ ನಮಗೂ ಕೂಡ ಗೊತ್ತಿದೆ. ನೀರು ಸ್ವಲ್ಪ ಅಲ್ಲಿ ಉಳಸಬೇಕಾಗಿತ್ತು. ನಮಗೆ ತೆಲಂಗಾಣ ಸರ್ಕಾರದವರು ಸ್ವಲ್ಪ ತಕರಾರು ಮಾಡಿದರು. ನಾವು ಏನೊಂದು balancing reservoir ಮಾಡಬೇಕೆಂಬುದರ ಬಗ್ಗೆ ಆಂದ್ರಪ್ರದೇಶದ ಸರ್ಕಾರದ ಹತ್ತಿರ ಮುಂದುವರೆದು ಮಾತನಾಡುವುದಕ್ಕೆ ಅವರು ನಮಗೆ ಸಹಕಾರ ಕೊಡುತ್ತಿಲ್ಲ. ಇನ್ನೊಂದು formula ಕೆಲವರೆಲ್ಲಾ ಕೊಟ್ಟರು. ಅದರ ಬಗ್ಗೆ ಮೂರು-ನಾಲ್ಕು ಬಾರಿ ಮಾನ್ಯ ಮುಖ್ಯಮಂತ್ರಿಗಳಗೆ ಮನವಿ ಮಾಡಿದೆ. ನಮಗೆ ಸಮಯ ಕೊಡುತ್ತಿಲ್ಲ. ಇದೊಂದು ನಮ್ಮ ರಾಜ್ಯದ ಆಸ್ತಿ. But, Karnataka alone can't take any decision. ಈ ಮೂರು ರಾಜ್ಯಗಳು ಸೇರಿ ಈ ಒಂದು ವಿಚಾರವನ್ನು ತೆಗೆದುಕೊಳ್ಳಬೇಕಾಗಿದೆ. ನೀರು ಜಾಸ್ತಿ ಬಂದಾಗ, ಸಮುದ್ರಕ್ಕೆ ಹೋಗುತ್ತಿರುವುದು ಸತ್ಯವಿದೆ. ಮುಂದಿನ ದಿನಗಳಲ್ಲಿ ನೀರನ್ನು ಉಳಸುವುದಕ್ಕೆ ರಾಜಕೀಯ ಬದ್ಧತೆ ಇದೆ. ಇದಕ್ಕೆ ತಾವೆಲ್ಲರೂ ಇದಕ್ಕೆ ಶಕ್ತಿ ಕೊಟ್ಟರೆ, ಇದಕ್ಕೆ ಏನಾದರೂ ವ್ಯವಸ್ಥೆ ಮಾಡೋಣ. ಈ ಗೇಟ್‌ಗಳ ವಿಚಾರದ ಬಗ್ಗೆ ಏನೆಲ್ಲಾ ಹೇಳದ್ದೀರಿ. ಖಂಡಿತವಾಗಿಯೂ ಇದಕ್ಕೆ we are at the priority. ಇಡೀ ರಾಜ್ಯಕ್ಕೆ the first dam to be completed and in the entire State ನಲ್ಲಿ ಎಲ್ಲೆಲ್ಲಿ ಗೇಟ್‌ಗಳಗೆ ಐವತ್ತು ವರ್ಷಗಳಾಗಿವೆ. ಎಲ್ಲಾ ಕಡೆಗಳಲ್ಲಿ ಗೇಟ್‌ಗಳನ್ನು ಬದಲಾಯಿಸುವುದಕ್ಕೆ ನಮ್ಮ ಸರ್ಕಾರ ನಿರ್ಧಾರವನ್ನು ತೆಗೆದುಕೊಂಡಿದೆ.

**ಐ) ವಿಷಯ:- ಡಿ.ಡಿ.ಪಿ.ಐ ಲಾಗಿನ್ ಕದ್ದು ಮಾನ್ಯತೆ ನವೀಕರಣ! ಸರ್ಕಾರಿ ಆನ್‌ಲೈನ್ ವ್ಯವಸ್ಥೆಗಿಲ್ಲ ಭದ್ರತೆ, ಸಮಗ್ರ ತನಿಖೆಗಾಗಿ ಪೊಲೀಸರ ಮೊರೆ! ಮತ್ತು ಮಾನ್ಯತೆ ನವೀಕರಣ ಹಗರಣದ ಕುರಿತು.**

- - - - -

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ವಿಜಯವಾಣಿ ಪತ್ರಿಕೆಯಲ್ಲಿ "ಡಿ.ಡಿ.ಪಿ.ಐ., ಲಾಗಿನ್ ಕದ್ದು ಮಾನ್ಯತೆ ನವೀಕರಣ!" ಸರ್ಕಾರ್ ಆನ್‌ಲೈನ್ ವ್ಯವಸ್ಥೆಗಿಲ್ಲ ಭದ್ರತೆ! ಸಮಗ್ರ ತನಿಖೆಗಾಗಿ ಪೊಲೀಸರ ಮೊರೆ! ಮಾನ್ಯತೆ ನವೀಕರಣ ಹಗರಣ? ಎಂಬ ತಲೆ ಬರಹದಡಿಯಲ್ಲಿ ಪ್ರಕಟಗೊಂಡ ಸರಣಿ ವರದಿಯನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರುತ್ತೇನೆ.

ವಿಜಯಪುರ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸರ್ಕಾರದ ತಂತ್ರಾಂಶ ದುರ್ಬಳಕೆಯಾಗಿರುವ ಗಂಭೀರ ಪ್ರಕರಣ ಬೆಳಕಿಗೆ ಬಂದಿದೆ. ಇಲಾಖೆ ಉಪ ನಿರ್ದೇಶಕರ ತಂತ್ರಾಂಶವನ್ನೇ ದುರ್ಬಳಕೆ ಮಾಡಿಕೊಂಡು ಶಾಲೆಗಳ ಮಾನ್ಯತೆ ನವೀಕರಣಗೊಳಿಸಲಾಗಿದೆ! ಡಿ.ಡಿ.ಪಿ.ಐ.ಗೆ ಗೊತ್ತಿಲ್ಲದಂತೆ ಅವರ ಲಾಗಿನ್ ವಿವರ, ಪಾಸ್‌ವರ್ಡ್ ದುರುಪಯೋಗ ಪಡಿಸಿಕೊಂಡು, ಸರ್ಕಾರದ ಡಿಜಿಟಲ್ ವ್ಯವಸ್ಥೆಗೆ ಅನಧಿಕೃತವಾಗಿ ಪ್ರವೇಶಿಸಿ ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮಾನ್ಯತೆ ನವೀಕರಣ, ಪ್ರಥಮ ಮಾನ್ಯತೆ ಕುರಿತಂತೆ ಆನ್‌ಲೈನ್ ತಂತ್ರಾಂಶದಲ್ಲಿ ಒಪ್ಪಿಗೆ ನೀಡುವ ಹಾಗೂ ಮಂಜೂರು ಮಾಡುವ ಕಾರ್ಯ ಮಾಡಲಾಗಿದೆ. ಆದರೆ ಡಿ.ಡಿ.ಪಿ.ಐ., ತಾವು ಅನುಮೋದನೆ ನೀಡಿಯೇ ಇಲ್ಲ, ಅಸಲಿಗೆ ತಮ್ಮ ಗಮನಕ್ಕೆ ಬಂದೇ ಇಲ್ಲವೆಂದು ತಿಳಿಸಿದ್ದಾರೆ.

ಗಂಭೀರವಾದ ಅಧಿಕಾರ ದುರುಪಯೋಗ ಈ ಕೃತ್ಯಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ, ನಂಬಿಕೆ ದ್ರೋಹ ಮಾಡಿದವರನ್ನು, ಆಡಳಿತಾತ್ಮಕವಾಗಿ ಕ್ರಮ ಜರುಗಿಸಬೇಕೆಂದು ಪತ್ತೆ ಹಚ್ಚುವಂತೆ ಫೆಬ್ರವರಿ 25 ರಂದೇ ಪೊಲೀಸರಿಗೆ ದೂರು ನೀಡಿದ್ದಾರೆ. ಮುಂದುವರೆದು, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ತಂತ್ರಾಂಶವನ್ನೇ ದುರ್ಬಳಕೆ ಮಾಡಿಕೊಂಡು ಮಾನ್ಯತೆ ನವೀಕರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕರೊಬ್ಬರು ಪತ್ರ ಬರೆದಿರುವುದು ತೀವ್ರ ಕುತೂಹಲ ಕೆರಳಿಸಿದ್ದಲ್ಲದೆ ಶಾಲೆಯ ಮಾನ್ಯತೆ ನವೀಕರಣದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿರುವ ಗುಮಾನಿ ಕಾಡುತ್ತಿದೆ. ಆದ್ದರಿಂದ ಶಿಕ್ಷಣ ಸಚಿವರು ತಕ್ಷಣವೇ ಸ್ಪಷ್ಟನೆ ನೀಡಬೇಕು ಎಂದು ನಾನು ತಮ್ಮ ಮೂಲಕ ಶೂನ್ಯ ವೇಳೆಯಲ್ಲಿ ಅಗ್ರಹಿಸುತ್ತೇನೆ.

**ಶ್ರೀ ಮಧು ಬಂಗಾರಪ್ಪ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ ಒದಗಿಸಲಾಗುವುದು.

ಒ) ವಿಷಯ:- "ವಿದ್ಯುತ್ ಸಂಪರ್ಕ ಪಡೆಯಲು ಒಸಿ ವಿನಾಯಿತಿಗಾಗಿ ಪ್ರತಿಭಟನೆ " ಮಾಡುತ್ತಿರುವ ಕುರಿತು.

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

"ಉದಯವಾಣಿ" ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ "ವಿದ್ಯುತ್ ಸಂಪರ್ಕ ಪಡೆಯಲು ಒಸಿ. ವಿನಾಯಿತಿಗಾಗಿ ಪ್ರತಿಭಟನೆ" ಎಂಬ ಶೀರ್ಷಿಕೆಯಡಿ ಪ್ರಕಟವಾದ ವಿಷಯದ ಬಗ್ಗೆ ಪ್ರಸ್ತಾಪಿಸಲು ಅವಕಾಶ ನೀಡುವಂತೆ ಕೋರುತ್ತೇನೆ.

ರಾಜ್ಯದ ಗ್ರಾಮೀಣ ಭಾಗದಲ್ಲಿ ಲಕ್ಷಾಂತರ ಮಂದಿ ಭೂ ಪರಿವರ್ತಿತ ಮತ್ತು ಭೂ ಪರಿವರ್ತನೆಯಾಗದ ಜಮೀನಿನಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಸರ್ಕಾರದ ವಸತಿ ಯೋಜನೆಯಡಿ ಮತ್ತು 94 ಸಿ ಹಕ್ಕಪತ್ರದ ನಿವೇಶನಗಳಲ್ಲಿ ಮನೆ ಮತ್ತು ಇತರ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ ಸ್ವಾಧೀನ ಪ್ರಮಾಣ ಪತ್ರ (ಒ.ಸಿ) ಕಾರಣದಿಂದಾಗಿ ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗುತ್ತಿಲ್ಲ. ಅಸ್ತಿತ್ವದಲ್ಲಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸುವವರಿಗೆ ನಿಯಮಗಳನ್ನು ಸಡಿಲಿಸಿ ಒಂದು ಬಾರಿಗೆ ವಿನಾಯಿತಿ ನೀಡುವ ನಿಟ್ಟಿನಲ್ಲಿ ಸಂಪುಟ ಸಭೆಯಲ್ಲಿ ನಿರ್ಣಯಿಸಿ ಜಾರಿಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ನೇತೃತ್ವದಲ್ಲಿ ವಿದ್ಯುತ್ ಗುತ್ತಿಗೆದಾರರು ಪ್ರತಿಭಟನೆ ನಡೆಸಿದರು.

ಈ ಹಿನ್ನೆಲೆಯಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ, ವಸತಿ ಯೋಜನೆಯಡಿ ನಿರ್ಮಿಸಿರುವ ಮನೆಗಳಿಗೆ ಮತ್ತು 94 ಸಿ ಹಕ್ಕುಪತ್ರದ ನಿವೇಶನಗಳಲ್ಲಿ ನಿರ್ಮಿಸಿರುವ ಮನೆಗಳಿಗೆ ಮತ್ತು ಇತರ ಕಟ್ಟಡಗಳಿಗೆ ಸೂಕ್ತ ವಿನಾಯಿತಿ ನೀಡುವ ಮೂಲಕ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸರ್ಕಾರ ಕ್ರಮ ವಹಿಸುವಂತೆ ಅಗ್ರಹಿಸಲಾಗಿದೆ.

ಆದ್ದರಿಂದ ಈ ಎಲ್ಲಾ ವಿಷಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸ್ವಾಧೀನ ಪ್ರಮಾಣ ಪತ್ರ ವಿನಾಯಿತಿಗೆ ಬಂದಿರುವ ಬೇಡಿಕೆಯನ್ನು ಪರಿಗಣಿಸಿ ಸಾರ್ವಜನಿಕರ ಸಮಸ್ಯೆಗಳನ್ನು ಕೂಡಲೇ ಪರಿಹರಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೊರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು

**ಸಭಾಪತಿಯವರು:-** ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಲಾಗುವುದು.

**4. ಗಮನ ಸೆಳೆಯುವ ಸೂಚನೆಗಳು ಹಾಗೂ ನಿಯಮ 330ರ ಮೇರೆಗೆ ಪ್ರಸ್ತಾಪಿಸಬೇಕಾಗಿರುವ ಬಹಳಷ್ಟು ವಿಷಯಗಳಿಗೆ ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರಗಳು ಬಾರದಿರುವ ಕುರಿತು.**

- - - - -

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ 2006ರ ಪೂರ್ವದಲ್ಲಿ ನೇಮಕಗೊಂಡು ನಂತರ ಅನುದಾನಕ್ಕೆ ಒಳಪಟ್ಟಿರುವ ಹಾಗೂ 2006ರ ನಂತರ ನೇಮಕಗೊಂಡ ಸಿಬ್ಬಂದಿಗೆ ಪಿಂಚಣಿ ಸೌಲಭ್ಯ ಸಿಗದೇ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ಉತ್ತರ ನೀಡುತ್ತೀರಾ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಉತ್ತರ ಕೊಟ್ಟಿಲ್ಲ.

**ಸಭಾಪತಿಯವರು:-** ಇನ್ನೂ ಉತ್ತರ ಬಂದಿಲ್ಲ. ಗಮನ ಸೆಳೆಯುವ ಸೂಚನೆ ಮತ್ತು ನಿಯಮ 330ಕ್ಕೆ ಯಾವುದೂ ಕೂಡ ಉತ್ತರ ಬಂದಿಲ್ಲ. ಅದನ್ನು ನಾಳೆ ಮುಂದೂಡಲಾಗುವುದು.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಕುರಿತಾಗಿ ನಿನ್ನೆಯ ಅಜೆಂಡಾದಲ್ಲಿ ಇತ್ತು. ತಮಗೆ ಗೊತ್ತಿರುವಂತೆ ಇದು ತುಂಬಾ ಮಹತ್ವವುಳ್ಳ ವಿಷಯವಾಗಿದೆ. ಕಳೆದ ಇಪ್ಪತ್ತು ವರ್ಷಗಳಿಂದ ಈ ಸಮಸ್ಯೆ ಹಾಗೆಯೇ ಇದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸರ್ಕಾರದಿಂದ ಉತ್ತರ ಬಂದಿಲ್ಲವೆಂದರೆ, ನಾನು ಏನೂ ಮಾಡಲಿ ಹೇಳಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಕುರಿತಾಗಿ, ನನಗೆ ಯಾವಾಗ ಉತ್ತರ ಕೊಡಿಸುತ್ತೀರಾ ಎಂಬ ಬಗ್ಗೆ ಕೇಳಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ಯಾವಾಗ ಕೊಡುತ್ತೀರಾ.

**ಶ್ರೀ ಮಧು ಬಂಗಾರಪ್ಪ:-** ಮಾನ್ಯ ಸಭಾಪತಿಯವರೇ, ನಾಳೆ ವಿಷಯವನ್ನು ತೆಗೆದುಕೊಳ್ಳಿ. ನಾಳೆ ಉತ್ತರವನ್ನು ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ನಾಳೆ ಗ್ಯಾರಂಟಿ ಉತ್ತರ ಕೊಡುತ್ತೀರಾ.

**ಶ್ರೀ ಮಧು ಬಂಗಾರಪ್ಪ (ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು):-** ಮಾನ್ಯ ಸಭಾಪತಿಯವರೇ, ನಾಳೆ ಗ್ಯಾರಂಟಿಯಾಗಿ ಉತ್ತರ ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಕೇಳಿರುವ ಎಲ್ಲಾ ವಿಷಯಗಳಿಗೆ ನಾಳೆ ಉತ್ತರ ಕೊಡಬೇಕು. ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಗೋವಿಂದ ರಾಜು, ಶ್ರೀ ಬಸನಗೌಡ ಬಾದರ್ಲಿ, ಶ್ರೀ ಎಂ. ನಾಗರಾಜು ಆನಂತರ

ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿ, ಶ್ರೀಮತಿ ಹೇಮಲತಾ ನಾಯಕ, ಶ್ರೀ ರಮೇಶ್ ಬಾಬು, ಶ್ರೀ ಐವನ್ ಡಿ'ಸೋಜಾ, ಶ್ರೀ ಹಣಮಂತ್ ರುದ್ರಪ್ಪ ನಿರಾಣಿ, ಶ್ರೀ ಎಂ.ಎಲ್. ಅನಿಲ್ ಕುಮಾರ್ ಹಾಗೂ ಶ್ರೀಮತಿ ಭಾರತಿ ಶೆಟ್ಟಿ ಇವರೆಲ್ಲರದ್ದು ನಾಳೆ ಉತ್ತರವನ್ನು ಕೊಡಿಸಬೇಕು.

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಉತ್ತರ ಇಲ್ಲವೆಂದರೆ ಏನು ಮಾಡಬೇಕು?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಾನು ಹೇಳಿದ್ದೇನೆ. ಶ್ರೀಮತಿ ಹೇಮಲತಾ ನಾಯಕರವರೇ, ಸೋಮವಾರ ಉತ್ತರ ಕೊಡುತ್ತಾರೆಂದು ಹೇಳಿದ್ದಾರೆ. ಅದಕ್ಕೆ ಸೋಮವಾರ ಉತ್ತರ ಕೊಡಿಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ಕರೆಸಿದರೆ, ನಾವು ಮಾತನಾಡುತ್ತೇವೆ. ಈಗಾಗಲೇ ನಾಲ್ಕು ದಿನ ಕಳೆದು ಹೋಯಿತು.

**ಸಭಾಪತಿಯವರು:-** ಮಾನ್ಯ ಹೇಮಲತಾ ನಾಯಕರವರೇ, ತಮಗೆ ಸೋಮವಾರ ಉತ್ತರ ಕೊಡಿಸುತ್ತೇನೆ. ಈಗ ಸಚಿವರು ಇಲ್ಲ. ಸೋಮವಾರ ಬರುತ್ತಾರೆ.

**ಶ್ರೀಮತಿ ಹೇಮಲತಾ ನಾಯಕ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸದನಕ್ಕೆ ಬಂದು ಹೋದರು.

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಷ್ಟೊಂದು ಉತ್ತರಗಳನ್ನು ಸರ್ಕಾರದಿಂದ ಕೊಡುವುದು ತಡ ಮಾಡಿದರೆ, ನಾವು ಪ್ರಶ್ನೆ ಕೇಳುವುದರಲ್ಲಿ ಏನಾದರೂ ಅರ್ಥವಿದೆಯಾ. ನೋಟಿಸ್ ಕೊಡುವುದು ಯಾವಾಗ?

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿ):-** ಮಾನ್ಯ ಛಲವಾದಿ ಟಿ. ನಾರಾಯಣಸ್ವಾಮಿಯವರೇ, ಇದು ಶೂನ್ಯ ವೇಳೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಇದು ಶೂನ್ಯ ವೇಳೆಯಲ್ಲ.

**ಶ್ರೀಮತಿ ಹೇಮಲತಾ ನಾಯಕ:-** ಶೂನ್ಯವೇಳೆ ಮುಗಿದಿದೆ.

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:-** ಇದು ಶೂನ್ಯ ವೇಳೆಯಲ್ಲ.

**ಸಭಾಪತಿಯವರು:-** ಇದು ಗಮನ ಸೆಳೆಯುವ ಸೂಚನೆ.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ನಿಯಮ 72

**ಶ್ರೀ ಛಲವಾದಿ ಟಿ. ನಾರಾಯಣ ಸ್ವಾಮಿ:-** ಇವೆಲ್ಲವನ್ನು ಮೊದಲೇ ಕೊಟ್ಟಿರುವಂತಹದ್ದು.

**ಶ್ರೀ ಎಸ್.ವ್ಹಿ. ಸಂಕನೂರ:-** ನಾವು ಹದಿನೈದು ದಿವಸಗಳ ಹಿಂದೆಯೇ ಕೊಟ್ಟಿದ್ದೇವೆ. ಇದು ಬಹಳ ಮಹತ್ವವುಳ್ಳ ವಿಷಯವಾಗಿದೆ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಲಿಖಿತ ಮೂಲಕ ಕೇಳಿರುವ ಐದು ಪ್ರಶ್ನೆಗಳಿಗೆ ನನಗೆ ಉತ್ತರ ಬಂದಿಲ್ಲ.

**ಸಭಾಪತಿಯವರು:-** ನಮಗೆ ಇನ್ನೂ ಉತ್ತರ ಬಂದಿಲ್ಲ. ತಾವು ಸರಿಯಾಗಿ ನೋಡಿರಿ.

**ಶ್ರೀ ಎನ್.ಎಸ್. ಬೋಸರಾಜು (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 330ಗೆ ಉತ್ತರ ಬಂದಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈಗ ಉತ್ತರ ಬಂದಿದೆ. ನಮಗೆ ಗೊತ್ತಿರಲಿಲ್ಲ. ಅದನ್ನು ಅವರಿಗೆ ಕೊಡಿ. ಅವರು ಹೇಳಲಿ. ಮಾನ್ಯ ಸಚಿವರೇ, ಈಗ ಉತ್ತರ ಕೊಟ್ಟಿದ್ದಾರೆ. ಇದು ನಮ್ಮ ಅಜೆಂಡಾದಲ್ಲಿ ಬಂದಿಲ್ಲ. ಅದನ್ನು ಮಧ್ಯಾಹ್ನ ತೆಗೆದುಕೊಳ್ಳೋಣ. ಈಗ ಉತ್ತರ ಯಾರದು ಇದೆ ಹೇಳಿ.

**ಶ್ರೀ ಕೆ.ಹೆಚ್. ಮುನಿಯಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ನಿನ್ನೆ ಸುದೀರ್ಘವಾಗಿ ಚರ್ಚೆ ನಡೆದಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ. ಮಾನ್ಯ ಸಚಿವರೇ, ತಾವು ಕುಳಿತುಕೊಳ್ಳಿ. ಮಾನ್ಯ ರಮೇಶ್ ಬಾಬುರವರು ಸದನದಲ್ಲಿ ಇಲ್ಲ. ಇದನ್ನು ನಂತರ ತೆಗೆದುಕೊಳ್ಳೋಣ. ತಾವು ಕುಳಿತುಕೊಳ್ಳಿ.

**(ಮುಂದು)**

(343) 12.03.2026 1.10 **ಟಿಸಿಹೆಚ್-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಡಾ: ತಳವಾರ್ ಸಾಬಣ್ಣನವರೇ, ತಾವು ಬಜೆಟ್ ಮೇಲೆ ಮಾತನಾಡುತ್ತೀರಾ?

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾತನಾಡುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 330 ರಡಿ ಕೇಳಿರುವ ಸೂಚನೆಗಳಿಗೆ ಉತ್ತರ ಕೇಳಬಹುದೇ?

**ಸಭಾಪತಿಯವರು:-** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ನಿಯಮ 330 ಹಾಗೂ ಗಮನ ಸೂಚನೆ ಯಾವುದಕ್ಕೂ ಉತ್ತರ ಬಂದಿಲ್ಲ. ಹಾಗಾಗಿ, ನೀವು ಕೇಳುತ್ತಿರಿ ಎಂದು ನಾನು ಎಲ್ಲಾ ಸಚಿವರ ಹೆಸರನ್ನೂ ಹೇಳಿದ್ದೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು 15 ದಿವಸಕ್ಕೆ ಮುಂಚೆಯೇ ಕೇಳಿದ್ದೇವೆ. ಮಾನ್ಯ ಸಚಿವರಿಂದ ಅದಕ್ಕೆ ಉತ್ತರ ಬಂದಿಲ್ಲವೆಂದು ಹೇಳುತ್ತಿದ್ದೀರಿ. ಹಾಗಾದರೆ, ನಾವು ಇನ್ನೂ ಎಷ್ಟು ದಿನ wait ಮಾಡಬೇಕು? ಅದಕ್ಕೆ ಏನಾದರೂ ಒಂದು date fix ಮಾಡಬೇಕಲ್ಲವೇ? ಇದು ಒಬ್ಬರು ಅಥವಾ ಇಬ್ಬರ ಪ್ರಶ್ನೆ ಅಲ್ಲ. ಹಲವಾರು ಮಾನ್ಯ ಸದಸ್ಯರುಗಳು ಸರ್ಕಾರದ ಉತ್ತರವನ್ನು ಕಾಯುತ್ತಿದ್ದೇವೆ.

**ಶ್ರೀ ಎಸ್.ವ್ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇವೆಲ್ಲಾ ಬಹಳ ಗಂಭೀರವಾದ ವಿಷಯವಾಗಿದೆ. ಸರ್ಕಾರ ಈ ರೀತಿ ಮಾಡಿದರೆ ಹೇಗೆ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ತಕ್ಷಣಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಿಯಮ 330 ಹಾಗೂ ಗಮನ ಸೆಳೆಯುವ ಸೂಚನೆಗಳಿಗೆ ಸುಮಾರು ನಾವು 15 ದಿವಸಕ್ಕೆ ಮುಂಚೆಯೇ ಕೇಳಿರುತ್ತೇವೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾವು ಅದನ್ನು ಮಂಡಿಸಿದ ನಂತರ ಉತ್ತರ ಕೊಡಲಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಇಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಕೂಡ ಇದ್ದಾರೆ. ನಿಯಮ 72 ರಡಿಯಲ್ಲಿ ಹಾಗೂ ನಿಯಮ 330 ರ ಅಡಿಯಲ್ಲಿ ಕೇಳಿರುವುದಕ್ಕೆ ಸರ್ಕಾರದಿಂದ ಒಂದು ಸೂಚನೆಗೂ ಉತ್ತರ ಕೊಟ್ಟಿಲ್ಲ. ನಾವು ಸುಮಾರು 15 ದಿನಕ್ಕೆ ಮುಂಚೆಯೇ ನೋಟೀಸ್ ಕೊಟ್ಟಿರುತ್ತೇವೆ. ಆದರೆ ಒಂದೂ ನೋಟಿಸ್‌ಗೂ ಉತ್ತರ ಬಂದಿಲ್ಲವೆಂದರೆ ಹೇಗೆ?

**ಶ್ರೀ ಶಿವಾನಂದ ಪಾಟೀಲ್ (ಜವಳಿ, ಕಬ್ಬು ಅಭಿವೃದ್ಧಿಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಮಂಡಿಸಲಿ. ನಾವು ಉತ್ತರ ಕೊಟ್ಟಿದ್ದೇವೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ರೀತಿ ಆದಲ್ಲಿ ನಾವು ಜನರಿಗೆ ಏನು ಉತ್ತರ ಕೊಡುವುದು?

**ಸಭಾಪತಿಯವರು:-** ನಾನು ಹೇಳುವವರೆಗೆ ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಸಭಾನಾಯಕರೇ, ನಾವು ಅಜೆಂಡಾದಲ್ಲಿ ಹಾಕಿದಂತೆ ಮೊದಲೇ ಉತ್ತರ ಬರಬೇಕು. ನಮಗೆ ಉತ್ತರ ಬಂದರೆ ನಾವು ಹೇಳುತ್ತೇವೆ. ಈಗ ನೀವು ಉತ್ತರ ಕೊಟ್ಟರೆ ಹೇಗೆ ಹೇಳುವುದಕ್ಕಾಗುತ್ತದೆ ಹೇಳಿ ನೋಡೋಣ. ನಾನು ಎಲ್ಲರ ಹೆಸರನ್ನೂ ಓದಿ ಹೇಳಿದ್ದೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕೆಲವು ಉತ್ತರ ಬಂದಿದೆ ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನೀವು ಈಗ ಉತ್ತರ ತಂದು ಕೊಟ್ಟರೆ ನಾನು ಒಪ್ಪುವುದಿಲ್ಲ. ಈಗ Calling Attention Notices and Rule 330 ಗೆ ಉತ್ತರ ಬಂದಿಲ್ಲ. ಅವರು 15 ದಿನಕ್ಕೆ ಮೊದಲೇ ಕೇಳಿದ್ದಾರೆ. ನೀವು ಅವರಿಗೆ ಉತ್ತರ ಕೊಡಿಸಬೇಕಲ್ಲವೇ?

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರ ಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಏನು ಹೇಳುತ್ತೇನೆ ಎನ್ನುವುದನ್ನು ನೀವು ತಿಳಿದುಕೊಳ್ಳಿ. ನಮಗೆ ಉತ್ತರವನ್ನು ಮೊದಲೇ ಕೊಟ್ಟರೆ ನಾವು ಹೇಳುವುದಕ್ಕಾಗುತ್ತದೆ. ನೀವು ಉತ್ತರ ಏಕೆ ತರಿಸಿಕೊಡುವುದಿಲ್ಲ? ನೀವು ಅಧಿಕಾರಿಗಳಿಗೆ ಉತ್ತರ ಕೊಡುವುದಕ್ಕೆ ಹೇಳಿ. ನಾನು ಈ ಸದನದಲ್ಲಿ ಎಷ್ಟು ಬಾರಿ ಹೇಳುವುದು. ಮಧ್ಯಾಹ್ನ ಎಲ್ಲದಕ್ಕೂ ಉತ್ತರ ಕೊಡಿಸುತ್ತೀರಾ?

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಅವರು ನಾಳೆ ತೆಗೆದುಕೊಳ್ಳುತ್ತೇವೆಂದು ಹೇಳಿದರಂತೆ. ನನ್ನ ಹತ್ತಿರವೇ ಫೈಲ್ ಇದೆ. ಬೇಕಾದರೆ ಈಗಲೇ ಕೊಡುತ್ತೇನೆ. If they want… ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರದ್ದು ಉತ್ತರ ತಂದಿದ್ದೇವೆ. ನಾವು ಉತ್ತರ ಕೊಡಲು ready ಇದ್ದೇವೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರ ಬಂದಿದೆ ಮಂಡನೆ ಮಾಡಬಹುದು.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಿಯಮ 330 ತೆಗೆದುಕೊಳ್ಳಿ.

**ಸಭಾಪತಿಯವರು:-** ಆಯಿತು. ಶ್ರೀ ಎಸ್.ವ್ಹಿ.ಸಂಕನೂರ ರವರು ಕೇಳಿರತಕ್ಕಂಥ ಸೂಚನೆಗೆ ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪನವರೇ ತಾವು ಉತ್ತರ ಹೇಳುತ್ತೀರಾ, ಇಲ್ಲ. ಅವರು ಹೊರಟು ಹೋಗಿದ್ದಾರೆ. ಆಮೇಲೆ ಕೃಷಿ ಸಚಿವರು ಮತ್ತು ಕಂದಾಯ ಸಚಿವರು ಬಂದಿಲ್ಲ. ಶ್ರೀ ಎಂ.ನಾಗರಾಜುರವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಶ್ರೀ ಪ್ರಿಯಾಂಕ್ ಖರ್ಗೆಯವರೇ ತಾವು ಉತ್ತರ ಹೇಳುತ್ತೀರಾ?

**Sri PRIYANK KHARGE:-** Yes Sir.

**ಸಭಾಪತಿಯವರು:-** ಶ್ರೀ ನಾಗರಾಜು ರವರೇ, ತಾವು ಸರ್ಕಾರದ ಗಮನ ಸೆಳೆಯಿರಿ.

5. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ:- ಬೆಳಗಾವಿಯಲ್ಲಿ ಐ.ಟಿ. ಮತ್ತು ಬಿ.ಟಿ ಪಾರ್ಕ್ ಸ್ಥಾಪಿಸಲು ಒತ್ತು ನೀಡುವುದರೊಂದಿಗೆ ಇನ್ನಷ್ಟು ಉದ್ಯಮಗಳು ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುವ ಕುರಿತು ಮತ್ತು ಉತ್ತರ ಕರ್ನಾಟಕದ ಭಾಗದ ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ.**

------

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ಐ.ಟಿ. ಮತ್ತು ಬಿ.ಟಿ ಪಾರ್ಕ್ ಸ್ಥಾಪಿಸಲು ಒತ್ತು ನೀಡುವುದರೊಂದಿಗೆ ಇನ್ನಷ್ಟು ಉದ್ಯಮಗಳು ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸುವ ಕುರಿತು ಮತ್ತು ಉತ್ತರ ಕರ್ನಾಟಕ ಭಾಗದ ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಾಹಿತಿ ತಂತ್ರಜ್ಞಾನ ಮತ್ತು ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, . . .

(ಉತ್ತರವನ್ನು ಲಗತ್ತಿಸಿದೆ)

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ವಿಸ್ತೃತವಾಗಿ ಉತ್ತರ ಕೊಟ್ಟಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುವುದೇನೆಂದರೆ, ಬೆಳಗಾವಿ ನಗರವನ್ನು ಜನರೆಲ್ಲರೂ ತಿಳಿದುಕೊಂಡಿರುವುದು ಅಲ್ಲಿ ಸುವರ್ಣ ವಿಧಾನಸೌಧ ಕಟ್ಟಿದ ನಂತರ ಎರಡನೆಯ ರಾಜಧಾನಿ ಎಂದು ಜನ ಆಲೋಚನೆ ಮಾಡಿರುವುದನ್ನು ನಾವ್ಯಾರೂ ಕೂಡ ಮರೆಯಬಾರದು ಎನ್ನತಕ್ಕಂಥ ವಿಚಾರವನ್ನು ಹೇಳುತ್ತೇನೆ. ಈ ವಿಚಾರದಲ್ಲಿ ಏನಾಗಿದೆಯೆಂದರೆ ಅಲ್ಲಿ ಉತ್ತಮವಾದಂತಹ ಶೈಕ್ಷಣಿಕ Hub ಆಗಿದ್ದು, it is becoming a capital for Higher Education ರೀತಿಯಲ್ಲಿ ಬೆಳೆಯುತ್ತಿರತಕ್ಕಂಥ ಬೆಳಗಾವಿ ನಗರದಲ್ಲಿ 11 ಇಂಜಿನಿಯರಿಂಗ್ ಕಾಲೇಜ್‌ಗಳಿವೆ. ಹಲವಾರು ಪಾಲಿಟೆಕ್ನಿಕ್ ಕಾಲೇಜ್‌ಗಳಿವೆ, I.T.I Institutions ಇವೆ. ಸಾವಿರಾರು ಜನ ಅಲ್ಲಿ ಪದವೀಧರರಾಗಿ ಮತ್ತು technically qualified ಜನ pass ಆಗಿ ಬರುತ್ತಿರುವುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಮತ್ತೆ ಅಲ್ಲಿ quality ಇರತಕ್ಕಂಥ ಕೆ.ಎಲ್.ಇ ಇಂಜಿನಿಯರಿಂಗ್ ಕಾಲೇಜ್ ಇರಬಹುದು, ಮರಾಠ ಮಂಡಲ್ಸ್ ಇಂಜಿನಿಯರಿಂಗ್ ಕಾಲೇಜು ಇರಬಹುದು ಮತ್ತು V.T.U ಕೂಡ ಅಲ್ಲೇ ಇರುತ್ತದೆ. ಅಕ್ಕಪಕ್ಕ ಇರತಕ್ಕಂಥ ಹಲವಾರು ಜಿಲ್ಲೆಗಳಲ್ಲೂ ಕೂಡ ಹಲವಾರು ಇಂಜಿನಿಯರಿಂಗ್ ಕಾಲೇಜ್‌ಗಳು ಉತ್ತಮವಾದಂತಹ ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಿರುವುದನ್ನು ನಾವೆಲ್ಲರೂ ಕಂಡಿದ್ದೇವೆ. ಅಂತಹ ಒಂದು talent ಇರತಕ್ಕಂಥ ಬೆಳಗಾವಿ ಜಿಲ್ಲೆ ಒಂದು Education Hub ಆಗಿರತಕ್ಕಂಥ ಆ ಜಾಗದಲ್ಲಿ ನಾವು ಐ.ಟಿ ಪಾರ್ಕ್ ಸ್ಥಾಪನೆ ಮಾಡಬೇಕೆಂದು ಮನವಿ ಮಾಡುವುದಕ್ಕೆ ನಾನು ಈ ಪ್ರಶ್ನೆಯನ್ನು ಕೇಳಿ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಹಾಗಾಗಿ, ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ ಬಹಳ ವಿಚಾರಗಳನ್ನು ಪೂರಕವಾಗಿ ಮತ್ತು ಪ್ರಗತಿಪರವಾಗಿ ತೆಗೆದುಕೊಂಡಿರತಕ್ಕಂಥ ನಿಲುವುಗಳನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಅವರಿಗೆ ಕೇಳುವುದು ಇಷ್ಟೇ. ಈ ಒಂದು talent ಏನಿದೆಯೋ ಅದು ಪುಣೆ ಅಥವಾ ಹೈದ್ರಾಬಾದ್‌ಗೆ ವಲಸೆ ಹೋಗಬಾರದು. ಅದೇನಾದರೂ ಬರುವುದಿದ್ದರೆ ಮೈಸೂರಿನಲ್ಲಿ ಒಂದು ಐ.ಟಿ ಪಾರ್ಕ್ ಮಾಡಬೇಕು ಮತ್ತು ಬೆಳಗಾವಿಯಲ್ಲಿ ಒಂದು ಐ.ಟಿ ಪಾರ್ಕ್ ಮಾಡಿದರೆ ನಮ್ಮಲ್ಲಿ ಇರತಕ್ಕಂಥ ಬುದ್ಧಿವಂತ ಹುಡುಗರು ಖಂಡಿತವಾಗಲೂ ಕೂಡ ಇಲ್ಲೇ ಹುದ್ದೆಗಳನ್ನು ಹುಡುಕಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಮನವಿಯನ್ನು ಮಾಡುತ್ತಿದ್ದೇನೆ. ಹಾಗಾಗಿ, ಅವರು ಕೊಟ್ಟಿರತಕ್ಕಂಥ ಉತ್ತರದಲ್ಲಿ 'ನಿಪುಣ ಕರ್ನಾಟಕ' ಯೋಜನೆ ಇರಬಹುದು, Idea-2 ಪಿಪಿಸಿ-ಎಲಿವೇಟ್ ಕಾರ್ಯಕ್ರಮ (ಗ್ರಾಂಟ್-ಇನ್-ಏಡ್) ಇರಬಹುದು, ರಾಜೀವ್ ಗಾಂಧಿ ಉದ್ಯಮಶೀಲತೆ (RGEP) ಕಾರ್ಯಕ್ರಮ ಇರಬಹುದು ಮತ್ತು ಇತರೆ ಯೋಜನೆಗಳಿರಬಹುದು ಇವೆಲ್ಲವನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ, ಈಗ ಏನಾಗಬೇಕು ಹೇಳಿ?

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಬೆಳಗಾವಿಗೆ ವಿಶೇಷವಾದಂತಹ ಕಾಳಜಿಯನ್ನು ವಹಿಸಿ, ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದಲ್ಲಿ ಈ ಬೇಡಿಕೆಗಳು ಬಹಳ ಹೆಚ್ಚಾಗಿರುವುದರಿಂದ ಬೆಳಗಾವಿಗೆ

ಒಂದು V.T.U ಇರುವುದರಿಂದ, ಸರ್ಕಾರ ಈ ಒಂದು ಐ.ಟಿ ಪಾರ್ಕ್ ಕಾರ್ಯಕ್ರಮವನ್ನು ಮಾಡುವುದಕ್ಕೆ ಆದಷ್ಟು ಬೇಗನೆ ಎಲ್ಲಾ ಕ್ರಮಕೈಗೊಳ್ಳಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀ ಎಂ. ನಾಗರಾಜು ರವರು ಕೇಳಿರುವಂತಹ ಪ್ರಶ್ನೆ ಬಹಳ ಪ್ರಸ್ತುತವಾಗಿದೆ. Beyond Bengaluru ಎಂದು ನಮ್ಮ ಯೋಜನೆ ಇದೆ. ನಮ್ಮ ಇಲಾಖೆಗಳಲ್ಲಿ ಒಂದು initiative ಇದೆ. ಬೆಂಗಳೂರನ್ನು ಹೊರತುಪಡಿಸಿ ನಾವು ಬಂಡವಾಳವನ್ನು ತರಬೇಕು, ಅಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡಬೇಕು. ಮಾನ್ಯ ಸದಸ್ಯರು ಹೇಳಿದಂತೆ ಪ್ರತಿಭೆಗಳು ಬೆಂಗಳೂರಿಗೆ ಬರಬಾರದು, ಬಂಡವಾಳ ಪ್ರತಿಭೆ ಎಲ್ಲಿದೆಯೋ ಅಲ್ಲಿಗೆ ಹೋಗಬೇಕು ಎಂದು ಒಂದು ಪ್ರಯತ್ನ. ನಾವು ಈಗಾಗಲೇ ಇದಕ್ಕೋಸ್ಕರ ಒಂದು ವಿಶೇಷವಾದಂತಹ Technology Business Incubators ಯೋಜನೆಯನ್ನು ಮಾಡಿದ್ದೇವೆ. ಇದರಲ್ಲಿ that are beyond the Corporations. ಅಂದರೆ ಬೆಂಗಳೂರು ಹೊರತುಪಡಿಸಿ ಈಗಾಗಲೇ 3 ಇಂಜಿನಿಯರಿಂಗ್ ಕಾಲೇಜ್‌ಗಳಿಗೆ ಸುಮಾರು 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. *Visvesvaraya Technological University*, K.L.E Technological University and Maratha Mandal's Engineering College ನವರಿಗೆ ನಾವು ಕೊಟ್ಟಿದ್ದೇವೆ. ಇದನ್ನು ಹೊರತುಪಡಿಸಿ, New Age Innovation Network Main Centres ಎಂದು K.L.E College of Pharmacy and S.G. Balekundri Institute of Technology ಯವರಿಗೂ ಕೂಡ ನಾವು ಕೊಟ್ಟಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದನಂತರ ಪ್ರಪ್ರಥಮ ಬಾರಿಗೆ ನವೋದ್ಯಮಗಳಿಗೆ ಪ್ರೋತ್ಸಾಹ ಕೊಡಬೇಕೆಂದು Tech Acceleration 2025 ಅನ್ನು ಆಗಸ್ಟ್‌ನಲ್ಲೇ ನಾವು ಮಾಡಿದ್ದೇವೆ. ಅದರಲ್ಲಿ ಸುಮಾರು 700ಕ್ಕಿಂತಲೂ ಹೆಚ್ಚು delegates participate ಮಾಡಿದ್ದಾರೆ. ಅಲ್ಲಿಗೆ ಕೆಲವು ಮಂದಿ ಹುಬ್ಬಳ್ಳಿ-ಧಾರವಾಡ ದಿಂದಲೂ ಕೂಡ ಬಂದಿದ್ದರು. ಆಮೇಲೆ ಸುಮಾರು 8 ರಿಂದ 10 ಜನ International delegations ಕೂಡ ಬೆಳಗಾವಿಗೆ visit ಮಾಡಿ ಅದಕ್ಕೆ ಪ್ರಶಂಸೆ ಮಾಡಿದ್ದಾರೆ. ಮತ್ತೆ ಇದರ ಜೊತೆಗೆ ಕಳೆದ ವರ್ಷದಿಂದ ನಾವು 'LEAP ಯೋಜನೆ' ಎಂಬ ಒಂದು ವಿನೂತನವಾದಂತಹ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಇದನ್ನು Local Economy Accelerator Program ಎಂದು ಕರೆಯುತ್ತಾರೆ. So, ನಾವು cluster based approach ಅನ್ನು ತೆಗೆದುಕೊಂಡಿದ್ದೇವೆ. ಮಣಿಪಾಲ್, ಉಡುಪಿ, ಮಂಗಳೂರು ಒಂದು cluster ಆಗುತ್ತದೆ. ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಕೂಡ ಒಂದು cluster ಆಗುತ್ತದೆ. ಇದರಲ್ಲಿ ಹುಬ್ಬಳ್ಳಿ-ಧಾರವಾಡ ಇರಬಹುದು ಅಥವಾ ಬೆಳಗಾವಿ ಇರಬಹುದು ಆ geography ಗೆ ತಕ್ಕಂತೆ ಮತ್ತು ಆ demography ಗೆ ತಕ್ಕಂತೆ ನಾವು ಅಲ್ಲಿ ಯೋಜನೆಯನ್ನು ರೂಪಿಸುತ್ತಿದ್ದೇವೆ. ಬೆಳಗಾವಿಯಲ್ಲಿ EV-cluster manufacturing ಇರಬಹುದು, ನವೋದ್ಯಮಗಳು ಇರಬಹುದು, ಅಲ್ಲಿ ಬಹಳ ಉತ್ತೇಜನ ಕೊಡುವುದಕ್ಕೆ ಸಾಕಷ್ಟು ಅವಕಾಶವಿದೆ. ಆ ನಿಟ್ಟಿನಲ್ಲಿ ನಾವು

ಕೆಲಸ ಮಾಡುತ್ತಿದ್ದೇವೆ. ಮೊದಲನೇ ಬಾರಿಗೆ ನಮ್ಮ Bengaluru Tech Summitನಲ್ಲಿ regional startups ಏನಿದೆ, ಅಂದರೆ regional ನವೋದ್ಯಮಗಳಿಗೆ ಸಂಪೂರ್ಣವಾಗಿ ಉಚಿತವಾಗಿ ನಾವು booth ಕೊಟ್ಟು ಸಾವಿರಾರು ನವೋದ್ಯಮಗಳಿಗೆ ನಾವು ಅವಕಾಶವನ್ನು ಮಾಡಿಕೊಟ್ಟು ಇಲ್ಲಿ ಅವರಿಗೆ exposure ಅನ್ನು ನೀಡಿದ್ದೇವೆ. ಇದರ ಜೊತೆಗೆ ಇತ್ತೀಚೆಗೆ ನಡೆದ ಬೆಳಗಾವಿ ಅಧಿವೇಶನದಲ್ಲೂ ಕೂಡ BeTCA (Belagavi Technology Companies Association) ಅವರ ಜೊತೆಗೆ ನಾನು ಮತ್ತು ಸ್ಥಳೀಯ ಶಾಸಕರು ಖುದ್ದಾಗಿ ಒಂದೆರಡು ತಾಸು ಸಮಾಲೋಚನೆ ಮಾಡಿದ್ದೇವೆ. ಮಾನ್ಯ ಎಂ.ನಾಗರಾಜು ರವರದು ಕೂಡ similar ಬೇಡಿಕೆ ಇದೆ. ಅವರು ಕೇಳುತ್ತಿರುವುದು Incubation Centres ಇರಬಹುದು, Centre of Excellence ಇರಬಹುದು ಸಾಧ್ಯವಾದರೆ ಐ.ಟಿ.ಪಾರ್ಕ್ ಅನ್ನು ಮಾಡಬೇಕೆಂದು ಹೇಳಿದ್ದಾರೆ. ನಾವು ಅಲ್ಲಿ land ಹುಡುಕುತ್ತಿದ್ದೇವೆ. ಅಲ್ಲಿ ಒಂದು land HESCOM ನವರದು ಇತ್ತು. ಆದರೆ ಅಲ್ಲಿಗೆ ಅವರ ಕಛೇರಿಗಳು ಬರುತ್ತಿವೆಯೆಂದು, ಬೇರೆ land ತೋರಿಸಿದ್ದಾರೆ. ಎಲ್ಲಿ ಎಲ್ಲಾದರೂ land ತೋರಿಸಿದ ತಕ್ಷಣವೇ we will establish and it will not be just an IT Park. ಇತ್ತೀಚೆಗೆ ಹೊಸ ತಂತ್ರಜ್ಞಾನ ಬರುತ್ತಿದೆ. Emerging Technologies ಗೆ ಹೋಗಬೇಕಾಗುತ್ತದೆ.

**(ಮುಂದು)**

(344)12.3.2026/1.20/ಎಂ.ಎಂ-ಬಿ.ಎನ್.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-**

ಇವೆಲ್ಲಾ ಕೂಡ L.E.A.P. (Local Economy Accelerator Program), beyond Bengaluru initiatives ನಲ್ಲಿ ಆಗಲೇ ನಾವು ತೆಗೆದುಕೊಂಡಿದ್ದು, ನಾನು ಮಾನ್ಯ ಸದಸ್ಯರಿಗೆ ಸಂಪೂರ್ಣವಾಗಿ ಬೆಂಬಲಿಸುತ್ತಾ ನಾನು ಅವರಿಗೆ ಆಶ್ವಾಸನೆ ನೀಡುತ್ತಿದ್ದೇನೆ ಬೆಳಗಾವಿ ಜಿಲ್ಲೆ ನಿಜವಾಗಿಯೂ ಬಹಳಷ್ಟು potential ಇದೆ. ಆ potential ವ್ಯರ್ಥವಾಗದಂತೆ ನಮ್ಮ ಅವಧಿಯಲ್ಲಿ ಐ.ಟಿ. ಪಾರ್ಕ್ ಇರಬಹುದು, re-skilling ಇರಬಹುದು, ಹೊಸ ತಂತ್ರಜ್ಞಾನದಲ್ಲಿ centres of excellence, incubation, no working spaces, ಗಳೆಲ್ಲವನ್ನೂ ಮುಂದಿನ ಒಂದು ವರ್ಷದಲ್ಲಿ ಸ್ಥಾಪನೆ ಮಾಡುತ್ತೇವೆ ಎಂದು ಅವರಿಗೆ ಆಶ್ವಾಸನೆ ನೀಡುತ್ತಿದ್ದೇನೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ಈ ಎಲ್ಲಾ ವಿಚಾರಗಳನ್ನು ಸ್ವಾಗತ ಮಾಡುತ್ತೇನೆ ಮತ್ತು ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ವಿಚಾರ ಬಂದಿರುವುದೇನೆಂದರೆ, ಬೆಳಗಾವಿ ಜಿಲ್ಲೆ foundry clusters ಮತ್ತು automobile industry ಗೆ ಪ್ರಸಿದ್ಧಿಯಾಗಿರುವುದು ಒಂದು ಕಡೆಯಾದರೆ ನಮ್ಮಲ್ಲಿ water resources ಮತ್ತು ಹಲವಾರು ನದಿಗಳಿರುವುದರಿಂದಾಗಿ data centres ಮಾಡುವುದಕ್ಕೆ ಕೂಡ ಅವರು ಆಲೋಚನೆ ಮಾಡಿದ್ದೇ ಆದರೆ ಬಹಳ jobs generate ಆಗುವುದಕ್ಕೆ ಪ್ರಯತ್ನವಾಗುತ್ತದೆ ಎಂದು ಮನವಿ ಮಾಡುತ್ತಿದ್ದೇನೆ. ಐ.ಟಿ. ಪಾರ್ಕ್ ಎನ್ನುವುದು it should definitely come to Belgaum as such.

ಏಕೆಂದರೆ, ನಾವು ಅಲ್ಲಿ ವಿಧಾನಸೌಧ ಕಟ್ಟಿರುವುದರಿಂದ ಜನಗಳ ಬಹಳ ದೊಡ್ಡ ಆಸೆ ಇರುವುದು ಅದನ್ನು ಎರಡನೇ ರಾಜಧಾನಿಯನ್ನಾಗಿ ಮಾಡಬೇಕೆಂದು ಇದ್ದು, ಆ ಬಗ್ಗೆ ಯೋಚನೆ ಮಾಡಿದಾಗ ಬೆಂಗಳೂರು ಹೇಗೆ ಈಗ ವಿಶ್ವಮಾನ್ಯ ನಗರವಾಗಿ ಬೆಳೆದಿದೆಯೋ ಹಾಗೆ ಬೆಳಗಾವಿಯನ್ನು ವಿಶ್ವಮಾನ್ಯ ನಗರವನ್ನಾಗಿ ಮಾಡಬೇಕಾದರೆ I.T. plays a very important role. ಹಾಗಾಗಿ, ಮಾನ್ಯ ಸಚಿವರು ಮಾಡುತ್ತೇನೆಂದು ಹೇಳಿದ್ದಾರೆ. ಬಹಳ ಸಂತೋಷವಾಗಿದೆ. ಅವರಿಗೆ ಅಭಿನಂದನೆ ತಿಳಿಸುತ್ತೇನೆ. ಆದಷ್ಟು ಬೇಗ ಮಾಡಲಿ ಎಂದು ಮನವಿ ಮಾಡಿ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಬಜೆಟ್‌ನಲ್ಲಿ ಮೈಸೂರನ್ನು ಎರಡನೇ ರಾಜಧಾನಿಯನ್ನಾಗಿ ಮಾಡಿ ಅಲ್ಲಿ ಐ.ಟಿ. ಹಬ್ ಅನ್ನು ಘೋಷಣೆ ಮಾಡಿದ್ದಾರೆ. ಅದೇ ತರಹ ಉತ್ತರ ಕರ್ನಾಟಕದಲ್ಲಿ ಬೆಳಗಾವಿ ಇರಬಹುದು, ಹುಬ್ಬಳ್ಳಿ-ಧಾರವಾಡ ಇರಬಹುದು ಅಲ್ಲಿಗೂ ಘೋಷಣೆ ಮಾಡಿ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಬರೀ ಬೆಳಗಾವಿ ಬಗ್ಗೆ ಮಾತನಾಡಿದೆ. ನಾನು ಹೇಳಿದ ಹಾಗೆ L.E.A.P. ಯೋಜನೆಯಡಿಯಲ್ಲಿ  ಅಡಿಯಲ್ಲಿ ಕಲಬುರಗಿ, ಕೊಪ್ಪಳ, ಬಳ್ಳಾರಿ, ಐ.ಐ.ಐ.ಟಿ. ರಾಯಚೂರು, ಐ.ಐ.ಟಿ. ಧಾರವಾಡ, ಹುಬ್ಬಳ್ಳಿ-ಧಾರವಾಡ ಎಲ್ಲವೂ ಇದೆ. In fact, ಮಾನ್ಯ ಸಭಾಪತಿಯವರೆ, ಇದನ್ನು ಕೇಳಿ ತಮಗೆ ಸಂತೋಷವಾಗಬಹುದು. The first, quantum computer ಅನ್ನು ನಾವು ಐ.ಐ.ಟಿ. ಧಾರವಾಡದಲ್ಲಿ ಸ್ಥಾಪನೆ ಮಾಡುವುದಕ್ಕೆ ನಿನ್ನೆ ಒಪ್ಪಂದವಾಗಿದೆ. ಇಡೀ ದೇಶದಲ್ಲಿಯೇ ಎರಡು quantum computer ಗಳಿದ್ದು ಎರಡೂ ಕರ್ನಾಟಕದಲ್ಲಿದೆ. ಒಂದು ಐ.ಐ.ಟಿ. ಧಾರವಾಡಕ್ಕೆ ಒಪ್ಪಂದ ಮಾಡಿಸುತ್ತಿದ್ದೇವೆ.  Beyond Bengaluru ಎಂದರೆ, ಬರೀ ಬೆಳಗಾವಿ ಎಂದಲ್ಲ, ಬರೀ ಹುಬ್ಬಳ್ಳಿ ಎಂತಲೂ ಅಲ್ಲ. ಕಲಬುರಗಿಯಿಂದ ಹಿಡಿದು ಚಾಮರಾಜನಗರದವರೆಗೆ. ನಾವು ಹಂತ ಹಂತವಾಗಿ ಮಾಡುತ್ತೇವೆ. We have a plan even for ಹುಬ್ಬಳ್ಳಿ, ಬೆಳಗಾವಿ, ಧಾರವಾಡ, ಮಣಿಪಾಲ, ಉಡುಪಿ, ಮಂಗಳೂರು, ಮಂಡ್ಯ, ಮೈಸೂರು, ರಾಮನಗರ, ಕಲಬುರಗಿ ಮತ್ತು ಕೊಪ್ಪಳ ಸೇರಿದೆ. I.I.I.T. ರಾಯಚೂರು ಜೊತೆಗೂ ನಾವು Artificial Intelligence ಗೆ ಒಪ್ಪಂದ ಮಾಡಿಕೊಂಡಿದ್ದೇವೆ. ಬೀದರ್ ಗೆ veterinary ಗೆ ಮಾಡುತ್ತಿದ್ದೇವೆ, ಕಲಬುರಗಿಯಲ್ಲಿ Bio Technology ಜೊತೆ ತೊಗರಿಗೆ ಮಾಡುತ್ತಿದ್ದೇವೆ, ಎಲ್ಲವೂ ಇದೆ. ಇವರು ಬೆಳಗಾವಿ ಬಗ್ಗೆ ಕೇಳಿರುವುದರಿಂದ ಬೆಳಗಾವಿ ಬಗ್ಗೆ ಹೆಚ್ಚು ಹೇಳಿದೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ಒಂದೇ ಸೆಕೆಂಡ್, ನಾನು ಬೆಳಗಾವಿ ಬಗ್ಗೆ ಕೇಳಿದೆ ಉತ್ತರ ಕರ್ನಾಟಕದ ಎಲ್ಲವನ್ನೂ ಸೇರಿಕೊಂಡು ವಿಜಯಪುರ, ಬಾಗಲಕೋಟೆ, ಉತ್ತರ ಕರ್ನಾಟಕ ಎಲ್ಲವನ್ನೂ ಸೇರಿಕೊಂಡು ಕೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ನಾಗರಾಜ್‌ರವರೆ, ಕುಳಿತುಕೊಳ್ಳಿ. ನಾನು ನಿಮಗೆ ಅನುಮತಿ ಕೊಟ್ಟಿಲ್ಲ.

**ಶ್ರೀ ಎಂ. ನಾಗರಾಜು:-** ಹುಬ್ಬಳ್ಳಿ, ಧಾರವಾಡಕ್ಕೆ ಐ.ಐ.ಟಿ. ಬಂತು. ಬೆಳಗಾವಿಗೆ ಆಗಬೇಕೆಂದು ಆಗಿಲ್ಲ. ಬೆಳಗಾವಿಗೆ ಸ್ವಲ್ಪ ಸಹಕಾರ ಕೊಡಲಿ ಎಂದು ಹುಬ್ಬಳ್ಳಿ, ಧಾರವಾಡದಲ್ಲಿ ಮಾಡಿ ಎಂದು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಅವರಿಗೆ ಸ್ವಲ್ಪ ತಿಳುವಳಿಕೆ ಹೇಳಿ. ಮಾನ್ಯ ಗೋವಿಂದರಾಜುರವರೆ, ಪ್ರಾರಂಭ ಮಾಡಿ.

**ಆ) ವಿಷಯ:- ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಹೂವು ಬೆಳೆಯುವ ರೈತರಿಗೆ ಆಗುತ್ತಿರುವ ನಷ್ಟ ತಪ್ಪಿಸಲು ಚಿಕ್ಕಬಳ್ಳಾಪುರದ ನಂದಿ ಕ್ರಾಸ್ ಬಳಿ 46 ಎಕರೆ ಪ್ರದೇಶದಲ್ಲಿ ಹೈಟೆಕ್ ಹೂವಿನ ಮಾರುಕಟ್ಟೆ, ಅಂತರ್ರಾಷ್ಟ್ರೀಯ ಮಟ್ಟದ ಶೈತ್ಯಾಗಾರ ಸ್ಥಾಪಿಸುವ ಬಗ್ಗೆ.**

- - - -

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಹೂವು ಬೆಳೆಯುವ ರೈತರಿಗೆ ಆಗುತ್ತಿರುವ ನಷ್ಟ ತಪ್ಪಿಸಲು ಚಿಕ್ಕಬಳ್ಳಾಪುರದ ನಂದಿ ಕ್ರಾಸ್ ಬಳಿ 46 ಎಕರೆ ಪ್ರದೇಶದಲ್ಲಿ ಹೈಟೆಕ್ ಹೂವಿನ ಮಾರುಕಟ್ಟೆ ಮತ್ತು ಅಂತರ್ರಾಷ್ಟ್ರೀಯ ಮಟ್ಟದ ಶೈತ್ಯಾಗಾರ ಸ್ಥಾಪಿಸುವ ಕುರಿತು ಮಾನ್ಯ ಕೃಷಿ ಮಾರುಕಟ್ಟೆ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಶಿವಾನಂದ ಎಸ್. ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೆ, ಅವರು ಉತ್ತರ ಕೊಟ್ಟರೂ ಅಷ್ಟೇ, ನಾನು ಕೊಟ್ಟರೂ ಅಷ್ಟೇ.

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಶಿವಾನಂದ ಎಸ್. ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸದಸ್ಯರಿಗೆ ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, actually, Calling Attention Notice ಗೆ ನೀವು ಉತ್ತರವನ್ನು ಓದಬೇಕು.

**ಶ್ರೀ ಶಿವಾನಂದ ಎಸ್. ಪಾಟೀಲ:-** ಮಾನ್ಯ ಸಭಾಪತಿಯವರೆ, 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-90ರಲ್ಲಿ ಘೋಷಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಸಿಒ 155 ಎಂಆರ್‌ಇ 2025, ದಿನಾಂಕ: 11.07.2025ರಲ್ಲಿ ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಅಂತರಾಷ್ಟ್ರೀಯ ಮಟ್ಟದ ಹೈಟೆಕ್ ಹೂವಿನ ಮಾರುಕಟ್ಟೆಯನ್ನು ರೂ. 141.50 ಕೋಟಿಗಳ ಅಂದಾಜು ವೆಚ್ಚದಲ್ಲಿ ಸ್ಥಾಪಿಸಲು ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಕ್ರಾಸ್ ಬಳಿ ಸುಮಾರು 20 ಎಕರೆ ಜಮೀನನ್ನು ಅಂತರಾಷ್ಟ್ರೀಯ ಹೂವಿನ ಮಾರುಕಟ್ಟೆ ನಿರ್ಮಾಣಕ್ಕಾಗಿ ತೋಟಗಾರಿಕೆ ಇಲಾಖೆಯಿಂದ ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಹಸ್ತಾಂತರಿಸಲಾಗಿರುತ್ತದೆ.

ಸದರಿ ಯೋಜನೆಯ ಅನುಷ್ಠಾನದ ಕುರಿತಂತೆ, ಗ್ರಾಮೀಣ ಮಾರುಕಟ್ಟೆ ಅಭಿವೃದ್ಧಿ ನಬಾರ್ಡ್ ಯೋಜನೆಯ ಆರ್‌ಐಡಿಎಫ್-31 ರಡಿ ರೂ.20.00 ಕೋಟಿಗಳ ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ನೀರು ಸರಬರಾಜು ವ್ಯವಸ್ಥೆ, ವಿದ್ಯುದೀಕರಣ, ಮುಚ್ಚು ಹರಾಜುಕಟ್ಟೆ, ಶೌಚಾಲಯ ವ್ಯವಸ್ಥೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಟೆಂಡರ್ ಕರೆಯಲು ಕ್ರಮವಹಿಸಲಾಗಿದೆ.

ಪ್ರಸ್ತುತ ಸದರಿ ಯೋಜನೆಯ ಅನುಷ್ಠಾನದ ಕುರಿತಂತೆ ಸಮಿತಿಯು ಹೊಂದಿರುವ 20 ಎಕರೆ ಜಾಗದಲ್ಲಿ ಶೈತ್ಯಾಗಾರ ಸ್ಥಾಪನೆಗೂ ಸ್ಥಳಾವಕಾಶ ಕಲ್ಪಿಸಲಾಗಿದ್ದು, ಮುಂದಿನ ಹಂತದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಶೈತ್ಯಾಗಾರ ಸ್ಥಾಪನೆಗೆ ಕ್ರಮವಹಿಸಲಾಗುವುದು.

ಮುಂದುವರೆದು, ಈಗಾಗಲೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು-2004ರ ನಿಯಮ-24ರಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಶೈತ್ಯಾಗಾರ ಸ್ಥಾಪನೆಗೆ ಆಸಕ್ತಿ ಹೊಂದಿ ಅರ್ಜಿದಾರರು ಅರ್ಜಿ ಸಲ್ಲಿಸಿದಲ್ಲಿ ಖಾಸಗಿ ಉದ್ದಿಮೆದಾರರಿಗೆ/ವರ್ತಕರಿಗೆ/ಸಂಘ ಸಂಸ್ಥೆಗಳಿಗೆ ನಿವೇಶನ ದರದ ಶೇ.50ರ ರಿಯಾಯಿತಿ ದರದಲ್ಲಿ ಹಂಚಿಕೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಮಾನ್ಯ ಸದಸ್ಯರು ಇನ್ನೇನಾದರೂ ಕ್ಲಾರಿಫಿಕೇಷನ್ಸ್‌ಗಳಿದ್ದರೆ ಕೇಳಲಿ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೆ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಇಡೀ ನಮ್ಮ ರಾಜ್ಯದಲ್ಲಿಯೇ ಅತಿ ಹೆಚ್ಚು ಹೂಗಳನ್ನು ಬೆಳೆಯುತ್ತಿರುವ ಪ್ರದೇಶಗಳಾಗಿವೆ. ಕೃಷಿ ಮಾರುಕಟ್ಟೆ ಸಚಿವರಿಗೂ ಸಹ ಮಾಹಿತಿ ಇರುತ್ತದೆ. ಅವರು ಸಹ ಕೋಲಾರದ ಎ.ಪಿ.ಎಂ.ಸಿ. ಮಾರುಕಟ್ಟೆಗೆ

ಬಂದಿದ್ದರು. ಇದಕ್ಕೆ ಮೊದಲು ಚಿಕ್ಕಬಳ್ಳಾಪುರದಲ್ಲಿ ಮಾತ್ರ ಹೆಚ್ಚಿನ ಹೂಗಳನ್ನು ಬೆಳೆಯುತ್ತಿದ್ದರು. ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ನಾನು ಶಾಸಕನಾದ ಮೇಲೆ ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಬಳಿ N.G.E.F. ನ 102 ಎಕರೆ ಜಾಗ ಏನಿದೆ, ಅಲ್ಲಿ ಹೂವಿನ ಮಾರುಕಟ್ಟೆ ಸ್ಥಾಪನೆ ಮಾಡಲು ಬಜೆಟ್‌ನಲ್ಲಿಯೇ ಘೋಷಣೆ ಮಾಡಿದ್ದರು. ತದನಂತರ ನಿಮ್ಮ ಸರ್ಕಾರ ಬಂದ ನಂತರ ತೋಟಗಾರಿಕೆ ಇಲಾಖೆಗೆ ಸೇರಿದ 46 ಎಕರೆ ಜಾಗದಲ್ಲಿ ಅಂತರಾಷ್ಟ್ರೀಯ ಮಟ್ಟದ ಹೂವಿನ ಮಾರುಕಟ್ಟೆ ಮತ್ತು ಶೈತ್ಯಾಗಾರ ಮಾಡುವುದಕ್ಕೆ ಇವರು 2025-26ರ ಬಜೆಟ್‌ನಲ್ಲಿ ಘೋಷಣೆ ಮಾಡಿದರು. ಈಗಾಗಲೇ ಒಂದು ವರ್ಷವಾಯಿತು. 46 ಎಕರೆ ಜಾಗ ಹೋಗಿ ಬರೀ 20 ಎಕರೆ ಜಾಗವನ್ನು ಎ.ಪಿ.ಎಂ.ಸಿ. ಗೆ ಹಸ್ತಾಂತರ ಮಾಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರೆ, ತಾವು ಕಳೆದ ಸಲವೂ ಇದರ ಬಗ್ಗೆ ಕೇಳಿದ್ದಿರಿ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೆ, ಹೌದು, ನಾನು ಇದನ್ನು ಎರಡನೇ ಬಾರಿಗೆ ಕೇಳುತ್ತಿದ್ದೇನೆ. 10,000 ಕೋಟಿಯಷ್ಟು ಹೂವು ಇವತ್ತಿನ ದಿವಸ ಈ ಮೂರು ಜಿಲ್ಲೆಗಳಿಂದ ವಿದೇಶಗಳಿಗೆ ರಫ್ತಾಗುತ್ತದೆ. ಅದಲ್ಲದೆ ಉತ್ತರ ಭಾರತದ ರಾಜ್ಯಗಳಲ್ಲಿ ಹವಾಮಾನ ವೈಪರೀತ್ಯ ಇರುವುದರಿಂದ ಅಲ್ಲಿಗೆ ಬೇಕಾಗುವಂತಹ ಹೂವನ್ನೆಲ್ಲಾ ಈ ಮೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಅದರಲ್ಲಿಯೂ ಕಳೆದ ಮೂರು ವರ್ಷಗಳಿಂದ ಚಿಕ್ಕಬಳ್ಳಾಪುರ, ಕೋಲಾರ ಭಾಗದಲ್ಲಿ ಉತ್ತಮ ಮಳೆಯಾಗಿ ಅಂತರ್ಜಲದ ಮಟ್ಟ ವೃದ್ಧಿಯಾಗಿರುವುದರಿಂದ ಇವತ್ತಿನ ದಿವಸ ರೈತರಿಗೆ ಬೇರೆ option ಇಲ್ಲ. ಕೋಲಾರ ಭಾಗದವರಿಗಾದರೆ ಗೊತ್ತಾಗುತ್ತದೆ. ಕೋಲಾರದಲ್ಲಿ ಹೂವಿನ ಮಾರುಕಟ್ಟೆಗೆ ಜಾಗವಿಲ್ಲದೇ ಹಳೆಯ ಮುನಿಸಿಪಲ್ ಬಸ್ ನಿಲ್ದಾಣದಲ್ಲಿ ಹೂವುಗಳನ್ನು ಹಾಕಿಕೊಂಡು ಹೂವನ್ನು ಮಾರುತ್ತಾರೆ. ಬೆಳಗ್ಗೆ ಹೊತ್ತು 11 ಗಂಟೆಯ ತನಕ ಆ ರಸ್ತೆಯೇ ಬ್ಲಾಕ್ ಆಗುತ್ತದೆ. ನಾನು ಎ.ಪಿ.ಎಂ.ಸಿ. ಬಗ್ಗೆ ನಾನು ಶಾಸಕನಾಗಿ ಇದು 6ನೇ ವರ್ಷ. ನಾನು ಪ್ರತಿ ಬಾರಿ ಸಹ ನಿಮ್ಮ ಹತ್ತಿರ ಎ.ಪಿ.ಎಂ.ಸಿ. ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತಲೇ ಇದ್ದೇನೆ. ನೀವು ಕೋಲಾರದಲ್ಲಿ ಇವತ್ತು ಇರುವಂತಹ ಹಣ್ಣು ಮತ್ತು ಕಾಯಿಪಲ್ಲೆಗಳ ಮಾರುಕಟ್ಟೆಯನ್ನು ಬೇರೆ ಕಡೆಗೆ ಶಿಫ್ಟ್ ಮಾಡಿ ಈಗಿರುವ ಎ.ಪಿ.ಎಂ.ಸಿ. ಅನ್ನು ಹೂವಿನ ವ್ಯಾಪಾರಕ್ಕೆ ಬಿಟ್ಟು ಕೊಡುತ್ತೇವೆಂದು ನೀವು ಅಲ್ಲಿಗೆ ಬಂದಾಗ ಹೇಳಿ ಬಂದಿರಿ. ಈ ವಿಷಯ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿಯೂ ಸಹ ಚರ್ಚೆಗೆ ಬಂತು. ಬಹುಶಃ ತಾವು ಮರೆತಿದ್ದೀರೆಂದು ಕಾಣುತ್ತದೆ. ನನ್ನ ಒತ್ತಾಯ ಇಷ್ಟೇ. ಇವತ್ತು ಹೂಗಳು ಮಳೆಗೂ ತಡೆಯುವುದಿಲ್ಲ, ಬಿಸಿಲಿಗೂ ತಡೆಯುವುದಿಲ್ಲ. Amsterdam, ಹಾಲೆಂಡ್‌ನಂತಹ ದೇಶಗಳಿಂದ ಬೇರೆ ಬೇರೆ ದೇಶಗಳಿಗೆ ಹೂಗಳು ಉತ್ಪಾದನೆಯಾಗಿ ಹೋಗುತ್ತಿತ್ತು ಆ ಎಲ್ಲಾ ಹೂಗಳನ್ನೂ ಇವತ್ತಿನ ದಿವಸ ನಮ್ಮ ಭಾಗದಲ್ಲಿ ಬೆಳೆಯುತ್ತಿದ್ದಾರೆ. ಅದಕ್ಕೆ ನೀವೆಲ್ಲರೂ ಸಹ ಬಹಳ ಹೆಮ್ಮೆ ಪಡಬೇಕು. ಕೋಲಾರ ಬಯಲುಸೀಮೆ ಪ್ರದೇಶವಾಗಿದ್ದರೂ ಸಹ ರೈತರು ಕಷ್ಟ ಪಟ್ಟು ಬೆಳೆ ಬೆಳೆಯುತ್ತಾರೆ. ಎ.ಪಿ.ಎಂ.ಸಿ.ಯೇ ಇಲ್ಲ ಎನ್ನುವುದಾಗಿದ್ದರೆ ಅವರ ಹೆಚ್ಚಿನ ಬಾಧೆ ಅವರು ಪಡುತ್ತಿದ್ದರು. ಒಂದು ಕಡೆ ಎ.ಪಿ.ಎಂ.ಸಿ. ಗೂ ನೀವು ಸರಿಯಾದ ರೀತಿಯಲ್ಲಿ ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಿಲ್ಲ. ನೀವು ಬಂದು

ಮೂರು ವರ್ಷವಾಯಿತು. ಮೂರು ವರ್ಷದಲ್ಲಿ ನೀವು ಎ.ಪಿ.ಎಂ.ಸಿ. ಬಗ್ಗೆ ತೆಗೆದುಕೊಂಡಂಥ ಕ್ರಮಗಳೇನು? ಇದು ಬಹಳ ಮುಖ್ಯವಾದ ವಿಚಾರ.

**ಶ್ರೀ ಶಿವಾನಂದ ಎಸ್. ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಗೋವಿಂದರಾಜುರವರಿಗೆ ಎಲ್ಲವೂ ಗೊತ್ತಿದೆ. 2024-25ರಲ್ಲಿ ಘೋಷಣೆ ಮಾಡಿದ್ದೆವು. ಈಗಾಗಲೇ 141 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದೇವೆ. ಅದಕ್ಕೆ initial infrastructure ಗೆ ಹಣ ಕೂಡ ಇರಲಿಲ್ಲ. ಇದು ಪಿ.ಪಿ.ಪಿ. ಮಾಡೆಲ್‌ನಲ್ಲಿ ಮಾಡಬೇಕಾದಂತಹ ಯೋಜನೆ. ಆದರೂ ಕೂಡ ನಾನು ನಬಾರ್ಡ್‌ನಿಂದ ರೂ. 20 ಕೋಟಿ ಅನುದಾನವನ್ನು ಈಗಾಗಲೇ ಕೊಟ್ಟಿದ್ದೇನೆ. ವಿಶೇಷವಾಗಿ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರಿಗೆ ನಾನು ಕೃತಜ್ಞತೆ ಹೇಳಬೇಕು. ನಿಮ್ಮ ಕಾಲದಲ್ಲಿ ಕೊಟ್ಟಿರುವ ಜಾಗ ಸಿಕ್ಕಿಲ್ಲ.

(ಮುಂದು)

(345) 12-03-2026 1-30 KH/BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವಾನಂದ ಎಸ್. ಪಾಟೀಲ (ಮುಂದು):-**

ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು ಆಸಕ್ತಿವಹಿಸಿ, ತೋಟಗಾರಿಕೆ ಇಲಾಖೆಯಿಂದ 46 ಎಕರೆ ಜಮೀನಿನಲ್ಲಿ 20 ಎಕರೆ ಜಮೀನನ್ನು ಕೊಡಿಸಿದ್ದಾರೆ. ಇದರ ಜೊತೆಗೆ ಮಾನ್ಯ ಶರತ್ ಬಚ್ಚೇಗೌಡರವರು ಕೂಡ ಹೊಸಕೋಟೆಯಲ್ಲಿ 36 ಎಕರೆ ಜಮೀನಿನಲ್ಲಿ ಹೊಸ ಎ.ಪಿ.ಎಂ.ಸಿ.,ಯನ್ನು ಸ್ಥಾಪನೆ ಮಾಡುತ್ತಿದ್ದಾರೆ. ಅಲ್ಲಿಯೂ ಕೂಡ ಶೈತ್ಯಾಗಾರವನ್ನು ಮಾಡುತ್ತಿದ್ದೇವೆ. ಇಲ್ಲಿಯೂ ಕೂಡ ಮಾಡುತ್ತಿದ್ದೇವೆ. ಆದಷ್ಟು ಶೀಘ್ರವಾಗಿ ಇದು ಪಿ.ಪಿ.ಪಿ. ಮಾಡೆಲ್‌ನಲ್ಲಿ ಮಾಡಲು ಯಾರಾದರೂ ಬಂದರೆ ಒಳ್ಳೆಯದು. ಯಾರು ಬರದೇ ಇದ್ದರೆ ನಾವೇ ದುಡ್ಡು ಹಾಕಿ ಮಾಡಿಕೊಡುವಂತಹ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿರುವಂತೆ, ಪಾಲಿಹೌಸ್‌ನಲ್ಲಿ ಏನು ಬೆಳೆಗಳನ್ನು ಬೆಳೆಯುತ್ತಿದ್ದಾರೆ, ಅದು ಎಕ್ಸ್‌ಪೋರ್ಟ್ ಆಗುತ್ತಿರುವಂತದ್ದು ನಿಜ. ಅದು 5,000 ಕೋಟಿ ರೂಪಾಯಿಗಳು ಆಗುತ್ತದೋ, 10,000 ಕೋಟಿ ರೂಪಾಯಿಗಳು ಆಗುತ್ತದೋ ಗೊತ್ತಿಲ್ಲ. ನಮ್ಮ ಸರ್ಕಾರಕ್ಕೆ ಇನ್ನು ಹೆಚ್ಚಿಗೆ ಆಗುವಂತಹ ಆಸಕ್ತಿ ಕೂಡ ಇದೆ. ಖಂಡಿತವಾಗಿಯೂ ಈ ವ್ಯವಸ್ಥೆಯನ್ನು ಒದಗಿಸಿಕೊಡುತ್ತೇನೆ.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಗೋವಿಂದ ರಾಜು ರವರೇ, ಸಾಕು.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಚಿಕ್ಕಬಳ್ಳಾಪುರ ಮತ್ತು ಹೊಸಕೋಟೆಯ ಬಗ್ಗೆ ತಿಳಿಸಿದರು. ಕೋಲಾರ ಭಾಗದಲ್ಲಿ ತರಕಾರಿ ಮಾರುಕಟ್ಟೆಯನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿದ್ದಾದರೆ . . .

**ಸಭಾಪತಿಯವರು:-** ಮಾನ್ಯ ಗೋವಿಂದ ರಾಜು ರವರೇ, ಇದು calling attention.

**ಶ್ರೀ ಶಿವಾನಂದ ಎಸ್. ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸದಸ್ಯರೇ, ಕೋಲಾರದಲ್ಲಿ, ಕೆ.ಜಿ.ಎಫ್.,ನಲ್ಲಿ ಹೊಸ ಮಾರುಕಟ್ಟೆಯನ್ನು ಮಾಡುತ್ತಿದ್ದಾರೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಕೆ.ಜಿ.ಎಫ್., ಭಾಗದಲ್ಲಿ ಹೂವುಗಳನ್ನು ಬೆಳೆಯುವುದಿಲ್ಲ. ಎಲ್ಲಿ ಹೂವುಗಳನ್ನು ಬೆಳೆಯುತ್ತಾರೆ, ಅಲ್ಲಿ ಮಾರುಕಟ್ಟೆಯನ್ನು ಮಾಡಿ. ಎಲ್ಲಿ ಜಮೀನು ಸಿಕ್ಕರೆ ಅಲ್ಲಿ ಮಾರುಕಟ್ಟೆಯನ್ನು ಮಾಡಿಬಿಟ್ಟರೆ, ಅಲ್ಲಿ ಮಾರುಕಟ್ಟೆ ಕೆಲಸ ಮಾಡುವುದಿಲ್ಲ.

**ಶ್ರೀ ಶಿವಾನಂದ ಎಸ್. ಪಾಟೀಲ:-** ಮಾನ್ಯ ಸದಸ್ಯರೇ, ತಾವು ಟಮೋಟೋ ಬಗ್ಗೆ ಹೇಳಿದ್ದೀರಿ.

**ಸಭಾಪತಿಯವರು:-** ಮಾನ್ಯ ಶಿವಾನಂದ ಎಸ್.ಪಾಟೀಲರವರೇ, ಆಯಿತು ಬಿಡಿ. ಮಾನ್ಯ ಸಚಿವರಾದ ಕೆ.ಹೆಚ್.ಮುನಿಯಪ್ಪನವರೇ ತಮಗೆ ಸಂಬಂಧಪಟ್ಟ ನಿಯಮ ೩೩೦ ಮೇರೆಗೆ ಬಹಳಷ್ಟು ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ. ಆದ್ದರಿಂದ, ಈಗ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ನಿಯಮ-೩೩೦ ಅನ್ನು ತೆಗೆದುಕೊಂಡು ನಂತರ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

## 6. ನಿಯಮ ೩೩೦ರ ಮೇರೆಗೆ ಚರ್ಚೆ

**ಅ) ವಿಷಯ:–** ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಳಪಡುವ ಸಂತ್ರಸ್ಥ ರೈತ ಕುಟುಂಬಗಳಿಗೆ ಪುನರ್ವಸತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು.

– – – – – –

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿರುವುದಕ್ಕಾಗಿ ಅಭಿನಂದನೆಗಳು. ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗುವಂತಹ ಗ್ರಾಮಗಳ ಸಂತ್ರಸ್ಥ ಕುಟುಂಬಗಳ ಬಗ್ಗೆ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ತಮೆಲ್ಲರಿಗೂ ಗೊತ್ತಿರುವ ಹಾಗೆ ಬಹಳ ದೊಡ್ಡದಾಗಿರುವಂತಹ ಯೋಜನೆ ಇದು. ಹಂತ ಹಂತವಾಗಿ ಈ ಯೋಜನೆ ಕೆಳಗೆ ಬಹಳಷ್ಟು ಗ್ರಾಮಗಳು ಮುಳುಗಡೆಯಾಗಿವೆ. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು ಹಂತ–2 ರಡಿ ಸುಮಾರು 176 ಗ್ರಾಮಗಳು ಮುಳುಗಡೆಯಾಗಿವೆ. ಇದಕ್ಕೆ ಸಂಬಂಧಿಸಿದಂತೆ 136 ಪುನರ್ವಸತಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ. ಇದರ ಜೊತೆಗೆ ಹಂತ–3 ರ ಕಾಮಗಾರಿಯನ್ನು ತೆಗೆದುಕೊಂಡಾಗ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್. 519.60 ಮೀ. ನಿಂದ ಆರ್.ಎಲ್. 524.256 ಮೀ.ಗೆ ಎತ್ತರಿಸಿದಾಗ ಸುಮಾರು 20 ಗ್ರಾಮಗಳು ಮುಳುಗಡೆಯಾಗುತ್ತಿವೆ. ಇದರ ಜೊತೆಗೆ ಬಾಗಲಕೋಟೆ ನಗರವು ಮತ್ತಷ್ಟು ಮುಳುಗಡೆಯಾಗುವಂತಹ ಸಂದರ್ಭದಲ್ಲಿ ಈಗಾಗಲೇ ಬಾಗಲಕೋಟೆಯಲ್ಲಿ ಸುಮಾರು 2500 ಕುಟುಂಬಗಳು ಬರುತ್ತದೆ. 20 ಗ್ರಾಮಗಳಿಂದ 23,000 ಕುಟುಂಬಗಳು ಸ್ಥಳಾಂತರವಾಗಬೇಕಾಗಿದೆ. ಒಟ್ಟಾರೆಯಾಗಿ 25 ರಿಂದ 26 ಸಾವಿರ ಕುಟುಂಬಗಳನ್ನು 3ನೇ ಹಂತಕ್ಕೆ ಸ್ಥಳಾಂತರ ಮಾಡಿ, 20 ಪುನರ್ವಸತಿ ಕೇಂದ್ರಗಳಲ್ಲಿ ಅವರಿಗೆ ಶಾಶ್ವತವಾಗಿರುವಂತಹ ನೆಲೆಯನ್ನು ಸ್ಥಾಪಿಸಬೇಕಾಗಿರುವಂತಹ ಈ ಸಂದರ್ಭದಲ್ಲಿ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ಎನ್ನುವಂತಹ ವಿಚಾರದ ಬಗ್ಗೆ ಕೇಳಿದಾಗ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತು 20 ಪುನರ್ವಸತಿ ಕೇಂದ್ರಗಳ ಪೈಕಿ ಇನ್ನು 13 ಪುನರ್ವಸತಿ ಕೇಂದ್ರಗಳ ಭೂಸ್ವಾಧೀನ ಪ್ರಕ್ರಿಯೆ ಇವತ್ತು ಚಾಲ್ತಿಯಲ್ಲಿದೆಯೇ ಹೊರತು ಯಾವುದು ಆಗುತ್ತಿಲ್ಲ. ಕಳೆದ 15 ವರ್ಷಗಳ ಅವಧಿಯಲ್ಲಿ ಈ 13 ಗ್ರಾಮಗಳನ್ನು ಭೂಸ್ವಾಧೀನ ಮಾಡಿಕೊಳ್ಳುತ್ತಿದ್ದಾರೆ. 3–4 ವರ್ಷಗಳಾದ ನಂತರ ಅದು vitiate ಆಗಿ ರದ್ದು ಆಗುತ್ತದೆ. ಮತ್ತೆ ಭೂಸ್ವಾಧೀನ ಮಾಡಿಕೊಳ್ಳುತ್ತಾರೆ. ಮತ್ತೆ vitiate ಆಗುತ್ತದೆ. 13 ಪುನರ್ವಸತಿ ಕೇಂದ್ರಗಳ ರೈತರು ಕಳೆದ 15 ವರ್ಷಗಳಿಂದ ಆ ಭೂಮಿಯಲ್ಲಿ ಯಾವುದೇ ಬಿತ್ತನೆಯನ್ನು ಮಾಡಿಲ್ಲ. ಅವರಿಗೆ ಅವಾರ್ಡ್ ಆಗುತ್ತಿಲ್ಲ, ಐತೀರ್ಪು ಆಗುತ್ತಿಲ್ಲ. ಆದರೆ, 7 ಪುನರ್ವಸತಿ ಕೇಂದ್ರಗಳನ್ನು ಭೂಸ್ವಾಧೀನ ಮಾಡಿಕೊಂಡು ಪರಿಹಾರ ಕೊಡುವಂತಹ ಕೆಲಸ ಸರ್ಕಾರ ಮಾಡಿದೆ. ಉಳಿದಿರುವಂತಹ 13 ಪುನರ್ವಸತಿ ಕೇಂದ್ರಗಳನ್ನು ಯಾವ ಕಾಲಮಿತಿಯೊಳಗೆ ಭೂಸ್ವಾಧೀನ

ಮಾಡಿ, ಆ ಸಂತ್ರಸ್ಥರಿಗೆ ಪರಿಹಾರ ಕೊಡುವಂತಹದ್ದು ಒಂದು ಭಾಗವಾದರೆ, ಇವತ್ತಿಗೂ 20 ಗ್ರಾಮಗಳ ಕಟ್ಟಡಗಳಿಗೆ ಇನ್ನು ಮೌಲ್ಯಮಾಪನ ಆಗುತ್ತಿಲ್ಲ. ಕುಂದರಗಿ ಎನ್ನುವಂತಹ ಗ್ರಾಮ ಮುಳುಗಡೆಯಾಗುವಂತಹ ಪ್ರದೇಶವಾಗಿದ್ದು, ಆ ಗ್ರಾಮದ ಮನೆಗಳನ್ನು 3 ಬಾರಿ ಮೌಲ್ಯಮಾಪನ ಮಾಡಿದ್ದಾರೆ, 3 ಬಾರಿ ಕೂಡ ನೋಟಿಫಿಕೇಷನ್, ಡಿ-ನೋಟಿಫಿಕೇಷನ್ ಆಗಿದೆ. ಇದು ಕಾಲಮಿತಿಯೊಳಗೆ vitiate ಆಯಿತು. ಆ ಸಂತ್ರಸ್ಥರಿಗೆ ದುಡ್ಡು ಬರುತ್ತದೆ, ಆ ಕಟ್ಟಡಕ್ಕೆ ದುಡ್ಡು ಬರುತ್ತದೆ ಎಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಅವರಿಗೆ ಪರಿಹಾರ ಯಾವಾಗ ಕೊಡುವುದು? ಆ ಸಂತ್ರಸ್ಥ ಮನೆಗಳಿಗೆ ಪುನರ್ವಸತಿ ಯಾವಾಗ ಕಲ್ಪಿಸಿಕೊಡುತ್ತಾರೆ ಎನ್ನುವ ಆಗ್ರಹವನ್ನು ಸರ್ಕಾರಕ್ಕೆ ಮಾಡುತ್ತಿದ್ದೇನೆ. ಇದೇ ರೀತಿ 13 ಗ್ರಾಮಗಳ ಪರಿಸ್ಥಿತಿ ಇದೆ. ಮುಧೋಳದಲ್ಲಿ ಜಮೀನು ಭೂಸ್ವಾಧೀನಪಡಿಸಿಕೊಂಡಿದ್ದಾರೆ. ಬಾಗಲಕೋಟೆ ಅಕ್ಕ-ಪಕ್ಕದ ಗ್ರಾಮಗಳಲ್ಲಿ ಭೂಸ್ವಾಧೀನಪಡಿಸಿಕೊಂಡಿದ್ದಾರೆ. ಕಾಲಮಿತಿಯೊಳಗೆ vitiate ಆಗುತ್ತಿದೆ. ರೈತರು ಅಲ್ಲಿ ಯಾವುದೇ ಬೆಳೆಗಳನ್ನು ಬಿತ್ತುವುದಕ್ಕೂ ಆಗುವುದಿಲ್ಲ. ಬೆಳೆಯುವುದಕ್ಕೂ ಆಗುವುದಿಲ್ಲ. ಭೂಸ್ವಾಧೀನ ಪರಿಹಾರವು ಇಲ್ಲ. ಇದು ಈ 20 ಗ್ರಾಮಗಳ ಪರಿಸ್ಥಿತಿಯಾಗಿದೆ. ಬಹಳಷ್ಟು ಶೋಚನೀಯವಾಗಿರುವಂತಹ ಪರಿಸ್ಥಿತಿಯಲ್ಲಿ ಆ 20 ಗ್ರಾಮಗಳು ಇವೆ. ಈಗ ಇರುವಂತಹ ಮನೆಯನ್ನು ರಿಪೇರಿ ಮಾಡಿಕೊಳ್ಳಬೇಕು. ಆರ್.ಸಿ.ಸಿ., ಹಾಕಿಕೊಳ್ಳಬೇಕು. ಮನೆ renovation ಮಾಡಿಕೊಳ್ಳಬೇಕು ಎಂದು ನೋಡಿದರೆ ಅಲ್ಲಿ ಆ ಗ್ರಾಮ ಮುಳುಗಡೆಯಾಗುತ್ತದೆ. ಆ ಮನೆಗಳು ಮುಳುಗಡೆಯಾಗುತ್ತದೆ ಏನು ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ವಿಚಾರ ಆ ಗ್ರಾಮಗಳಲ್ಲಿ ಬರುತ್ತಿದೆ. ಶಾಲೆ, ಕಾಲೇಜುಗಳನ್ನು ಕಟ್ಟಬೇಕಾದರೆ, ಮುಳುಗಡೆ ಗ್ರಾಮಕ್ಕೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಅನುದಾನ ಒದಗಿಸುವುದಕ್ಕೆ ಬರುವುದಿಲ್ಲ ಎನ್ನುವ ನಿಟ್ಟಿನಲ್ಲಿ ಕಳೆದ 20 ವರ್ಷಗಳಿಂದ ರೈತರು ಚಿಂತಾಜನಕ ಸ್ಥಿತಿಯಲ್ಲಿ ಇದ್ದಾರೆ. ಮಾನ್ಯ ಸಭಾಪತಿಯವರೇ, ಇನ್ನಷ್ಟು ಮಾತನಾಡುವುದಕ್ಕೆ ತಾವು ಸಮಯವನ್ನು ಕೊಡಬೇಕು. ಬಹಳ ಬೃಹದಾಕಾರವಾಗಿರುವಂತಹ ವಿಚಾರ ಇದು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರ ಹೇಳಿದ ನಂತರ ಕೇಳಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರ ಕೊಟ್ಟ ಮೇಲೆ ಕೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸರಿ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಬಹಳ ವಿಸ್ತಾರವಾಗಿ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಹೇಳಿದ್ದಾರೆ. ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಮತ್ತು

ಮಾನ್ಯ ಪಿ.ಹೆಚ್.ಪೂಜಾರ್ ರವರು ನನ್ನ ಹತ್ತಿರ ಸುಮಾರು 20 ಬಾರಿ ಕೇಳಿರಬೇಕು. ನಾವು ಬಹಳ ವಿವರವಾಗಿ ಉತ್ತರವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಕೂಡ ಬಹಳ ವಿವರವಾಗಿ ಕೊಟ್ಟಿದ್ದಾರೆ. ಪ್ರತಿ ಹಂತದಲ್ಲಿಯೂ ಕೂಡ ಏನೇನು ಆಗಬಹುದು ಎನ್ನುವ ಬಗ್ಗೆ ಇದನ್ನು ಇಟ್ಟುಕೊಂಡು ನಾವು ಮುಂದಕ್ಕೆಲ್ಲಾ ಮಾಡಬಹುದು. ಸಚಿವ ಸಂಪುಟದಲ್ಲಿ ರೈತರಿಗೆ ಏನೇನು ಮಾಡಿದ್ದೇವೆ ಎಂದು ಮಾನ್ಯ ಸದಸ್ಯರಿಗೂ ಗೊತ್ತಿದೆ. Rehabilitation ಅನ್ನು ಸ್ವಲ್ಪ ಬಾಕಿ ಇಟ್ಟಿದ್ದೇವೆ. ಇದರಲ್ಲಿ ಸ್ವಲ್ಪ misuse ಜಾಸ್ತಿಯಾಗಿತ್ತು. ಇದರ ಬಗ್ಗೆ ತೀರ್ಮ ಬರಬೇಕಾದರೆ high rate, 14 ರಿಂದ 15 ಕೋಟಿ ರೂಪಾಯಿಗಳು ಆಗುತ್ತಿತ್ತು ಎಂದು ಬಾಕಿ ಇಟ್ಟಿದ್ದೇವೆ. ಆರ್.ಎಲ್. ನೀರಿನ ಸಂಗ್ರಹಣೆ ಮಟ್ಟವನ್ನು 519.60 ಮೀ. ನಿಂದ ಆರ್.ಎಲ್. 524.256 ಮೀ. ರವರೆಗೆ ಎತ್ತರಿಸಲು ಏನೇನು ಸಮಸ್ಯೆಗಳು ಇದೆ ಎಂದು ನಾನು ಈಗಾಗಲೇ ಹೇಳಿದೆ. ನಾನು, ಮಾನ್ಯ ಹೆಚ್.ಕೆ.ಪಾಟೀಲ್ ರವರು ಮತ್ತು ಮಾನ್ಯ ಎಂ.ಬಿ.ಪಾಟೀಲ್‌ರವರು 3 ಜನರು ಇದೇ ವಿಚಾರವಾಗಿ ದೆಹಲಿಗೆ ಹೋಗುತ್ತಿದ್ದೇವೆ ಎಂದು ಹೇಳಿದೆ. ಗೆಜೆಟ್ ಬರಲಿ, ಈ ಮಧ್ಯದಲ್ಲಿ ತಾವು ಏನೇನು ತೊಂದರೆ ಇದೆ ಎಂದು ನನ್ನ ಗಮನಕ್ಕೆ ತಂದಿದ್ದೀರಿ, ನ್ಯಾಯಬದ್ಧವಾಗಿ ಯಾರ್ಯಾರು ಮನೆಗಳನ್ನು ಕಳೆದುಕೊಂಡಿದ್ದಾರೆ, ಅವರಿಗೆ ಕೊಡುವಂತಹ ವ್ಯವಸ್ಥೆ ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೇ, . . .

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪರವರೇ, ಒಂದು ನಿಮಿಷ. ಮಾನ್ಯ ಪಿ.ಹೆಚ್.ಪೂಜಾರ್‌ರವರು ಪ್ರಶ್ನೆಯನ್ನು ಕೇಳಲಿ. ನಂತರ ತಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಮಾತನಾಡಿದ ಹಾಗೆ ಪುನರ್ವಸತಿ ಕೇಂದ್ರಗಳ ಪರಿಸ್ಥಿತಿ ಶೋಚನೀಯವಾದಂತಹದ್ದು. ನಾವು ಇಲ್ಲಿ ಪ್ರಸ್ತಾಪ ಮಾಡಿರುವುದೇನೆಂದರೆ, ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ಹಂತ-1, ಹಂತ-2 ಮತ್ತು ಹಂತ-3 ರಲ್ಲಿಯೇ ಅನಿವಾರ್ಯತೆ ಬಂದಿರುವಂತಹದ್ದು. ಈ ಹಂತ-3 ರಲ್ಲಿ 20 ಗ್ರಾಮಗಳ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಯವರು ಮಾಹಿತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ವಿಶೇಷವಾದಂತಹ ಯೋಜನೆ ಹಾಕಿಕೊಳ್ಳಬೇಕಾಗಿದೆ. ಪುನರ್ವಸತಿ ನೀತಿಯಲ್ಲಿ ಬದಲಾವಣೆ ಮಾಡಬೇಕಾಗಿದೆ. ಇದರ ಬಗ್ಗೆ ಚಿಂತನೆ ನಡೆಸಿದ್ದೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಯಾವ ರೀತಿಯ ಚಿಂತನೆ ಮಾಡುತ್ತಿದ್ದಾರೆ, ಏನು ಮಾಡುತ್ತಿದ್ದಾರೆ ಎನ್ನುವ ಸ್ಪಷ್ಟತೆ ಇಲ್ಲ. ಆದರೆ, ಇಲ್ಲಿಯವರೆಗೂ ಪುನರ್ವಸತಿ ಕೇಂದ್ರಗಳು ಏನು ಆಗಿವೆ, ಅಲ್ಲಿ 120 ರಿಂದ 130 ಪುನರ್ವಸತಿ ಕೇಂದ್ರಗಳು ಎಷ್ಟೇ ಇರಲಿ, ಆ ಪುನರ್ವಸತಿ ಕೇಂದ್ರಗಳಲ್ಲಿ ರಸ್ತೆ,

ಕುಡಿಯುವ ನೀರಿನ ವ್ಯವಸ್ಥೆ, ಗಟಾರ ವ್ಯವಸ್ಥೆ ಇನ್ನು ಸಮರ್ಪಕವಾಗಿಲ್ಲ ಎನ್ನುವುದು ಇದೆ. ಬಹಳಷ್ಟು ಕಡೆ ಏನಾಗಿದೆ ಎಂದರೆ, ಜನರು ಹೋಗಿ ಅಲ್ಲಿ ಇರುವುದಕ್ಕೆ ಆಗದಿರುವುದಕ್ಕೆ ಉದ್ಯೋಗ ದೃಷ್ಟಿಯಿಂದ ಅನಿವಾರ್ಯವಾಗಿ ಆ ನದಿಯ ಪಕ್ಕದಲ್ಲಿ ಇರುವಂತಹದ್ದು. ಅಲ್ಲಿ ಮುಳುಗಡೆ ಪ್ರದೇಶ ಇದ್ದರೂ ಕೂಡ ಬದುಕು ಕಟ್ಟಿಕೊಳ್ಳುವಂತಹ ವ್ಯವಸ್ಥೆ ಆಗಿದೆ. ಸರ್ಕಾರ ಪುನರ್ವಸತಿ ಕೇಂದ್ರಗಳನ್ನು ಮಾಡದಿರುವುದಕ್ಕೆ ಅನಿವಾರ್ಯವಾಗಿ ಮುಳುಗಡೆ ಪ್ರದೇಶದಲ್ಲಿ ಇದ್ದು, ಸ್ವಲ್ಪ ತಮ್ಮ ಜೀವನಕ್ಕೆ ಬೇಕಾಗಿರುವಂತಹ ಆದಾಯವನ್ನು ಜಮೀನುಗಳಿಂದ ಪಡೆಯುತ್ತಿದ್ದಾರೆ. ಆ ವ್ಯವಸ್ಥೆಯಲ್ಲಿ, ಆ ಪುನರ್ವಸತಿ ಕೇಂದ್ರಗಳ ಸ್ಥಿತಿ ದಯನೀಯವಾಗಿದೆ. ಅಲ್ಲಿಗೆ ಹೋಗಬೇಕಾದರೂ ಕೂಡ ದೊಡ್ಡ ದೊಡ್ಡ ಮುಳ್ಳು ಕಂಟಿಗಳು, ಹುಳ-ಹುಪ್ಪಟೆಗಳು, ಕತ್ತಲೆ ಕವಿದಿರುವಂತಹ ಸ್ಥಿತಿಯಲ್ಲಿ ಸುಮಾರು ಪುನರ್ವಸತಿ ಕೇಂದ್ರಗಳು ಇವೆ. ದಯಮಾಡಿ ಪುನರ್ವಸತಿ ಕೇಂದ್ರಗಳ ಜೊತೆಗೆ ಪುನರ್ವಸತಿ ವ್ಯವಸ್ಥೆಯನ್ನು ಈ ಜನರಿಗೆ ಮಾಡಿದರೆ ಈ ಸಮಸ್ಯೆಗಳು ಬರುತ್ತಿರಲಿಲ್ಲ. ಅಲ್ಲಿ ಜನರು ಆರಾಮವಾಗಿ ಇದ್ದರು. ಬಹಳಷ್ಟು ಪುನರ್ವಸತಿ ಕೇಂದ್ರಗಳಲ್ಲಿ ಜನ ವಸತಿ ಇರದೇ ಇರುವಂತಹ ವ್ಯವಸ್ಥೆಯಲ್ಲಿ ಇನ್ನೊಮ್ಮೆ ಅಲ್ಲಿ ಸರಿಯಾದಂತಹ ವ್ಯವಸ್ಥೆಯನ್ನು ಮಾಡಬೇಕು. ಈ 20 ಗ್ರಾಮಕ್ಕೂ ಕೂಡ ಹೊಸ ಯೋಜನೆಯನ್ನು ಮಾಡಬೇಕೆಂದು ಹೇಳುತ್ತೀರಿ. ಅದನ್ನು ಶೀಘ್ರವಾಗಿ ಪ್ರಕಟ ಮಾಡಬೇಕು. ಬಹಳ ನಿಧಾನ ಮಾಡುವುದಕ್ಕೆ ಹೋಗಬೇಡಿ ಎನ್ನುವಂತಹ ಒತ್ತಾಯವನ್ನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೋರುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, 20 ಗ್ರಾಮಗಳನ್ನು ಹೊಸದಾಗಿ ತೆಗೆದುಕೊಳ್ಳುವಂತಹ ಪುನರ್ವಸತಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಆದಷ್ಟು ಬೇಗ ಮಾಡಬೇಕೆಂಬುದು ಕಳಕಳಿಯ ವಿನಂತಿಯಾಗಿದೆ. ಏಕೆಂದರೆ, ಮುಳುಗಡೆಯಾದ ಮೇಲೆ ಆ ಪ್ರದೇಶಕ್ಕೆ ಹೋಗುತ್ತೇವೆ. ಅಲ್ಲಿ ನಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾದರೆ, ಅಲ್ಲಿ ಯಾವುದೇ ಸೌಲಭ್ಯಗಳು ಇಲ್ಲದೇ ಇದ್ದರೆ, ಹಳೆಯ ಗ್ರಾಮದಿಂದ ಸ್ಥಳಾಂತರವಾಗುವುದು ಬಹಳ ಕಷ್ಟವಾಗುತ್ತದೆ. ಹಂತ-1 ಮತ್ತು ಹಂತ-2 ರಲ್ಲಿ 176 ಗ್ರಾಮಗಳು ಏನು ಮುಳುಗಡೆಯಾಗಿವೆ. ಅದನ್ನು ಇನ್ನಷ್ಟು ಪುನರ್‌ಶ್ಚೇತನ ಮಾಡಬೇಕೆಂದರೆ, ಬಹಳ ಅಧೋಗತಿ ಇರುವಂತಹ ಪರಿಸ್ಥಿತಿಯಲ್ಲಿ ಇದ್ದಾರೆ. ನಮ್ಮ ಸರ್ಕಾರದಿಂದ ಇವತ್ತಿಗೂ ಕೂಡ ಕೆಲವೊಂದು ಗ್ರಾಮಗಳಲ್ಲಿ ಸ್ಮಶಾನವನ್ನು ಕೊಡುವುದಕ್ಕೆ ಆಗಲಿಲ್ಲ. ನಾನು ಒಂದೇ ಸರ್ಕಾರ ಎಂದು ಹೇಳುತ್ತಿಲ್ಲ. 30 ವರ್ಷಗಳಿಂದ ಪುನರ್ವಸತಿ ಕೇಂದ್ರಗಳು ಆಗಿವೆ. ಸ್ಮಶಾನ ಜಾಗ ಇಲ್ಲ. ಅನುಕೂಲಸ್ಥ ರೈತರು ತಮ್ಮ ಹೊಲಗಳಲ್ಲಿ ಸ್ಮಶಾನ ಜಾಗವನ್ನು ಮಾಡಿಕೊಳ್ಳುತ್ತಿದ್ದಾರೆ. ಬಡವರು, ದಲಿತರು, ಹಿಂದುಳಿದವರು, ಭೂಮಿ ಇಲ್ಲದಿರುವವರು ತಮ್ಮ ಕಡೆಯ ವ್ಯಕ್ತಿ ತೀರಿಕೊಂಡಾಗ ಅಂತ್ಯ ಸಂಸ್ಕಾರ ಮಾಡುವುದಕ್ಕೂ ಕೂಡ ಸ್ಥಳ ಇಲ್ಲದೇ ಇರುವಂತಹ ಪುನರ್ವಸತಿ ಕೇಂದ್ರಗಳು ಇವೆ. ನಾಗರಿಕ ಸಮಾಜದಲ್ಲಿ ಪುನರ್ವಸತಿ ಕೇಂದ್ರಗಳಲ್ಲಿ ಸ್ಮಶಾನದ ಜಾಗ ಕೊಡುವುದಿಲ್ಲವೆಂದರೆ, ನಾವು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ.

(ಮುಂದು)

(346) 12.3.2026 1.40 ಪಿಕೆ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು):**

ಸಂತ್ರಸ್ತ ಜನ ಕೇವಲ ಆಸ್ತಿಯನ್ನು ಮಾತ್ರ ಕಳೆದುಕೊಳ್ಳುವುದಿಲ್ಲ. ಸಂಬಂಧಗಳನ್ನು, ಮಠ-ಮಂದಿರಗಳನ್ನು ಕಳೆದುಕೊಂಡಿದ್ದಾರೆ. ದೇಶದ ಹಿತರಕ್ಷಣೆಗಾಗಿ ಡ್ಯಾಮ್ ಕಟ್ಟಲು ಅವಕಾಶ ಮಾಡಿಕೊಟ್ಟೆವು. ಅವರಿಗೆ ಯೋಗ್ಯವಾಗಿರುವ, ನ್ಯಾಯಯುತವಾಗಿರುವಂತಹ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಆದರೆ ಕಳೆದ 30 ವರ್ಷಗಳಿಂದ ಈ ಕೆಲಸ ಆಗಿಲ್ಲ. ಸಂತ್ರಸ್ತರು ಬಹಳಷ್ಟು ನೋವಿನಲ್ಲಿದ್ದಾರೆ. ಅಲ್ಲಿ labour oriented industry ಗಳು ಬರಬೇಕು, ಉದ್ಯೋಗಗಳನ್ನು ಕಲ್ಪಿಸಿ ಕೊಡಬೇಕು. ಮಹಿಳೆಯರು ಪುನರ್ವಸತಿ ಕೇಂದ್ರದಿಂದ ಟಂ-ಟಂ ಗಳಲ್ಲಿ ಬೇರೆ ಕಡೆ ಕೆಲಸಕ್ಕೆ ಹೋಗುತ್ತಿದ್ದಾರೆ. ಬೀಳಗಿಯಲ್ಲಿ ಸುಮಾರು 16 ಪುನರ್ವಸತಿ ಕೇಂದ್ರಗಳಿವೆ. ಅಲ್ಲಿಂದ ಕನಿಷ್ಠ 20 ಟಂ- ಟಂ ಗಳಲ್ಲಿ ಬೇರೆ ಕಡೆ ದುಡಿಯುವುದಕ್ಕೆ ಹೋಗುತ್ತಿದ್ದಾರೆ. ತಿಂಗಳಿಗೆ ಒಂದಾದರೂ ಟಂ-ಟಂ ಗಳು ಅಪಘಾತಕ್ಕೆ ಈಡಾಗುತ್ತವೆ. ಇದರಿಂದ 2-3 ಸಾವು ನೋವುಗಳು ಆಗುತ್ತಿವೆ. ಆದ್ದರಿಂದ ಅವರಿಗೆ ಶಾಶ್ವತ ಉದ್ಯೋಗ ಕಲ್ಪಿಸಿಕೊಡುವಂತಹ ಕೆಲಸ ಆಗಬೇಕಿದೆ. ಅವರ ಕೈಯಲ್ಲಿ ದುಡ್ಡು ಕೊಟ್ಟರೆ ಅದು ಉಳಿಯುವುದಿಲ್ಲ. ಉದ್ಯೋಗವನ್ನು ಕಲ್ಪಿಸುವ ಕೆಲಸ ಆಗಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಅವರ ಮುಂದೆ ನಮ್ಮ ಅಳಲನ್ನು ವ್ಯಕ್ತಪಡಿಸುವ ಅವಕಾಶ ಸಿಕ್ಕಿದೆ. ನಮ್ಮ ಕಣ್ಣೀರನ್ನು ಒರೆಸುತ್ತಾರೆ ಎಂದು ಭಾವಿಸಿದ್ದೇನೆ. ಇಂತಹ ಸಮಸ್ಯೆಗಳನ್ನು ಒಂದು ದಿವಸದಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಹೇಳಿದರೆ ಅದು ಹರಿಕಥೆಯಂತೆ ಆಗುತ್ತದೆ.

ಮಾನ್ಯ ಸಭಾಪತಿಗಳೆ, 20 ಗ್ರಾಮಗಳ ಕಟ್ಟಡಗಳ ಬೆಲೆ ನಿರ್ಧಾರ ಆಗಬೇಕು; ಪುನರ್ವಸತಿ ಆಗಬೇಕು. 176 ಗ್ರಾಮಗಳಿಂದ 10 ಲಕ್ಷ ಕುಟುಂಬಗಳು ಸ್ಥಳಾಂತರಗೊಂಡಿವೆ. ಅವರ ಬದುಕು ಕೂಡ ಶೋಚನೀಯವಾಗಿದೆ. ನ್ಯಾಯಯುತವಾದ ಬೆಲೆ ಕೊಡಬೇಕು. ಸಕಾಲರದಲ್ಲಿ ಅವರ ಮಕ್ಕಳಿಗೆ ಉದ್ಯೋಗ ಕಲ್ಪಿಸಿಕೊಡಬೇಕು. ನಮಗೆ ಮೀಸಲಾತಿಯಲ್ಲಿ 5% ಇದೆ. ಈ ಮೀಸಲಾತಿಯಲ್ಲಿ ಸಂತ್ರಸ್ತರಿಗೆ `ಸಿ' & `ಡಿ' ದರ್ಜೆ ಹುದ್ದೆಗಳನ್ನು ಕೊಟ್ಟಿದ್ದೀರಿ. 'ಬಿ' ದರ್ಜೆಯ ಹುದ್ದೆಗಳಿಗೂ ಸಂತ್ರಸ್ತರಿಗೆ ಮೀಸಲಾತಿ ಏಕೆ ಕೊಡಬಾರದು? ಭೂಮಿಯನ್ನು ಕಳೆದುಕೊಂಡವರಿಗೆ stamp duty exemption ಇದೆ. ಮಾನ್ಯ ಸಭಾಪತಿಗಳೆ, ತಾವೂ ಕೂಡ ಆ ಭಾಗದಿಂದ ಬಂದಿದ್ದೀರಿ. ಒಂದು ರೀತಿಯಿಂದ ನೀವೂ ಕೂಡ ಸಂತ್ರಸ್ತರಾಗಿದ್ದೀರಿ. ನೀವು ಕೂಡ ಈ ನಿಟ್ಟಿನಲ್ಲಿ ಬೆಳಕು ಚೆಲ್ಲಬೇಕು. ಭೂಮಿ ಕಳೆದುಕೊಂಡವರಿಗೆ ಎಷ್ಟು ದುಡ್ಡು ಬರುತ್ತದೆಯೋ ಅದಕ್ಕೆ stamp duty exemption 5 ವರ್ಷಕ್ಕೆ ಕೊಡುತ್ತಿದ್ದಾರೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರು ಇದನ್ನು ಮಾಡಿಕೊಟ್ಟಿದ್ದರು. ಈ ಅವಧಿಯನ್ನು 10 ವರ್ಷ ಎಂದು ಮಾಡಬೇಕು. 'ಸಿ' ಮತ್ತು 'ಡಿ' ದರ್ಜೆಯಲ್ಲೇನು 5% ಮೀಸಲಾತಿಯನ್ನು ಕೊಟ್ಟಿದ್ದಾರೋ ಅದೇರೀತಿ ಬಿ ದರ್ಜೆಗೆ ಸಂಬಂಧಪಟ್ಟಂತೆಯೂ ಮೀಸಲಾತಿ ಕೊಡಬೇಕು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಿಗೆ ದೀರ್ಘವಾದ ಉತ್ತರವನ್ನು ಕೊಟ್ಟಿದ್ದೇವೆ. ಆದರೆ ಇದು ಅವರ concerned ಇದೆ, ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. 20 ಗ್ರಾಮಗಳಿಗೆ ಪರಿಹಾರ ಕೊಡುವ ಸಂಬಂಧ ಏಕೆ ಸಮಸ್ಯೆಯಾಗುತ್ತಿದೆ ಎಂದರೆ, ಈ ಪ್ರದೇಶಕ್ಕೆ enhancement ಎಂದು ಮಾಡಿದರು. ನಂತರ ಕೋರ್ಟ್‌ಗೆ ಹೋದ ಹಿನ್ನೆಲೆಯಲ್ಲಿ ಒಂದೊಂದು ಎಕರೆ ಜಮೀನು ಕಳೆದುಕೊಂಡವರಿಗೆ ರೂ. 13-14 ಕೋಟಿಗಳನ್ನು ಕೊಟ್ಟರು. ರೂ. 14 ಕೋಟಿ ಕೊಟ್ಟು, ನಾವು ಅವರನ್ನು ಕರೆದುಕೊಂಡು ಬಂದು, ಜಾಗ ಕೊಟ್ಟಿದ್ದು ಇವೆಲ್ಲವೂ ದೊಡ್ಡ ಇಶ್ಯೂ ಆಗಿಹೋಗಿದೆ. ಆದ್ದರಿಂದ ನಾವು ಮೊನ್ನೆ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನ ಮಾಡಿ ರೂ. 30-40 ಲಕ್ಷಗಳನ್ನು ಕೊಡಬೇಕೆಂದು, ಇವರಿಗೆ rehabilitation ಮಾಡಬೇಕೆಂದು ಚರ್ಚೆಯಾಯಿತು. Rehabilitation ಬದಲಿಗೆ ದುಡ್ಡು ಕೊಡಬೇಕು ಎಂಬ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಬಳಿ ಈ ಕುರಿತು ಚರ್ಚೆ ಮಾಡುತ್ತೇವೆ. ನಾವು ಜಮೀನು ಖರೀದಿ ಮಾಡುವುದು, ನಂತರ ಅದು ದೊಡ್ಡ scandal ಆಗುವುದು ಆಗಬಾರದು. ನಿಮ್ಮನ್ನೆಲ್ಲ ಕರೆದು ಒಂದು ಸುತ್ತು ಮಾತುಕತೆ ಮಾಡಿ, we will take a decision. ಮಾನ್ಯ ಸಭಾಪತಿಗಳೆ, ಅವರ consent ತೆಗೆದುಕೊಂಡೇ ಅವರಿಗೆ ಏನಾದರೂ ಕೊಡಬೇಕು. ಈ ಮಧ್ಯದಲ್ಲಿ ಆಂಧ್ರಪ್ರದೇಶ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ, 519 ರಿಂದ 524 ಮೀಟರ್‌ಗೆ ಡ್ಯಾಮ್‌ನ ಎತ್ತರ ಎತ್ತರಿಸುವುದರಿಂದ ಮುಳುಗಡೆಯಾಗುವ ಜಾಗಕ್ಕೆ ಪರಿಹಾರ ಕೊಡಬಾರದು, ನೀವು ಅದನ್ನು ನಿಲ್ಲಿಸಬೇಕು, ಭೂಸ್ವಾಧೀನಕ್ಕೆ ಹೋಗಬಾರದು, ಆ ಏರಿಯಾಗೆ ಸಂಬಂಧಪಟ್ಟಂತೆ ಏನೂ ಕೆಲಸ ಮಾಡಬಾರದು ಎಂದು ಪತ್ರ ಬರೆದಿದ್ದಾರೆ. ಕೇಂದ್ರ ನಮಗೆ ಈ ಕುರಿತು ರಿಪ್ಲೆ ಕೇಳಿದೆ. ನಾನು, ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮತ್ತು ಮಾನ್ಯ ಎಂ.ಬಿ.ಪಾಟೀಲ್‌ರವರು ಅಲ್ಲಿಗೆ ಹೋಗುತ್ತಿದ್ದೇವೆ. We will find out some solution for this, taking all of you into confidence and we will do it.

**ಶ್ರೀ ಪಿ.ಹೆಚ್.ಪೂಜಾರ್:-** ಕೇಂದ್ರಕ್ಕೇನು ವರದಿ ಕೊಟ್ಟಿದ್ದಾರೋ ಅದರ ಪ್ರತಿ ನಮಗೆ ಸಿಕ್ಕಿಲ್ಲ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಗಳೆ, ಆ ವಿವರಗಳು ಸಿಕ್ಕಿದರೆ ಅವರು ಪ್ರತಿಭಟನೆ ಮಾಡುತ್ತಾರೆಯೇ?

**ಶ್ರೀ ಪಿ.ಹೆಚ್.ಪೂಜಾರ್:-** ಪ್ರತಿಭಟನೆ ಮಾಡುವ ವಿಚಾರ ಅಲ್ಲ. ಸಂತ್ರಸ್ತರ ಪೈಕಿ ನಾವೂ ಕೂಡ ಇದ್ದೇವೆ. ನಾವು ಸಲಹೆ-ಸೂಚನೆಗಳನ್ನು ಕೊಡುತ್ತೇವೆ. ಈ ಸಮಸ್ಯೆ ಪರಿಹಾರಕ್ಕೆಂದು ನೀವು ಕೈಗೊಂಡ ಕ್ರಮಗಳಿಗೆ ನಾವು ಸಹಕಾರ ಕೊಡುತ್ತಾ ಬಂದಿದ್ದೇವೆ. ಆ ಸಮಸ್ಯೆ ಉಳಿಯಬಾರದು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಗಳೆ, today evening itself, ನಾನು Lower House ನಲ್ಲಿ ಒಂದು ಹೇಳಿಕೆ ಮಾಡುತ್ತೇನೆ. ಆದರೆ ಎಂ.ಪಿ.ಗಳು ಇದರ ಬಗ್ಗೆ ಧ್ವನಿ ಎತ್ತಲಿಲ್ಲ.

**ಶ್ರೀ ಪಿ.ಹೆಚ್.ಪೂಜಾರ್:-** ನಾವು ನಿಮಗೆ ಎಲ್ಲಾ ರೀತಿಯ ಸಹಕಾರಗಳನ್ನು ಕೊಟ್ಟಿದ್ದೇವೆ.

**ಸಭಾಪತಿಯವರು:-** ಈಗ ಸದನವನ್ನು ೩ ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವನ್ನು ಮಧ್ಯಾಹ್ನ 1.45 ಗಂಟೆಯಿಂದ ೩.೦೦ ಗಂಟೆಯವರೆಗೆ ಮುಂದೂಡಲಾಯಿತು)**

(347) 12.03.2026 3.00 ಡಿಎಸ್-ಕೆಎಸ್

**(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ ೩ ಗಂಟೆ ೦೯ ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ನಿಯಮ ೩೩೦ ರ ಮೇರೆಗೆ ಚರ್ಚೆ**

**ಆ) ವಿಷಯ: ಇಂಧನ ಮತ್ತು ಅಡುಗೆ ಅನಿಲಗಳ ಮಾರಾಟದಲ್ಲಿ ಕೇಂದ್ರ ಸರ್ಕಾರದ ನಿಯಂತ್ರಣವಿಲ್ಲದ ಕಾರಣ ಯುದ್ಧದ ಹೆಸರಿನಲ್ಲಿ ಕಪ್ಪು ಮಾರುಕಟ್ಟೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ ಆಗುತ್ತಿರುವ ಕುರಿತು.**

-----

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಬಹಳ ಪ್ರಮುಖವಾಗಿ ಇವತ್ತು ಇಡೀ ಮಾಧ್ಯಮಗಳಲ್ಲಿ ಸುದ್ದಿಯಾಗಿರುತಕ್ಕಂಥ ವಿಚಾರ. ಇಂದು, ನಿನ್ನೆ ಮತ್ತು ಕಳೆದ ಒಂದು ವಾರದಿಂದ ಏನು ಇರಾನ್ ಮತ್ತು ಇಸ್ರೇಲ್ – ಅಮೆರಿಕಾ ನಡುವೆ ನಡೆಯುತ್ತಿರತಕ್ಕಂಥ ಯುದ್ಧಕ್ಕೆ ಸಂಬಂಧಪಟ್ಟಂತೆ ಭಾರತಕ್ಕೆ ಪೂರೈಕೆ ಆಗಿರುವ, ಆಗಿರಬಹುದಾದ, ಆಗಿರುವಂಥ ಅನಿಲಗಳ ಸಂಬಂಧ ಇವತ್ತು ಇಡೀ ರಾಜ್ಯದಲ್ಲಿ ದೊಡ್ಡ ಮಟ್ಟದ ಹಾಹಾಕಾರ ಎದ್ದಿದೆ. ಇದು ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಇರತಕ್ಕಂಥ ಪರಿಸ್ಥಿತಿಯಾಗಿದೆ. ಕರ್ನಾಟಕದಲ್ಲಿ ಪ್ರಮುಖವಾಗಿ ಹೋಟೆಲ್‌ಗಳಲ್ಲಿ ಏನಿವತ್ತು ಆಹಾರ ಪದಾರ್ಥಗಳು ಮಾರಾಟವಾಗುತ್ತಿವೆ, ಇದರ ಬಗ್ಗೆ ಒಂದು ದೊಡ್ಡ ಚರ್ಚೆಯಾಗುತ್ತಿದೆ. ಜನಸಾಮಾನ್ಯರಿಗೆ ನಿಗದಿತ ದರದಲ್ಲಿ ಆಹಾರ ಸಿಗುತ್ತಿಲ್ಲ. ಯಾವ ಹೆಣ್ಣುಮಕ್ಕಳು ಅಡುಗೆ ಅನಿಲವನ್ನು ಬಳಸಿಕೊಂಡು ಅಡುಗೆಯನ್ನು ತಯಾರು ಮಾಡುವಂಥ ಪರಿಸ್ಥಿತಿ ಇದೆ, ಅವರಿಗೆ ನಿಗದಿತ ಸಮಯದಲ್ಲಿ ಅಡುಗೆ ಅನಿಲ ಪೂರೈಕೆಯಾಗುತ್ತಿಲ್ಲ.

(ಮುಂದು)

**(348) 12/03/2026 3:10 ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಮೇಶ್ ಬಾಬು (ಮುಂದು):-**

ಇವತ್ತಿನ ದಿವಸ ನಮ್ಮ ರಾಜ್ಯದ ಪ್ರಜಾವಾಣಿ, ವಿಜಯ ಕರ್ನಾಟಕ, ವಿಜಯವಾಣಿ, ಉದಯವಾಣಿ, ವಾರ್ತಾ ಭಾರತಿ, ಸಂಯುಕ್ತ ಕರ್ನಾಟಕ, ಹೊಸ ದಿಗಂತ ಯಾವುದೇ ಪತ್ರಿಕೆಗಳು ಇರಬಹುದು, ಎಲ್ಲಾ ಪತ್ರಿಕೆಗಳಲ್ಲಿ ಅಂದರೆ ಇಂಗ್ಲೀಷ್ ಮಾಧ್ಯಮದ ಡೆಕ್ಕನ್ ಹೆರಾಲ್ಡ್, ಟೈಮ್ಸ್ ಆಫ್ ಇಂಡಿಯಾ, ದಿ ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಹಿಂದೂಸ್ಥಾನ ಟೈಮ್ಸ್ ಇಂತಹ ಎಲ್ಲಾ ಪ್ರಮುಖ ದಿನಪತ್ರಿಕೆಗಳನ್ನೂ ಒಳಗೊಂಡಂತೆ, ಎಲ್ಲಾ ಸುದ್ದಿ ವಾಹಿನಿಗಳಲ್ಲಿ ಇವತ್ತಿನ ದಿವಸ ಬಿತ್ತರಗೊಳ್ಳುತ್ತಿರುವ ಸುದ್ದಿ ಏನೆಂದರೆ, ಜನ ತತ್ತರಗೊಂಡಿದ್ದಾರೆ, ಗ್ಯಾಸ್ ಸಿಲಿಂಡರ್‌ಗಳ ಪೂರೈಕೆ ಆಗುತ್ತಿಲ್ಲ. ಈ ಮೊದಲು ಗ್ಯಾಸ್ ಸಿಲಿಂಡರ್‌ಗಳನ್ನು ಬುಕ್ ಮಾಡಿದ ಎರಡು ದಿನಕ್ಕೆ ಸಿಲಿಂಡರ್‌ಗಳು ಸಿಗುವ ಅವಕಾಶಗಳು ಇದ್ದ ಸಂದರ್ಭದಲ್ಲಿ ಇವತ್ತಿನ ದಿವಸ ಬುಕ್ ಮಾಡಿದ ಮೇಲೆ ಎರಡು-ಮೂರು ವಾರಗಳ ಕಾಲ ಕಾಯಿರಿ ಎನ್ನುವ ಉತ್ತರ ಬರುತ್ತಿದೆ. ಅದೇ ರೀತಿಯಾಗಿ ಪೆಟ್ರೋಲ್ ಮತ್ತು ಡಿಸೆಲ್‌ಗಳಿಗೆ ಕಪ್ಪು ಮಾರುಕಟ್ಟೆಯನ್ನು ಸೃಷ್ಟಿ ಮಾಡುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇವತ್ತಿನ ದಿವಸ ಭಾರತ ದೇಶದಲ್ಲಿ ಅನಿಲ ಪೂರೈಕೆ ಇದೆ. ಇದಕ್ಕೆ ಸಂಬಂಧಪಟ್ಟಂತೆ, ಗೋದಾಮುಗಳಲ್ಲಿ ಅಂದರೆ ಕೇಂದ್ರ ಸರ್ಕಾರ ಏನು ದಾಸ್ತಾನು ಮಾಡಬೇಕಾಗಿತ್ತೋ, ಅದನ್ನು ಮಾಡಿಲ್ಲವಾದ್ದರಿಂದ ದಾಸ್ತಾನಿನ ಕೊರತೆ ಇದೆ. ಹೀಗಾಗಿ ಮುಂಬರುವ ದಿನಗಳಲ್ಲಿ ನಾಗರಿಕರಿಗೆ ಗ್ಯಾಸ್, ಪೆಟ್ರೋಲ್, ಡಿಸೆಲ್‌ಗಳು ಸಿಗುವುದಿಲ್ಲ. ಕೇಂದ್ರ ಸರ್ಕಾರದವರು ಏನು ದಾಸ್ತಾನನ್ನು ಶೇಖರಣೆ ಮಾಡಬೇಕಾಗಿತ್ತೋ, ಅದನ್ನು ಮಾಡಿಲ್ಲ. ಇಂತಹ ಮಾತುಗಳನ್ನು ನಾವು ಇವತ್ತಿನ ಎಲ್ಲಾ ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ವಿಶೇಷವಾಗಿ ಪತ್ರಿಕೆಯೊಂದರಲ್ಲಿ "States feel the LGP cylinder pinch" ಎಂಬುದಾಗಿ ವರದಿಯಾಗಿದೆ. ಏನೇನು ಸಿಲಿಂಡರ್‌ಗಳ ಕೊರತೆ ಇದೆ ಎನ್ನುವುದನ್ನು ಇವತ್ತಿನ ಹಿಂದೂ ಪತ್ರಿಕೆಯಲ್ಲಿ ಒಂದು ದೊಡ್ಡ ಆರ್ಟಿಕಲ್‌ವೊಂದು ವರದಿಯಾಗಿದೆ. ಅದೇ ರೀತಿಯಾಗಿ ರಾಜ್ಯಸಭೆಯಲ್ಲಿ ಏನು ಆಗಿದೆ ಅದನ್ನೂ ಸಹ "ದಿ ಹಿಂದೂ" ಪತ್ರಿಕೆಯಲ್ಲಿ ವರದಿಯಾಗಿದೆ. ಅದು ಏನೆಂದರೆ, "In Rajya Sabha, MP's blame PM's foreign policy for fuel crisis." ಇವತ್ತಿನ ದಿವಸ ದೇಶದ ವಿದೇಶಾಂಗ ನೀತಿ ಏನಿದೆ, ಕೇಂದ್ರದ ಬಿ.ಜೆ.ಪಿ. ಸರ್ಕಾರವು ಬುದ್ಧಿವಂತಿಕೆಯಿಂದ ವ್ಯವಹಾರ ಮಾಡಿ, ಮಧ್ಯಸ್ಥಿಕೆಯನ್ನು ಮಾಡಿ ನಮಗೆ ವಿದೇಶಾಂಗ ನೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ಇದರ ಮೂಲಕ ನಮ್ಮ ದೇಶಕ್ಕೆ ಏನು ಇಂಧನ ಪೂರೈಕೆ ಆಗಬೇಕಾಗಿತ್ತೋ, ಸಕಾಲದಲ್ಲಿ ಇಂಧನ ಮತ್ತು ಗ್ಯಾಸ್ ಇವುಗಳನ್ನು ಪಡೆದುಕೊಳ್ಳುವಂತೆ ಮಾಡಬೇಕಾಗಿತ್ತು. ಇದರಲ್ಲಿ ಕೇಂದ್ರ ಸರ್ಕಾರವು ವೈಫಲ್ಯವಾಗಿದೆ ಎನ್ನುವ ವರದಿಯನ್ನು ಇವತ್ತಿನ ದಿವಸ ರಾಜ್ಯಸಭೆಯಲ್ಲಿ ಸಂಸದರು ಚರ್ಚೆ ಮಾಡಿದ್ದು, ಇದು "ದಿ ಹಿಂದೂ" ಪತ್ರಿಕೆಯಲ್ಲಿ ವರದಿಯಾಗಿದೆ. ಇದೇ ರೀತಿಯಾಗಿ ಇನ್ನೊಂದು ಪತ್ರಿಕೆಯಲ್ಲಿ "Why is India staring at LPG deficit?" ಎಂಬುದಾಗಿ ವರದಿಯಾಗಿದೆ. ಇದರಲ್ಲಿ ಏನೇನು ನಮಗೆ ಬೇಡಿಕೆಗಳಿತ್ತೋ, ಎಲ್.ಪಿ.ಜಿ. ಸಿಲಿಂಡರ್‌ಗಳಲ್ಲಿ ಸರಬರಾಜಿನಲ್ಲಿ ಏನಾಗಿದೆ, ಕೇಂದ್ರ ಸರ್ಕಾರವು ಇದನ್ನು ಯಾವ

ರೀತಿಯಾಗಿ ಜನರಿಗೆ ವಿಶ್ವಾಸವನ್ನು ತುಂಬಬೇಕಾಗಿತ್ತು. ಇದು ಕರ್ನಾಟಕದಲ್ಲಾಗಲೀ ಅಥವಾ ದೇಶದಲ್ಲಾಗಲೀ ಕಪ್ಪು ಮಾರುಕಟ್ಟೆಯನ್ನು ಸೃಷ್ಟಿ ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಜನ ಭಯಭೀತರಾಗುವ ಅವಶ್ಯಕತೆ ಇಲ್ಲ. ನಿಮ್ಮ ಜೊತೆಗೆ ನಾವು ಇದ್ದೇವೆ; ನಿಮಗೆ ಅವಶ್ಯಕತೆ ಇರುವ ಇಂಧನ, ಗ್ಯಾಸ್ ಅಥವಾ ಗ್ಯಾಸ್ ಸಿಲಿಂಡರ್ ಇವುಗಳನ್ನು ಸರಬರಾಜು ಮಾಡುತ್ತೇವೆ ಎನ್ನುವ ಆತ್ಮವಿಶ್ವಾಸವನ್ನು ತುಂಬುವ ನಿಟ್ಟಿನಲ್ಲಿ ಇವತ್ತಿನ ದಿವಸ ಕೇಂದ್ರ ಸರ್ಕಾರವು ವೈಫಲ್ಯವನ್ನು ಕಂಡಿದೆ. ಇಂತಹ ಸಂದರ್ಭದಲ್ಲಿ ಇವತ್ತಿನ ದಿವಸ ಪತ್ರಿಕೆಗಳಲ್ಲಿ ಪ್ರಕಟಗೊಂಡ ವರದಿಗಳು ಬಹಳ ದೊಡ್ಡ ಮಟ್ಟದಲ್ಲಿ ಬರುತ್ತಿವೆ. ಇನ್ನೊಂದು ಪತ್ರಿಕೆಯ ಸಂಪಾದಕೀಯದಲ್ಲಿ "On all Cylinders: Stopping LPG black market requires commercial supply restoration, market pricing, distributor audits." ಇದು ಬಹಳ ಪ್ರಮುಖವಾದ ಸುದ್ದಿಯಾಗಿದೆ ಎಂದು ನಾನು ಭಾವಿಸುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇವತ್ತಿನ ದಿವಸ ನಮ್ಮ ಅಥವಾ ದೇಶದ ಬೇರೆ ರಾಜ್ಯಗಳಿರಬಹುದು, ಕೇಂದ್ರ ಸರ್ಕಾರದ ಇಂಧನ ನೀತಿ ಏನಿದೆ, ಅವರು ಮಾನಿಟರ್ ಮಾಡುವ ಪದ್ಧತಿಯ ಮೇಲೆ ಇವತ್ತಿನ ದಿವಸ ಇಡೀ ದೇಶದಲ್ಲಿ ಇಂಧನ ಹಾಗೂ ಗ್ಯಾಸ್ ಸಿಲಿಂಡರ್‌ಗಳು ಪೂರೈಕೆ ಆಗುತ್ತಿವೆ. ಇವತ್ತಿನ ದಿವಸ ಸರಬರಾಜುದಾರರಿಗೆ ಅಂದರೆ, ಅವರು ಎಲ್.ಪಿ.ಜಿ. ಗ್ಯಾಸ್ ಸಿಲಿಂಡರ್, ಪೆಟ್ರೋಲ್ ಅಥವಾ ಡಿಸೆಲ್ ಯಾವುದನ್ನು ಸರಬರಾಜು ಮಾಡುತ್ತಾರೆಯೋ, ಅದರ ದಾಸ್ತಾನನ್ನು ಶೇಖರಣೆ ಮಾಡುವ ವಿವರಗಳನ್ನು ಇವರು ಸಂಗ್ರಹಣೆ ಮಾಡಬೇಕಾಗುತ್ತದೆ. ಪ್ರತಿಯೊಬ್ಬ ಡಿಸೆಲ್ ಅಥವಾ ಪೆಟ್ರೋಲ್ ಪಂಪ್‌ದಾರರು ಏನಿದ್ದಾರೆ, ಅನಿಲ ಸರಬರಾಜು ಮಾಡುವುದಕ್ಕೆ ಏನು ಏಜೆನ್ಸಿಗಳನ್ನು ಕೊಟ್ಟಿದ್ದಾರೆಯೋ, ಇವರುಗಳಿಗೆ ಸಂಬಂಧಪಟ್ಟಂತೆ ಅವರು ಮಾನಿಟರ್ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಏಕಾಏಕಿಯಾಗಿ ನಮ್ಮ ರಾಜ್ಯದಲ್ಲಿ, ಅವರು ಕಮರ್ಷಿಯಲ್ ಸಿಲಿಂಡರ್ ಅನ್ನು ಸರಬರಾಜು ಮಾಡಿದ್ದಾರೆಯೇ ಅಥವಾ ಅದರ ದರ ಜಾಸ್ತಿ ಮಾಡಿದ್ದಾರೆಯೇ ಅಥವಾ ಇಲ್ಲವೇ ಎನ್ನುವ ಈ ರೀತಿಯಾದ ಮಾಹಿತಿ ನಮಗೆ ಪ್ರ್ಯಾಕ್ಟಿಕಲ್ ಆಗಿ ಗೊತ್ತಿಲ್ಲ. ಇವತ್ತಿನ ದಿವಸ ರಾಜ್ಯ ಸರ್ಕಾರಕ್ಕೆ ಅದರ ಮೇಲೆ ಸಂಪೂರ್ಣವಾದ ನಿಯಂತ್ರಣವಿಲ್ಲ. ಅಂದರೆ, ಇವರು ಉಗ್ರಾಣವನ್ನು ನಿಯಂತ್ರಣ ಮಾಡಿಲ್ಲವೆಂದಾದರೆ, ಸ್ವಾಭಾವಿಕವಾಗಿ ನಮ್ಮ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯವರು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಣ್ಣ ಮಟ್ಟದ ಅವಕಾಶವಿದೆ. ಆದರೆ, ಇಲ್ಲಿ ಕೇಂದ್ರದ ಬಿ.ಜೆ.ಪಿ. ಸರ್ಕಾರವು ವ್ಯವಸ್ಥಿತವಾದ ವೈಫಲ್ಯವನ್ನು ಕಂಡಿದೆ. ಇವತ್ತಿನ ದಿವಸ ನಮ್ಮ ರಾಜ್ಯವನ್ನೂ ಒಳಗೊಂಡಂತೆ ಇಡೀ ದೇಶದಲ್ಲಿ ಜನರಲ್ಲಿ ಆತ್ಮವಿಶ್ವಾಸವನ್ನು ತುಂಬಬೇಕಾಗಿತ್ತು. ಆದರೆ ಈ ರೀತಿಯಾಗಿ ಮಾಡಿಲ್ಲ. ಸರ್ಕಾರಕ್ಕೆ ಇನ್ನೂ ಒಂದು ತಿಂಗಳು ಎಲ್.ಪಿ.ಜಿ. ಗ್ಯಾಸ್ ಸಿಲಿಂಡರ್ ಅದು ವಾಣಿಜ್ಯ ಉಪಯೋಗಿ ಇರಬಹುದು ಅಥವಾ ಗೃಹೋಪಯೋಗಿ ಇರಬಹುದು, ಅಂದರೆ ಬಳಕೆಗಾಗಿ ಸಿಲಿಂಡರ್‌ಗಳ ಪೂರೈಕೆ ಬೇಕೋ, ಅದಕ್ಕೆ ಇನ್ನೂ ತಿಂಗಳು ಬೇಕಾಗುವಷ್ಟು ದಾಸ್ತಾನು ಇದೆ; ಯಾವುದೇ ಕಾರಣಕ್ಕೂ ಕಪ್ಪು ಮಾರುಕಟ್ಟೆಯನ್ನು ಸೃಷ್ಟಿ ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಯಾವುದೇ ಸರಬರಾಜುದಾರರು ಅಥವಾ ಏಜೆಂಟರು ಇದನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು

ಕೊಡುವುದಿಲ್ಲ ಎನ್ನುವ ಮಾತನ್ನು ಕೇಂದ್ರ ಸರ್ಕಾರವು ಹೇಳಬೇಕು. ಕೇಂದ್ರ ಸರ್ಕಾರ ಇಂತಹ ಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ವೈಫಲ್ಯವನ್ನು ಕಂಡಾಗ, ರಾಜ್ಯದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಮಧ್ಯ ಪ್ರವೇಶವನ್ನು ಮಾಡಬೇಕಾಗುತ್ತದೆ. ಇದು ಕೇಂದ್ರಕ್ಕೆ ಪತ್ರ ಬರೆಯುವುದು ಅಥವಾ ಕೇಂದ್ರದ ಗಮನವನ್ನು ಸೆಳೆಯುವುದು ಇರಬಹುದು ಅಥವಾ ಎಲ್ಲೆಲ್ಲಿ ಜನಸಾಮಾನ್ಯರಿಗೆ ತೊಂದರೆ ಆಗುತ್ತಿದೆಯೋ, ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವ ಕೆಲಸವನ್ನು ಇವತ್ತಿನ ದಿವಸ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯವರು ಮಾಡಬೇಕಾಗುತ್ತದೆ. ಇವತ್ತಿನ ದಿವಸ ಕೇಂದ್ರ ಸರ್ಕಾರದ ದೊಡ್ಡ ಮಟ್ಟದ ವೈಫಲ್ಯ ಏನು ಆಗಿದೆಯೋ, ಬಹುತೇಕ ರಾಜ್ಯದಲ್ಲಿ ಎಲ್ಲಾ ಜನ ಸಾಮಾನ್ಯರು ತಮ್ಮ ಜೀವನ ನಿರ್ವಹಣೆಯನ್ನು ಸಣ್ಣ ಸಣ್ಣ ಆರ್ಥಿಕ ವ್ಯವಸ್ಥೆಯಲ್ಲಿ ಮಾಡಬೇಕಾಗಿದೆ. ಇಲ್ಲಿ ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ಅಥವಾ ವೇತನ ಅವಲಂಬಿತ ನೌಕರರು ಇರಬಹುದು. ಇವತ್ತಿನ ದಿವಸ ಸಿಲಿಂಡರ್‌ಗಳ ಸರಬರಾಜಿನ ತೊಂದರೆಯಾದರೆ, ಬಹಳಷ್ಟು ಜನರು ಸಂಕಷ್ಟಕ್ಕೆ ಒಳಗಾಗುತ್ತಾರೆ. ಕೇವಲ ಆರ್ಥಿಕ ಪರಿಸ್ಥಿತಿ ಒಂದೇ ಅಲ್ಲ; ನಮ್ಮ ರಾಜ್ಯದಲ್ಲಿರುವ ಆಹಾರ ಪೂರಕೈಯ ಪದ್ಧತಿಯೂ ಸಹ ತೊಂದರೆಗೆ ಒಳಗಾಗುವ ವಾತಾವರಣ ಇವತ್ತಿನ ದಿವಸ ಸೃಷ್ಟಿಯಾಗಿದೆ. ಕೆಳಮನೆಯಾದ ವಿಧಾನ ಸಭೆಯಲ್ಲಿಯೂ ಸಹ ನಿನ್ನೆ ಮತ್ತು ಇವತ್ತು ಇದರ ಬಗ್ಗೆ ದೊಡ್ಡ ಚರ್ಚೆಯಾಗಿದ್ದು, ಇದಕ್ಕೆ ರಾಜ್ಯ ಸರ್ಕಾರವು ಅಲ್ಲಿ ಉತ್ತರಿಸಿದೆ ಹಾಗೂ ನನಗೂ ಸಹ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಸರ್ಕಾರವು ನೀಡಿರುವ ಉತ್ತರವು ನನಗೆ ಅಷ್ಟು ಸಮರ್ಪಕವಾಗಿ ಕಾಣುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ಇವತ್ತಿನ ದಿವಸ ಬೆಂಗಳೂರು ನಗರವನ್ನು ಒಳಗೊಂಡಂತೆ ಎಲ್ಲಾ ಕಡೆಗಳಲ್ಲಿ ಶಾಸಕರು ನಿನ್ನೆ ಮತ್ತು ಇವತ್ತು ಮಧ್ಯಾಹ್ನ ಊಟಕ್ಕಾಗಿ ಹೋಟೆಲ್‌ಗಳಿಗೆ ಹೋದರೆ, ಅಲ್ಲಿ ಊಟ ಸರಬರಾಜು ಇಲ್ಲ ಎಂಬ ಬೋರ್ಡ್ ಅನ್ನು ಹಾಕಿದ್ದಾರೆ. ಇದಕ್ಕೆ ಸಿಲಿಂಡರ್ ಪೂರೈಕೆ ಇಲ್ಲದೇ ಇರುವುದೇ ಕಾರಣವಾಗಿದೆ. ಇದು ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಮೂಲಕ ಅನುಮತಿ ಪಡೆದುಕೊಂಡಿರುವ ಸರಬರಾಜುದಾರರ ವೈಫಲ್ಯವೇ ಅಥವಾ ರಾಜ್ಯ ಸರ್ಕಾರವು ಉಗ್ರಾಣದಲ್ಲಿರುವ ದಾಸ್ತಾನನ್ನು ಹೊರಗಡೆ ತರಿಸುವುದರಲ್ಲಿ ಆಗಿರುವ ಲೋಪವೇ ಎನ್ನುವುದನ್ನು ರಾಜ್ಯ ಸರ್ಕಾರವು ತಿಳಿಸಬೇಕಾಗಿರುತ್ತದೆ.

ಹೆಣ್ಣು ಮಕ್ಕಳು ತಮ್ಮಲ್ಲಿ ಒಂದು ರೀತಿಯಾದ ಸಣ್ಣ ಬಜೆಟ್ ಅನ್ನು ಇಟ್ಟುಕೊಂಡಿರುತ್ತಾರೆ. ಒಂದು ಸಿಲಿಂಡರ್‌ಗೆ ಸಾವಿರ ರೂಪಾಯಿಗಳಾದರೆ, ತಿಂಗಳಿಗೆ ಎರಡು ಸಿಲಿಂಡರ್‌ಗಳ ಅವಶ್ಯಕತೆ ಇದ್ದರೆ, ಇದಕೆಕ ಹೊಂದಾಣಿಕೆ ಮಾಡಿಕೊಂಡಿರುತ್ತಾರೆ. ಅದೇ ರೀತಿಯಾಗಿ ಸಣ್ಣ ಸಣ್ಣ ಕುಟುಂಬಗಳು ತಮ್ಮ ಕೂಲಿಯಿಂದ ಬಂದ ಹಣದಲ್ಲಿ ಗ್ಯಾಸ್ ಸಿಲಿಂಡರ್‌ನ ಮೇಲೆ ಅವಲಂಬನೆ ಆಗಿರುವವರು, ಇದಕ್ಕೆ ಹೊಂದಾಣಿಕೆ ಮಾಡಿಕೊಳ್ಳುವ ಕೆಲಸವನ್ನು ಮಾಡಿಕೊಂಡಿರುತ್ತಾರೆ. ಹೀಗಾಗಿ ಇವತ್ತಿನ ದಿವಸ ಸಾವಿರ ರೂಪಾಯಿಗಳು ಇರುವ ಸಿಲಿಂಡರ್ ಏಕಾಏಕಿಯಾಗಿ ಎರಡು ಸಾವಿರ ರೂಪಾಯಿಗಳಿಗೆ ಹೆಚ್ಚಳವಾದರೆ, ಅವರ ಇಡೀ ತಿಂಗಳ ಆರ್ಥಿಕ ವ್ಯವಸ್ಥೆಯು ವ್ಯತ್ಯಾಸವಾಗುತ್ತದೆ. ಅದೇ ರೀತಿಯಾಗಿ ನಾವು ಹೋಟೆಲ್‌ಗಳಿಗೆ ಹೋದರೆ, 100/- ರೂಪಾಯಿಗಳಿಗೆ ಸಿಗುವ

ಊಟಕ್ಕೆ 150/- ರೂಪಾಯಿಗಳನ್ನು ಡಿಮ್ಯಾಂಡ್ ಮಾಡುವ ಕೆಲಸವಾಗುತ್ತಿದೆ. ಅದೇ ರೀತಿಯಾಗಿ 100/- ರೂಪಾಯಿಗಳಿಗೆ ಸಿಗುವ ತಿಂಡಿಗೆ 200/- ರೂಪಾಯಿಗಳನ್ನು ಡಿಮ್ಯಾಂಡ್ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಹಾಲಿ ಇರುವ ಯುದ್ಧದ ಸಂದರ್ಭವನ್ನು ಬಳಸಿಕೊಂಡು ಅಥವಾ ದಾಸ್ತಾನು ಕೊರತೆ ಇದೆಯೇ ಅಥವಾ ಇಲ್ಲವೇ ಎನ್ನುವ ಮಾಹಿತಿಯನ್ನು ಕೂಡಲೇ ತಿಳಿಸಬೇಕು. ಇಡೀ ರಾಜ್ಯದಲ್ಲಿ ಒಂದು ರೀತಿಯ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಪೂರೈಕೆಯ ಸಮಸ್ಯೆ ಒಂದು ಕಡೆ ಆದರೆ, ಇಲ್ಲಿನ ಉಗ್ರಾಣ ಅಥವಾ ಏಜೆಂಟರು ಯಾರೇ ಇರಬಹುದು, ಇವರುಗಳು ಮಾಡುತ್ತಿರುವ ಕಳ್ಳ ದಂಧೆ ಅಥವಾ ಕಳ್ಳ ಮಾರುಕಟ್ಟೆಯನ್ನು ಸೃಷ್ಟಿ ಮಾಡುವ ಏನು ಪ್ರಯತ್ನವಿದೆಯೋ, ಇದರ ಕಾರಣಕ್ಕಾಗಿ ಇಡೀ ರಾಜ್ಯದಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಹುತೇಕವಾಗಿ ರಾಜ್ಯ ಸರ್ಕಾರಕ್ಕೆ ಅಥವಾ ಮಾನ್ಯ ಸಚಿವರಿಗೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವರಿಗೆ ವಿಶೇಷವಾದ ಅಧಿಕಾರವಿದೆ. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಇಂತಹ ಸಂದರ್ಭಗಳಲ್ಲಿ ದಾಳಿ ಮಾಡುವುದಕ್ಕೆ ಹಾಗೂ ಯಾರು ಕಳ್ಳ ಮಾರುಕಟ್ಟೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೋ, ಅವರುಗಳನ್ನು ನಿಯಂತ್ರಣ ಮಾಡುವುದಕ್ಕೆ ಹಾಗೂ ದಾಸ್ತಾನು ಇಟ್ಟುಕೊಂಡೂ ಸಹ ಗ್ರಾಹಕರಿಗೆ ಮೋಸ ಮಾಡುವ ಏಜೆಂಟರು ಅಥವಾ ಸರಬರಾಜುದಾರರ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ಅಥವಾ ಅಲ್ಲಿ ದಾಸ್ತಾನು ಇದ್ದು ಅವರು ಪೂರೈಕೆ ಮಾಡದಲೇ ಇದ್ದಾಗ, ಸರ್ಕಾರ ಮಧ್ಯ ಪ್ರವೇಶಿಸಿ, ಅದನ್ನು ಸೀಜ್ ಮಾಡಿ, ಅವುಗಳನ್ನು ತೆಗೆದುಕೊಂಡು ಜನರಿಗೆ ಪೂರೈಕೆ ಮಾಡುವ ನಿಟ್ಟಿನಲ್ಲಿ ಅಥವಾ ಕೇಂದ್ರ ಸರ್ಕಾರದಿಂದ ಏನಾದರೂ ಲೋಪವಾಗಿದ್ದರೆ ಅದನ್ನು ಜನರ ಗಮನಕ್ಕೆ ತರುವುದರಲ್ಲಿ ರಾಜ್ಯ ಸರ್ಕಾರದ ಪಾತ್ರ ಇದೆ. ಏಕೆಂದರೆ, ಇವತ್ತಿನ ದಿವಸ ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಹೆಣ್ಣು ಮಗಳು ಎರಡು ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದರೆ, ಆಕೆಯ ಆದಾಯ ಒಂದೇ ಬಾರಿಗೆ ದುಪ್ಪಟ್ಟು ಆಗುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದ ಸದಸ್ಯರುಗಳಿಲ್ಲ.

**ಸಭಾಪತಿಯವರು:-** ಇದರ ಬಗ್ಗೆ ನಾನು ಸರ್ಕಾರಿ ಮುಖ್ಯ ಸಚೇತಕರಿಗೆ ಹೇಳಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಶ್ರೀ ರಮೇಶ್ ಬಾಬು ರವರು ಮಾತನಾಡುತ್ತಿದ್ದಾರೆ. ಕೊನೆಯ ಪಕ್ಷ ಅವರ ಪಕ್ಷದ್ದೇ ಸದಸ್ಯರುಗಳಾದರೂ ಸದನದಲ್ಲಿ ಇದ್ದು ಅದನ್ನು ಕೇಳಬೇಕಲ್ಲವೇ? ಯಾರೂ ಒಬ್ಬರೂ ಇಲ್ಲ.

**ಸಭಾಪತಿಯವರು:-** ಇದರ ಬಗ್ಗೆ ನಾನು ಹೇಳಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, "ಪಾಡಿಂದೇ ಪಾಡು" ಎಂಬ ನಾಣ್ಣುಡಿಯಂತೆ ನೀವು ದಿನಾಲೂ ಅದನ್ನೇ ಹೇಳುತ್ತೀರಿ. ನಮಗೂ ಹೇಳುತ್ತೀರಿ, ಅವರಿಗೂ ಹೇಳುತ್ತೀರಿ ಅಷ್ಟೇ.

**ಸಭಾಪತಿಯವರು:-** ಇದರ ಬಗ್ಗೆ ನಾನು ಸರ್ಕಾರಿ ಮುಖ್ಯ ಸಚೇತಕರಿಗೆ ಹೇಳಿದ್ದೇನೆ. ಮತ್ತೇ ನಾನೇನು ಮಾಡಲಿ?

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರ ನೀಡಬೇಕಾದರೆ, Public Sector Oil Marketing Companies ಗಳು ಸರಬರಾಜು ಮಾಡುವ ಎಲ್.ಪಿ.ಜಿ. ಸಿಲಿಂಡರ್‌ಗಳನ್ನು ಸಮರ್ಪಕವಾಗಿ ಕೇವಲ ಗೃಹ ಬಳಕೆಯ ಗ್ರಾಹಕರಿಗೆ ಸರಬರಾಜು/ಮಾರಾಟವಾಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತೆ ನಿರ್ದೇಶನ ನೀಡಿರುತ್ತದೆ ಹಾಗೂ ಈ ಕೆಳಕಂಡ ಸೂಚನೆಗಳನ್ನೂ ಸಹ ನೀಡಿರುತ್ತದೆ.

(ಮುಂದು)

(೩೪೯) ೧೨-೦೩-೨೦೨೬/೩-೨೦/bkp-md (ಸಭಾಪತಿಯವರ ಉಪಸ್ಥಿತಿ)

**ಶ್ರೀ ರಮೇಶ್ ಬಾಬು(ಮುಂದು)**

ಇಲ್ಲಿ ಅಧಿಕಾರಿಗಳು ಒಂದು ನಿರ್ದೇಶನವನ್ನು ಕೊಟ್ಟು ಕುಳಿತುಕೊಂಡರೆ ಕೆಲಸವಾಗುವುದಿಲ್ಲ. ನೀವು ಈ ಕೆಲಸವನ್ನು ಏತಕ್ಕೆ ಮಾಡಬೇಕೆಂದರೆ, it is a special occasion. ನಾವು ಇದನ್ನು ಒಪ್ಪಿಕೊಳ್ಳುತ್ತೇವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಇವತ್ತು ಏನು ಪರಿಸ್ಥಿತಿ ನಿರ್ಮಾಣವಾಗಿದೆ. ಯುದ್ಧ ಏನು ನಡೆಯುತ್ತಿದೆ. ಅದು ನಮ್ಮ ಕೈಯಲ್ಲಿ ಇರುವುದಿಲ್ಲ. ಅದನ್ನು ರಾಜ್ಯ ಸರ್ಕಾರ ನಿಯಂತ್ರಣ ಮಾಡದೇ ಹೋದರೆ ಇದಕ್ಕೆ ಬಲಿಯಾಗುವವವರು ಕೆಳವರ್ಗದವರು, ಮಧ್ಯಮ ವರ್ಗದವರು ಹಾಗೂ ವಿಶೇಷವಾಗಿ ಹೆಣ್ಣುಮಕ್ಕಳು ತೊಂದರೆಗೆ ಒಳಗಾಗುತ್ತಾರೆ. ಅವರು ಕುಟುಂಬದ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ಅಂತಹ ಹೆಣ್ಣು ಮಕ್ಕಳು ಇದನ್ನು ನಿಯಂತ್ರಣ ಮಾಡುವಂತಹದ್ದಾಗಿರುತ್ತದೆ. ಇದನ್ನು ಆರ್ಥಿಕವಾಗಿ ನಿರ್ವಹಣೆ ಮಾಡಲು ಕಷ್ಟವಾಗುತ್ತದೆ. ಹಾಗಾಗಿ, ರಾಜ್ಯ ಸರ್ಕಾರ ನಿರ್ದೇಶನ ಕೊಟ್ಟು, ಮತ್ತೊಂದನ್ನು ಮಾಡಿ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ, ನಾನು ರಾಜ್ಯ ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ ಇವತ್ತು ಕೇಂದ್ರ ಸರ್ಕಾರದ ಒಂದು ಪರಿಸ್ಥಿತಿಯಿಂದ ಮತ್ತು ಅಥವಾ ಅವರ ನೀತಿಯಿಂದ ರಾಜ್ಯದಲ್ಲಿ ಏನು ಅನ್ಯಾಯವಾಗಿದೆ, ಅದನ್ನು ಸರಿಪಡಿಸುವಂತಹ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು. ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಏನು ಎಲ್.ಪಿ.ಜಿ. ಸಿಲಿಂಡರ್ ಬಳಕೆಯ ಗ್ರಾಹಕರು ಇದ್ದಾರೆ, ಅವರಿಗೆ ಆತ್ಮ ಸ್ಥೈರ್ಯ ತುಂಬುವಂತಹದ್ದು ಮತ್ತು ಕೇಂದ್ರ ಸರ್ಕಾರದ ನೀತಿಯಿಂದ ಇವತ್ತು ಏನು Black Market create ಆಗುವಂತಹ ಸಂದರ್ಭ ಸೃಷ್ಟಿಯಾಗಿದೆ. ಅದನ್ನು ತಡೆಯುವಂತಹ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಬೇಕು.

ಹಾಗಾಗಿ, ತಾವು ಏನು ಸುತ್ತೋಲೆಯನ್ನು ಹೊರಡಿಸಿ, ನಿರ್ದೇಶನ ಕೊಟ್ಟಿದ್ದೀರಿ, ಇದು strictly it has to be implemented. ನಿರ್ದೇಶನ ಕೊಟ್ಟಿದ್ದೇವೆ, ಅವರು ಕ್ರಮ ತೆಗೆದುಕೊಳ್ಳುತ್ತಾರೆಂದು ಕುಳಿತರೆ ಕಷ್ಟವಾಗುತ್ತದೆ. ಈಗಾಗಲೇ ಈ ವಿಚಾರ ಮಾನ್ಯ ಸಚಿವರ ಅರಿವಿಗೆ ಬಂದಿದೆ ಎಂದು ನಾನು ಭಾವಿಸುತ್ತೇನೆ.

ಬೆಂಗಳೂರಿನಲ್ಲಿರುವ ಬಹಳಷ್ಟು ಹೋಟೆಲ್‌ಗಳು ಬಹಳಷ್ಟು ಮಟ್ಟಿಗೆ ಸಾಂಕೇತಿಕವಾಗಿ ಹೋಟೆಲ್‌ಗಳನ್ನು ಬಂದ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ನಮಗೆ ಸಿಲಿಂಡರ್‌ಗಳು ಸಿಗುತ್ತಿಲ್ಲವೆಂದು ಹೇಳಿದರು. ಆ ಒಂದು ಕಾರಣವನ್ನು ಇಟ್ಟುಕೊಂಡು ದರ ಏರಿಕೆಯನ್ನು ಮಾಡಿದ್ದಾರೆ. ಬೆಂಗಳೂರಿನ ಹೋಟೆಲ್‌ಗಳಲ್ಲಿ ಮುಕ್ತವಾಗಿ ತಿಂಡಿ ಸಿಗುವಂತಹ ಪರಿಸ್ಥಿತಿ ಇಲ್ಲ. ಹಾಗಾಗಿ, ನಾನು ಸರ್ಕಾರವನ್ನು ವಿನಂತಿ ಮಾಡುತ್ತೇನೆ. ನೀವು ಏನು ಕೇಂದ್ರ ಸರ್ಕಾರದ ವೈಫಲ್ಯದಿಂದ ಉಂಟಾಗಿರುವ ಈ ಲೋಪವನ್ನು ಸರಿಪಡಿಸುವಂತಹ ಪ್ರಯತ್ನವನ್ನು ನೀವು ಮಾಡಬೇಕೆಂದು ಹೇಳಿ ರಾಜ್ಯ ಸರ್ಕಾರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಮಂತ್ರಿಗಳಿಗೆ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಇತ್ತೀಚಿನ ವರ್ಷಗಳಲ್ಲಿ ಈ ರೀತಿಯ ಯಾವುದೇ scarcity ಬಂದಿರಲಿಲ್ಲ. ಅಂದರೆ, ಕೋವಿಡ್ ಬಂದಾಗ oxygen scarcity ಇತ್ತು. ಆದಾದನಂತರ ಬೆಂಗಳೂರು ಬಂದ್ ಆಗಿರಬಹುದು, ಬೇರೆ ಬೇರೆ ಕಾಯಿಲೆಗಳು ಬಂದಾಗ ಒಂದೊಂದು ಬಾರಿ, ಒಂದೊಂದು phase ನಲ್ಲಿ ನಮ್ಮ ರಾಜ್ಯವನ್ನು ಮತ್ತು ಸಾರ್ವಜನಿಕರನ್ನು ಕಾಡಿರುವಂತಹದ್ದು ನಮಗೆಲ್ಲಾ ಗೊತ್ತಿದೆ. ಆದರೆ, ಈ ಬಾರಿ ಗ್ಯಾಸ್ ಸಿಲಿಂಡರ್ ಏನಿತ್ತು, ಅದಕ್ಕೆ ಒಂದು ಉಜ್ವಲ ಸ್ಕೀಂ ತೆಗೆದುಕೊಂಡು ಬಂದು, ನಮಗೆ ಹೊಗೆರಹಿತ ಸೌಲಭ್ಯವನ್ನು ಕೊಡಬೇಕೆಂದು ಬಡವರಿಗೆ ಗ್ಯಾಸ್ ಕೊಡುತ್ತೇವೆ ಎಂದು ಹೇಳಿ ಒಂದು ಕಾರ್ಯಕ್ರಮವನ್ನು ಅನುಷ್ಠಾನ ಮಾಡಿರುವುದು ನಮಗೆಲ್ಲಾ ಗೊತ್ತಿದೆ. ಆದರೆ, ಗ್ಯಾಸ್ ಸಿಲಿಂಡರ್ ಬೆಲೆ ಜಾಸ್ತಿಯಾದ ಮೇಲೆ ಅದನ್ನು ಹೇಗೆ ರಿಕವರಿ ಮಾಡುವುದು ಎಂದು ಹೇಳಿ ನಾನು ಅದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಆದರೆ, ಇವತ್ತು ಬೇಕಾದಷ್ಟು ಜನರು ಅವಲಂಬಿತರಾಗಿರುವುದು ಈ commercial cylinders ಮೇಲೆ ಆಗಿರುತ್ತದೆ. ಏಕೆಂದರೆ, ಇವತ್ತು ಹೋಟೆಲ್‌ಗಳು ನಡೆಯಬೇಕು, ಇಲ್ಲವೇ ಹಾಸ್ಟೆಲ್‌ಗಳು ನಡೆಯಬೇಕು, ಮತ್ತೆ, ಇನ್ನೊಂದು ಕಡೆ Business Centres ನಡೆಯಬೇಕೆಂದರೆ ಇವತ್ತು Mobile Canteen ನಿಂದ ಹಿಡಿದು ಪ್ರತಿಯೊಬ್ಬರಿಗೂ ಸಹ ಸಿಲಿಂಡರ್ ಬೇಕಾಗಿದೆ. ರಾಜ್ಯದಲ್ಲಿ ಕಳೆದ 6 ದಿನಗಳಿಂದ ಒಂದೇ ಒಂದು commercial cylinder supply ಆಗಿರುವುದಿಲ್ಲ. ಇವತ್ತು ಏನು domestic cylinders ಇತ್ತು, ಅದು 40 ರಿಂದ 50 % ನಷ್ಟು ಸರಬರಾಜು ಆಗುತ್ತಿದೆ. ಅದನ್ನು ಸಿನಿಯಾರಿಟಿ ಮೇಲೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ, ಇವತ್ತು ಕಳೆದ 6 ದಿವಸಗಳಿಂದ commercial cylinder ಬರದಿದ್ದರೂ ಸಹ ನೀವೇ ಎಲ್ಲಿಯಾದರೂ ಒಂದು ಕಡೆ ಹೋಟೆಲ್‌ಗೆ ಹೋಗಿ, ಪೂರಿ ಕೊಡಿ, ಇಡ್ಲಿ ವಡೆ ಕೊಡಿ ಎಂದರೆ ಬರಿ ಇಡ್ಲಿ ಇದೆ ಎಂದು ಹೇಳುತ್ತಾರೆ. ಈ ಒಂದು ಮಟ್ಟಕ್ಕೆ ಎಲ್ಲಾ dishes ಅನ್ನು ನಾವು ಅದನ್ನು ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಿ ಅವರು regulate ಮಾಡಿದ್ದಾರೆ. ಆದರೆ, ಇವತ್ತು

ನೀವು ಯಾವಾಗಲಾದರೂ ಫೋನ್ ಮಾಡಿ, ಆನ್‌ಲೈನ್ ನಲ್ಲಿ ನಮಗೆ 10 ದಿನಗಳಿಗೊಮ್ಮೆ ಸಿಲಿಂಡರ್ ಅನ್ನು ತೆಗೆದುಕೊಂಡು ಬಂದು ಕೊಡುತ್ತಿದ್ದರು. ಅದು 10 ದಿನವಾಗಲಿ, 15ದಿನಗಳಾಗಲಿ, 20 ದಿನಗಳಾಗಲಿ ಸಿಲಿಂಡರ್ ಅನ್ನು ತೆಗೆದುಕೊಂಡು ಬಂದು ಕೊಡುತ್ತಿದ್ದರು. ಈಗ ಅದನ್ನು 16 ದಿನಕ್ಕೆ ಎಂದು ಮಾಡಿದರು, 20 ರಿಂದ 25 ದಿನ ಎಂದು ಮಾಡಿದರು. ಆದರೆ, ಈಗ ಒಂದು ತಿಂಗಳಿಗೆ ಎಂದು ಹೇಳಿ ಮೇಸೇಜ್ ಬರುತ್ತಿದೆ. ಒಂದುವೇಳೆ ನಾವು ಏನಾದದರೂ ಮೊಬೈಲ್‌ನಲ್ಲಿ ನಾನೇ ಈಗ try ಮಾಡಿದ್ದಕ್ಕೆ sorry, we will take your orders only after a month ಎಂದು ಹೇಳಿ ನನಗೆ ಮೆಸೇಜ್ ಬಂತು. ಈ ಕೆಲಸವನ್ನು ನಾನು ಇಲ್ಲಿಗೆ ಬರುವ ಮುಂಚೆಯೇ ಮಾಡಿದ್ದೆ. ಈ ಒಂದು scarcity ಇದೇ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಇದಕ್ಕೆ ಎರಡು ಕಾರಣಗಳಿವೆ. ಇವತ್ತು ಹಾಸ್ಟೆಲ್‌ಗಳ ವಿಚಾರವಾಗಿ ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ ಹಾಸ್ಟೆಲ್‌ಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ , ಆಸ್ಪತ್ರೆಗಳಿಗೆ ತೊಂದರೆಯಾಗುವುದಿಲ್ಲವೆಂದು ಹೇಳಿದರು. ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಸಮಯ ಪರೀಕ್ಷಾ ವೇಳೆಯ ಸಮಯ. ಎಲ್ಲಾ ಹಾಸ್ಟೆಲ್‌ಗಳಿಗೆ, gas cylinder supply ಆಗಬೇಕು. ಮಕ್ಕಳಿಗೆ ಊಟ ಸಿಗಬೇಕೆನ್ನುವುದು ಒಂದು ವಿಚಾರ.

ಎರಡನೆಯದಾಗಿ, ಈಗ ಹಬ್ಬ ಬೇರೆ ಬರುತ್ತಿದೆ. ಯುಗಾದಿ ಹಬ್ಬ ನಮ್ಮ ಹಿಂದುಗಳಿಗೆಲ್ಲಾ ಒಂದು ದೊಡ್ಡ ಹಬ್ಬವಾಗಿದ್ದು, ಅದರ ಜೊತೆಗೆ ರಂಜಾನ್ ಹಬ್ಬ ಸಹ ಬರುತ್ತಿದೆ. ಜೊತೆ ಜೊತೆಗೆ ಹಬ್ಬ ಇರುವುದರಿಂದ ಇಡೀ ದೇಶಕ್ಕೆ ಇವತ್ತು gas cylinderನ ಬೇಡಿಕೆ ಜಾಸ್ತಿ ಇದೆ. ಏಕೆಂದರೆ, ಅಡುಗೆಯನ್ನು ಮಾಡಬೇಕು, ಹಬ್ಬಕ್ಕೆ ನೆಂಟರಿಷ್ಟರು ಬರುತ್ತಾರೆ. ಇಂತಹ ಸಮಯದಲ್ಲಿ ಇವತ್ತು ನಮಗೆ gas cylinders ಸಿಗದೇ ಹೋದರೆ ಬಹಳ ಕಷ್ಟವಾಗುತ್ತದೆ. ಇವತ್ತು ಈ ವಿಚಾರವಾಗಿ ಪತ್ರಿಕೆಯಲ್ಲಿ ನೋಡಿದರೆ ಅಸ್ಸಾಂ ನಲ್ಲಿ ಮತ್ತು ಕೇರಳಾದಲ್ಲಿ protest ನಡೆಯುತ್ತಿದೆ. ಇನ್ನು ಬೇರೆ ಬೇರೆ ಕಡೆ protest ನಡೆಯುತ್ತಿದೆ. There are long queues. ಮೈಸೂರು, ಬೆಂಗಳೂರು ಈ ರೀತಿಯಲ್ಲಿ ಎಲ್ಲಾ ಕಡೆಯಲ್ಲೂ ಸಹ Gas Office ಗಳ ಮುಂದೆ ದೆಹಲಿಯಿಂದ ಹಿಡಿದು ಕನ್ಯಾಕುಮಾರಿಯವರೆಗೂ ಜನರು ಗ್ಯಾಸ್‌ಗೋಸ್ಕರ ಸರದಿಯಲ್ಲಿ ನಿಂತಿದ್ದಾರೆ. ಆದರೆ, ಯಾರಿಗೂ ಸಹ gas cylinders ಸಿಗುತ್ತಿಲ್ಲ. ಇದು ಈ ರೀತಿಯಲ್ಲಿ ಏತಕ್ಕೆ ಆಗಿದೆ ಎಂದರೆ ಇವತ್ತು ಈ ವಿಚಾರವಾಗಿ ಮಾನ್ಯ ಶ್ರೀ ರಮೇಶ್ ಬಾಬು ರವರು ಈಗಾಗಲೇ ಹೇಳಿದ್ದಾರೆ.

**ಸಭಾಪತಿಯವರು:-** ಇನ್ನು ಬಹಳ ಜನ ಮಾತನಾಡುವವರು ಇದ್ದು ಸ್ವಲ್ಪ ಸಂಕ್ಷಿಪ್ತವಾಗಿ ಮಾತನಾಡಿ.

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಇವತ್ತು ನಮ್ಮ foreign policy ಬಗ್ಗೆ ಮತ್ತು ಇತ್ಯಾದಿಯಾಗಿ ನಮ್ಮ ಶ್ರೀಮಾನ್ ರಮೇಶ್ ಬಾಬು ರವರು ಯಾವ ಯಾವ

ಪತ್ರಿಕೆಯಲ್ಲಿ ಏನೇನು ವರದಿ ಆಗಿದೆ, ಮತ್ತು ಇಡೀ ದೇಶದಲ್ಲಿ ಆಗುತ್ತಿರುವಂತಹ ಅವಗಡಗಳ ಬಗ್ಗೆ ಹೇಳಿದ್ದಾರೆ. ಆದರೆ, panic buying ಇವತ್ತು ಬಂದು ಬಿಟ್ಟಿದೆ. ಎಲ್ಲಿ ಗ್ಯಾಸ್ ಮುಗಿದು ಹೋಗಿ ಬಿಡುತ್ತೋ, ಏನು ಕತೆಯೋ ಎಂದು ಹೇಳಿ ಪ್ರತಿಯೊಬ್ಬರು ಸಹ ಪೋನ್ ಕಾಲ್ ಮಾಡುವುದು ಮತ್ತೆ, ಎಲ್ಲಾ ಕಡೆಯೂ ಹೋಗುವುದು, ವಿಚಾರಿಸುವುದನ್ನೆಲ್ಲಾ ಮಾಡುತ್ತಿದ್ದಾರೆ. Domestic production and supply ಇವತ್ತು ಇಡೀ ದೇಶದಲ್ಲಿ ನಮಗೆ ಬಹಳ ಕಡಿಮೆಯಾಗಿದೆ. ಉತ್ಪಾದನೆಯೂ ಕಡಿಮೆಯಾಗಿರುವುದರಿಂದ gas cylinder ಸಿಗದಿದ್ದರೆ ಬಹಳ ಕಷ್ಟವಾಗುತ್ತದೆ. ಇದರಿಂದ ಹಬ್ಬ ಮಾಡುವುದನ್ನು ಬಿಟ್ಟುಬಿಟ್ಟು ಗ್ಯಾಸ್ ಅಂಗಡಿಗಳ ಮುಂದೆ ನಿಲ್ಲುವಂತಹ ಒಂದು ಪರಿಸ್ಥಿತಿ ಬರಬಾರದು. ಹಾಗಾಗಿ, ಇವತ್ತು ಯಾವ ಯಾವ ಒಂದು ಶುಭ ಕಾರ್ಯಕ್ರಮಗಳಿಗೆ ಮದುವೆ ಇತ್ಯಾದಿಗಳಿಗೆ ಛತ್ರಗಳ bookings ಇತ್ತು, Gas cylinders ಗಳು ಇಲ್ಲವೆಂದು ಈ ಒಂದು bookings ಎಲ್ಲವೂ cancel ಆಗುತ್ತಿದೆ.. ಏಕೆಂದರೆ, ನಮಗೆಲ್ಲರಿಗೂ ಗೊತ್ತಿರುವಂತೆ ಈ ರೀತಿಯ ಶುಭ ಕಾರ್ಯಕ್ರಮಗಳಿಗೆ gas cylinder ಗಳು ಬೇಕಾಗುತ್ತದೆ. ಆದರೆ, ಇವತ್ತು ಏನಾಗಿದೆ ಎಂದರೆ ನಮ್ಮ ದೇಶಕ್ಕೆ 40 very large gas cylinders ಬೇಕಾಗಿತ್ತು, ಆದರೆ, ನಮಗೆ ಇವತ್ತು ಬಂದಿರುವುದೇ 10 very large gas cylinders ಬಂದಿದೆ. ಇನ್ನು ಸಹ 30 very large gas cylinders ಬರಬೇಕಾಗಿದೆ. ಸರ್ಕಾರ ಇದರ ಬಗ್ಗೆ pursue ಮಾಡುತ್ತಿದ್ದೇವೆಂದು ಹೇಳಿ ಕೇಂದ್ರ ಸರ್ಕಾರವೂ ಸಹ ಹೇಳಿಕೆಯನ್ನು ಮಾಡಿದೆ. ಅದರೆ, ಈ ವಿಚಾರವನ್ನು ಉಪಯೋಗಿಸಿಕೊಂಡು Black Market ಏನಿದೆ, ಅದನ್ನು ಬಹಳ ಕ್ರೂರವಾಗಿ ಉಪಯೋಗಿಸಿಕೊಂಡು ಏನು Refilling Centres ಅನ್ನು ಇಷ್ಟು ದಿವಸಗಳ ಕಾಲ regulate ಮಾಡುತ್ತಿದ್ದರು, ಬೇಕು ಬೇಕೆಂದೇ 5 ಕೆ.ಜಿ.ಯ ಒಂದು ಸಿಲಿಂಡರ್ ಅನ್ನು 7 ಕೆ.ಜಿ.ಯ ಮತ್ತು 2 ಕೆ.ಜಿಯ ಸಿಲಿಂಡರ್‌ಗಳನ್ನು fill ಮಾಡಿ ಇವತ್ತು Black Market ಯಲ್ಲಿ ಮಾರಾಟ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ, ಉದಾಹರಣೆಗೆ ಹೇಳುವುದಾದರೆ, ಇವತ್ತು ಮೈಸೂರು ನಗರದಲ್ಲಿ 1,36,000 ಜನರು Mobile Canteen ಗಾಗಿ ನೋಂದಣಿ ಮಾಡಿದ್ದಾರೆ. ಸುಮಾರು 60 ರಿಂದ 70 ಸಾವಿರ Mobile Canteen ಗಳು ಇದರಿಂದಾಗಿಯೇ ಜೀವನ ಮಾಡುತ್ತಿದ್ದಾರೆ. ಇವತ್ತು Mobile Canteen ಳಲ್ಲಿ ಸಹ ಗ್ಯಾಸ್ ಇಲ್ಲವೆಂದು ಹೇಳಿ ಯಾರು ಕೆಲಸಮಾಡುತ್ತಿಲ್ಲ. ಬೆಂಗಳೂರಿನಲ್ಲಿ 4 ರಿಂದ 5 ಲಕ್ಷ Mobile Canteen ಗಳಿವೆ. ಆದರೆ, ಯಾವ ಕ್ಯಾಂಟಿನ್‌ಗಳು ಸಹ ಕೆಲಸ ಮಾಡುತ್ತಿಲ್ಲ. ಹಾಗಾಗಿ, ಎಲ್ಲರಿಗೂ ಬಹಳ ತೊಂದರೆಯಾಗುತ್ತದೆ. ಈ ತೊಂದರೆಯಾಗುವುದರಿಂದ ಏನಾಗುತ್ತದೆ ಎಂದು ಗಮನಿಸಬೇಕಾಗುತ್ತದೆ. ಅದಕ್ಕಾಗಿ, ಈ ಬಗ್ಗೆ ಸರ್ಕಾರಕ್ಕೆ ಒಂದು ನಿವೇದನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಇವತ್ತು renewable energies ಯಿಂದ ಇವತ್ತು ಅಡುಗೆ ಮಾಡುವಂತಹ ಸಾಮಗ್ರಿಗಳು ಬಂದಿವೆ. ಇಲ್ಲವೇ ಗ್ಯಾಸ್ ಸಿಗುವುದಿಲ್ಲವೆಂದರೆ ಅದನ್ನಾದರೂ offer ಮಾಡಬೇಕು, ಇಲ್ಲವೆಂದರೆ, Induction Stoves

ಇದಕ್ಕೋಸ್ಕರ ಉಪಯೋಗಿಸಬೇಕು. Power cut ಅಂತು ಮಾಡಲೇ ಬಾರದು. ಏಕೆಂದರೆ, ಇವತ್ತು electric ಮೇಲೆ ಅವಲಂಬಿತರಾಗಬೇಕಾದಂತಹ ಪರಿಸ್ಥಿತಿ ಬರುವುದರಿಂದ ಇವತ್ತು power cut ಆಗಬಾರದು. ಇದರ ಬಗ್ಗೆ ನಾವು ಏನಾದರೂ ಗಮನಹರಿಸದಿದ್ದರೆ ಈ gas cylinder ಅನ್ನು ಏನು ನಮ್ಮ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಮಂತ್ರಿಗಳು ಏನಿದ್ದಾರೆ, ಇವರು ಏನು ಒಂದು ಆದೇಶವನ್ನು ಕೊಟ್ಟಿದ್ದಾರೆ. ಅದನ್ನು ಜಾರಿಗೆ ತಂದು, ಈ ವಿಚಾರದಲ್ಲಿ ಬಹಳ strict vigil ಇಡಬೇಕು. ಯಾವುದೇ ದಯೆ-ದಾಕದಾಕ್ಷಣ್ಯ ಇರಬಾರದು. Black Market ನಲ್ಲಿ ಏನು ಮಾರಾಟ ಮಾಡಲಿಕ್ಕೆ ಹೊರಟಿದ್ದಾರೆ, ಅದರಿಂದ ತೊಂದರೆಯಾಗುತ್ತದೆ. ಡಾ॥ ರಾಜ್‌ಕುಮಾರ್‌ರವರ 'ದೂರದ ಬೆಟ್ಟ' ಸಿನಿಮಾವನ್ನು ಎಲ್ಲರೂ ನೋಡಿರುತ್ತೀರಿ. ಅದರಲ್ಲಿ ಡಾ॥ರಾಜ್‌ಕುಮಾರ್‌ರವರು ಮತ್ತು ಭಾರತಿಯವರು ಒಲೆಯನ್ನು ಹಚ್ಚಿಕೊಂಡು ಹಾಡು ಹಾಡಿಕೊಂಡು ಏನು ಒಬ್ಬಟ್ಟು ಮಾಡುತ್ತಾರಲ್ಲಾ, ಆ ಒಂದು ಸ್ಥಿತಿಗೆ ಹೊರಟು ಹೋಗಿ ಬಿಡುತ್ತೇವೆ. ಎಲ್ಲರ ಮನೆಯಲ್ಲೂ ಒಲೆ ಬರುವಂತಹ ಪರಿಸ್ಥಿತಿ ಬರುತ್ತದೆ. ಇದು ಸುಧಾರಣೆಯಾಗಬೇಕು. ಇದು ಸುಧಾರಣೆಯಾಗದಿದ್ದರೆ ಮುಂದಕ್ಕೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಈರುಳ್ಳಿಗೆ ಸರ್ಕಾರ ಬಿದ್ದು ಹೋಗಿರುವುದನ್ನು ನಾವು ನೋಡಿದ್ದೇವೆ. ಆದರೆ, ಗ್ಯಾಸ್ ವಿಚಾರವಾಗಿ ಸರ್ಕಾರ ಬಿದ್ದು ಹೋಗುವುದನ್ನು ಯಾರು ಸಹ ತಡೆಯುವುದಿಲ್ಲ. ಏಕೆಂದರೆ, ಇದು ಎಲ್ಲರಿಗೂ ಅಗತ್ಯವಾಗಿ ಬೇಕಾಗಿರುತ್ತದೆ. ಅದು ಹೆಂಗಸರಿಗೆ ಆಗಲಿ, ಗಂಡಸರಿಗೆ ಆಗಲಿ ಮನೆಯಲ್ಲಿ ಅಡುಗೆ ಮಾಡಬೇಕೆಂದರೆ ಗ್ಯಾಸ್ ಬೇಕೇ ಬೇಕಾಗುತ್ತದೆ. ಅದರ ಮೇಲೆಯೇ ಎಲ್ಲರೂ ಅವಲಂಬಿತರಾಗಿರುತ್ತಾರೆ. ಹಾಗೆಯೇ ಕ್ಷಾಮ ಬಂದಾಗ ಯಾವ ರೀತಿಯಲ್ಲಿ ನೀರು ಎಷ್ಟು ಮುಖ್ಯವಾಗಿರುತ್ತದೋ ಅದೇ ರೀತಿಯಲ್ಲಿ ಇವತ್ತು gas cylinders ಮುಖ್ಯವಾಗಿರುತ್ತದೆ. ಹಾಗಾಗಿ, ಸರ್ಕಾರ ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡು Black ಅನ್ನು ಸಂಪೂರ್ಣವಾಗಿ ತಡೆಗಟ್ಟಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ಮಾಡಿ ಎಷ್ಟು ಸಿಲಿಂಡರ್‌ಗಳ ಅಗತ್ಯ ಇದೆಯೋ ಅಷ್ಟನ್ನು ತರಿಸಿ, ಹಬ್ಬಕ್ಕೆ ಮತ್ತು ಸಾರ್ವಜನಿಕರಿಗೆ ಯಾವುದೇ ಕಾರಣಕ್ಕೂ ತೊಂದರೆಯಾಗಬಾರದು.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಯುದ್ಧದ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಗ್ಯಾಸ್ ಸಿಕ್ಕುವುದಿಲ್ಲ. ಹೆಣ್ಣು ಮಕ್ಕಳಿಗೆ ತೊಂದರೆಯಾಗುತ್ತದೆ ಎನ್ನುವುದನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಆದರೆ, ಒಂದು ವಿಚಾರ ನನಗೆ ಅರ್ಥವಾಗುವುದಿಲ್ಲ. ಕೇಂದ್ರ ಸರ್ಕಾರದ ನೀತಿಯ ವೈಫಲ್ಯದಿಂದ ಎಂದು ಹೇಳಿದರು. ಮಾನ್ಯ ಸಭಾಪತಿಯವರೆ, ರಾಜಕೀಯ ಮಾಡಬೇಕು, ಅದು ಎಲ್ಲಾ ಸಮಯದಲ್ಲಿ ಮಾಡಬಾರದು. ಇವತ್ತು ಒಂದು ಕಾಲ ಇತ್ತು. ನಮಗೆ ಗ್ಯಾಸ್ ಸಿಗುತ್ತಿರಲಿಲ್ಲ. ಅದು ಎಂ.ಪಿ.ಗಳ ಕೋಟಾದಿಂದ ಬರಬೇಕು, ಅಮೇಲೆ ಅದಕ್ಕೆ ದುಡ್ಡು ಕೊಡಬೇಕು. ಅದಕ್ಕೆ ಯಾರದ್ದಾದರೂ

ಶಿಫಾರಸ್ಸು ಬೇಕು. ಲಂಚ ಕೊಡಬೇಕು, ಗ್ಯಾಸ್ ಬುಕ್ ಮಾಡಿ 2-2 ತಿಂಗಳು ಕಳೆದರೂ ಸಹ ಗ್ಯಾಸ್ ಸಿಗುತ್ತಿರಲಿಲ್ಲ. ನಾನೇ ಸ್ವತಃ ಕಾಯುತ್ತಿದ್ದೆ. ಅನಂತರ ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಬಂದ ನಂತರ ರಸ್ತೆಯಲ್ಲಿ ನಾವು ಗ್ಯಾಸ್ ಅನ್ನು ಮಾರಿದ್ದೇವೆ.

(ಮುಂದು)

(350) 12.03.2026 03.30 ಎಸ್‌ವಿ-ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**

ಇಷ್ಟು ಮಾತ್ರವಲ್ಲದೆ ಅಕ್ಟೋಬರ್ 2025ರವರೆಗೆ ನಮ್ಮ ದೇಶದಲ್ಲಿರುವ ಗ್ಯಾಸ್ ಸಂಪರ್ಕ 33 ಕೋಟಿ ಇದ್ದು, 2014ರ ನಂತರ 14 ಕೋಟಿ ಗ್ಯಾಸ್ ಸಂಪರ್ಕಗಳನ್ನು ಕೇಂದ್ರ ಸರ್ಕಾರ ಉಜ್ವಲ ಯೋಜನೆಯಲ್ಲಿ ಕೊಟ್ಟಿದೆ. ಇವತ್ತು ಗ್ಯಾಸ್ ಸಿಗುವುದಿಲ್ಲ ಎಂದು ಹೇಳುತ್ತಾರೆ. ಯುದ್ಧ ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಗ್ಯಾಸ್ ಸಿಗದಿರಬಹುದು ಎನ್ನುವ ಭಯ ಇರಬಹುದು. ನಾನು ಶನಿವಾರ ಬುಕ್ ಮಾಡಿದ್ದೇನೆ, ಸೋಮವಾರ ನನಗೆ ಸಿಕ್ಕಿದೆ. ಇನ್ನೊಂದು ಸಿಲಿಂಡರ್ ಬುಕ್ ಮಾಡುವುದಕ್ಕೆ 10 ದಿನಗಳ ಅಂತರವಿರಬೇಕೆಂದು ಅವರು ನನಗೆ ಫೋನ್ ಮಾಡಿ ಹೇಳಿದರು. ಗ್ಯಾಸ್ ಸ್ಟಾಕ್ ಇದೆ, ಗ್ಯಾಸ್‌ಗೆ ಅಭಾವ ಇಲ್ಲ ಎಂದು ಮಾನ್ಯ ಸಚಿವರ ಹೇಳಿಕೆಯನ್ನು ಪತ್ರಿಕೆಯಲ್ಲಿಯೂ ಓದಿದ್ದೇನೆ. ಆದರೆ ಈಗ fresh news ನಾನು ಕೇಳಿ ಬಂದೆ. ಭಾರತವನ್ನು ಹೊರತುಪಡಿಸಿ ಬೇರೆ ಯಾವ ದೇಶವೂ ಹಾರ್ಮುಜ್ ಜಲಸಂಧಿಯನ್ನು ಬಳಸುವಂತಿಲ್ಲ ಎಂದು ಇರಾನ್ ಹೇಳಿದೆ. ಅಮೆರಿಕಾ, ಇಸ್ರೇಲ್ ಹಾಗೂ ಇತರ ದೇಶಗಳನ್ನು ಹೊರತುಪಡಿಸಿ ಕೇವಲ ನಮ್ಮ ಭಾರತ ದೇಶ ಮಾತ್ರ ಹಾರ್ಮುಜ್ ಜಲಸಂಧಿಯನ್ನು ಬಳಸಬಹುದು ಎಂದು ಇರಾನ್ ಹೇಳಿದೆ. ಇದು ವೈಫಲ್ಯವೇ? ಏನು ಮಾತನಾಡುತ್ತಾರೆ ಮಾನ್ಯ ಸಭಾಪತಿಯವರೆ? ರಾಜಕಾರಣ ಇರಬೇಕು, ಮಾತನಾಡಬೇಕು. ಅದಕ್ಕೆ ಒಂದು ಇತಿಮಿತಿಯಿಲ್ಲವೆ? ನಾವೇನು ಬೀದಿ ಬದಿಯ ನಲ್ಲಿಗಳ ಬಳಿ ಕುಳಿತು ಮಾತನಾಡುವವರೇ? ಜವಾಬ್ದಾರಿಯುತ ಸ್ಥಾನದಲ್ಲಿ ಕುಳಿತುಕೊಂಡಾಗ ಜವಾಬ್ದಾರಿಯುತವಾಗಿ ಮಾತನಾಡಬೇಕು. ಕೇಂದ್ರ ಸರ್ಕಾರದ ನೀತಿಯಿಂದ, ಬಿ.ಜೆ.ಪಿ.ಯ ವೈಫಲ್ಯದಿಂದ ಎಂದೆಲ್ಲಾ ಏನು ಮಾತನಾಡುತ್ತಾರೆ? ಮಾತನಾಡುವುದಕ್ಕೆ ಇತಿಮಿತಿ ಇರಬೇಕು. ಎಲ್ಲಿ ತೊಂದರೆಯಾಗಿದೆ? ಕರ್ನಾಟಕದಲ್ಲಿ ಮಂತ್ರಿಗಳು ಸಮರ್ಥರಾಗಿ ಗಟ್ಟಿಗರಾಗಿದ್ದಾರೆ. ಅವರು ಎಲ್ಲಾ ಕಡೆ ಹೇಳಿಕೆಗಳನ್ನು ಕೊಟ್ಟಿದ್ದಾರೆ.

**ಶ್ರೀ ರಮೇಶ್ ಬಾಬು:-** ಅವರು ಇಡೀ ದೇಶದಲ್ಲಿ ರಾಜಕೀಯವನ್ನು ಹುಟ್ಟು ಹಾಕಿದವರು. ಇವರಿಂದ ನಾವು ರಾಜಕೀಯ ಕಲಿಯಬೇಕಾಗಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಯಾವ ತೊಂದರೆಯಿಲ್ಲ, ಯಾರಾದರೂ ಕಾಳಸಂತೆಯಲ್ಲಿ ಮಾರಾಟ ಮಾಡಿದರೆ ಶಿಕ್ಷೆಗೆ ಗುರಿಪಡಿಸುತ್ತೇವೆಂದು ಮಾನ್ಯ ಸಚಿವರು ಹೇಳಿಕೆ ನೀಡಿದ್ದಾರೆ. ಅದನ್ನು ಕೇಂದ್ರ ಸರ್ಕಾರ ಬಂದು ಹೇಳುತ್ತದೆಯೇ? ನಮ್ಮ ಮಂತ್ರಿಗಳಿಗೆ ತಾಕತ್ ಇದೆ, ಅವರು ಮಾಡುತ್ತಾರೆ. ಎಸ್ಮಾ ಇದೆ,

ಮಾಡುತ್ತಾರೆ. ಸುಮ್ಮ ಸುಮ್ಮನೆ ಹೇಳುತ್ತಿದ್ದಾರೆ. ಎಲ್ಲಿಯಾದರೂ ಗ್ಯಾಸ್ ಸಿಗುವುದಿಲ್ಲ ಎಂದು ಇದೆಯೇ? ಅದು ಬಿಟ್ಟು ಬಣ್ಣ ಬಣ್ಣವಾಗಿ ಹೇಳಿದ್ದೇ ಹೇಳಿದ್ದು. ದಿನ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಯಾರೂ ಹೆದರಬಾರದು ಎಂದು ಒಂದು ವಾರದ ಮುಂಚೆಯೇ ವಾರ್ತೆಗಳಲ್ಲಿ ಹೇಳಿದ್ದಾರೆ. ಈ ರೀತಿಯಾಗಿ ಅದಕ್ಕೆ ರೆಕ್ಕೆ-ಪುಕ್ಕ ಕಟ್ಟಿ colorful ಆಗಿ ಹೇಳಬಾರದು. ಅದರಲ್ಲಿಯೂ ಇಂಥ ಸಂದರ್ಭದಲ್ಲಿ ಹೇಳಬಾರದು. ಇಲ್ಲದಿದ್ದರೂ ಕೂಡ ಜನರಿಗೆ ನೀವು ಹೆದರಬಾರದು, ಇದೆಯೆಂದು ಹೇಳಬೇಕು. ಅದು ಬಿಟ್ಟು ಇಂಥ ಸಮಯದಲ್ಲಿ ಇಲ್ಲ, ಇಲ್ಲ ಎಂದು ಹೇಳಿದರೆ ಏನರ್ಥ?

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೆ, ಸುಳ್ಳು ಹೇಳಿ ಎಂದು ಹೇಳಿಕೊಡುತ್ತಾರೆ. ಸ್ಟಾಕ್ ಇಲ್ಲ ಎಂದರೂ ಇದೆ ಎಂದು ಹೇಳಬೇಕಂತೆ. ಇದು ಹೇಗೆ?

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ನಾನೇ ಸ್ವತಃ ಶನಿವಾರ ಗ್ಯಾಸ್ ಬುಕ್ ಮಾಡಿದ್ದೇನೆ. ನನಗೆ ಸೋಮವಾರ ಗ್ಯಾಸ್ ಕೊಟ್ಟಿದ್ದಾರೆ.

**ಶ್ರೀ ಹಣಮಂತ ರುದ್ರಪ್ಪ ನಿರಾಣಿ:-** ಇಂಥ ಸನ್ನಿವೇಶದಲ್ಲಿ ರಾಜ್ಯದ ಜನರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು.

**ಶ್ರೀ ಎಂ. ನಾಗರಾಜು:-** ಧೈರ್ಯ ಕೊಡುವುದು ಬೇರೆ ಮಾತು. ಇದೆ ಎಂದು ಸುಳ್ಳು ಏಕೆ ಹೇಳಬೇಕು? ನಾಗರಿಕರ ಸಮಸ್ಯೆಗಳನ್ನು ಪ್ರತಿಪಾದನೆ ಮಾಡದಿರುವುದನ್ನು ರಾಜಕೀಯವೆಂದು ಹೇಳುತ್ತಾರೆಯೇ? ನಿಮ್ಮ ವಿದೇಶಾಂಗ ನೀತಿ ಸರಿಯಿಲ್ಲ. ಕೇಂದ್ರ ಸರ್ಕಾರದ ನೀತಿಗಳೇ ಸರಿಯಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಏನಿದೆ ಕೇಂದ್ರ ಸರ್ಕಾರದ ವೈಫಲ್ಯ? ಕೇಂದ್ರ ಸರ್ಕಾರದ ನೀತಿಯಿಂದಾಗಿ ಹಾರ್ಮುಜ್ ಜಲಸಂಧಿಯ ಮೂಲಕ ನಮ್ಮ ದೇಶಕ್ಕೆ ತೈಲ ಸರಬರಾಜಾಗುತ್ತಿದೆ. ಯಾವ ದೇಶಕ್ಕೂ ಹರ್ಮುಜ್ ಜಲಸಂಧಿಯನ್ನು ಬಳಕೆ ಮಾಡಿಕೊಳ್ಳಲು ಇರಾನ್ ಬಿಟ್ಟಿಲ್ಲ ಎಂಬುದು ಮಂತ್ರಿಗಳಿಗೂ ತಿಳಿದಿರಬೇಕು. ಒಟ್ಟಾರೆ ಮಾತನಾಡುವುದು, ಒಟ್ಟಾರೆ ಹೇಳುವುದು. ಹೇಳುವುದಕ್ಕೂ ಒಂದು ಇತಿಮಿತಿಯಿದೆ. ಬೈಯ್ಯಿರಿ, ಬೈಯ್ಯುವುದನ್ನು ತಪ್ಪೆಂದು ಹೇಳುವುದಿಲ್ಲ. ನೀವು ಹುಟ್ಟಿರುವುದೇ ಬೈಯ್ಯುವುದಕ್ಕೆ, ಕೊಂಕು ಮಾತನಾಡವುದಕ್ಕೆ. ಸರಿಯಿದ್ದದನ್ನು ಸರಿಯಿದೆ ಎಂದು ಹೇಳಬೇಕು. ದಯಮಾಡಿ ಸಣ್ಣ ಮಕ್ಕಳ ರೀತಿಯಾಡುತ್ತಾ, ಸುಳ್ಳು ಸುದ್ದಿಗಳನ್ನು ಹಬ್ಬಿಸಬೇಡಿ. ಗ್ಯಾಸ್‌ಗೆ ಕೊರತೆಯಿಲ್ಲ. ಯುದ್ಧ ಮುಂದುವರೆದರೆ ಮುಂದಿನ ದಿನಗಳಲ್ಲಿ ಕೊರತೆಯಾಗಬಹುದು.

**ಶ್ರೀ ರಮೇಶ್ ಬಾಬು:-** ಮಾನ್ಯ ಭಾರತಿ ಶೆಟ್ಟಿಯವರೆ, ದಯಮಾಡಿ ನೀವು ಏನು ಬೇಕೋ ಅದನ್ನು ಹೇಳಿ. ಇತಿಮಿತಿಯನ್ನು ನಾವು ನಿಮ್ಮಿಂದ ಕಲಿಯಬೇಕಾಗಿಲ್ಲ. ನಾನು ನಿಮ್ಮಿಂದ ಹೇಳಿಸಿಕೊಳ್ಳಬೇಕಾಗಿಲ್ಲ. ಜನರಿಗೆ ಏನು ಸಮಸ್ಯೆಯಿದೆಯೋ ಅದನ್ನು ಹೇಳುತ್ತಿದ್ದೇನೆ. ಇಡೀ ರಾಜ್ಯದ ಜನರಿಗೆ ಏನು ಸಮಸ್ಯೆಯಾಗಿದೆಯೋ ಅದನ್ನು ಹೇಳುತ್ತಿದ್ದೇನೆ. ಇತಿಮಿತಿ ನಮಗೂ ಗೊತ್ತಿದೆ. ನೀವು ಇಸ್ರೇಲ್‌ಗೆ ಹೋಗುವಾಗ ಇತಿಮಿತಿ ಕೇಳಿ ಹೋಗಿದ್ದಿರಾ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ರಮೇಶ್ ಬಾಬು ಅವರು ಮಾತನಾಡಿ ಆಗಿದೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ನಾನು ಮಾತನಾಡಿದ್ದನ್ನು ಅವರು ಪ್ರಶ್ನೆ ಮಾಡುತ್ತಿದ್ದಾರೆ. ಅವರು ಅವರ ಅಭಿಪ್ರಾಯವನ್ನು ಹೇಳಲಿ.

**ಶ್ರೀಮತಿ ಭಾರತಿ ಶೆಟ್ಟಿ:-** ರಷ್ಯಾ ದೇಶದಲ್ಲಿ ಜನರು ರಾತ್ರಿ ಮಲಗಿರುವ ವೇಳೆಯಲ್ಲಿ ಬಾಂಬ್ ಬಿದ್ದಿದೆ. ಮಾನ್ಯ ನರೇಂದ್ರ ಮೋದಿಯವರ ರಾಜನೀತಿಯಿಂದಾಗಿ ನಮ್ಮ ದೇಶಕ್ಕೆ ಗ್ಯಾಸ್ ಮತ್ತು ತೈಲ ಸರಬರಾಜಾಗುತ್ತಿದೆ. ಅದನ್ನು ಸ್ವಲ್ಪ ತಿಳಿದುಕೊಳ್ಳಿ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬು ಅವರೆ, ನೀವು ಮಾತನಾಡಿದ್ದೀರಿ. ಅವರು ತಮಗೆ ತಿಳಿದದ್ದನ್ನು ಮಾತನಾಡುತ್ತಾರೆ. ನೀವು ಏಕೆ objection ಮಾಡುತ್ತೀರಿ?

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೆ, ಅವರು ತಮ್ಮ ಅಭಿಪ್ರಾಯ ಹೇಳಲಿ. ಖಂಡಿತಾ ಅದಕ್ಕೆ ನಮ್ಮ ಆಕ್ಷೇಪಣೆಯಿಲ್ಲ.

**ಸಭಾಪತಿಯವರು:-** ನೀವೇನು ಸಣ್ಣ ಮಕ್ಕಳಂತೆ ಆಡುತ್ತೀರಿ. ಇಲ್ಲಿ ೩೩೦ರ ಅಡಿಯಲ್ಲಿ ಕೊಟ್ಟಿರುವವರು ಶ್ರೀ ರಮೇಶ್ ಬಾಬು, ಶ್ರೀ ಐವನ್ ಡಿಸೋಜಾ, ಶ್ರೀ ಕೆ.ಶಿವಕುಮಾರ್, ಶ್ರೀ ರಾಮೋಜಿ ಗೌಡ, ಶ್ರೀ ಜಗದೇವ್ ಗುತ್ತೇದಾರ್, ಶ್ರೀ ರಾಜೇಂದ್ರ ರಾಜಣ್ಣ. ಉಳಿದವರು ಕೇವಲ ಸ್ಪಷ್ಟೀಕರಣ ಕೇಳಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಭಾರತ ದೇಶದಲ್ಲಿ ಅದರಲ್ಲಿಯೂ, ಕರ್ನಾಟಕದಲ್ಲಿ ಗ್ಯಾಸ್ ಟ್ರಬಲ್ ಪ್ರಾರಂಭವಾಗಿದೆ. ಮಾನವ ದೇಹಕ್ಕೆ ಗ್ಯಾಸ್ ಟ್ರಬಲ್ ಇರುತ್ತದೆ. ಆದರೆ ಇಡೀ ರಾಜ್ಯದಲ್ಲಿ ಗ್ಯಾಸ್ ಬಿಟ್ಟು ಕಟ್ಟಿಗೆಯ ಒಲೆ ಉರಿಸುವ ಪ್ರಮೇಯ ಬಂದು ಬಿಟ್ಟಿದೆ. ಹಿಂದೆ ಅಂಗಡಿಗಳಲ್ಲಿ ಗ್ಯಾಸ್ ಮಾರುತ್ತಿದ್ದರು. ಈಗ ಅಂಗಡಿಗಳಲ್ಲಿ ಕಟ್ಟಿಗೆಯನ್ನು ಮಾರುತ್ತಿದ್ದಾರೆ. ಈ ದೇಶದ ಪರಿಸ್ಥಿತಿ ಎಲ್ಲಿಗೆ ಹೋಗಿದೆಯೆಂದರೆ ಗ್ಯಾಸ್ ಮಾರುವುದನ್ನು ಬಿಟ್ಟು ಅಂಗಡಿಗಳಲ್ಲಿ ಕಟ್ಟಿಗೆಯನ್ನು ಮಾರುತ್ತಿದ್ದಾರೆ. ಗ್ಯಾಸ್ ಮಾರುವುದನ್ನು ಬಿಟ್ಟು ಕಟ್ಟಿಗೆ ಮಾರುವುದನ್ನು ಕಲಿಸಿಕೊಟ್ಟಿದ್ದಾರೆ. ನಾವು ಮಾತನಾಡಿದರೆ, "ಈ ದೇಶದಲ್ಲಿ ಯಾವುದಕ್ಕೂ ಕೊರತೆಯಿಲ್ಲ" ಎಂದು ಹೇಳುತ್ತಾರೆ. ಭಾರತ ದೇಶದ ಪ್ರಧಾನ ಮಂತ್ರಿಗಳ ಬಳಿ ನಾನು ಕೇಳಬಯಸುತ್ತೇನೆ. Because 'gas' is both a State and a Central subject. It is in the concurrent subject. ಈ ದೇಶದಲ್ಲಿ ನೈಸರ್ಗಿಕ ಅನಿಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಸರಬರಾಜು ಮಾಡಬೇಕಾಗಿರುವ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ಇವತ್ತು ನೀವು ತೈಲವನ್ನು ರಷ್ಯಾದಿಂದ ತೆಗೆದುಕೊಳ್ಳಬಾರದು, ನಮ್ಮ ಬಳಿಯಿಂದಲೇ ತೆಗೆದು ಕೊಳ್ಳಬೇಕು ಎಂದು ಅಮೆರಿಕಾದವರು ಕೇಂದ್ರ ಸರ್ಕಾರಕ್ಕೆ ಆದೇಶ ಮಾಡುತ್ತಾರೆ. What is the foreign policy of India? ಭಾರತ ದೇಶದ ಪಾಲಿಸಿ ಎಲ್ಲಿದೆ? ನಾವು ಗ್ಯಾಸ್ ತೆಗೆದುಕೊಳ್ಳಬೇಕಾಗಿದ್ದರೆ, ನಾವು ಪೆಟ್ರೋಲ್ ತೆಗೆದುಕೊಳ್ಳಬೇಕಾಗಿದ್ದರೆ, ಇನ್ನೊಂದು ದೇಶದವರು

ನಮಗೆ ಡೈರೆಕ್ಟ್ ಮಾಡಬೇಕೇ? ಅವರು ಹೇಳಿದ್ದನ್ನು ನಾವು ತೆಗೆದುಕೊಳ್ಳಬೇಕು. ಅಂದರೆ ನಾವು ಎಲ್ಲಿಯೋ ಒಂದು ಕಡೆ ತಲೆ ಬಾಗುತ್ತಿದ್ದೇವೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಇವತ್ತು ಗ್ಯಾಸ್ ಸರಬರಾಜು ಮಾಡುವಲ್ಲಿ ವಿಫಲರಾಗಿರುವುದಕ್ಕೆ ಕೇಂದ್ರ ಸರ್ಕಾರ ಅಥವಾ ಬಿಜೆಪಿಯವರು ನೇರ ಹೊಣೆಗಾರರಾಗಿದ್ದಾರೆ. ನಿನ್ನೆ ಒಂದು ಲೀಟರ್ ತೈಲದರ ಜಾಸ್ತಿಯಾದ ಕೂಡಲೇ ಗ್ಯಾಸ್ ಇಲ್ಲ, ದರ ಹೆಚ್ಚಾಗಿದೆ ಎಂದು ಹೇಳಿದರು. ಇವತ್ತು ನಾನು ಬುಕ್ ಮಾಡುವುದಕ್ಕೆ ಹೋದರೆ 15 ದಿನಗಳ ನಂತರ ಬುಕ್ ಮಾಡಿ ಎಂದು ಹೇಳುತ್ತಾರೆ. ಗ್ಯಾಸ್ ಸರಬರಾಜಿಲ್ಲ, ಕಟ್ಟಿಗೆಯನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಪಿ.ಜಿ.ಗಳಲ್ಲಿ ದಿನಕ್ಕೆ ಎರಡು ಹೊತ್ತು ಮಾತ್ರ ಊಟ. ದೋಸೆ, ಪೂರಿ, ಚಪಾತಿ ಮುಂತಾದವುಗಳಿಗೆ ಬ್ರೇಕ್. ಶಾಲಾ-ಕಾಲೇಜುಗಳಲ್ಲಿ ಕಲಿಯುವ ಮಕ್ಕಳಿಗೆ ಹೋಟೆಲ್‌ಗಳಲ್ಲಿ ದೋಸೆ ಪೂರಿ ಕೊಡುವುದಿಲ್ಲ ಎನ್ನುವುದಾದರೆ ಸೋಮವಾರದಿಂದ ಶುಕ್ರವಾರದವರೆಗೆ ಕೇವಲ ಎರಡು ಬಾರಿ ಊಟ ಮಾತ್ರ. ವಾರಾಂತ್ಯಕ್ಕೆ ಮೂರು ಊಟ. ದೋಸೆ, ಪೂರಿ, ಚಪಾತಿ ಮುಂತಾದ ಗ್ಯಾಸ್ ಹೆಚ್ಚು ಬೇಕಾಗುವ ತಿಂಡಿಗಳನ್ನು ತಯಾರಿಸುವಂತಿಲ್ಲ. ಪಿ.ಜಿ. ವಾಸಿಗಳು ರೂಮ್‌ಗಳಲ್ಲಿ ಗ್ಯಾಸ್ ಬಳಸಿಕೊಂಡು ಯಾವುದೇ ರೀತಿಯ ಆಹಾರ ತಯಾರು ಮಾಡುವಂತಿಲ್ಲ. ಎಲೆಕ್ಟ್ರಿಕ್ ರೈಸ್ ಕುಕ್ಕರ್ ಬಳಸಲು ಉತ್ತೇಜಿಸುವುದು. ಅಕ್ಕಪಕ್ಕದ ಪಿ.ಜಿ.ಗಳು ಸೇರಿ ಒಂದೆಡೆ ಊಟ ತಯಾರಿಸಿ ಪರಸ್ಪರರ ನಡುವೆ ಹಂಚಿಕೊಂಡು ಊಟ ಮಾಡುವುದು ಎಂದು ಹೇಳುವ ಮಟ್ಟಕ್ಕೆ ನಾವು ಬರುವುದಾದರೆ ಈ ದೇಶದ ವಿದೇಶಾಂಗ ನೀತಿ ಏನಾಗುತ್ತಿದೆ? ನಾನು ನಿಮಗೆ ಉದಾಹರಣೆ ಕೊಡುತ್ತೇನೆ. ಯುದ್ಧದಿಂದಾಗಿ ಭಾರತ ದೇಶದಲ್ಲಿ shortage ಆಯಿತು ಎಂಬುದನ್ನು ನಾನು ಒಪ್ಪುತ್ತೇನೆ. ನಮ್ಮ ದೇಶದಲ್ಲಿ storage ಮಾಡುವ ಟ್ಯಾಂಕರ್‌ಗಳಿಂದ ಇವರು produce ಮಾಡಬೇಕಿತ್ತು. ನಮ್ಮಲ್ಲಿರುವ Strategic Petroleum Reserve (SPR) ಗಳಲ್ಲಿ underground caverns ನಲ್ಲಿ ನಾವು store ಮಾಡುತ್ತೇವೆ. ನಮಗೆ ಇಲ್ಲಿ ಎಂ.ಆರ್.ಪಿ.ಎಲ್. ಹತ್ತಿರ ಇರುವುದು, ವಿಶಾಖಪಟ್ಟಣದಲ್ಲಿಯೂ ಇರಬಹುದು. ಅಥವಾ ಉಡುಪಿಯಲ್ಲಿರಬಹುದು. ಈ ಎಲ್ಲಾ ಕಡೆಗಳಲ್ಲಿಯೂ ಇವತ್ತು which put together 9-10 ದಿನಗಳಿಗೆ ಮಾತ್ರ ಬರಬಹುದು. ಯುದ್ಧದಿಂದಾಗಿ ಒಂದು ವೇಳೆ ಬರಲೇ ಇಲ್ಲ ಎನ್ನುವುದಾದರೆ only 8-10 days ಗೆ ಮಾತ್ರ ಬರುತ್ತದೆ. ಹಾಗೆಯೇ ಯುದ್ಧ ಒಂದು ತಿಂಗಳ ಕಾಲ ಮುಂದುವರೆದರೆ ನಾವು ಹಾಗೆಯೇ ಕತ್ತಲಿನಲ್ಲಿ ಕುಳಿತುಕೊಳ್ಳುವುದೇ? ಊಟ ಮಾಡದೆ ಕುಳಿತುಕೊಳ್ಳುವುದೇ? ಮಾನ್ಯ ಭಾರತಿ ಶೆಟ್ಟಿಯವರು ಹೇಳಿದುದನ್ನು ನಾನು ಒಪ್ಪುತ್ತೇನೆ. ಗೃಹ ಬಳಕೆ ಸಿಲಿಂಡರ್‌ಗಳು ದೊರೆಯುತ್ತಿರಬಹುದು. What about the commercial gas cylinders? ಎಲ್ಲಾ ಹೋಟೆಲ್‌ಗಳು ಬಂದ್ ಆಗಿಬಿಟ್ಟಿವೆ. ಹೋಟೆಲ್‌ನಲ್ಲಿ ದರಗಳು ಒಂದಕ್ಕೆ ಎರಡಾಗಿವೆ. ಜನರಿಗೆ ತೊಂದರೆಯಾಗಿದೆ. ಅದರ ಬಗ್ಗೆ ಏಕೆ ಅವರು ಮಾತನಾಡಲಿಲ್ಲ? ಯುದ್ಧವಾಗುತ್ತದೆ ಎನ್ನುವ ಮುನ್ಸೂಚನೆ ದೊರಕಿದ ಕೂಡಲೇ ಅದಕ್ಕೆ ಬೇಕಾದಂಥ ಸ್ಟಾಕ್ ಇಟ್ಟುಕೊಳ್ಳುವ ಜವಾಬ್ದಾರಿ ಕೇಂದ್ರ ಸರ್ಕಾರದ್ದು. ಅಷ್ಟು ಸಂಗ್ರಹ ಮಾಡಬೇಕಾದ ಅನಿವಾರ್ಯತೆ ಇದೆ.

ಮಾನ್ಯ ಸಭಾಪತಿಯವರೆ, ನಾನು ತಮ್ಮ ಗಮನಕ್ಕೆ ತರುತ್ತೇನೆ. ಕೇವಲ 10 ರಿಂದ 15 ದಿನಗಳು ಮಾತ್ರ ಸಾಕಾಗುವಷ್ಟು ನೈಸರ್ಗಿಕ ಅನಿಲ ನಮ್ಮಲ್ಲಿ ಸ್ಟಾಕ್ ಇದೆ ಎಂದು ನಮಗೆ ಪತ್ರಿಕೆಗಳಿಂದ, ವಾಟ್ಸಪ್ ಸಂದೇಶಗಳಿಂದ ತಿಳಿದು ಬಂದಿದೆ. ಯುದ್ಧ ಪ್ರಾರಂಭವಾಯಿತು ಎಂದಾದ ಮೇಲೆ ಅವರು release ಮಾಡಬೇಕು. It is their duty. ಅದನ್ನು ಮಾಡದೆ ಕಾಳಸಂತೆಗಳಲ್ಲಿ ಮಾರುವುದು, ಅಂಗಡಿಗಳನ್ನು ಬಂದ್ ಮಾಡುವುದು, ಹೋಟೆಲ್‌ಗಳನ್ನು ಬಂದ್ ಮಾಡುವುದು... ಕಮರ್ಷಿಯಲ್ ಸಿಲಿಂಡರ್‌ಗಳನ್ನು ಏಕೆ ಕೊಡುತ್ತಿಲ್ಲ. ಚಿಕ್ಕ ಗ್ಯಾಸ್ ಸಿಲಿಂಡರ್ ಕೊಡುತ್ತಿದ್ದೀರಿ. 5 ಕೆ.ಜಿ. ಸಿಲಿಂಡರ್ ತೆಗೆದುಕೊಂಡು, ಇಡ್ಲಿ, ದೋಸೆ ಮುಂತಾದ ಪದಾರ್ಥಗಳನ್ನು ಮಾಡಿ ಊಟ ಕೊಡಬೇಕಾದರೆ ರೂ.10 ಇದ್ದ ಊಟಕ್ಕೆ ರೂ. 100 ಮಾಡುತ್ತಾರೆ. ರೂ.100 ಇದ್ದುದನ್ನು ರೂ.1,000 ಮಾಡುತ್ತಾರೆ. ಇದನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲವೆ? ಎಷ್ಟೋ ಮಕ್ಕಳು ಪಿ.ಜಿ.ಗಳಲ್ಲಿ ಓದುತ್ತಿದ್ದಾರೆ. ಅವರಿಗೆ ಇವತ್ತು ಊಟ-ತಿಂಡಿ ಇಲ್ಲ. ದೇವಸ್ಥಾನಗಳಲ್ಲಿ ಮಧ್ಯಾಹ್ನ – ಸಂಜೆ ಊಟ ಕೊಡುತ್ತಿದ್ದರು. ಅದು ಎಲ್ಲಾ ಕಡೆಗಳಲ್ಲಿಯೂ ಬಂದ್ ಆಗಿಬಿಟ್ಟಿದೆ.

**(ಮುಂದು)**

(351) 13.03.2026, 3.40, ಕೆಜಿ : ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ' ಸೋಜಾ (ಮುಂದು):-**

ಈಗ ಅದು ಎಲ್ಲಾ ಕಡೆ ಬಂದ್ ಆಗಿದೆ. ಇವತ್ತು ಅದು ಎಲ್ಲಾ ಕಡೆ chance ಇಲ್ಲದ ರೀತಿಯಲ್ಲಿ ಬಂದಿದೆ.

**ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾರವರೇ, ತಾವು ಅದಕ್ಕೆ ಏನು ಮಾಡಬೇಕು ಅಷ್ಟನ್ನು ಮಾತ್ರ ಹೇಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅದನ್ನು ಬಿಟ್ಟು ಇವತ್ತಿನ ದಿವಸಗಳಲ್ಲಿ ಅಂಗಡಿಗಳಲ್ಲಿ ಕಟ್ಟಿಗೆ ಮಾರುವಂತಹ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ ಎಂದಾದರೆ, ಇಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ 'ಹೋಟೆಲ್ ನಿಯಂತ್ರಣಕ್ಕೆ', 'ವಸತಿ ನಿಲಯಕ್ಕೆ ತಟ್ಟಿರುವಂತಹ ಬಿಸಿ' ಹಾಗೂ 'ಅಂಗಡಿಗಳಲ್ಲಿ ಕಟ್ಟಿಗೆ ಮಾರಾಟ ಮಾಡುವಂತಹ' ವಿಚಾರಗಳು ಪ್ರಕಟವಾಗಿದೆ. ಇವತ್ತು ಕೆಲವು ದೇಶಗಳಲ್ಲಿ 90 ರಿಂದ 180 ದಿವಸಗಳ ಕಾಲ ಆಗುವಷ್ಟು stock ಇಟ್ಟುಕೊಂಡು ಅವರ ದೇಶದ ಪ್ರಜೆಗಳಿಗೆ ರಕ್ಷಣೆ ಮಾಡುತ್ತಾರೆ. ಇವತ್ತು ನಮ್ಮ ದೇಶದ ಪ್ರಧಾನ ಮಂತ್ರಿಯವರು ಆ ಬಗ್ಗೆ ಬಾಯಿಯನ್ನು ಬಿಡುತ್ತಿಲ್ಲ. ಇವತ್ತು ನಮ್ಮ ದೇಶದ ಪ್ರಧಾನ ಮಂತ್ರಿಯವರು ಈ ದೇಶಕ್ಕೆ shortage ಆಗಲು ಏನು ಕಾರಣವೆಂದು ಒಂದು statement ಅನ್ನು ಕೊಡಬೇಕಾಗಿತ್ತು. ಇವತ್ತು ಅವರನ್ನು 'ವಿಶ್ವಗುರು' ಎಂದು ಹೇಳಿದರೆ ಸಾಕೇ ಅಥವಾ 'ವಿಶ್ವಗುರುಗಳ' ದೇಶದಲ್ಲಿರುವಂತಹ ಪ್ರಜೆಗಳನ್ನು ರಕ್ಷಣೆ ಮಾಡಬೇಕೇ? ಇದು ಆಗಲಿಲ್ಲವೆಂದರೆ, ಬಿ.ಜೆ.ಪಿ.ಯವರು ಈ ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ ಹಾಗೂ ಅವರು ಸಾರ್ವಜನಿಕರ ಕ್ಷಮೆಯಾಚನೆ ಮಾಡಬೇಕು. ಅವರಿಗೆ ಬೇಕಾದಂತಹ stove ಗಳು ಇರಬಹುದು, ಇವತ್ತಿನ ದಿವಸ Electric Stove ಗಳು ಸಿಗುತ್ತಿಲ್ಲ. Induction Stove ಗಳು

ಸಿಗುತ್ತಿಲ್ಲ. ಈಗ ಅವುಗಳ ಬೆಲೆ ದುಪ್ಪಟ್ಟು ಆಗಿದೆ. ಹಾಗಾಗಿ, ನಾವು ಯಾವ ರೀತಿ ಬದುಕಬೇಕು ಎಂದು ಹೇಳುವಂತಹದ್ದು ಆಗಿದೆ. ಮಾನ್ಯ ಸಚಿವರು ಏನು ಸಮಸ್ಯೆ ಇಲ್ಲವೆಂದು ಹೇಳಿದ್ದಾರೆ. ಮಾನ್ಯ ಸಚಿವರು ನೀಡಿರುವಂತಹ ಉತ್ತರವನ್ನು ನಾನು ನೋಡಿದ್ದೇನೆ. ಏನು ಸಮಸ್ಯೆ ಇಲ್ಲ. ಪತ್ರಿಕಾ ಗೋಷ್ಠಿ ಕರೆದಿದ್ದಾರೆ. ಮಾನ್ಯ ಸಚಿವರು ಬರಿ ಪತ್ರಿಕಾಗೋಷ್ಠಿ ಕರೆದರೆ ಸಾಕಾಗುವುದಿಲ್ಲ.

**ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾರವರೇ, ಈ ವಿಷಯ ನಿಯಮ 330 ರಡಿ ನಡೆಯುತ್ತಿರುವುದಾಗಿದೆ. ಹಾಗಾಗಿ, ಸಾಕು ತಾವು ಕುಳಿತುಕೊಳ್ಳಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, commercial gas ಅನ್ನು ಹೋಟಲ್‌ನವರಿಗೆ ದೊರಕಿಸಿ ಕೊಡಿ ಎಂದು ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರಾದ ಶ್ರೀ ಕೆ.ಹೆಚ್.ಮುನಿಯಪ್ಪನವರೇ, ತಾವು ಉತ್ತರ ಹೇಳಿ. ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ, ತಾವೆಲ್ಲರೂ clarification ಅನ್ನು ಕೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ.ಸಂಕನೂರವರೇ, ಆಗುವುದಿಲ್ಲ. ಒಂದು ನಿಮಿಷ ಎಲ್ಲರೂ ಕೇಳಿ. ಯಾರು ಯಾರು ನೋಟಿಸ್ ಕೊಟ್ಟಿದ್ದಾರೆಯೋ ಅವರಷ್ಟೇ ಕೇಳಬೇಕು. ಉಳಿದವರು ಕೇಳುವುದಕ್ಕೆ ಬರುವುದಿಲ್ಲ. ನಾನು ಸುಮ್ಮನೆ ಕೊಟ್ಟಿದ್ದೇನೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾವು ತಮಗೆ ಮನವಿ ಮಾಡುತ್ತೇವೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡುವುದಕ್ಕೆ ಸಮಯ ಕೊಡಿ. ಏಕೆಂದರೆ, ಅವರು ಕೇಂದ್ರ ಸರ್ಕಾರದ ವಿರುದ್ಧ ಅಷ್ಟೆಲ್ಲಾ ಮಾತನಾಡಿದ್ದಾರೆ. ಹಾಗಾಗಿ, ನಾವು ಏನು ಕಥೆ ಎನ್ನುವುದನ್ನು ಹೇಳಬೇಕಲ್ಲವೇ? ನಾವು ಅದನ್ನು ಎರಡು ಮಾತಿನಲ್ಲಿಯಾದರೂ ಸಹ ಹೇಳಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈಗ ನಿಯಮ 330 ರಡಿ ಯಾರು ನೋಟಿಸ್ ಕೊಟ್ಟಿದ್ದಾರೆ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಈಗ ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡಿದ್ದಾರೆ. ಹಾಗಾಗಿ, ಮಾನ್ಯ ಸಚಿವರು ಉತ್ತರವನ್ನು ಹೇಳಲಿ. ತಾವು ನಂತರ clarification ಅನ್ನು ಕೇಳಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಎರಡು ಮಾತನಾಡಿದ ಮೇಲೆ ಮಾನ್ಯ ಸಚಿವರು ಉತ್ತರವನ್ನು ಹೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ..

**ಸಭಾಪತಿಯವರು:-** ಶ್ರೀ ಎಸ್.ವ್ಹಿ.ಸಂಕನೂರರವರೇ, ತಾವು ನೋಟಿಸ್ ಕೊಟ್ಟಿದ್ದೀರಾ? ಹಾಗಾದಾರೆ, ತಮ್ಮ ಹೆಸರು ಎಲ್ಲಿದೆ? ತಾವು ನೋಟಿಸ್ ಕೊಟ್ಟಿಲ್ಲ. ಹಾಗಾಗಿ, ತಾವು ಕುಳಿತು ಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ನೋಟಿಸ್ ಕೊಡುತ್ತೇನೆ. ಕೇಂದ್ರ ಸರ್ಕಾರಕ್ಕೆ ಬೈಯುವ ಮುನ್ನ ..

(ಗೊಂದಲ)

**ಸಭಾಪತಿಯವರು:-** ಶ್ರೀ ಎಸ್.ವ್ಹಿ.ಸಂಕನೂರರವರೇ, ಇಲ್ಲಿ ಸಭಾನಾಯಕರು ಇದ್ದಾರೆ. ಅವರು ಹೇಳುತ್ತಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ, ನಾವು ಇಲ್ಲಿ ಏತಕ್ಕೆ ಕುಳಿತುಕೊಳ್ಳಬೇಕು

(ಗೊಂದಲ)

**ಸಭಾಪತಿಯವರು:-** ಶ್ರೀ ಎಸ್.ವ್ಹಿ.ಸಂಕನೂರರವರೇ, ಇಲ್ಲಿ ವಿರೋಧ ಪಕ್ಷದ ನಾಯಕರು ಇದ್ದಾರೆ. ಅವರು ಮಾತನಾಡುತ್ತಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇದು ಯಾವ ರೀತಿ ಆಯಿತು ಎಂದರೆ, "ಸಂತೆಯ ಮಧ್ಯೆ ಮನೆ ಮಾಡಿ ಶಬ್ದಕ್ಕೆ ನಾಚಿದರೆ, ಬೆಟ್ಟದ ಮೇಲೆ ಮನೆ ಮಾಡಿ ಕಾಡು ಪ್ರಾಣಿಗಳಿಗೆ ಹೆದರಿದಂತಾಗುತ್ತದೆ" ಎಂದು ಶ್ರೀ ಅಕ್ಕಾ ಮಹಾದೇವಿಯವರು ಬಹಳ ಚೆನ್ನಾಗಿ ವಚನವನ್ನು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ ಹಾಗಾಗಿ, ಇವತ್ತು opposition party ರವರು ಇಲ್ಲಿ ಇದ್ದಾರೆ. You are debating on a matter raised under Rule ೩೩೦. ನಮಗೆ ಒಂದು opportunity ಕೊಡಲಿಲ್ಲವೆಂದರೆ, ಹೇಗೆ? ಆದರೆ, cut down ಮಾಡಿ. Short ಮಾಡಿ ಎಂದು ಹೇಳಿ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ಈಗ ಅವಕಾಶ ಕೊಟ್ಟಿದ್ದೇನೆ ಅಲ್ಲವೇ; ಶ್ರೀ ಎಸ್.ಕೇಶವ ಪ್ರಸಾದ್, ಶ್ರೀ ಎಸ್.ಎಲ್.ಭೋಜೇಗೌಡ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಸಿ.ಟಿ.ರವಿ, ಶ್ರೀಮತಿ ಹೇಮಲತಾ ಹಾಗೂ ಶೀ ಎಂ.ನಾಗರಾಜು ಇವರೆಲ್ಲರ ಹೆಸರುಗಳನ್ನು ಬರೆದುಕೊಂಡಿದ್ದೇನೆ. ತಮಗೂ ಅವಕಾಶ ಕೊಡುತ್ತೇನೆ. ಆದರೆ, ತಾವು ಅವಕಾಶ ಕೊಡುವವರೆಗೆ ಕಾಯಬೇಕಲ್ಲವೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಅದನ್ನು ಅಲ್ಲಿಗೆ ಮುಗಿಸಿ ಮಾನ್ಯ ಸಚಿವರಿಗೆ ಉತ್ತರ ಕೊಡುವಂತೆ ಹೇಳಿದ್ದೀರಿ. ಅದಕ್ಕೆ ನಾವು ಕೇಳಿದ್ದೇವೆ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ಒಂದು ನಿಮಿಷ. ತಾವು ಕಾನೂನು ಪ್ರಕಾರ ಹೋದರೆ, ನಾನು ಸಹ ಕಾನೂನು ಪ್ರಕಾರ ಹೋಗುತ್ತೇನೆ. ನಾನು allow ಮಾಡುವುದಿಲ್ಲ. ಯಾರು ನೋಟಿಸ್

ಕೊಟ್ಟಿದ್ದಾರೆ, ಅವರಿಗಷ್ಟೇ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ತಾವು ಕಾನೂನ್ನು ಹೇಳಬೇಡಿ. ನಾನು ಹೇಳಿದ್ದೇನೆ. ತಾವು ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಹೇಳುವುದನ್ನು ನಾವು ಕೇಳುತ್ತಲೇ ಇದ್ದೇವೆ. ಈಗಲೂ ಕೇಳುತ್ತೇವೆ. ನಾಳೆಯೂ ಕೇಳುತ್ತೇವೆ. ನಾವು ಕೇಳುವುದಿಲ್ಲವೆಂದು ಯಾವಾಗ ಹೇಳಿದ್ದೇವೆ?

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ತಮಗೆ clarification ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಪೀಠದ ಆದೇಶವನ್ನು ಯಾವಾಗ ಕೇಳುವುದಿಲ್ಲವೆಂದು ಹೇಳಿದ್ದೇವೆ ಹೇಳಿ?

**ಸಭಾಪತಿಯವರು:-** ಸರಿ ಮಾತನಾಡಿ. ತಾವು ಎಷ್ಟು ಹೊತ್ತಿನವರೆಗೆ ಆಗುತ್ತದೆಯೋ ಅಷ್ಟು ಹೊತ್ತು ಮಾತನಾಡಿ. ನಾನು ಯಾರಿಗೂ restrict ಮಾಡುವುದಿಲ್ಲ. ಮಾತನಾಡಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ತಮ್ಮನ್ನು convince ಮಾಡುವ capacity ಶ್ರೀ ಎಸ್.ಎಲ್.ಭೋಜೇಗೌಡರವರಿಗೆ ಮಾತ್ರ ಇದೆ. ನಮಗೆ ಯಾರಿಗೂ ಆಗಿಲ್ಲ.

**ಸಭಾಪತಿಯವರು:-** ಶ್ರೀ ಸಿ.ಟಿ.ರವಿರವರೇ, ತಾವು ಇಬ್ಬರೂ ಕೂಡಿದರೆ ಏನಾಗುತ್ತದೆ ಎಂದು ಮೊನ್ನೆ ದಿವಸ ಹೇಳಿದ್ದೇನೆ. ಈಗ ಅದನ್ನು ಹೇಳುವುದು ಬೇಡ. ವಿರೋಧ ಪಕ್ಷದ ನಾಯಕರೇ, ಬಜೆಟ್ ಮೇಲೆ ಚರ್ಚೆ ನಡೆಯುವಾಗ ತಮ್ಮ ಕಡೆಯ ಸದಸ್ಯರು ಯಾರು ಹೊರಗಡೆ ಹೋಗಬಾರದು. ಅದು ಎಷ್ಟು ಹೊತ್ತಿನವರೆಗೂ ಚರ್ಚೆ ನಡೆದರೂ ಸಹ ಕುಳಿತುಕೊಳ್ಳಬೇಕು. ಯಾರು ಕೇಳಿಕೊಂಡು ಹೋಗಬಾರದು. ನಾನು ತಮಗೆ ಈಗಲೇ ಹೇಳುತ್ತೇನೆ. ಅದು ನಿಮ್ಮ ಜವಾಬ್ದಾರಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಆಯಿತು. ಈಗ ತಾತ್ಕಾಲಿಕವಾಗಿ ಗ್ಯಾಸ್‌ನ ಸಮಸ್ಯೆ ಉಂಟಾಗಿದೆ. ಇದು ತಾತ್ಕಾಲಿಕವೆಂದು ಇಡೀ ಪ್ರಪಂಚದ ಜನರಿಗೆ ಗೊತ್ತಿದೆ. It is a matter of common sense. ನಾವೆಲ್ಲರೂ ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ನಮ್ಮ ಭಾರತ ದೇಶಕ್ಕೆ ಯುದ್ಧ ಬೇಕಿರಲಿಲ್ಲ. ಯುದ್ಧ ಆದಾಗ ಇವತ್ತು ಯಾವ ಪರಿಸ್ಥಿತಿಯನ್ನು ದೇಶ ಎದುರಿಸುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇವತ್ತು ಮಾನ್ಯ ಪ್ರಧಾನ ಮಂತ್ರಿಯವರು ಯುದ್ಧದಿಂದ ಆತ್ಮನಿರ್ಭರ ಭಾರತ ಆಗುವುದನ್ನು ನಾವು ಕಲಿಯಬೇಕೆಂಬ ಮಾತನ್ನು ಹೇಳಿದ್ದಾರೆ. ಏಕೆಂದರೆ, ನಾವು dependency ಅನ್ನು ಬಿಡಬೇಕು. ನಮ್ಮ ಕಾಲಿನ ಮೇಲೆ ನಾವು ನಿಲ್ಲಬೇಕು ಎನ್ನುವುದು ಅದರ ಅರ್ಥ. ಇದು ಈ ಗ್ಯಾಸ್‌ದಾಗಲಿ, petroleum products ಆಗಲಿ, ಈಗ ನಮಗೆ dependency ಇದೆ. ಆದರೆ, ಒಂದು ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ವಿಷಯವನ್ನು ಎತ್ತುವಾಗ, ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕಾಗಿತ್ತು. ನಿನ್ನೆ ದಿವಸ ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಕೆಳಮನೆಯಲ್ಲಿ

ಯಾವುದೇ ಆ ರೀತಿ ತೊಂದರೆಯಾಗುವುದಕ್ಕೆ ನಾವು ಬಿಡುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಏಕೆಂದರೆ, ಅವರಿಗೆ ಜವಾಬ್ದಾರಿ ಇದೆ. ಹಾಗಾಗಿ, ಅವರು ಜವಾಬ್ದಾರಿಯುತವಾದ ಮಾತನ್ನು ಹೇಳಿದ್ದಾರೆ. ಈ ಗ್ಯಾಸ್‌ನ ವಿಷಯ ಕೇಂದ್ರ ಸರ್ಕಾರಕ್ಕೆ ಸಂಬಂಧ ಇರಬಹುದು. ಆದರೆ, ರಾಜ್ಯಕ್ಕೆ ಸಂಬಂಧ ಇಲ್ಲವೇ? ರಾಜ್ಯಕ್ಕೆ ಸಂಬಂಧ ಇದ್ದೇ ಇದೆ. ಏಕೆಂದರೆ, ಅದು PDS ನಲ್ಲಿ ಬರುತ್ತದೆ. ಇವತ್ತು ಒಂದು ಕೇಸ್ ಹಾಕಬೇಕೆಂದರೆ, ಏನೇ ಮಾಡಬೇಕೆಂದರೆ ಅವರದ್ದು ಕೂಡ ಜವಾಬ್ದಾರಿ ಇದೆ. ಈ ಸಂದರ್ಭದ ಉಪಯೋಗವನ್ನು ಪಡೆಯುವುದಕ್ಕೆ ಕಾಳಸಂತೆಯಲ್ಲಿ ಮಾರಾಟ ಆಗುತ್ತದೆ. ಅದನ್ನು ಕೆಲವರು ಮಾಡಬಹುದು. ಆದರೆ, ಅದನ್ನು ತಡೆಹಿಡಿಯಬೇಕಾಗಿರುವುದು, ಶಿಕ್ಷೆ ಕೊಡಬೇಕಾಗಿರುವಂತಹದ್ದು ಸರ್ಕಾರದ ಜವಾಬ್ದಾರಿ ಇದೆ. ಅದಕ್ಕೆ ಮಾನ್ಯ ಸಚಿವರು ನಿನ್ನೆ ದಿವಸ ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರ. ಈಗ ನಾನು ಯಾರ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರೆ, ಹಿಂದಿನ ಸರ್ಕಾರದಲ್ಲಿ ಒಂದು ವರ್ಷಕ್ಕೆ 6 ಸಿಲೆಂಡರ್ ಮಾತ್ರ ಕೊಡುವುದು ಆಗಿತ್ತು. ಆ ಪದ್ಧತಿ ಇತ್ತೇ? ಆ ಸಂದರ್ಭದಲ್ಲಿ ಜನರ ಹೋರಾಟ ಪ್ರಾರಂಭವಾದಗ, 8 ಸಿಲೆಂಡರ್ ಕೊಡುವುದು ಏನಾಯಿತು, ಇವತ್ತು ನಮ್ಮ ದೇಶದ ವಿರೋಧ ಪಕ್ಷದ ನಾಯಕರು ಆಗಿರುವಂತಹವರು. ಶ್ರೀ ಮನಮೋಹನ್‌ಸಿಂಗ್‌ರವರ ಸರ್ಕಾರ ಇದ್ದಾಗ, ಅವರು ಇಷ್ಟೇ ಸಿಲೆಂಡರ್‌ಗಳನ್ನು ಕೊಡುವುದು ಎಂದು ಹೇಳಿದ ಸಂದರ್ಭದಲ್ಲಿ ಏನೇನು ಆಯಿತು, ಆಗ ಇಡೀ ದೇಶದಲ್ಲಿ ಗೊಂದಲ ಪ್ರಾರಂಭವಾದಾಗ ಅವರು ಆದೇಶವನ್ನೇ ಹರಿದು ಬಿಸಾಕಿದರು. ಈಗ ಅಂತಹ ಪರಿಸ್ಥಿತಿ ಉದ್ಭವಾಗಿಲ್ಲ. 2014ನೇ ಸಾಲಿನಲ್ಲಿ ಮಾನ್ಯ ನರೇಂದ್ರ ಮೋದಿಯವರು ಅಧಿಕಾರವಹಿಸಿಕೊಂಡ ದಿವಸದಿಂದ ಇಲ್ಲಿಯವರೆಗೆ ಒಂದು ದಿವಸವೂ ಸಹ ಗ್ಯಾಸಿನ ಸಮಸ್ಯೆ ಆಗಿರಲಿಲ್ಲ. Supply ಇಲ್ಲವೆಂದು ಆಗಿಲ್ಲ. Queue ನಲ್ಲಿ ಯಾರು ನಿಂತಿಲ್ಲ. ಅದಕ್ಕೂ ಮುಂಚೆ ಸುಮಾರು 2/3 ದಿವಸ ಸಿಲಿಂಡರ್ ಇಟ್ಟು queue ನಲ್ಲಿ ನಿಂತಿರಬೇಕಾಗಿತ್ತು. Gas Agency ಗಳ ಬಳಿಗೆ ಹೋಗಿ ಕಾದು ಕಾಡಿಬೇಡಿ ತರಬೇಕಾಗಿತ್ತು. ಆಗ 2/3 ದಿವಸಗಳ ಕಾಲ ಮನೆಗಳಲ್ಲಿ ಸಿಲೆಂಡರ್ ಇರುತ್ತಿರಲಿಲ್ಲ. ಅಡುಗೆ ಮಾಡುತ್ತಿರಲಿಲ್ಲ. ಅದಕ್ಕೆ commercial cylinders ಅನ್ನು ಬೇರೆ ಮಾಡಿದರು. Domestic cylinders ಅನ್ನು ಬೇರೆ ಮಾಡಿದರು. ಇವತ್ತು ಯಾವುದೇ ಸಮಸ್ಯೆ ಇಲ್ಲದೇ ಎಲ್ಲರಿಗೂ ಸಿಲೆಂಡರ್ ಸಿಗುತ್ತಿತ್ತು. ಇವತ್ತು ಇದಕ್ಕೆ ತಾತ್ಕಾಲಿಕವಾದ ಸಮಸ್ಯೆ ಬಂದಿದೆ ಎಂದು ಒಪ್ಪಿಕೊಳ್ಳೋಣ. ಈ ಸಮಸ್ಯೆ ಏತಕ್ಕೆ ಬಂತು? ಯಾರಾದರೂ ಸಿಲೆಂಡರನ್ನು ನುಂಗಿದರೆ? ಈ ರೀತಿ ಜವಾಬ್ದಾರಿ ಇರುವಂತಹವರು ಮಾತನಾಡುತ್ತಿರಲಿಲ್ಲ.

**Sri IVAN D'SOUZA:** The Central Government's policy has failed.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತು ಯಾವ policy ಯೂ ಸಹ fail ಆಗಿಲ್ಲ. ಅವರ ಮಾತುಗಳು ಮಾತ್ರ fail ಆಗುತ್ತಿವೆ. ಅದಕ್ಕೆ common sense ಇರುವವರು ಈ ರೀತಿ ಮಾತನಾಡುತ್ತಿರಲಿಲ್ಲ. ಮಾನ್ಯ ಪ್ರಧಾನ ಮಂತ್ರಿಯವರು ನಿನ್ನೆ ದಿವಸ ಜನರು ಗಾಬರಿ ಪಡುವಂತಹ ಅವಶ್ಯಕತೆ

ಇಲ್ಲವೆಂದು ಹೇಳಿದ್ದಾರೆ. ಈಗ ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಪತ್ರಿಕೆಯನ್ನು ಹಿಡಿದುಕೊಂಡು 'shortage' ಎಂದು ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಓದುತ್ತಾರೆ. ಮಾನ್ಯ ಪ್ರಧಾನ ಮಂತ್ರಿಯವರು ಹೇಳಿಕೆ ಕೊಟ್ಟಿರುವುದು ಮಾನ್ಯ ಸದಸ್ಯರಿಗೆ ಪತ್ರಿಕೆಯಲ್ಲಿ ಏಕೆ ಕಾಣಲಿಲ್ಲ? ಅವರಿಗೆ ಕಣ್ಣುಗಳು ಕುರುಡು ಇತ್ತೇ? ಅವರು ಅದನ್ನು ಓದಬೇಕಾಗಿತ್ತು. ಅವರು ಅದನ್ನು ಹೇಳಬೇಕಾಗಿತ್ತು. ಮಾನ್ಯ ಪ್ರಧಾನ ಮಂತ್ರಿಯವರು ಯಾವುದೇ ಕಾರಣಕ್ಕೂ ಸಮಸ್ಯೆ ಬರುವುದಕ್ಕೆ ಬಿಡುವುದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಸಚಿವರಾದ ಶ್ರೀ ಕೆ.ಹೆಚ್.ಮುನಿಯಪ್ಪನವರು ಅದೇ ವಿಷಯವನ್ನು ತೆಗೆದುಕೊಂಡು ಅದೇ ಮಾತನ್ನು ಹೇಳಿದ್ದಾರೆ. ಮಾನ್ಯ ಸಚಿವರಾದ ಕೆ.ಹೆಚ್.ಮುನಿಯಪ್ಪನವರು ನಿನ್ನೆ ದಿವಸ ಆ ರೀತಿ ದುಗುಡ ಪಡುವಂತಹದ್ದು ಏನಿಲ್ಲ. ಅದು ಕಾಳಸಂತೆಯಲ್ಲಿ ಏನಾದರೂ ಆದರೆ ಮಾತ್ರ ಅದಕ್ಕೆ ನಾವು ಜವಾಬ್ದಾರಿ ಇದ್ದು, ಅದನ್ನು ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಈಗಾಗಲೇ 2014 ನೇ ಸಾಲಿನಿಂದ 2026ನೇ ಫೆಬ್ರವರಿಯವರೆಗೆ ಒಂದು ಸಮಸ್ಯೆ ಎಲ್ಲೂ ಬಂದಿಲ್ಲ. ಈಗ ಆಗಿರುವಂತಹದ್ದು ಯುದ್ಧದ ಪರಿಣಾಮದಿಂದಾಗಿ ಆಗಿದೆ. ಹಾಗಾಗಿ, ತಾತ್ಕಾಲಿಕವಾಗಿ ಈ ಸಮಸ್ಯೆ ಉದ್ಭವವಾಗಿದೆ. ಇದಕ್ಕೆ ಇಡೀ ದೇಶದ ಜನರು ಅರ್ಥ ಮಾಡಿಕೊಳ್ಳಬೇಕು ಮತ್ತು ಒಟ್ಟಾಗಬೇಕು.

(ಮುಂದು)

(352) 12.03.2026/3.50/ಎಂವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ಮುಂದು):-**

ಇದಕ್ಕೆ ಇಡೀ ದೇಶದ ಜನರು ಅರ್ಥ ಮಾಡಿಕೊಳ್ಳಬೇಕು ಮತ್ತು ಒಟ್ಟಾಗಬೇಕು. ಅದನ್ನು ಬಿಟ್ಟು ಗ್ಯಾಸ್‌ಗೆ ಬೆಂಕಿ ಹಚ್ಚುವಂತಹ ಕೆಲಸ ಮಾಡುತ್ತಾರೆಯೇ? ಇದು ವೈಫಲ್ಯವೇ? ಎಲ್ಲಿ ವೈಫಲ್ಯವಿದೆ? ಹಾಗಾದರೆ, ವೈಫಲ್ಯ ಎಲ್ಲಿದೆ ಎಂದು ತೋರಿಸಲಿ. ಯಾವುದು ವೈಫಲ್ಯ? ಅವರು ಸಮಸ್ಯೆಗಳನ್ನು ಯಾವ ರೀತಿ ಪರಿಹಾರ ಮಾಡುತ್ತಿದ್ದರು?

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಯವರು ಕರೆ ಕೊಟ್ಟಾಗ ಉಪವಾಸ ಮಾಡಿದಂತಹ ದೇಶವಿದು. ಇವರಿಗೆ ಚಪಾತಿ ಬೇಕಂತೆ, ಅವರು ಲಡ್ಡು ತಿನ್ನಲ್ಲಿ.

(ಗೊಂದಲ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರ ಕಾಲದಲ್ಲಿ ಇಲ್ಲದೇ ಇರುವಂತಹ ಕಾಳಸಂತೆ ಈಗ ಬಂದಿದೆಯೇ? ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಇಲ್ಲದ್ದು ಈಗ ಬಂದಿದೆಯೆ ಎಂದು ಹೇಳಲಿ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಾಗಾದರೆ ಇವತ್ತು ಅವರು ಕಟ್ಟಿಗೆ ಮಾರಿಸುತ್ತಾರೆಯೇ? ಅವರು ಕಟ್ಟಿಗೆ ಮಾರಿಸುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದು ಬಿಟ್ಟು ಬೇರೆ ಯಾವುದೂ ಕಡತಕ್ಕೆ ಹೋಗಬಾರದು. ಅವರೊಬ್ಬರದು ಬಿಟ್ಟು ಬೇರೆ ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಬೇರೆ ಸದಸ್ಯರು ಮಾತನಾಡಿದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇವತ್ತು ಜನರು ಇದನ್ನು ಅರ್ಥ ಮಾಡಿಕೊಂಡಿದ್ದಾರೆ. ಇದು ಜನರ ಸಮಸ್ಯೆಯಲ್ಲ, ಇವತ್ತು ಇದು ಕಾಂಗ್ರೆಸ್ ನಾಯಕರ ಸಮಸ್ಯೆ. ಅಂದರೆ, ಅವರು ಇದರಲ್ಲಿಯೂ ಬೇಳೆ ಬೇಯಿಸಬೇಕೇ? ಈಗ ಗ್ಯಾಸ್ ಇಲ್ಲವೆಂದು ಹೇಳುತ್ತಾರೆ. ಹಾಗಾದರೆ, ಗ್ಯಾಸ್ ಇಲ್ಲದೆಯೇ ಹೇಗೆ ಬೇಳೆ ಬೇಯಿಸಿಕೊಳ್ಳುತ್ತಾರೆ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಕಟ್ಟಿಗೆ ತೆಗೆದುಕೊಳ್ಳುತ್ತೇವೆ. ಅವರು ಊಟ ಮಾಡಬಾರದು ಎಂದು ಹೇಳುತ್ತಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರಿಗೆ ಅದೇ ಸೂಕ್ತವೆನಿಸುತ್ತದೆ. ಈಗ ಮರ ಕಡಿಯಬಾರದು, ಹೊಗೆ ಇಲ್ಲದೆ ಜನರು ಜೀವನ ಮಾಡಬೇಕೆಂದು ಸುಮಾರು 14 ಕೋಟಿ ಬಡ ಕುಟುಂಬಗಳಿಗೆ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಗ್ಯಾಸ್ ಸಿಲಿಂಡರ್‌ಗಳನ್ನು ಕೊಟ್ಟಿದ್ದು. ಅದು ಅವರ ಕಾಲದಲ್ಲಿ ಅಲ್ಲ. ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಅಕ್ಕನವರು ಹೇಳಿದಂತೆ, ಅವತ್ತಿನ ದಿವಸ ಎಂ.ಪಿ.ಗಳ ಬಳಿಯಿಂದ ಕೂಪನ್ ತೆಗೆದುಕೊಂಡು ಹೋಗಬೇಕಾಗಿತ್ತು. ಇಲ್ಲವಾದರೆ 4,000/- ದಿಂದ 5,000/- ರೂಪಾಯಿ ಲಂಚ ಕೊಟ್ಟು, ಸಿಲಿಂಡರ್‌ಗಳಿಗೆ ಅಪ್ಲೈ ಮಾಡಬೇಕಾಗಿತ್ತು. ಅದನ್ನು ಒಂದು ಬಾರಿ ತೆಗೆದುಕೊಳ್ಳಬೇಕಾದರೆ, ಅದಕ್ಕೆ 8,000/- ದಿಂದ 10,000/- ರೂಪಾಯಿಗಳವರೆಗೆ ಆಗುತ್ತಿತ್ತು. ನಾವೆಲ್ಲರೂ ಅದನ್ನು ತೆಗೆದುಕೊಂಡು ನೋಡಿದ್ದೇವೆ. ಏಕೆಂದರೆ, ಸಿಲಿಂಡರ್‌ಗೆ ಡಿಪಾಸಿಟ್ ಹಣ ನೀಡಬೇಕು. ಅದಕ್ಕೆ ಬೇರೆ ಹಣ ನೀಡಬೇಕು. ಲಂಚ ಬೇರೆ ಕೊಡಬೇಕಾಗಿತ್ತು. ಅದೇ ರೀತಿ ಗ್ಯಾಸ್ ಸ್ಟೌವ್‌ಗೆ ಮತ್ತು accessories ಬೇರೆ ಕೊಡಬೇಕಾಗಿತ್ತು. ನಾವು ಎಲ್ಲಾ ಪರಿಸ್ಥಿತಿಯನ್ನು ನೋಡಿರತಕ್ಕಂಥದ್ದು. ಆದರೆ, ಇತ್ತೀಚೆಗೆ ಸಮಸ್ಯೆ ಇಲ್ಲದೇ

ನಡೆದುಕೊಂಡು ಹೋಗುತ್ತಿರುವಂತಹ ಕಾಲದಲ್ಲೂ ಕೂಡ policy ಏನಾಗಿದೆ ಎಂದರೆ, ಈಗ ಯುದ್ಧದ ಸಮಯದಲ್ಲಿ ಏನು policy ಇರುತ್ತದೆ? ಈಗ ಯುದ್ಧದ ಜೊತೆಯಲ್ಲಿ policy ಯನ್ನು ಜೋಡಿಸುತ್ತಾರೆಯೇ? ಇವತ್ತಿನ ಪರಿಸ್ಥಿತಿ ಏನಾಗಿದೆ? ಇದು ನಮ್ಮ ಒಂದು ದೇಶದ ಸಮಸ್ಯೆಯಲ್ಲ. ಇದು ಕರ್ನಾಟಕ ರಾಜ್ಯದ ಸಮಸ್ಯೆಯಲ್ಲ. ಇದು ಇಡೀ ಪ್ರಪಂಚದ ಸಮಸ್ಯೆಯಾದಾಗ, ಇದನ್ನು ಅರ್ಥ ಮಾಡಿಕೊಳ್ಳುವಂಥದ್ದೇ common sense. ಅವರಿಗೆ ಆ common sense ಇರಲಿ ಎಂದು ಅಷ್ಟೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ತಮಗೆ ವಿನಂತಿ ಮಾಡುತ್ತೇನೆ. ಮಾನ್ಯ ವಿರೋಧ ಪಕ್ಷ ನಾಯಕರು common sense ಎಂಬ ಪದ ಬಳಸಿದ್ದಾರೆ. ನಾವು ಈ ಪ್ರಶ್ನೆ ಎತ್ತಿರುವುದು. ದಯಮಾಡಿ ನಾನು ತಮಗೆ ವಿನಂತಿ ಮಾಡುತ್ತಿದ್ದೇನೆ. ನನಗೆ ಒಂದೇ ಒಂದು ನಿಮಿಷ ಅವಕಾಶ ನೀಡಿ. ಅಮೆರಿಕಾದ ಅಧ್ಯಕ್ಷರಾದ ಶ್ರೀ ಡೊನಾಲ್ಡ್ ಟ್ರಂಪ್ ರವರು ಮಾನ್ಯ ಪ್ರಧಾನ ಮಂತ್ರಿಗಳಿಗೆ common sense ಹೇಗೆ ಇದೆ certificate ನೀಡಿದ್ದಾರೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬು ರವರೇ, ನಾನು ತಮಗೆ ಅವಕಾಶ ನೀಡುವುದಿಲ್ಲ. ಮಾನ್ಯ ಸಚಿವರು ಉತ್ತರ ಹೇಳಿದ ಮೇಲೆ ತಾವು ಕೇಳಿ. ತಾವು ಬಹಳ ಅಧಿಕಪ್ರಸಂಗ ಮಾಡುತ್ತಿದ್ದೀರಿ. ಮಾನ್ಯ ಸಚಿವರು ತಾವು ಉತ್ತರ ಹೇಳಲಿ, ಆಮೇಲೆ ನೀವು ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು clarification.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ, ತಾವು ಈ ವಿಷಯಕ್ಕೆ signatory ಅಲ್ಲ. ನಾನು ತಮಗೆ clarification ಗೆ ಅವಕಾಶ ಕೊಡಬೇಕಾದರೆ ಕೊಡುತ್ತೇನೆ. ಮಾನ್ಯ ಸಚಿವರು ಉತ್ತರ ಹೇಳಲಿ. ಈಗ ನೀವು ಕುಳಿತುಕೊಳ್ಳಿ.

**ಶ್ರೀ ಕೆ.ಹೆಚ್.ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಇರಾನ್ ಮತ್ತು ಇಸ್ರೇಲ್ ಯುದ್ಧದಿಂದ ಈ ಒಂದು ಸಂಬಂಧ ಇಡೀ ರಾಷ್ಟ್ರಕ್ಕೆ ತೊಂದರೆಯಾಗಿದೆ. ಇದು ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವೆಲ್ಲರೂ ಕೂಡ ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ದೇಶ ಕಷ್ಟದಲ್ಲಿ ಇರುವಂತಹ ಕಾಲದಲ್ಲಿ ನಾವು ಯಾವ ರೀತಿ ನಡೆದುಕೊಳ್ಳಬೇಕು ಎಂಬುದು ಬಹಳ ಮುಖ್ಯವಾದಂತಹ ವಿಷಯ. External aggression, internal disturbance ಮತ್ತು ಬಹಳ ಅತಿವೃಷ್ಟಿ ಮತ್ತು ಅನಾವೃಷ್ಟಿ ಇಂತಹ ಸಂದರ್ಭಗಳಲ್ಲಿ ಇದು ಒಂದು ಎಂದು

ನಾವು ಭಾವನೆ ಮಾಡಿಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರ ಮುನ್ನೆಚ್ಚರಿಕೆಯಾಗಿ, Indian Oil Corporation ಗೆ 5ನೇ ತಾರೀಖಿಗೆ ಪತ್ರ ಬರೆದು, ಪ್ರತಿದಿನ ನಿಮಗೆ ಎಷ್ಟು ಅವಶ್ಯಕತೆ ಇದೆ ಎಂದು ತಕ್ಷಣ ನಮಗೆ ತಿಳಿಸಬೇಕೆಂದು ತಿಳಿಸಿದ್ದಾರೆ. ಅದಾದ ಮೇಲೆ ಪರಿಸ್ಥಿತಿ ಗಂಭೀರವಾದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು Oil Corporation ನವರಿಗೆ ಪತ್ರವನ್ನು ಬರೆದು, ಮತ್ತೆ ನನಗೆ ಮಾಹಿತಿಯನ್ನು ಕೊಟ್ಟು, ತಕ್ಷಣ ಸಭೆಯನ್ನು ಮಾಡಿ ಎಂದು ಹೇಳಿದರು. ನಾನು ನಿನ್ನೆಯ ದಿವಸ ವಿಧಾನಸಭೆಯ ಸದನದಲ್ಲಿ ಈ ವಿಷಯವನ್ನು ವಿಸ್ತಾರವಾಗಿ ಹೇಳಿದ್ದೇನೆ. ಅದಾದ ಮೇಲೆ ತಕ್ಷಣ ನಿನ್ನೆಯ ದಿವಸ Oil Corporation ನವರನ್ನು ಕರೆಯಿಸಿ, ಅವರ ಜೊತೆ ಮಾತನಾಡಿ, ವಿಷಯವನ್ನು ಮನವರಿಕೆ ಮಾಡಿಕೊಂಡಿದ್ದೇನೆ. ನಮಗೆ ಕಮರ್ಷಿಯಲ್ ಗ್ಯಾಸ್ 1,000 ಮೆಟ್ರಿಕ್ ಟನ್ ಎಂದರೆ, 1,50,000 ಸಿಲಿಂಡರ್ ಬೇಕಾಗುತ್ತದೆ. Domestic 5,000 ಮೆಟ್ರಿಕ್ ಟನ್ ಎಂದರೆ, 3,50,000 ಸಿಲಿಂಡರ್ ಬೇಕಾಗುತ್ತದೆ. ಭಾರತ ದೇಶದಲ್ಲಿ ಶೇಕಡಾ 100ಕ್ಕೆ 30ರಷ್ಟು ಉತ್ಪಾದನೆ ಇದೆ. ನಾನು ಭಾರತ ಸರ್ಕಾರದಲ್ಲಿ ಕೆಲಸ ಮಾಡಿದ್ದೇನೆ. ನಮಗೆ ಶೇಕಡಾ 70ರಷ್ಟು ಬೇರೆ ದೇಶದಿಂದ ಬೇಕಾಗುತ್ತದೆ. ಅಂದರೆ, ನಾವು ಶೇಕಡಾ 70ರಷ್ಟನ್ನು ಹೊರದೇಶದವರ ಮೇಲೆ ಅವಲಂಬಿಸಿದ್ದೇವೆ. ಬಹಳ ಮುಖ್ಯವಾದಂತಹ ಹಡಗುಗಳು ಬರುವಂತಹ ಜಾಗ ಏನಿದೆ ಆ ಜಾಗದಲ್ಲಿ ಸುಮಾರು ನೂರಾರು ಹಡಗುಗಳು ನಿಂತುಬಿಟ್ಟಿವೆ. ಆದರೆ, ಭಾರತ ದೇಶಕ್ಕೆ ಮಾತ್ರ ನಿನ್ನೆಯ ದಿವಸ ಇರಾನ್ ದೇಶದವರು ಅನುಮತಿ ಕೊಟ್ಟಿದ್ದಾರೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಈಗ ಎರಡು ಹಡಗುಗಳು ದಾರಿಯಲ್ಲಿವೆ. ಹಾರ್ಮುಜ್ canal ಅನ್ನು ದಾಟಿ ಮುಂಬೈಗೆ ಎರಡು ದಿನದಲ್ಲಿ ಒಂದು ಹಡಗು ಬರುತ್ತದೆ. ಹತ್ತು ದಿನದಲ್ಲಿ ಮತ್ತೊಂದು ಹಡಗು ಬಂದರೆ, ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಅವಕಾಶ ಇದೆ. ಈಗ ನಮಗೆ ಅವಶ್ಯಕತೆ ಇರುವುದು ಎಷ್ಟು ಎಂದರೆ, ಒಂದು ಕುಟುಂಬಕ್ಕೆ ಒಂದೂವರೆ ತಿಂಗಳಿಗೆ ಒಂದು ಸಿಲಿಂಡರ್ ಸಾಕಾಗುತ್ತದೆ. ಅದನ್ನು ಸರಿಯಾದಂತಹ ರೀತಿಯಲ್ಲಿ ಮಿತವ್ಯಯ ಮಾಡಬೇಕು. ಅದನ್ನು ದುರುಪಯೋಗ ಮಾಡಬಾರದು. ಅದನ್ನು ಸದುಪಯೋಗ ಮಾಡಿಕೊಂಡರೆ ಸಾಕು ಎಂದು standard instructions ಇದೆ. ಅದಕ್ಕೆ ಕೇಂದ್ರ ಸರ್ಕಾರ ಏನು ಮಾಡಿದೆ ಎಂದರೆ, 25 ರಿಂದ 35 ದಿನಗಳ ಒಳಗಡೆ ನಿಮಗೆ ಬೇಕಾಗಿರುವಂತಹ ಸಿಲಿಂಡರ್‌ಗಳನ್ನು ನಾವು ಕೊಡುತ್ತೇವೆಂದು ಹೇಳಿದ್ದಾರೆ. ನಾನು Oil Corporation ನವರನ್ನು ಕರೆದು ಕೇಳಿದಾಗ, ನಾವು ಪ್ರತಿ ಕುಟುಂಬಕ್ಕೆ ಒಂದು ಸಿಲಿಂಡರ್ ಅನ್ನು 25 ಅಥವಾ

೩೦ ದಿನಗಳ ಒಳಗಡೆ ಸರಬರಾಜು ಮಾಡುವುದಕ್ಕೆ ಸುಮಾರು ಹತ್ತು ದಿನದ ಸ್ಟಾಕ್ ಇದೆ. ಅದರ ಒಳಗಡೆ ಏನು ಮಾಡುತ್ತೇವೆಂದರೆ, ಯುದ್ಧದಿಂದ ಬರುವಂಥದ್ದು ನಿಂತರೂ ಕೂಡ, ಒಂದು ಸಿಲಿಂಡರ್ ಅನ್ನು ಒಂದು ಕುಟುಂಬಕ್ಕೆ ಪೂರ್ತಿ ಪ್ರಮಾಣದಲ್ಲಿ ನಾವು ಕೊಡುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದು ಅವರದೇ ಒಂದು calculation ಇದೆ. ಇವತ್ತು ಒಂದು ಹೊಸ ಸುದ್ದಿ ಬಂದಿದೆ. ಈಗ ಹಾರ್ಮುಜ್ canal ನಿಂದ ಎರಡು ಹಡಗುಗಳನ್ನು ಬಿಟ್ಟಿರುವುದರಿಂದ, ಬಹುತೇಕ ಆದಷ್ಟುಬೇಗ ಇದಕ್ಕೆ ಪರಿಹಾರ ಸಿಗುತ್ತದೆ. ಆದರೆ, ನಾನು ಹೇಳುವುದೇನೆಂದರೆ, ಮಾಧ್ಯಮಗಳಲ್ಲಿ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಆತಂಕ ಉಂಟಾಗಿದೆ. ಇದಕ್ಕೆ ಆತಂಕ ಬೇಕಾಗಿಲ್ಲವೆಂದು ನಾನು ನಿನ್ನೆಯ ದಿವಸವೇ ಹೇಳಿದ್ದೇನೆ. ಏಕೆಂದರೆ, ನಮ್ಮ ಸ್ವಂತ ರಾಷ್ಟ್ರದಲ್ಲಿ ಉತ್ಪಾದನೆ ಆಗುವುದರಲ್ಲಿಯೇ ಒಂದು ಕುಟುಂಬಕ್ಕೆ ಒಂದು ಸಿಲಿಂಡರ್ ಅನ್ನು ಕೊಡುವಂತಹ ಶಕ್ತಿ ನಮಗೆ ಇರುವಾಗ, ಅದನ್ನು ಮಿತವ್ಯಯ ಮಾಡಿಕೊಂಡರೆ, ಯಾವುದೇ ತಕರಾರು ಇಲ್ಲದೇ ನಡೆಯುತ್ತದೆ. ಅಂತಹವುದರಲ್ಲಿ ಈಗಾಗಲೇ ವಿಶೇಷವಾಗಿ ನಮ್ಮ ಎರಡು ಹಡಗುಗಳಿಗೆ ಅನುಮತಿ ಕೊಟ್ಟಿದ್ದಾರೆ. ಬೇರೆ ಯಾವುದೇ ದೇಶಕ್ಕೂ ಸಹ ಅನುಮತಿ ಕೊಟ್ಟಿಲ್ಲ. ಆ ಎರಡು ಹಡಗುಗಳು ಬರುತ್ತಿವೆ. ಎರಡು ದಿನದಲ್ಲಿ ಒಂದು ಹಡಗು ಮತ್ತು ಹತ್ತು ದಿನದಲ್ಲಿ ಒಂದು ಹಡಗು ಬರುತ್ತದೆ. ಆ ಎಲ್ಲಾ problem solve ಆಗುತ್ತದೆ. ಮಾನ್ಯ ಮುಖ್ಯ ಕಾರ್ಯದರ್ಶಿಯವರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ಯಾವುದೇ ಕಾರಣಕ್ಕೂ ಇದು ದುರುಪಯೋಗವಾಗಬಾರದು, Essential Commodities Act ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಮತ್ತೆ strict ಆಗಿ ಕೆಲಸ ಮಾಡಬೇಕಾಗುತ್ತದೆಂದು ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ನೀಡಲಾಗಿದೆ. ವಿನಾಕಾರಣ ಅರ್ಜಿ ಹಾಕುವುದು. ಅವರಿಗೆ ಗೊತ್ತಿದೆ ಮೂರು ತಿಂಗಳು ಗ್ಯಾಸ್ ಬರುವುದಿಲ್ಲವಂತೆ ಅದಕ್ಕೆ ಈ ಎರಡು-ಮೂರು ಅರ್ಜಿ ಹಾಕಿಬಿಡುವುದು. ಆಗ ಮೂರು ಸಿಲಿಂಡರ್ ಎಂದು. ಆದರೆ, ಅದು ಆಗುವುದಿಲ್ಲ. ಕಾನೂನುಬದ್ಧವಾಗಿ ಅವರಿಗೆ ಸೇರುವಂತಹ ಸಿಲಿಂಡರ್ ಪ್ರತಿ ಸಮಯ ಕೊಡುವುದಕ್ಕೆ ನಮ್ಮ ಬಳಿ ಇದೆ. ಇದರ ಬಗ್ಗೆ ಅವರು ಆಶ್ವಾಸನೆಯನ್ನು ಸಹ ಕೊಟ್ಟಿದ್ದಾರೆ. ಮತ್ತೆ ಅವರ ಸ್ಟಾಕ್ ಅನ್ನು ಸಹ ತಿಳಿಸಿದ್ದಾರೆ. ಆದುದರಿಂದ, ಇದರಲ್ಲಿ ಗೊಂದಲ ಮಾಡಿಕೊಳ್ಳುವಂತಹ ಅವಶ್ಯಕತೆ ಇಲ್ಲ. ಹೌದು, ಮಾಧ್ಯಮ ಮಿತ್ರರು ಹೇಳಿರುವುದರಿಂದ, ಎಲ್ಲರಿಗೂ ಕೂಡ ಆತಂಕ ಬರುತ್ತದೆ. ನಾನು ಇವತ್ತು ಈ ಸದನದ ಮುಖಾಂತರ ಎಲ್ಲಾ ಗ್ರಾಹಕರಿಗೂ ಕೂಡ ಮನವಿ ಮಾಡಿಕೊಳ್ಳುತ್ತೇನೆ. ವಿನಾಕಾರಣ ಬುಕ್ ಮಾಡುವುದಕ್ಕೆ ಹೋಗುವುದು ಬೇಡ. ಮತ್ತೆ ಗ್ಯಾಸ್ ಅನ್ನು ಸ್ಟಾಕ್ ಮಾಡಿಕೊಳ್ಳುವುದಕ್ಕೆ ಹೋಗುವುದು ಬೇಡ. Black Marketers ಮೇಲೆ Essential Commodities Act ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು

ತಯಾರಿದ್ದೇವೆ. ಆದರೆ, ಅವರಿಗೂ ಸಹ ಮನವಿ ಮಾಡಿಕೊಳ್ಳುತ್ತೇನೆ. ಇಂತಹ ಸಂದಿಗ್ದ ಪರಿಸ್ಥಿತಿಯಲ್ಲಿ ಅಂತಹ ಕೆಟ್ಟ ಕೆಲಸಕ್ಕೆ ಕೈ ಹಾಕುವುದು ಬೇಡ. ಮತ್ತೆ ವಿನಾಕಾರಣವಾಗಿ ಹೆಚ್ಚು ಸಿಲಿಂಡರ್‌ಗಳನ್ನು deposit ಮಾಡಿಕೊಳ್ಳುವುದಕ್ಕೆ ಹೋಗುವುದು ಬೇಡ. ಕ್ರಮಬದ್ಧವಾಗಿ ಅವರ ಕುಟುಂಬಕ್ಕೆ ಬೇಕಾಗಿರುವಂತಹ ಸಿಲಿಂಡರ್‌ಗಳ ಲೆಕ್ಕಾಚಾರವಿದೆ. ಆ ಲೆಕ್ಕಾಚಾರದಂತೆ ಕೊಡುವುದಕ್ಕೆ ಸರ್ಕಾರ ಬದ್ಧವಾಗಿದೆ. ನಾವು ಇದನ್ನು maintain ಮಾಡುತ್ತೇವೆ ಎಂಬ ವಿಷಯವನ್ನು ಸದನಕ್ಕೆ ಮಾನ್ಯ ಸಭಾಪತಿಯವರ ಮುಖಾಂತರ ತಿಳಿಸುತ್ತೇನೆ. ಬಹಳ ಮುಖ್ಯವಾದಂತಹ ವಿಷಯಗಳಾದ portal ವಿಷಯಗಳನ್ನು ಹೇಳಿದ್ದಾರೆ. ನಮಗೆ essential ಆಗಿ ಯಾವುದಕ್ಕೆ ಬೇಕಾಗುತ್ತದೆ? ನಾವು ಒಂದು ಕಡೆ ಹೇಳಿದ್ದೇನೆ. ಈಗ ನಾವು domestic ಅನ್ನು ಪರಿಹಾರ ಮಾಡುತ್ತೇವೆ. ಯಾರೂ ಆತಂಕಪಡುವುದು ಬೇಡ. ಎರಡನೆಯದು ಹೋಟೆಲ್, ಆಸ್ಪತ್ರೆ, residential ಶಾಲೆಗಳು, ಇದಕ್ಕೆ ಒಂದು ವ್ಯವಸ್ಥೆ ಮಾಡಿಕೊಂಡಿದ್ದೇವೆ. Commercial Cylinders ಆಸ್ಪತ್ರೆಗಳಿಗೆ ಬೇಕೇ ಬೇಕು. ಅದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಆಸ್ಪತ್ರೆಗಳಿಗೆ ಬೇಕಾಗುತ್ತದೆ ಮತ್ತೆ ಶಾಲೆಗಳಿಗೆ ಬೇಕಾಗುತದೆ. ಅದಕ್ಕೂ ಕೂಡ ವ್ಯವಸ್ಥೆ ಮಾಡಿಕೊಂಡು priority ಯಾಗಿ commercial cylinders ಅನ್ನು ಅತ್ಯಂತ ಅವಶ್ಯಕತೆ ಇರುವಂತಹ ಕಡೆಗೆ ಕೊಡುವುದಕ್ಕೂ ಕೂಡ ಏರ್ಪಾಡು ಮಾಡಿಕೊಂಡಿದ್ದೇವೆ. ಎಲ್ಲಿ ಸಮಸ್ಯೆಯಾಗುತ್ತದೆಂದರೆ, ಸ್ವಲ್ಪ ಮಟ್ಟಿಗೆ ಹೋಟೆಲ್‌ಗಳಿಗೆ ಒಂದು ವಾರ ಸಮಸ್ಯೆಯಾಗಬಹುದು. ಈಗ ಹೋಟೆಲ್, ಕಲ್ಯಾಣ ಮಂಟಪಗಳು, convention halls ಮತ್ತು ಬೇರೆ ಬೇರೆ ಕಾರ್ಯಕ್ರಮಗಳಿಗೆ commercial cylinders ಎಂದು ಹೇಳುತ್ತಿದ್ದೇನೆ. Domestic ಅನ್ನು ಮನೆಯಲ್ಲಿ ಉಪಯೋಗಿಸುವುದಕ್ಕೆ ಯಾವುದೇ ತರಹದ ತಾಪತ್ರಯ ಇಲ್ಲ.

**(ಮುಂದು)**

(353) 12.03.2026 04.00 **LL-RN** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಹೆಚ್. ಮುನಿಯಪ್ಪ(ಮುಂದು)**

ಕಮರ್ಷಿಯಲ್ ಸಿಲಿಂಡರ್ ಪೂರ್ತಿಯಾಗಿ ಬಂದ್ ಆಗಿರುವುದಿಲ್ಲ. ಎಲ್ಲಿ ಆಹಾರ ತಯಾರಿಕೆ ಮಾಡಲಿಕ್ಕೆ ಅವಶ್ಯಕತೆ ಜರೂರು ಇದೆ, ಅಂದರೆ, ಆಸ್ಪತ್ರೆಗಳಿಗೆ ಕೊಡಲೇಬೇಕು; ಮಕ್ಕಳಿಗೆ ಕೊಡಲೇಬೇಕು; ಶಾಲೆಗಳಿಗೆ ಕೊಡಲೇಬೇಕು; ರೆಸಿಡೆನ್ಷಿಯಲ್‌ಗಳಿಗೆ ಕೊಡಲೇಬೇಕು; ಆದರೆ, ಆದ್ಯತೆ ಮೇರೆಗೆ ಕಮರ್ಷಿಯಲ್ ಸಿಲಿಂಡರ್ ಕೊಡುತ್ತೇವೆ. ಆದರೆ, ಮದುವೆ ಸಮಾರಂಭಗಳಲ್ಲಿ ಸ್ವಲ್ಪ ದೊಡ್ಡದಾಗಿ ಸಿಲಿಂಡರ್‌ಗಳನ್ನು ಖರ್ಚು ಮಾಡುವುದು ಇರುತ್ತದೆ. ಹಾಗಾಗಿ, ಮದುವೆ ಸಮಾರಂಭಗಳು ಹಾಗೂ ಇತರೆ ಬೇರೆ ಬೇರೆ ಕಾರ್ಯಕ್ರಮಗಳಿಗೆ ಒಂದು ವಾರ ಸಮಸ್ಯೆ ಆಗಬಹುದು. ಆದಾಗ್ಯೂ, ಇವೊತ್ತಿನ ದಿವಸ ಹಡಗುಗಳು ಹೊರಟಿರುವುದರಿಂದ ನಮಗೊಂದು

ಖಾತ್ರಿಯಾಗಿದೆ. ಇದರ ಜೊತೆಗೆ, ಮುಂದಿನ ಒಂದು ವಾರದಲ್ಲಿ ಕಮರ್ಷಿಯಲ್ ಸಿಲಿಂಡರ್‌ಗಳ ಸಮಸ್ಯೆಯನ್ನು ಸಹ ನಾವು ಬಗೆಹರಿಸುತ್ತೇವೆ. ಅಲ್ಲಿಯವರೆಗೂ ಕೂಡ ನಾವು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಈ ಹಿಂದೆ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಇದ್ದಾಗ ಆದ ಘಟನೆ ಬಗ್ಗೆ ನಾನು ತಮ್ಮ ಅನುಮತಿ ಮೇರೆಗೆ ಮಾತನಾಡುವುದಕ್ಕೆ ಬಯಸುತ್ತೇನೆ. 1963 ರಿಂದ 1965ರವರೆಗೆ ನಮ್ಮ ದೇಶದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಬಂದಿರುತ್ತದೆ. ನಾನು ಆಗ ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡುತ್ತಿದ್ದೆನು. ಆ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ತೀವ್ರತರವಾದಂತಹ ಬರಗಾಲ ಬಂತು. ಆಗ ಹೊರದೇಶದವರು, "ಭಾರತೀಯರಿಗೆ ನಾವು ಮೆಕ್ಕೆಜೋಳವನ್ನು ಕೊಡುವುದಿಲ್ಲ. ನಾವು ಮೆಕ್ಕೆಜೋಳವನ್ನು ಕೊಡದೇ ಇದ್ದರೆ, ಅವರು ಊಟ ಮಾಡುವುದಿಲ್ಲ" ಎಂದು ಹೇಳಿದರು. ಆಗ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಒಂದು ಮಾತನ್ನು ಹೇಳಿದರು. ಅದೇನೆಂದರೆ, "ಭಾರತೀಯರಾದ ನಾವುಗಳು ಸ್ವಾಭಿಮಾನದಿಂದ ಬದುಕೋಣ. ಅದಕ್ಕಾಗಿ, ಪ್ರತಿ ಸೋಮವಾರ ರಾತ್ರಿ ಒಂದು ಹೊತ್ತು ಊಟ ಬಿಡಿ. ಇದರಿಂದಾಗಿ, ನಮಗೆ ಹೊರ ದೇಶದಿಂದ ಒಂದೇ ಒಂದು ಕಾಳು ಮೆಕ್ಕೆಜೋಳ ಕೂಡ ಬೇಕಾಗುವುದಿಲ್ಲ" ಎಂದು ಹೇಳಿದರು.

**(ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮೂಲಕ ಮಾನ್ಯ ಸಚಿವರ ಮಾತಿಗೆ ಬೆಂಬಲ ಸೂಚಿಸಿದರು)**

ಅದಾದ ನಂತರ, "ವಿದ್ಯುಚ್ಛಕ್ತಿಯನ್ನು ಪ್ರತಿ ದಿನ ರಾತ್ರಿ 9-00 ಗಂಟೆಯ ನಂತರ ಬಂದ್ ಮಾಡೋಣ. ತದನಂತರ, ನಾವೇ ವಿದ್ಯುತ್ ಅನ್ನು ಉತ್ಪಾದನೆ ಮಾಡಿಕೊಳ್ಳೋಣ. ಇದರಿಂದಾಗಿ, ನಾವು ಯಾರ ಮೇಲೆಯೂ ಅವಲಂಬಿತರಾಗುವುದಿಲ್ಲ" ಎಂದು ಹೇಳಿದರು. ಹಿಂದಿನ ಸರ್ಕಾರಗಳು ಇದರ ಬಗ್ಗೆ ಸಾಕಷ್ಟು ಯೋಜನೆಗಳನ್ನು ಮಾಡಿರುತ್ತದೆ. ನಾನು ಕೂಡ ಯು.ಪಿ.ಎ. ಸರ್ಕಾರದ ಅವಧಿಯಲ್ಲಿ ಸುಮಾರು 10 ವರ್ಷಗಳ ಕಾಲ ಮಂತ್ರಿಯಾಗಿದ್ದೆನು. ಆ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಗ್ರೀನ್ ಎನರ್ಜಿಯನ್ನು ಡೆವಲಪ್‌ಮೆಂಟ್ ಮಾಡಬೇಕು; ಸೋಲಾರ್ ಎನರ್ಜಿಯನ್ನು ಡೆವಲಪ್‌ಮೆಂಟ್ ಮಾಡಬೇಕು; ಬಯಲುಸೀಮೆಯಲ್ಲಿ ಸೋಲಾರ್ ಎನರ್ಜಿಯ ಮಾಡುವುದರ ಮುಖಾಂತರ ನಮಗೆ ಎಷ್ಟು ವಿದ್ಯುತ್ ಅವಶ್ಯಕತೆ ಇದೆ, ಅಷ್ಟು ವಿದ್ಯುತ್ ಅನ್ನು ಕೂಡ ನಾವು ಉತ್ಪಾದನೆ ಮಾಡಿಕೊಳ್ಳಬೇಕು ಎನ್ನುವ ಚಿಂತನೆಯನ್ನು ನಾವು ಮಾಡಿದ್ದೇವೆ. ಬಹುಶಃ ಈಗಿನ ಕೇಂದ್ರ ಸರ್ಕಾರ ಆ ಕೆಲಸವನ್ನು ಮಾಡುತ್ತಿದೆ ಎಂದು ನಾನು ಭಾವಿಸಿದ್ದೇನೆ. ಆದರೆ, ಇಂತಹ ವಿಚಾರಗಳಲ್ಲಿ ನಮ್ಮ ಉದ್ದೇಶಗಳು ಹೇಗಿರಬೇಕು ಎನ್ನುವ ಬಗ್ಗೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು, "ಭಾರತೀಯರಾದ ನಾವುಗಳು ಯಾವತ್ತೂ ಕೂಡ ಪರಕೀಯರ ಮೇಲೆ ಅವಲಂಬನೆ ಆಗಬಾರದು" ಎಂದು ಹೇಳಿರುತ್ತಾರೆ. ಆದರೆ, ಅನಿವಾರ್ಯವಾಗಿ ನಾವು ಪರಕೀಯರ ಮೇಲೆ ನಾವು ಹೆಚ್ಚು ಅವಲಂಬನೆ ಆಗಿಬಿಟ್ಟಿದ್ದೇವೆ. ಆ ಅವಲಂಬನೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಚಿಂತನೆ ಮಾಡಬೇಕಾಗಿರುತ್ತದೆ. ಆ ಚಿಂತನೆಯಲ್ಲಿ ನಾವು ಮುಂದೆ ಸಾಗಿದರೆ ನಮಗೆ ಅನುಕೂಲವಾಗುತ್ತದೆ. ಇವೊತ್ತಿನ ದಿವಸ ಅಕಸ್ಮಾತ್ ಆಗಿ ಇದು ಆಯಿತು. ಆದರೆ, ಮುಂದೆ ಇನ್ನೂ ದೊಡ್ಡ ಸಂದರ್ಭಗಳು ಬರಬಹುದು.

ಅಂತಹ ಕಾಲದಲ್ಲಿ ನಾವು ಸ್ವಾಭಿಮಾನದಿಂದ, ನಮ್ಮ ಸ್ವಂತ ಕಾಲ ನಿಲ್ಲಬೇಕಾದರೆ, ಯಾವ ವಸ್ತುವನ್ನು ನಾವು ಆಮದು ಮಾಡಿಕೊಳ್ಳುತ್ತೇವೆ. ಅಂದರೆ, ಅದು ಆಯಿಲ್ ಇರಬಹುದು ಅಥವಾ ಬೇರೆ ವಸ್ತು ಇರಬಹುದು. ಅವುಗಳ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುವಂತಹ ರೀತಿಯಲ್ಲಿ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರಗಳು ಗಮನ ಕೊಡಬೇಕಾಗುತ್ತದೆ. ಏಕೆಂದರೆ, ನಾನು ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡಿದ್ದರಿಂದ ಈ ಮಾತುಗಳನ್ನು ಹೇಳುತ್ತೇನೆ. ಈ ಹಿಂದೆ ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿದ್ದಾಗ, ಸೋಲಾರ್ ಎನರ್ಜಿಗೆ ಅತೀ ಹೆಚ್ಚು ಕೊರತೆ ಉಂಟಾಗಿರುತ್ತದೆ. ಅದನ್ನು ಈಗಿನ ಸರ್ಕಾರ ಮುಂದುವರೆಸುತ್ತಿರಬಹುದು. ನಾನು ಈಗ ಕೇಂದ್ರ ಸರ್ಕಾರದಲ್ಲಿ ಇರುವುದಿಲ್ಲ. ಹಾಗಾಗಿ, ನಾನು ಆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವೊತ್ತಿನ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ನಮ್ಮ ಜೊತೆ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನವರು ಕೈಜೋಡಿಸಿದ್ದಾರೆ. ಸರ್ಕಾರ ಅದನ್ನು ಸಮಂಜಸವಾಗಿ ವಿತರಣೆ ಮಾಡುತ್ತೇವೆ. ಜೊತೆಗೆ, ಅಡುಗೆ ಅನಿಲವನ್ನು ಯಾರಾದರೂ ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡಿದರೆ, ಅವರ ವಿರುದ್ಧ ನಾವು ಕಾನೂನು ಪ್ರಕಾರ ಕ್ರಮ ಜರುಗಿಸುತ್ತೇವೆ. ಹಾಗಾಗಿ, ರಾಜ್ಯದ ಜನರಲ್ಲಿ ನಾನು ಮನವಿ ಮಾಡುವುದೇನೆಂದರೆ, "ನಾಳೆಯಿಂದ ಯಾರೂ ಕೂಡ ಅಡುಗೆ ಸಿಲಿಂಡರ್‌ಗಳನ್ನು ಅನಗತ್ಯವಾಗಿ ಬುಕ್ ಮಾಡುವುದು ಬೇಡ". ಇದರ ಜೊತೆಗೆ, ಎರಡೂ ಸದನದ ಸದಸ್ಯರುಗಳು ಕೂಡ ಇಂತಹ ಸಂದರ್ಭದಲ್ಲಿ, ಈ ವಿಷಯದಲ್ಲಿ ನಾವು ಯಾರೂ ಕೂಡ ಬ್ಲಾಕ್ ಮಾರ್ಕೆಟ್‌ನವರಿಗೆ ಅವಕಾಶ ಮಾಡಿಕೊಡಬಾರದು. ಅಷ್ಟೇ ಅಲ್ಲದೇ, ಆತಂಕ ಪಡುವ ಜನರಿಗೂ ಕೂಡ ಎಚ್ಚರಿಕೆ ಕೊಡಬೇಕಾಗುತ್ತದೆ. ಆದುದರಿಂದ, ಈ ಸದನದ ಮುಖಾಂತರ ಹಾಗೂ ಮಾನ್ಯ ಸಭಾಪತಿಯವರ ಮುಖಾಂತರ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ನಮ್ಮ ರಾಜ್ಯದಲ್ಲಿ domestic ಅಡುಗೆ ಅನಿಲ ಸಿಲಿಂಡರ್‌ಗಳನ್ನು ಪೂರೈಸುವುದಕ್ಕೆ ಯಾವುದೇ ಸಮಸ್ಯೆ ಇರುವುದಿಲ್ಲ.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಎಷ್ಟು ದಿವಸ ಈ ಸಮಸ್ಯೆ ಇದೆ?

**ಶ್ರೀ ಕೆ.ಹೆಚ್. ಮುನಿಯಪ್ಪ:-** ಮಾನ್ಯ ಸಭಾಪತಿಯವರೇ, ಸಮಸ್ಯೆ ಇಲ್ಲವೇ ಇಲ್ಲ. ಅದರ ಬಗ್ಗೆ ನಾನು ಹೇಳುತ್ತೇನೆ ಕೇಳಿ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಸಮಸ್ಯೆ ಇಲ್ಲವೇ ಇಲ್ಲ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಇಷ್ಟು ಹೊತ್ತು ಮಾನ್ಯ ಸದಸ್ಯರು ಮಾತನಾಡಿರುವುದೆಲ್ಲವೂ ಹೋಯಿತು.

**(ಗೊಂದಲ)**

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಆದರೆ, ನಾವು ಅಡುಗೆ ಅನಿಲ ಸಿಲಿಂಡರ್‌ಗಾಗಿ ಬುಕ್ ಮಾಡಿದರೆ, ಬುಕಿಂಗ್ ಆಗುತ್ತಿಲ್ಲವೇ? ನಾವೆಲ್ಲರೂ ಬುಕಿಂಗ್ ಮಾಡುವುದಕ್ಕೆ ಸಾಕಷ್ಟು ಪ್ರಯತ್ನಪಟ್ಟಿರುತ್ತೇವೆ. ಇಲ್ಲಿ ಮೆಸೇಜ್ ಬಂದಿದೆ ನೋಡಿ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಹರ್ಮಾಜ್ ಜಲಸಂಧಿಯ ಬಗ್ಗೆ ಆಗಲೇ ಹೇಳಿದರು. ಈಗ ಹೇಗೋ ಹಡಗು ಬರುತ್ತಿದೆ. ಇವರು ಏತಕ್ಕೆ ಈಗ ಬೆಂಕಿ ಹಚ್ಚುತ್ತಿದ್ದಾರೆ?

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ' ಸೋಜಾರವರು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ನೀಡುತ್ತಿದ್ದಾರೆ. ಮಧ್ಯದಲ್ಲಿ ಶ್ರೀಮತಿ ಭಾರತಿ ಶೆಟ್ಟಿಯವರು ಏತಕ್ಕೆ ಮಾತನಾಡುತ್ತಾರೆ?

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಒಂದು ನಿಮಿಷ ಕೇಳಿ. ಇದು ಸಾರ್ವಜನಿಕ ಮಹತ್ವದ ವಿಷಯವಾಗಿದೆ. ಹಾಗಾಗಿ, ಈ ವಿಷಯದ ಮೇಲೆ ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳುವುದಕ್ಕೆ ನಾನು ಅವಕಾಶ ಕೊಟ್ಟಿರುತ್ತೇನೆ. ಆದರೆ, ಶ್ರೀ ಐವನ್ ಡಿ' ಸೋಜಾ ರವರ ಬಾಯಿ ಸುಮ್ಮನಿರುವುದಿಲ್ಲ. ಶ್ರೀಮತಿ ಭಾರತಿ ಶೆಟ್ಟಿಯವರು ಸಹ, ಅವರಿಗಿಂತಲೂ ಜೋರು ಮಾಡುತ್ತಾರೆ. ಅದಕ್ಕೆ ನಾನು ಏನು ಮಾಡುವುದು? ಅವರು ತಿಳಿದುಕೊಳ್ಳಬೇಕು ಅಲ್ಲವೇ? ಸುಮ್ಮನೆ ಎದ್ದು ಬಿಡುತ್ತಾರೆ. ಮಾನ್ಯ ಸಚಿವರು ಉತ್ತರ ಹೇಳುವುದನ್ನು ಮೊದಲು ಕೇಳಿ.

**ಶ್ರೀ ಕೆ.ಹೆಚ್. ಮುನಿಯಪ್ಪ:-** ಮಾನ್ಯ ಸಭಾಪತಿಯವರೇ, ಸಾರ್ವಜನಿಕರನ್ನು ಆತಂಕಕ್ಕೆ ಒಳಪಡಿಸುವಂತಹ ರೀತಿಯಲ್ಲಿ ನಾವು ಇರಬಾರದು. ನಾವೆಲ್ಲರೂ ಕೂಡ ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಧೈರ್ಯ ಹೇಳಬೇಕು. ನಾನು ಹೇಳುತ್ತಿರುವುದೇನೆಂದರೆ, ಪ್ರಸ್ತುತ ನಮ್ಮಲ್ಲಿ ಶೇಕಡ ೩೦ರಷ್ಟು ಉತ್ಪಾದನೆ ಇದೆ. ಡೊಮೆಸ್ಟಿಕ್ ಅಡುಗೆ ಅನಿಲ ಸಿಲಿಂಡರ್‌ಗಳನ್ನು ನಾವೇ ಕೊಡುತ್ತೇವೆ. ಯುದ್ಧ ನಡೆದರೂ ಕೂಡ, ಒಂದು ಕುಟುಂಬಕ್ಕೆ ಪ್ರತಿ ತಿಂಗಳು ಒಂದು ಸಿಲಿಂಡರ್ ಅನ್ನು ನಾವೇ ಕೊಡುತ್ತೇವೆ. ಅದಕ್ಕೆ ಯಾವುದೇ ತೊಂದರೆ ಇರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಮಾನ್ಯ ಸಚಿವರ ಮಾತಿಗೆ ಬೆಂಬಲ ಸೂಚಿಸಿದರು)**

ಆದರೆ, ಕಮರ್ಷಿಯಲ್ ಸಿಲಿಂಡರ್‌ಗಳು ಅಂದರೆ, ಹೋಟೆಲ್‌ಗಳು ಹಾಗೂ ಕಲ್ಯಾಣ ಮಂಟಪಗಳು ಒಂದು ವಾರದ ಮಟ್ಟಿಗೆ ಸ್ವಲ್ಪ ನಿಧಾನ ಮಾಡಲಿ. ಒಂದು ವಾರದ ನಂತರ, ಕಮರ್ಷಿಯಲ್ ಸಿಲಿಂಡರ್‌ಗಳನ್ನು ಕೂಡ ಸಮರ್ಪಕವಾಗಿ ವಿತರಣೆ ಮಾಡುತ್ತೇವೆ. ಆದರೆ, essential services ಏನಿವೆ ಅಂದರೆ, ಆಸ್ಪತ್ರೆಗಳು, ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಹಾಸ್ಟೆಲ್‌ಗಳು, ಅವೆಲ್ಲದಕ್ಕೂ ಕೂಡ ನಾವು ಇರುವಂತಹದರಲ್ಲಿಯೇ

ವ್ಯವಸ್ಥೆ ಮಾಡಿಕೊಡುತ್ತೇವೆ. ಆದರೆ, ಈ ಸಂದರ್ಭದಲ್ಲಿ ನಾವು ಕಡಿಮೆ ಖರ್ಚು ಮಾಡಬೇಕು. ಮಿತವ್ಯಯ ಮಾಡಬೇಕು ಎಂದು ನಾನು ಸಾರ್ವಜನಿಕರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಚಿವರೇ, ಒಂದು ನಿಮಿಷ ತಾವು ಯೀಲ್ಡ್ ಆಗಿ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೇ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೆ.ಹೆಚ್. ಮುನಿಯಪ್ಪ:-** ಮಾನ್ಯ ಸಭಾಪತಿಯವರೇ, ಇದನ್ನು ಮಾಡುವುದರ ಮುಖಾಂತರ ಅಡುಗೆ ಅನಿಲ ಸಿಲಿಂಡರ್‌ಗಳ ಕೊರತೆಯಿಂದ ಉಂಟಾಗಿರುವ ಆತಂಕವನ್ನು ಕಡಿಮೆ ಮಾಡಬಹುದಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಕೂಡ, "ಇಂಡಿಯನ್ ಆಯಿಲ್ ಕಾರ್ಪೋರೇಷನ್‌ರವರು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಜೊತೆ ಪ್ರತಿ ವಾರ ಒಂದು ಸಭೆ ಕರೆದು, ಅಡುಗೆ ಅನಿಲ ಸಿಲಿಂಡರ್‌ಗಳ ಸಮರ್ಪಕ ವಿತರಣೆ ಆಗುತ್ತಿದೆಯೇ ಎಂಬುದನ್ನು ಚರ್ಚಿಸಿ" ಎಂಬ ಆದೇಶವನ್ನು ಮಾಡಿರುತ್ತಾರೆ. ಆದುದರಿಂದ, ಈ ವಿಚಾರದಲ್ಲಿ ನಾವು ಯಾರೂ ಕೂಡ ಗೊಂದಲ ಮಾಡುವುದು ಬೇಡ. ಇಂತಹ ಪರಿಸ್ಥಿತಿಯಲ್ಲಿ ಜನರಿಗೆ ನಾವು ಒಂದು ಸಂದೇಶ ಕೊಡೋಣ. ನಾವು ಡೊಮೆಸ್ಟಿಕ್ ಸಿಲಿಂಡರ್ ಅನ್ನು, ಪ್ರತಿ ಕುಟುಂಬಕ್ಕೆ ಪ್ರತಿ ಒಂದು ತಿಂಗಳಿಗೆ ನಾವೇ ಕೊಡುತ್ತೇವೆ. ಅದರಂತೆ, ಸಾರ್ವಜನಿಕರು ಅದನ್ನು ಮಿತವ್ಯಯದಲ್ಲಿ ಉಪಯೋಗಿಸಿ ಎಂದು ಹೇಳೋಣ. Commercial ಅನಿಲ ಸಿಲಿಂಡರ್‌ಗಳು ಎಲ್ಲೆಲ್ಲಿ essential services ಗಳಿಗೆ ಬೇಕಾಗಿದೆ, ಅದನ್ನು ಸಹ ನಾವೇ ಕೊಡುತ್ತೇವೆ. ಉಳಿದಿದಂತಹ ವಿಷಯಗಳು ಆದಷ್ಟು ಬೇಗ ಅಂದರೆ, ಬಹುತೇಕ ಒಂದು ವಾರ ಅಥವಾ 10 ದಿನಗಳಲ್ಲಿ ಇದು ಸುಧಾರಣೆಯಾಗುತ್ತದೆ ಎಂದು ಹೇಳಿ, ತಮ್ಮ ಮೂಲಕ ಈ ಸದನಕ್ಕೆ ತಿಳಿಯಪಡಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಕೇಶವ ಪ್ರಸಾದ್‌ರವರೇ, ಇದು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಎಲ್ಲರಿಗೂ ಅವಕಾಶ ನೀಡಿರುತ್ತೇನೆ. ಹಾಗಾಗಿ, ಚಿಕ್ಕದಾಗಿ ತಾವು ಸ್ಪಷ್ಟೀಕರಣ ಕೇಳಿ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಸಮಂಜಸವಾದ, ಸಮರ್ಥವಾದಂತಹ ಮತ್ತು ಯಾವುದೇ ಭಯಭೀತರಾಗದೇ ಇರುವಂತಹ ಒಂದು ಸಂದೇಶವನ್ನು ಸದನದ ಮೂಲಕ ರಾಜ್ಯದ ಜನತೆಗೆ ರವಾನಿಸಿದ್ದಾರೆ. ಅದಕ್ಕಾಗಿ, ನಾನು ಅವರಿಗೆ ಅಭಿನಂದಿಸುತ್ತೇನೆ. ಜೊತೆಗೆ, ಇರುವಂತಹ ಪರಿಸ್ಥಿತಿಯನ್ನು ರಾಜ್ಯದ ಮುಂದಿಟ್ಟಿದ್ದಾರೆ. ಯಾವ ಸದಸ್ಯರಿಗೆ ವಿನಾಕಾರಣ ಈ ವಿಷಯದಲ್ಲಿ ಭಯ ಹತ್ತಿತ್ತೋ, ಅವರಿಗೂ ಕೂಡ ಭಯದ ನಿವಾರಣೆಯಾಗಿದೆ ಎಂದು ನಾನು ತಿಳಿದುಕೊಳ್ಳುತ್ತಿದ್ದೇನೆ. ನಾನು ಮುಂಬರುವಂತಹ ದಿನಗಳಲ್ಲಿಯೂ ಕೂಡ, ಅಂತಹ ಸಂದರ್ಭ ಬಂದರೆ, ವಿರೋಧ ಪಕ್ಷವು ಕೂಡ ಮಾನ್ಯ ಸಚಿವರ ಜೊತೆ ಇರುತ್ತದೆ. ಯಾವುದೇ ರೀತಿಯಾದಂತಹ ಸನ್ನಿವೇಶಗಳನ್ನು ಒಟ್ಟುಗೂಡಿ ಎದುರಿಸೋಣ ಎನ್ನುವಂತಹ ಮಾತುಗಳನ್ನು ಹೇಳುತ್ತಾ, ನಾನು ಮಾನ್ಯ ಸಚಿವರ ಮಾತುಗಳಿಗೆ ಧ್ವನಿಗೂಡಿಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಇಂಧನ ಹಾಗೂ ಅಡುಗೆ ಅನಿಲಗಳ ವಿಷಯದಲ್ಲಿ ಬಹಳ ಸುಧೀರ್ಘವಾದ ಉತ್ತರವನ್ನು ಬಹಳ ಸ್ಪಷ್ಟವಾದ ಪದಗಳಲ್ಲಿ ಕೊಟ್ಟಿದ್ದಾರೆ. ಇಂತಹ ವಿಚಾರಗಳಲ್ಲಿ ಕೃತಕ ಅಭಾವ ನಿರ್ಮಾಣ ಮಾಡುತ್ತಾರಲ್ಲವೇ... ಮಾನ್ಯ ಸದಸ್ಯರು ದಯಮಾಡಿ ಈ ವಿಷಯವನ್ನು ತಪ್ಪಾಗಿ ಅರ್ಥೈಸಬಾರದು. ಅದೇನೆಂದರೆ, ಮಾನ್ಯ ಸದಸ್ಯರು ನಿಯಮ 330 ರಡಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಸಂದರ್ಭದಲ್ಲಿ ಅಭಿನಂದನೆ ಹೇಳುತ್ತೇನೆ. ಏಕೆಂದರೆ, ಅವರಿಗೂ ಕೂಡ ಸಮಾಜದ ಬಗ್ಗೆ ಕಳಕಳ ಇದೆ ಎಂದು ನಾನು ಭಾವಿಸುತ್ತೇನೆ. ಆದರೆ, ಒಂದು ವಿಚಾರವೇನೆಂದರೆ,

**ಸಭಾಪತಿಯವರು:–** ಮಾನ್ಯ ಭೋಜೇಗೌಡರವರೇ, ತಾವು ಎಲ್ಲರಿಗೂ ಅಭಿನಂದನೆ ತಿಳಿಸುತ್ತಿದ್ದೀರಿ. ಆದರೆ, ಅವಕಾಶ ಕೊಟ್ಟ ನನಗೆ ತಾವು ಧನ್ಯವಾದ ಹೇಳುತ್ತಿಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿಯಮ 330ರಡಿಯಲ್ಲಿ ಪ್ರಸ್ತಾವನೆ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಜೊತೆಗೆ, ಆ ಪ್ರಸ್ತಾವನೆಯನ್ನು ತಾವು ಪುರಸ್ಕಾರ ಮಾಡಿದ್ದಕ್ಕಾಗಿ ತಮಗೂ ಸಹ ನಾನು ಧನ್ಯವಾದಗಳನ್ನು ತಿಳಿಸುತ್ತೇನೆ. ನಾನು ಒಂದು ವಿಚಾರವನ್ನು ಹೇಳಬಯಸುವುದೇನೆಂದರೆ, ಮಾನ್ಯ ಆಡಳಿತ ಪಕ್ಷದ ಸದಸ್ಯರುಗಳು ನಿಯಮ 330 ರಡಿಯಲ್ಲಿ ಪ್ರಸ್ತಾವನೆ ಕೊಡುವುದಕ್ಕೆ ಮೊದಲು ಮಾನ್ಯ ಸಚಿವರ ಜೊತೆ ಒಂದು ನಿಮಿಷ ಚರ್ಚೆ ಮಾಡಿದ್ದರೆ, ಈ ಪದಗಳನ್ನು ಉಪಯೋಗ ಮಾಡುವುದು ತಪ್ಪುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯವಾಗಿರುತ್ತದೆ. ಅವು ಯಾವುವೆಂದರೆ, ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡಿರತಕ್ಕಂಥದ್ದು, ಈ ರೀತಿಯ ಅಭಾವ ಬಂದು ಬಿಡುತ್ತದೆ. ಈ ರೀತಿ ಆಗಿದೆ. ಈ ರೀತಿ ಮಾಡಬೇಕು ಎಂದು ಏನೇನೋ ಬರೆದಿದ್ದಾರೆ.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ನಾನು ಮಧ್ಯದಲ್ಲಿ ಒಂದು ಮಾತು ಕೂಡ ಆಡಿರುವುದಿಲ್ಲ.

**ಸಭಾಪತಿಯವರು:–** ತಾವೆಲ್ಲರೂ ಏತಕ್ಕೆ ಮಧ್ಯದಲ್ಲಿ ಎದ್ದು ಮಾತನಾಡುತ್ತಿದ್ದೀರಿ? ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಚಿವರು ನಮಗೂ ಕೂಡ ಸಚಿವರೇ ಆಗಿರುತ್ತಾರೆ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಇವರೆಲ್ಲರೂ ಕೂಡ ಪ್ರಾಫಿಟ್ ಇಟ್ಟುಕೊಂಡೇ ಅಲ್ಲವೇ ಬರುವುದು?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಕೆಲವು ಸಂದರ್ಭಗಳಲ್ಲಿ ಏನಾಗುತ್ತದೆಯೆಂದರೆ, ಜನರನ್ನು ನಾವೇ ಆತಂಕಕ್ಕೆ ಒಳಪಡಿಸುವಂತಹ ಕೆಲಸ ಆಗುತ್ತದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಭೋಜೇಗೌಡರವರು ವಿದೇಶದಿಂದ ಸುರಕ್ಷಿತವಾಗಿಯೇ ವಾಪಸ್ಸು ಬಂದಿದ್ದಾರೆಂಬುದು ಎಲ್ಲರಿಗೂ ಗೊತ್ತಾಗಲಿ ಎನ್ನುವ ಕಾರಣಕ್ಕಾಗಿ ನಾನು ಅವರಿಗೆ ಅವಕಾಶ ನೀಡಿರುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ವಾಪಸ್ಸು ಬರುವುದಕ್ಕೆ ಇನ್ನೂ ಒಂದು ದಿನ ತಡವಾಗುತ್ತಿತ್ತು. ಆದರೆ, ನಿನ್ನೆಯ ದಿವಸ ರಾತ್ರಿ ನನ್ನ ಕನಸ್ಸಿನಲ್ಲಿ ಮಾನ್ಯ ಸಭಾಪತಿಯವರು ಬಂದಿದ್ದರು. ಈ ವಿಷಯವನ್ನು ನಾನು ಮಾನ್ಯ ಸಿ.ಟಿ. ರವಿಯವರಿಗೆ ಹೇಳಿರುತ್ತೇನೆ. ಅದಕ್ಕಾಗಿ ನಾನು ಇವೊತ್ತಿನ ದಿವಸ ಎಷ್ಟೇ ಹೊತ್ತು ಆದರೂ ಸಹ, ಮಾನ್ಯ ಸಭಾಪತಿಯವರನ್ನು ನೋಡಲೇಬೇಕು ಎಂದು ಬಂದಿರುತ್ತೇನೆ. ಅದರಂತೆ, ನಾನು ಅವರನ್ನು ಈ ಸದನದಲ್ಲಿ ನೋಡಿರುತ್ತೇನೆ. ಆದರೆ, ನಿನ್ನೆಯ ದಿವಸ ರಾತ್ರಿ ನನ್ನ ಕನಸ್ಸಿನಲ್ಲಿ ಏನು ಬಂದಿತ್ತು ಎಂಬುದನ್ನು ಮಾತ್ರ ನಾನು ಹೇಳುವುದಿಲ್ಲ.

(ಗೊಂದಲ)

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರು ಕನಿಸಿನ ಮುಂದುವರೆದ ಭಾಗವನ್ನು ನನಗೆ ಹೇಳಿದ್ದಾರೆ. ನಂತರ, ಅದನ್ನು ನಾನು ನಿಮ್ಮ ಬಳಿ ಮಾತ್ರ ಹೇಳುತ್ತೇನೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರು ವಿದೇಶದಿಂದ ಸುರಕ್ಷಿತವಾಗಿ ವಾಪಸ್ಸು ಬರುವುದಕ್ಕೆ ಯಾರೂ ಸಹಾಯ ಮಾಡಿಲ್ಲವೆಂದು ಅವರು ಹೇಳಿದ್ದು ಕೇಳಿ ನಮಗೆ ಸಂತೋಷವಾಯಿತು.

**ಸಭಾಪತಿಯವರು:-** ಮಾನ್ಯ ಐವನ್ ಡಿ ಸೋಜಾರವರೇ, ತಾವು ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಈಗಲೂ ಕೂಡ ಆ ಹೇಳಿಕೆಗೆ ಬದ್ಧವಾಗಿದ್ದೇನೆ. Still, I am sticking to those words. ಅದನ್ನು ಸಮಯ ಬಂದಾಗ ನಾವು ಮಾತನಾಡೋಣ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಭೋಜೇಗೌಡರವರ ಕನಸ್ಸಿನಲ್ಲಿ ಬಂದಿದ್ದನ್ನು ಮಾತ್ರ ಹೇಳಿರುತ್ತಾರೆ. ಆದರೆ, ತಾವು ಕನಸ್ಸಿನಲ್ಲಿ ಬಂದು ಏನು ಮಾಡಿರುತ್ತೀರಿ ಎಂಬುದನ್ನು ಹೇಳಿರುವುದಿಲ್ಲ. ಅದನ್ನು ಅವರು ನನ್ನ ಬಳಿ ಹೇಳಿದ್ದಾರೆ. ತದನಂತರ, ನಾನು ತಮಗೆ ಹೇಳುತ್ತೇನೆ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರವರ ಪಕ್ಕದ ಸ್ಥಾನದಲ್ಲಿ ಶ್ರೀ ಟಿ.ಎ. ಶರವಣರವರು ಕುಳಿತುಕೊಳ್ಳುತ್ತಾರೆ. ಅವರು ಮಾನ್ಯ ಭೋಜೇಗೌಡರವರ ಪಕ್ಕದಲ್ಲಿ ಕುಳಿತುಕೊಳ್ಳುವವರು, ಅವರ ಸ್ನೇಹಿತರು ಹಾಗೂ ಅವರ ಪಕ್ಷದ ಸದಸ್ಯರೇ ಆಗಿರುತ್ತಾರೆ. ಅವರು ಸಾಮಾಜಿಕ

ಜಾಲತಾಣದಲ್ಲಿ ಟ್ವೀಟ್ ಮಾಡಿರುವುದನ್ನು ಅವರು ಒಮ್ಮೆ ನೋಡಬೇಕು. ಅದೇನೆಂದರೆ, "ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ. ಇದರಿಂದಾಗಿ, ಮಾನ್ಯ ಹೆಚ್.ಡಿ. ದೇವೇಗೌಡರವರ ಹೆಸರಿನ ಅಪ್ಪಾಜಿ ಕ್ಯಾಂಟೀನ್ ನಡೆಸುವುದು ಕಷ್ಟವಾಗಿರುತ್ತದೆ" ಎಂದು ಟ್ವೀಟ್ ಮಾಡಿರುತ್ತಾರೆ.

(ಮುಂದು)

(354) 12.03.2026 ವೈಎಲ್-ವಿಕೆ 4.10 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾವು ಸದನದೊಳಗೆ ಮೊಬೈಲ್ ಉಪಯೋಗಿಸಬಾರದೆಂದು ಹೇಳುತ್ತೀರಿ. ಆದರೆ, ಮಾನ್ಯ ರಮೇಶ್ ಬಾಬುರವರು ಮೊಬೈಲ್ ಇಟ್ಟುಕೊಂಡೇ ಓದುತ್ತಿದ್ದಾರೆ ಅಲ್ಲವೇ?

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೊಸದಾಗಿ ಬಂದು ಹೊಸ ವರಸೆ ತೆಗೆಯಬಾರದು. ಇಷ್ಟು ದಿವಸ ಸದನ ಹೇಗೆ ನಡೆದುಕೊಂಡು ಹೋಗುತ್ತಿತ್ತು, ಅದೇ ರೀತಿ ನಡೆದುಕೊಂಡು ಹೋಗಬೇಕು. ಆದರೆ, ಮಾನ್ಯ ರಮೇಶ್ ಬಾಬುರವರು 'ನನಗೆ ಎಲ್ಲಾ ಗೊತ್ತು, ನಾನೇ ಬೃಹಸ್ಪತಿ' ಎನ್ನುವ ರೀತಿ ಮಾತನಾಡುತ್ತಾರೆ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ. ಕಛೇರಿಗೆ ಹೋಗಿ ಹೇಗೆ ಮಾತನಾಡಬೇಕು ಎಂಬುದನ್ನು ನಾನು ಕಲಿಯಬೇಕು.

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಬಾಬುರವರು ಏಕವಚನದಲ್ಲಿ ಮಾತನಾಡುತ್ತಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಅವರ ಹತ್ತಿರ ಹೇಗೆ ಮಾತನಾಡಬೇಕು ಎಂಬುದನ್ನು ನಾವು ಕಲಿಯಬೇಕು.

**ಶ್ರೀ ಕೇಶವ ಪ್ರಸಾದ್.ಎಸ್:-** ಮಾನ್ಯ ಸಭಾಪತಿಯವರೇ, ಏಕವಚನದಲ್ಲಿ ಮಾತನಾಡುವವರನ್ನು ನಾಲಿಗೆಗೆ ದರ್ಬೆ ಹಾಕಿ ಉಜ್ಜಬೇಕು. ಅವರು ಏಕವಚನದಲ್ಲಿ ಮಾತನಾಡುತ್ತಾರೆ, ಅಷ್ಟು ಮಾತ್ರ ಗೊತ್ತಾಗುವುದಿಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಬಾಬುರವರದ್ದು ಬಹಳ ಜಾಸ್ತಿಯಾಗಿದೆ, ಯಾರನ್ನು ಯಾವ ಭಾಷೆಯಲ್ಲಾದರೂ ಮಾತನಾಡಿಸುತ್ತಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಹೌದೌದು. ಮಾನ್ಯ ವಿರೋಧ ಪಕ್ಷದ ನಾಯಕರು ಬೇಕಾದರೆ ಹೇಗೆ ಬೇಕಾದರೂ ಮಾತನಾಡಬಹುದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಏನು ಮಾತನಾಡಿದ್ದೇನೆ?

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, 'ಅಯೋಗ್ಯ' ಎನ್ನುವ ಪದವನ್ನು ಬಳಸಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಆ ರೀತಿ ಕೆಟ್ಟ ಪದವನ್ನು ಬಳಸುವುದಿಲ್ಲ. ಅದು ಅವರಿಗೆ ಮಾತ್ರ ಸೀಮಿತ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ, ಇಲ್ಲವೇ ಎಂಬುದನ್ನು ನಡವಳಿಯನ್ನು ತೆಗೆದು ನೋಡಲಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಅವರು ಮಾತನಾಡುತ್ತಾರೆ, ನಾನು ಆ ರೀತಿ ಮಾತನಾಡುವುದಿಲ್ಲ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಾನು ಹೇಗೆ ಮಾತನಾಡಬೇಕು ಎಂಬುದನ್ನು ಅವರಿಂದ ಕಲಿಯಬೇಕಾಗಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಗೌರವ ಕೊಡುವುದನ್ನು ನಾನು ಕಲಿತುಕೊಂಡು ಬಂದಿದ್ದೇನೆ. ಮಾನ್ಯ ರಮೇಶ್ ಬಾಬುರವರು ಸರಿಯಾಗಿ ಮಾತನಾಡುವುದನ್ನು ಮೊದಲು ಕಲಿತುಕೊಂಡು ಬರಲಿ, ಏಕವಚನದಲ್ಲಿ ಮಾತನಾಡುವುದನ್ನು ಮೊದಲು ಬಿಡಲಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಡವಳಿ ತೆಗೆದು ನೋಡಿ, ಮಾನ್ಯ ವಿರೋಧ ಪಕ್ಷದ ನಾಯಕರು 'ಅಯೋಗ್ಯ' ಎನ್ನುವ ಪದವನ್ನು ಬಳಸಿದ್ದಾರೆ.

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗುವುದು.

**(ಸದನವನ್ನು ಸಂಜೆ 4 ಗಂಟೆ 11 ನಿಮಿಷಗಳಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)**

(355) 12.03.2026/4.20/ ಎಸ್‌ಕೆ.ವಿಕೆ

(ಸಂಜೆ 04 ಗಂಟೆ 11 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 04 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)

ನಿಯಮ 330ರ ಮೇರೆಗೆ ಮುಂದುವರೆದ ಚರ್ಚೆ

ವಿಷಯ: ಇಂದನ ಮತ್ತು ಅಡುಗೆ ಅನಿಲಗಳ ಮಾರಾಟದಲ್ಲಿ ಕೇಂದ್ರ ಸರ್ಕಾರದ ನಿಯಂತ್ರಣವಿಲ್ಲದ ಕಾರಣ ಯುದ್ಧದ ಹೆಸರಿನಲ್ಲಿ ಕಪ್ಪು ಮಾರುಕಟ್ಟೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿರುವ ಕುರಿತು ಮುಂದುವರದ ಚರ್ಚೆ

- - - - -

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ತಾವು ಮಾತನಾಡುತ್ತೀರಾ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಮ್ಮ ಸುದೀರ್ಘವಾದ ಅನುಭವ ಮತ್ತು ಇವತ್ತಿನ ರಾಜ್ಯದಲ್ಲಿರುವಂತಹ ವಸ್ತುಸ್ಥಿತಿಯ ಬಗ್ಗೆ ಅನೇಕ ವರದಿಗಳನ್ನು ತೆಗೆದುಕೊಂಡು ಬಹಳ ಕರಾರುವಕ್ಕಾಗಿ ಈ ಸದನದ ಮುಂದೆ ಮಂಡಿಸಿದ್ದಾರೆ. ಈ ರಾಜ್ಯದ ಜನರು ಸ್ವಲ್ಪ ಭಯಬೀತಿ ವಾತಾವರಣದ ಬಗ್ಗೆ ಹಲವಾರು ದಿನಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮಗಳಲ್ಲಿ ಬಂದಿರುವುದನ್ನು ತಾವು ನಿವಾರಣೆ ಮಾಡಿದ್ದಕ್ಕಾಗಿ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ನನ್ನ ಹೃದಯ ಅಂತರಾಳದಿಂದ ಅಭಿನಂದನೆಯನ್ನು ಹೇಳಬಯಸುತ್ತೇನೆ.

ಇವತ್ತು ಅನೇಕ ಬಾರಿ ಇಂತಹ ಒಂದು calamity ಗಳಲ್ಲಿ ಕೃತಕವಾಗಿ ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ ಕಾಳಸಂತೆಕೋರರು ಎಂದು ಹೇಳಿದ್ದೀರಿ. ಇದು ನೂರಕ್ಕೆ ನೂರು ಸತ್ಯವಿದೆ. ಇಂತಹ ವಿಚಾರಗಳನ್ನು ಸಮಾಜದಲ್ಲಿರುವವರು ಇದನ್ನು ದುರಪಯೋಗಪಡಿಸಿಕೊಂಡು ಲಾಭವನ್ನು ಮಾಡಿಕೊಳ್ಳುವವರ ಬಗ್ಗೆ ಸರ್ಕಾರ ಬಹಳ ಎಚ್ಚರ ವಹಿಸಬೇಕು ಎನ್ನುವ ವಿಚಾರದಲ್ಲಿ ಮಾನ್ಯ ಸಚಿವರು ಎಚ್ಚರ ವಹಿಸಿದ್ದಾರೆ. ಗೃಹ ಬಳಕೆಗಾಗಿ ಬಳಸುವ ಸಿಲಿಂಡರ್ ನೂರಕ್ಕೆ ನೂರರಷ್ಟು ಯಾವುದು ತೊಂದರೆ ಇಲ್ಲ ಎಂಬ ನಾನು ತಿಳಿದಿದ್ದೇನೆ. Commercial activities ನಲ್ಲಿ ಸ್ವಲ್ಪ ಎಲ್ಲೋ ಒಂದು ಕಡೆ ಹೋಟೆಲ್ ಮಾಲೀಕರ ಸಂಘ sudden provoke ಆಗಿ ಎದ್ದು ಬಂದಂತಹ ರೀತಿಯಲ್ಲಿ ಕಮರ್ಷಿಯಲ್ ಸಿಲಿಂಡರ್ ಸಿಗುತ್ತಿಲ್ಲ. ಹೋಟೆಲ್‌ಗಳು ಬೆಳಗ್ಗೆ ಮುಚ್ಚಿಬಿಡುತ್ತಾರೆ.

ಹಾಸ್ಟೆಲ್‌ಗಳು ಮುಚ್ಚಿಬಿಡುತ್ತಾರೆ. ಆಸ್ಪತ್ರೆಗೆ ತೊಂದರೆಯಾಗುತ್ತದೆ ಎನ್ನುವ ವಿಚಾರದ ಬಗ್ಗೆ ಮಾನ್ಯ ಸಚಿವರು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದಾರೆ. ಇಂತಹ ಒಂದು ಯುದ್ಧದ ಸಂದರ್ಭದಲ್ಲಿ ಬಂದಂತಹ ಅನೀರಿಕ್ಷಿತ ವಾತಾವರಣಗಳು. ಯಾವುದೇ calamity ಗಳನ್ನು ಎದುರಿಸುವಂತಹ ಸಂದರ್ಭದಲ್ಲಿ ನಾವು ವಿರೋಧ ಪಕ್ಷದವರು ಇರಬಹುದು ಮತ್ತು ಆಡಳಿತ ಪಕ್ಷಗಳು ಇರಬಹುದು. ನಾವೆಲ್ಲರೂ, it is the bounden duty of all to face it collectively ಅಂತಹ collectivity ನಲ್ಲಿ ನಾವು ಸರ್ಕಾರದ ಜೊತೆಯಲ್ಲಿದ್ದೇವೆ. ಮಾನ್ಯ ಸಚಿವರು ಖಂಡಿತವಾಗಿಯೂ ಒಳ್ಳೆಯ ಕೆಲಸವನ್ನು ಸಮಾಜದಲ್ಲಿ ಮಾಡುತ್ತಿದ್ದಾರೆ. ಇವತ್ತು ಮಾನ್ಯ ಸಚಿವರು ನೀಡಿರುವ ಸುದ್ಧಿಯನ್ನು ಕೇಳರುವ ಈ ರಾಜ್ಯದ ಜನರು ಮತ್ತು ವಿಶೇಷವಾಗಿ ಮಹಿಳೆಯರು ಹಾಗೂ ಬೇರೆ ಬೇರೆ ಸಂದರ್ಭದಲ್ಲಿರುವಂತಹ ನೂರಕ್ಕೆ ನೂರು ಅವಶ್ಯಕತೆ ಇರುವಂತಹ ಗ್ರಾಹಕರೆಲ್ಲರೂ ಕೂಡ ಸ್ವಲ್ಪ ನಿಟ್ಟುಸಿರು ಬಿಟ್ಟಿದ್ದಾರೆ. ಮಾನ್ಯ ಸಚಿವರು ಮಾತನಾಡಿ ಜನರಿಗೆ ಧೈರ್ಯ ತುಂಬಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಮತ್ತೊಮ್ಮೆ ಶ್ಲಾಘಿಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಒಂದು ಗ್ಯಾಸ್ ಸಿಲಿಂಡರ್ ಬಗ್ಗೆ ಕಳೆದ ಮೂರು-ನಾಲ್ಕು ದಿನಗಳಿಂದ ವಾರ್ತಾ ಪತ್ರಿಕೆಗಳಲ್ಲಿ ವಾಟ್ಸಪ್‌ಗಳಲ್ಲಿ ಹಾಗೂ ಬಾಯಿಂದ ಬಾಯಿಗೆ ಹೋಗಿದ್ದು, ಇಲ್ಲದೇ ಇರುವ ಬ್ರಹ್ಮಾಂಡ ಸುಳ್ಳಗಳನ್ನು ಕೇಳುತ್ತಿದ್ದೀವಿ. ಇದೆಲ್ಲದರ ನಡುವೆ ಈಗ ತಾನೇ ನಮಗೆ ಉತ್ತಮವಾದ ಭರವಸೆ ಸಿಕ್ಕಿದೆ. ಏಕೆಂದರೆ ಶ್ರೀ ನರೇಂದ್ರ ಮೋದಿ ಎಂದರೆ ನಮಗೆ ಒಂದು ಭರವಸೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಿಂದೆ ಬಹಳಷ್ಟು ಕಷ್ಟವಿತ್ತು. ಒಂದು ಸಿಲಿಂಡರ್ ಬರಬೇಕೆಂದರೆ, ಒಂದು ತಿಂಗಳು ಕಾಯಬೇಕಾಗುತ್ತಿತ್ತು. ಆ ತಿಂಗಳನಲ್ಲಿ ಸಿಲಿಂಡರ್ ಮುಗಿಯುವುದರೊಳಗಾಗಿ, ಸಿಲಿಂಡರ್ ಬುಕ್ ಮಾಡಿದರೆ ಮತ್ತೊಂದು ತಿಂಗಳು ಕಟ್ಟಿಗೆ ಒಲೆಗೆ ಹೋಗುವ ಒಂದು ಕಾಲ ಇತ್ತು. ಈಗಲೂ ಕೂಡ ಸಂದರ್ಭನುಸಾರವಾಗಿ ಒಂದು ಪರಿಸ್ಥಿತಿ ಬಂದಿದೆ. ಆದರೂ ಕೂಡ ತೊಂದರೆಯಿಲ್ಲ. ಇವತ್ತಿನ ದಿನ ಕಾಳಸಂತೆಯಲ್ಲಿ ನಿಜವಾಗಲೂ ಅದೊಂದು ಮಾಫಿಯಾ ತಯಾರಾಗುತ್ತದೆ. ಬೇಡವಾದ ವಿಷಯಗಳನ್ನು ಹಬ್ಬಿಸಿ ಸಿಲಿಂಡರ್ ಸ್ಟಾಕ್ ಇಲ್ಲ, ಕಡಿಮೆಯಾಗಿದೆ ಎನ್ನುವಂತಹದ್ದು. ಗ್ರಾಹಕರು ಏನು ಮಾಡುತ್ತಾರೆಂದರೆ, ಭಯ ಪಟ್ಟುಕೊಂಡು ಡಬಲ್ ಗ್ಯಾಸ್ ಸಿಲಿಂಡರ್ ಬುಕ್ ಮಾಡುವಂತಹ ಕೆಲಸವಾಗುತ್ತಿದೆ. ಇವತ್ತಿನ ದಿನ ಎಂತಹ ಒಂದು ಪರಿಸ್ಥಿತಿ ಬಂದರೂ ಕೂಡ ನಮ್ಮ ಕೇಂದ್ರ ಸಚಿವರಾದ ಶ್ರೀಮತಿ ಶೋಭಾ ಕರಂದ್ಲಾಜೆಯವರು ಕೂಡ ಪತ್ರವನ್ನು ಬರೆದಿದ್ದಾರೆ. ನಮ್ಮ ಪ್ರಧಾನಿಯವರು ಕೂಡ ಅಭಯ ಅಸ್ತವನ್ನು ಕೊಟ್ಟಿದ್ದಾರೆ. ಅವೆಲ್ಲವುಗಳ ಮಧ್ಯೆ ಕೂಡ ಮಾನ್ಯ ಸಚಿವರಾದ ಶ್ರೀ ಮುನಿಯಪ್ಪನವರು ಉತ್ತಮವಾದಂತಹ ಒಂದು ಮೆಸೆಜ್‌ಅನ್ನು ಕೊಟ್ಟಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನಾವು ಸುಲಭವಾಗಿ ಒಂದು ತಿಂಗಳನಲ್ಲಿ ಅಡುಗೆ ಮಾಡಬೇಕೆಂದರೆ, ಒಂದು ಉಪಾಯವಿದೆ. ಚಪಾತಿ, ರೊಟ್ಟಿ ಮಾಡಬೇಕಾಯಿತು ಎಂದರೆ ಗ್ಯಾಸ್‌ಅನ್ನು

ಬಳಸುವುದು ಬಿಡಬೇಕು. ಕುಕ್ಕರ್ ಮಾತ್ರ ಅನ್ನ ಸಾರು ಮಾಡಿಕೊಳ್ಳಬಹುದು. ನಾವು ಗ್ಯಾಸ್ ಉಳಿತಾಯ ಹೇಗೆ ಮಾಡುತ್ತೇವೆ ಎನ್ನುವಂತಹದ್ದನ್ನು ನಮ್ಮ ಬುದ್ಧಿವಂತಿಕೆಯ ಮೇಲೆ ಹೋಗುತ್ತದೆ. ಆದರೂ ಒಂದು ತಿಂಗಳ ಹೊತ್ತಿಗೆ ಈ ಗ್ಯಾಸ್ ಎಲ್ಲಿಯವರೆಗೂ ಬಳಕೆಯಾಗುತ್ತದೆ. ಸರಿಯಾದ ಸಮಯಕ್ಕೆ ಗ್ಯಾಸ್ ಸಿಗದೇ ಈ ರೀತಿ ಘಟನೆ ಆಗುತ್ತದೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಎಂ. ನಾಗರಾಜುರವರೇ, ತಾವು ಮಾತನಾಡಿ.

**(ಮುಂದು)**

**(356) 12.03.2026 4.30 ಟಿಸಿಹೆಚ್-ಬಿಎನ್ಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ನಿನ್ನೆ ದಿವಸ ಒಂದು ಸಾರ್ವಜನಿಕ ಮಹತ್ವವಾಗಿರತಕ್ಕಂಥ ವಿಚಾರವನ್ನು ಮಾನ್ಯ ಸದಸ್ಯರುಗಳಾದ ಶ್ರೀ ರಮೇಶ್ ಬಾಬು ರವರು, ಶ್ರೀ ಐವನ್ ಡಿ'ಸೋಜಾ ರವರು, ಇನ್ನಿತರೆ ಸದಸ್ಯರುಗಳು ನಿಯಮ 330 ರಡಿಯಲ್ಲಿ ತಂದಿರುವುದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಚಾರ ಬಹಳ ಗಂಭೀರವಾಗಿದೆ. It has got two parts; part A and part B. ಮೊದಲನೆಯದಾಗಿ, domestic cylinders ಬಗ್ಗೆ ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ನಾನು ಸ್ವಾಗತ ಮಾಡುತ್ತೇನೆ. ನಾಗರಿಕರಿಗೆ ತೊಂದರೆ ಆಗಬಾರದು ಎನ್ನುವ ರೀತಿಯಲ್ಲಿ ಕ್ರಮಗಳನ್ನು ಕೈಗೊಂಡಿದ್ದಾರೆ. ಅದು ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಇರಬಹುದು, ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸುವುದರಲ್ಲಿ ಎರಡು ಮಾತಿಲ್ಲ. ಆದರೆ ಸಮಸ್ಯೆ ಇರುವುದು ಕೇವಲ domestic cylinder ಗಳಿಗೆ ಮಾತ್ರವಲ್ಲ. ಬೆಂಗಳೂರು ನಗರದಲ್ಲಿ ಇವತ್ತಿನ ದಿವಸ ಶೇ.30 ಕ್ಕಿಂತಲೂ ಹೆಚ್ಚು ಜನ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ depend ಆಗಿರುವುದನ್ನು ನಾವೆಲ್ಲರೂ ಮರೆಯಬಾರದು ಎನ್ನುವ ವಿಚಾರವನ್ನು ಹೇಳುತ್ತೇನೆ. I.T. capital ಆಗಿರತಕ್ಕಂಥ ಸಿಲಿಕಾನ್ ವ್ಯಾಲಿಯಲ್ಲಿ ಮತ್ತು ಪಿ.ಜಿ.ಗಳಲ್ಲಿ ಲಕ್ಷಾಂತರ ಜನ ಕೆಲಸ ಮಾಡುತ್ತಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ.

**ಡಾ.ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಎಂ.ನಾಗರಾಜು ರವರೇ, ತಾವು ಸ್ವಲ್ಪ ಮೆಲ್ಲಗೆ ಮಾತನಾಡಿ.

**ಶ್ರೀ ಎಂ.ನಾಗರಾಜು:-** ಡಾ.ಕೆ.ಗೋವಿಂದರಾಜ್ ರವರೇ, ನಾನು ಮಾತನಾಡುವಾಗ disturb ಮಾಡಬೇಡಿ. Please have patience. ಮಾನ್ಯ ಸಭಾಪತಿಯವರೇ, ಮೆಲ್ಲಗೆ ಮಾತನಾಡಿ ಎಂದರೆ ಏನು ಅರ್ಥ? ನಮ್ಮ ಮನಸ್ಸಿನಲ್ಲಿ ಇರುವುದನ್ನು ಹೇಳುತ್ತೇವೆ. ಅವರು ಸ್ವಲ್ಪ ಕೇಳಿಸಿಕೊಳ್ಳಬೇಕು.

ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವ ವಿಚಾರವೇನೆಂದರೆ, ಪಿ.ಜಿ.ಗಳು ಇರಬಹುದು ಅಥವಾ ಐ.ಟಿ. ಕಂಪನಿಗಳಲ್ಲಿರುವ ಕ್ಯಾಂಟೀನ್‌ಗಳಿರಬಹುದು, ಫ್ಯಾಕ್ಟರಿಗಳಲ್ಲಿರುವ ಕ್ಯಾಂಟೀನ್‌ಗಳು, all come under commercial cylinders. ಇವತ್ತಿನ ದಿವಸ ಅವರೆಲ್ಲರೂ ಕೂಡ ಸಮಸ್ಯೆಗೆ ಸಿಕ್ಕಿಹಾಕಿಕೊಂಡಾಗ ಒಂದು

ಹೊತ್ತು ಊಟವನ್ನು ಬಿಡಬೇಕಾಗುತ್ತದೆ. ಹಾಗಾಗಿ, ಬೆಂಗಳೂರು ನಗರದಲ್ಲಿ ಸುಮಾರು 1.40 ಕೋಟಿ ಜನರಲ್ಲಿ ವಿಚಾರ ಇರತಕ್ಕಂಥದ್ದು, ಸುಮಾರು ಶೇ.30ರಷ್ಟು ಜನ ಹೋಟೆಲ್‌ಗಳ ಮೇಲೆ dependent ಆಗಿದ್ದಾರೆ. ಇವತ್ತಿನ ದಿವಸ ನಾವು ಹೋಟೆಲ್‌ಗಳಿಗೆ ಹೋದರೆ ಸಾಂಬಾರ್ ಸಿಗುವುದಿಲ್ಲ. ಸಾಂಬಾರ್ ಸಿಕ್ಕಿದರೆ ದೋಸೆ ಸಿಗುವುದಿಲ್ಲ. ಹಾಗಾಗಿ, ಮಾನ್ಯ ಸಭಾಪತಿಯವರೇ, ಆನೇಕಲ್‌ನಂತಹ ಕೆಲವು ಕಡೆಗಳಲ್ಲಿ ಕೆಲವು ಪತ್ರಿಕಾ ರಿಪೋರ್ಟ್‌ಗಳು ಆನೇಕಲ್‌ನಲ್ಲಿ ಕೆಲವು ಹೋಟೆಲ್‌ನವರು ನಮ್ಮಲ್ಲಿ ಕೇವಲ ಕಾಫಿ-ಟೀ ಸಿಗುತ್ತದೆ, ನಮ್ಮ ಹತ್ತಿರ ತಿಂಡಿ ಸಿಗುವುದಿಲ್ಲವೆಂದು ಹೇಳುತ್ತಾರೆ ಬೇಕಾದರೆ ತಾವೇ ನೋಡಬಹುದು. ಈ ಸಮಸ್ಯೆಗೆ ಮಾನ್ಯ ಸಚಿವರು ಜವಾಬ್ದಾರಿಯುತವಾಗಿ ನಡೆದುಕೊಂಡು domestic cylinders ಗೆ ಪರಿಹಾರ ಕಂಡುಕೊಂಡಿದ್ದಾರೆ. ಆದರೆ ಇನ್ನೊಂದು ಬಗೆಯ ಸಿಲಿಂಡರ್‌ಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿರುತ್ತಾರೆ. ಇದು ಬಹಳ ಸೂಕ್ಷ್ಮವಾದ ವಿಚಾರ.

**ಸಭಾಪತಿಯವರು:-** ಮಾನ್ಯ ನಾಗರಾಜುರವರೇ ಈಗ ಏನಾಗಬೇಕು ಹೇಳಿ?

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಆಗಬೇಕಾಗಿರುವ ವಿಚಾರವನ್ನು ಹೇಳುತ್ತೇನೆ. U.P.A. Government ಬಗ್ಗೆ ಕೂಡ ಹೇಳಬೇಕಾಗುತ್ತದೆ. ಈ ವಿಚಾರದಲ್ಲಿ ನನಗೆ ಸ್ವಲ್ಪ ಸಮಯಾವಕಾಶ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ. ಮಾನ್ಯ ಸಭಾಪತಿಯವರೇ ತಾವು ಕುಳಿತುಕೊಳ್ಳಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ. ಏನಾಗಿದೆಯೆಂದರೆ, U.P.A. Government ಅಧಿಕಾರಿದಲ್ಲಿದ್ದಂತಹ ಸಂದರ್ಭದಲ್ಲಿ ಇದೇ ಗ್ಯಾಸ್ ಸಿಲಿಂಡರ್ ಬೆಲೆ ಐದು ರೂಪಾಯಿಗಳನ್ನು ಏರಿಸಿದಾಗ, ಇಡೀ ಬೀದಿ ಬೀದಿಗಳಲ್ಲಿ ಹೋರಾಟವನ್ನು ಮಾಡಿದ್ದರು. ಗ್ಯಾಸ್ ಸಿಲಿಂಡರ್ ಇಲ್ಲ ಎಂದಾಗ ನಮಗೆ ಆಕ್ರೋಶ ಬರದೇ ಏನಾಗುತ್ತದೆ ಎನ್ನುವ ವಿಚಾರವನ್ನು ಹೇಳುತ್ತೇನೆ. ಕೇಂದ್ರ ಸರ್ಕಾರವನ್ನು blame ಮಾಡತಕ್ಕಂಥ ವಿಚಾರ ಅಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಎರಡನೆಯದಾಗಿ, U.P.A. Government ಅಧಿಕಾರದಲ್ಲಿದ್ದಾಗ domestic cylinder ಗೆ ರೂ. **(ಗೊಂದಲ)** 650 ರೂಪಾಯಿಗಳ ಸಬ್ಸಿಡಿಗಳನ್ನು ಕೊಟ್ಟಿದ್ದು, ಸುಮಾರು 12 ವರ್ಷಗಳಿಂದ ರೂ. 6 ಲಕ್ಷ ಕೋಟಿಗಳಷ್ಟು ಸಬ್ಸಿಡಿ ಹಣವನ್ನು ಉಳಿಸಿಕೊಂಡಿದ್ದಾರೆ. **(ಗೊಂದಲ)** ರೂ. 40 ಲಕ್ಷ ಕೋಟಿಗಳಷ್ಟು ಪೆಟ್ರೋಲ್ ಮೇಲೆ Cess collect ಮಾಡಿದ್ದಾರೆ. ಆದರೆ ಈ ದೇಶದಲ್ಲಿ gas production ಜಾಸ್ತಿ ಮಾಡಲೇ ಇಲ್ಲ. ಆ ದುಡ್ಡು ಎಲ್ಲಿಗೆ ಹೋಯಿತು ಎಂದು ನಾವು ಕೇಳುತ್ತಿದ್ದೇವೆ. ಒಂದು ಕಡೆ ಖಜಾನೆ ಮೇಲೆ ರೂ. 200 ಲಕ್ಷ ಕೋಟಿಗಳು ಸಾಲ ಮಾಡಿದ್ದಾರೆ. Subsidy ಯನ್ನು withdraw ಮಾಡಿದ್ದಾರೆ. Cess collect ಮಾಡಿದ್ದಾರೆ. ಆದರೆ gas production ಜಾಸ್ತಿ ಮಾಡಿಕೊಂಡಿಲ್ಲ. ನಾನು ಆ ಕಾರಣಕ್ಕೆ ಹೇಳುತ್ತಿರುವುದೇನಂದರೆ, ಈ warನ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಹಾಗಾಗಿ, ನಾನು ಹೇಳುವುದು ಅವರ ವಿದೇಶಿ ನೀತಿಗಳಲ್ಲೂ ಕೂಡ ಪರಿಣಾಮವಾಗಿದೆ. ಎರಡನೆಯದಾಗಿ, ಹಡಗಿನಲ್ಲಿ ಕರ್ನಾಟಕಕ್ಕೆ ಅದು ಬೆಂಗಳೂರಿಗೆ ಮತ್ತು ಇಂಡಿಯಾಗೆ ಬರಬೇಕು ಎನ್ನುವುದಾದರೆ

ಕ್ರಮಗಳನ್ನು ಕೈಗೊಳ್ಳಲು ವಿಫಲರಾಗಿದ್ದಾರೆ. **(ಗೊಂದಲ)** Production ಮಾಡುವುದರಲ್ಲಿ ವಿಫಲರಾಗಿದ್ದಾರೆ. **(ಗೊಂದಲ)** ಎಲ್ಲಾ ಕಾರಣಕ್ಕೆ ಹೇಳುವುದೇನೆಂದರೆ, ಕೇಂದ್ರ ಸರ್ಕಾರ, it has completely failed in handling the gas crisis ಎಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ಇದಕ್ಕೆ ನೇರ ಜವಾಬ್ದಾರಿಯನ್ನು ಸನ್ಮಾನ್ಯ ಪ್ರಧಾನ ಮಂತ್ರಿಗಳು ಹೊಣೆ ಹೊರಬೇಕು ಎಂದು ಹೇಳುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾಗರಾಜು ರವರೇ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಇದು ಅಷ್ಟು ಸುಲಭವಾದ ವಿಚಾರ ಅಲ್ಲ. ಇವತ್ತಿನ ದಿವಸ ಸುಮಾರು ಶೇ.೩೦ ರಷ್ಟು ಜನ commercial gas cylinders ಮೇಲೆ ಡಿಪೆಂಡ್ ಆಗಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಎಂ.ನಾಗರಾಜುರವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ನಾಗರಾಜು ರವರೇ, ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಆಗುವುದೇ ಇಲ್ಲ. ಬೇಕಾದರೆ ತಾವು ನನ್ನನ್ನು ಹೊರಗೆ ಕಳುಹಿಸಿದರೂ ಚಿಂತೆಯಿಲ್ಲ. Commercial gas cylinders ಇಲ್ಲದಿದ್ದರೆ ಅಷ್ಟು ಸುಲಭ ಇಲ್ಲ. **(ಗೊಂದಲ)** ಇವತ್ತಿನ ದಿವಸ ಹೋಟೆಲ್‌ಗಳು ಬಂದ್ ಆದಲ್ಲಿ, ಪಿ.ಜಿ.ಗಳು ಬಂದ್ ಆದಲ್ಲಿ ಮತ್ತು ಕ್ಯಾಂಟೀನ್ ಗಳು ಬಂದ್ ಆದಲ್ಲಿ ಅವರೆಲ್ಲಾ ಎಲ್ಲಿಗೆ ಹೋಗಬೇಕು ಎನ್ನುವ ವಿಚಾರವನ್ನು ಕೇಳುತ್ತಿದ್ದೇನೆ. What is wrong with it?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಯಕರೇ, ಏನ್ರಿ ಇದು. ಅವರಿಗೆ common sense ಬೇಡವೇ?

**(ಗೊಂದಲ)**

**ಡಾ: ತಳವಾರ್ ತಾಬಣ್ಣ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಆದರೆ ಮಾನ್ಯ ಎಂ.ನಾಗರಾಜು ರವರಿಗೆ ಮಾತನಾಡಲು ಅವಕಾಶ ಕೊಡುತ್ತೀರಿ. **(ಗೊಂದಲ)** ನನಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ಇದು ಯಾವ ನ್ಯಾಯ? **(ಗೊಂದಲ)** ಮಾನ್ಯ ಸಭಾಪತಿಯವರೇ, ನಿಮ್ಮ ಮಾತಿಗೆ ಬೆಲೆಯಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ. ಇಡೀ ರಾಜ್ಯದ ಜನ ಒಪ್ಪಿದ್ದಾರೆ.

(ಗೊಂದಲ)

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರ. ಇದರ ಬಗ್ಗೆ ಸದನದಲ್ಲಿ ಗಂಟೆಗಟ್ಟಲೇ ಚರ್ಚೆಯಾಗಬೇಕಾಗುತ್ತದೆ. ಕೇಂದ್ರದ ವಿದೇಶಾಂಗ ನೀತಿಯ ಬಗ್ಗೆ ಹೇಳಬೇಕಾಗುತ್ತದೆ. **(ಗೊಂದಲ)** Government of India has completely failed … Government of India ವನ್ನು blame ಮಾಡಬೇಕು. ಯಾವ ಕಾರಣಕ್ಕೆ ಸುಮ್ಮನಿರಬೇಕು ಸ್ವಾಮಿ?

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜು ರವರು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ ಮಾನ್ಯ ಎಂ.ನಾಗರಾಜು ರವರು ಮಾತನಾಡಿದ್ದನ್ನು ನಡವಳಿಕೆಯಲ್ಲಿ ದಾಖಲಿಸಿರುವುದಿಲ್ಲ)**

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಚಿವರು ಉತ್ತರ ಹೇಳಿದ್ದಾರಲ್ಲವೇ?

(ಗೊಂದಲ)

**ಸಭಾಪತಿಯವರು:-** ಅದ್ಯಾವುದೂ ಕಡತಕ್ಕೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ಮಾನ್ಯ ಸಚಿವರು ಸಮರ್ಪಕಾಗಿ ಉತ್ತರ ಕೊಟ್ಟನಂತರ ಆ ಉತ್ತರವನ್ನು ಇಡೀ ರಾಜ್ಯ ಮತ್ತು ಈ ಸದನ ಎಲ್ಲಾ ಒಪ್ಪಿದ ನಂತರ ಏನಾಗಿದೆಯೆಂದರೆ, ಅಂಗದ ಪರದೆ **(ಗೊಂದಲ)** ನಾಟಕವು ಇನ್ನು ಕುಳಿತಿರುವುದೇ? ಎಂದು ಹೇಳುತ್ತಾರೆ.

(ಗೊಂದಲ)

**ಶ್ರೀ ಎಂ.ನಾಗರಾಜು:-** ನಾನು domestic cylinders ಬಗ್ಗೆ ಮಾತನಾಡುತ್ತಿಲ್ಲ. Commercial ಸಿಲಿಂಡರ್‌ಗಳ ಬಗ್ಗೆ ಮಾತನಾಡುತ್ತಿದ್ದೇನೆ. **(ಗೊಂದಲ)** ಶೇ.70 ರಷ್ಟು ಇವತ್ತಿಗೂ ಕೂಡ ಅವರು ಆಮದು ಮಾಡಿಕೊಳ್ಳುತ್ತಿದ್ದಾರೆ. ಇವರಿಗೆ ನಾಚಿಕೆ ಆಗಬೇಕು.

(ಗೊಂದಲ)

**ಸಭಾಪತಿಯವರು:-** ಇವರಿಗೆ sense ಬೇಡವೇ? ಶ್ರೀ ಎಂ.ನಾಗರಾಜು ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, production ಮಾಡುವುದಿಲ್ಲವೆಂದರೆ ಈ ಸದನ ಕೇಂದ್ರ ಸರ್ಕಾರಕ್ಕೆ ಛೀಮಾರಿ ಹಾಕಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ನಾವು ಇಷ್ಟು ಹೊತ್ತಿನವರೆಗೂ ಸಭೆ ಮಾಡಿದ್ದೇವೆ. ಅಲ್ಲಿ ಮಾನ್ಯ ಎಂ.ನಾಗರಾಜುರವರು ಕೂಡ ಇದ್ದರು. "ಬೆಳಗಿನವರೆಗೂ ರಾಮಾಯಣದ ಕಥೆ ಕೇಳಿಸಿಕೊಂಡು, ಬೆಳಗ್ಗೆ ಎದ್ದು ರಾಮನಿಗೂ ಸೀತೆಗೂ ಏನಾಗಬೇಕು" ಎಂದು ಕೇಳಿದಂತಾಯಿತು.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಆ ರೀತಿಯ ಸಮಸ್ಯೆ ತಂದಿದ್ದಾರೆ. ಕೇಳುವುದರಲ್ಲಿ ತಪ್ಪೇನಿದೆ? ಇದರಲ್ಲಿ ರಾಜಕೀಯ ಅಡಗಿಲ್ಲ. ನಾನು ಬೆಂಗಳೂರು ನಗರದ ಬಗ್ಗೆ ಹೇಳುತ್ತಿದ್ದೇನೆ. ನಾಗರಿಕರ ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ನಾನು ನಿಮಗೆ ಅತ್ಯಂತ ಗೌರವ ಕೊಟ್ಟು ನಾನು ಕೂರುತ್ತೇನೆ. ನೀವು ಹೇಳುತ್ತಿರುವುದು ಸರಿಯಿಲ್ಲ.

(ಗೊಂದಲ)

**ಸಭಾಪತಿಯವರು:-** ಸಭಾನಾಯಕರೇ, ಇದನ್ನು ಹೇಳುವವರು ಮತ್ತು ಕೇಳುವವರು ಯಾರು ಇಲ್ಲವೇ? ಇದು ಸದನ ನಡೆಸುವ ಪದ್ಧತಿಯೇ? ಒಂದು ಬಾರಿ ಬೆಲ್ ಮಾಡಿದರೆ ಕುಳಿತುಕೊಳ್ಳಬೇಕಲ್ಲವೇ?

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ತಾವು ನನ್ನ ಅನ್ಯತಾ ಭಾವಿಸಬೇಡಿ. ನಾನು ನಿಮಗೆಲ್ಲರಿಗೂ ಗೌರವ ಕೊಡುತ್ತೇನೆ. ನಾನು ನೀವು ಹೊಡೆಯುವ ಬೆಲ್‌ಗೂ ಗೌರವ ಕೊಡುತ್ತೇನೆ. ಆದರೆ ನಾಗರಿಕರ ಸಮಸ್ಯೆಗಳ ಬಗ್ಗೆ ನಾವು ಕೇಳಬೇಕಾಗಿರುವುದು ನಮ್ಮ ಹಕ್ಕು ಎಂದು ಪ್ರತಿಪಾದನೆಯನ್ನು ಮಾಡುತ್ತಿದ್ದೇವೆ.

(ಗೊಂದಲ)

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಹುಶಃ ಸಾರ್ವಜನಿಕವಾಗಿ ಬರುತ್ತಿದ್ದ ಚರ್ಚೆಗಳ ಆತಂಕಕ್ಕೆ ಮಾನ್ಯ ಸಚಿವರು ಈ ಆತಂಕವನ್ನು ನಿವಾರಿಸುವ ನಿಟ್ಟಿನಲ್ಲಿ ಆತ್ಮವಿಶ್ವಾಸವನ್ನು ತುಂಬುವ ರೀತಿಯಲ್ಲಿಯೇ ಉತ್ತರವನ್ನು ಕೊಟ್ಟಿದ್ದಾರೆ. ಈ ಸದನದ ಪರವಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಕಮರ್ಷಿಯಲ್ ಸಿಲಿಂಡರ್ supply ನಲ್ಲಿ problem ಆಗಿರುವ ಕಾರಣಕ್ಕೆ ಹೋಟೆಲ್‌ಗಳಲ್ಲಿ ಮತ್ತು ಕಲ್ಯಾಣ ಮಂಟಪಗಳಲ್ಲಿ ಸಮಸ್ಯೆಯಾಗುತ್ತಿರುವುದು ನಿಜ. ಆದರೆ ಅವರು, ಇದು ತಾತ್ಕಾಲಿಕ ಎಂದು ಹೇಳಿದರು. ಈ ಸಮಸ್ಯೆ ಎಷ್ಟು ದಿನದೊಳಗೆ ಬಗೆಹರಿಯಬಹುದು? ಇದರ ಜೊತೆಗೆ ಯಾರಾದರೂ ಈ ಸಂದರ್ಭದ

ದುರುಪಯೋಗ ಮಾಡಿಕೊಂಡು ಕಾಳಸಂತೆಯಲ್ಲಿ ಏನಾದರೂ ಸಿಲಿಂಡರ್ ಅನ್ನು ಮಾರಾಟ ಮಾಡುವುದಕ್ಕೆ ಹೊರಟರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ. . .

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಮಾನ್ಯ ಆಹಾರ ಮತ್ತು ನಾಗರಿಕ ಸಚಿವರು ಈಗಾಗಲೇ ಅದನ್ನೆಲ್ಲಾ ಹೇಳಿದ್ದಾರೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅವರ ಮೇಲೆ ಸ್ವಲ್ಪ ಬಿಗಿಯಾಗಿ ಕ್ರಮ ತೆಗೆದುಕೊಂಡರೆ, ಅದು ಮತ್ತೆ ಮರುಕಳಿಸುವುದಿಲ್ಲ. ನಾನು ಎಲ್ಲಾ ಸ್ನೇಹಿತರಿಗೆ  ವಿನಂತಿ ಮಾಡುವುದೇನೆಂದರೆ, ನಮ್ಮಲ್ಲಿ 2014ಕ್ಕೆ ಮುಂಚೆ 17 ಕೋಟಿ ಗ್ಯಾಸ್ ಸಂಪರ್ಕ ಇತ್ತು. ಈಗ ಅದು ಸುಮಾರು 33 ಕೋಟಿಗೆ ಹೋಗಿದೆ. ಕರ್ನಾಟಕದಲ್ಲಿ 1.20 ಕೋಟಿ ಗ್ಯಾಸ್ ಸಂಪರ್ಕ ಇತ್ತು. ಅದು ಈಗ 1.80 ಕೋಟಿಗೆ ಹೋಗಿದೆ. ಏಕೆಂದರೆ, 'ಉಜ್ವಲ ಯೋಜನೆ' ಮೂಲಕ ಉಚಿತವಾಗಿ connection ಕೊಟ್ಟಿದ್ದರಿಂದ ವ್ಯಾಪಕ ಪ್ರಮಾಣದಲ್ಲಿ ಏರಿಕೆ ಆಯಿತು.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಈಗ ಏನು ಮಾಡಬೇಕು ಹೇಳಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಅದು ವ್ಯಾಪಕವಾಗಿ ಏರಿಕೆಯಾಯಿತು. ಹಾಗಾಗಿ, ಅದಕ್ಕೆ ಬೇಕಾದಂತಹ supply chain ಎಲ್ಲಾ ಚೆನ್ನಾಗಿ systematic ಆಗಿ ಮಾಡಿದ ಕಾರಣಕ್ಕೋಸ್ಕರವೇ ಕಳೆದ 11 ವರ್ಷದಲ್ಲಿ ಒಮ್ಮೆಯೂ ಕೂಡ ಗ್ಯಾಸ್ ಸಿಲಿಂಡರ್‌ಗಳ problem ಆಗಲಿಲ್ಲ. ಯುದ್ಧ ಅನಿರೀಕ್ಷಿತವಾಗಿ ಒದಗಿದ್ದು. ಇದು ಕೇವಲ ಇಸ್ರೇಲ್ ಮತ್ತು ಇರಾನ್‌ಗೆ ಮಾತ್ರ ಸೀಮಿತವಾಗಿಲ್ಲ ಅಥವಾ ಇರಾನ್ ಮತ್ತು ಅಮೇರಿಕಾಗೆ ಮಾತ್ರ ಸೀಮಿತವಾಗಿಲ್ಲ. ಅವರು ಕುವೈತ್ ಮೇಲೆ ದಾಳಿ ಮಾಡಿದರು, ಅಬುದಾಬಿಯ ಮೇಲೆ ದಾಳಿ ಮಾಡಿದರು, ಸೌದಿ ಅರೇಬಿಯಾದ ಮೇಲೆ ದಾಳಿ ಮಾಡಿದರು ಮತ್ತು ಬೇರೆ ಬೇರೆ ದೇಶಗಳಿಗೆ ಯುದ್ಧ ವ್ಯಾಪಿಸಿಕೊಂಡಿದ್ದರಿಂದಾಗಿ supply chain ಮೇಲೆ ತಾತ್ಕಾಲಿಕ ಸಮಸ್ಯೆಯಾಗಿದೆ.  ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. ನಾನು ತನ್ಮೂಲಕ ವಿನಂತಿ ಮಾಡುವುದೇನೆಂದರೆ, ಒಮ್ಮೆ ಕೌರವರನ್ನು ಗಂಧರ್ವರು ಸೆರೆಹಿಡಿದಿರುತ್ತಾರೆ.

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ಕೌರವರು ಎಲ್ಲಾ ಗೊತ್ತಿದೆ. ಅದನ್ನೆಲ್ಲಾ ಹೇಳುವುದು ಬೇಡ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮನವರಿಕೆ ದೃಷ್ಟಿಯಿಂದ ಮಹತ್ವ ಇರುವ ಕಾರಣಕ್ಕೆ ಹೇಳುತ್ತಿರುವುದು. ಕೌರವರನ್ನು ಗಂಧರ್ವರು ಸೆರೆಹಿಡಿದಿರುತ್ತಾರೆ.

**ಸಭಾಪತಿಯವರು:-** ಅದನ್ನು ಬಿಟ್ಟು ವಿಷಯಕ್ಕೆ ಬನ್ನಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಗ ದುರ್ಯೋಧನನ್ನು ಸೆರೆ ಹಿಡಿದಿದ್ದಾರೆ ಎಂದು ಧರ್ಮರಾಯನ ಹತ್ತಿರ ಬರುತ್ತಾರೆ. ಧರ್ಮರಾಯ ಭೀಮ ಮತ್ತು ಅರ್ಜುನರಿಗೆ ನೀವು ಹೋಗಿ ಅವರನ್ನು ಬಿಡಿಸಿಕೊಂಡು ಬನ್ನಿ ಎಂದು ಆದೇಶ ಮಾಡುತ್ತಾನೆ.  ಆಗ ಅವರು ನಮ್ಮನ್ನು ವನವಾಸಕ್ಕೆ ಕಳುಹಿಸಿದವರನ್ನು ನಾವೇಕೆ ಅವರನ್ನು ಬಿಡಿಸಬೇಕು ಎಂದು ಆಕ್ರೋಶ ಹೊರಗೆ ಹಾಕುತ್ತಾರೆ. ಆಗ ಅವರು

'ವಯಂ ಪಂಚಾಧಿಕಂ ಶತಂ' ಎಂದು ಹೇಳುತ್ತಾರೆ. ನಾವು ಹೊರಗಡೆಯವರು ಬಂದರೆ ನಾವು 105 ಜನ ಎಂದು ಹೇಳುತ್ತಾರೆ. ದೇಶದ ಪ್ರಶ್ನೆ ಬಂದಾಗ ಇಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಬರಬಾರದು. ದೇಶ ಎನ್ನುವ ಪ್ರಶ್ನೆ ಬರಬೇಕು. ಯುದ್ಧದ ಕಾರಣದಿಂದಾಗಿ ಇಡೀ ದೇಶಕ್ಕೆ ಸಮಸ್ಯೆಯಾಗಿರತಕ್ಕಂಥದ್ದು. ಇಲ್ಲಿ ರಾಜಕಾರಣ ಮಾಡಬಾರದು ಎಂಬುದಷ್ಟೇ ನನ್ನ ವಿನಂತಿ. ರಾಜಕಾರಣ ಬೇರೆ ವಿಷಯದಲ್ಲಿ ಮಾಡಲಿ. ಬೇಕಾದರೆ ಆ ವಿಷಯದಲ್ಲಿ ಟೀಕೆ ಮಾಡಲಿ. ಆದರೆ ಈ ವಿಷಯದಲ್ಲಿ ರಾಜಕಾರಣ ಮಾಡಿದರೆ ಸಣ್ಣವರಾಗುತ್ತಾರೆ. ಅದು ಸಣ್ಣತನವನ್ನು ತೋರಿಸುತ್ತದೆ. ಆದರೆ ಇಲ್ಲಿ ಮಾನ್ಯ ಸಚಿವರು ಇಲ್ಲಿ ಸಣ್ಣತನ ತೋರಿಸಿಲ್ಲ, ಅವರು ದೊಡ್ಡತನವನ್ನು ತೋರಿಸಿದ್ದಾರೆ. ಉಳಿದವರು ಈ ವಿಷಯದಲ್ಲಿ ಸಣ್ಣತನ ತೋರಿಸಿ ಸಣ್ಣವರಾಗಬಾರದು.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಈ ವಿಚಾರದ ಬಗ್ಗೆ ಮಾತನಾಡಿದ್ದೇನೆ. ಆದರೆ ಮಾನ್ಯ ಸಚಿವರ ಹೇಳಿಕೆಗಳಲ್ಲಿ ಇವತ್ತಿನ ದಿವಸ ರಾಜ್ಯ ಸರ್ಕಾರಕ್ಕೆ ಇಂತಹ ಬಿಕ್ಕಟ್ಟು ಬಂದಾಗ ನಾವು ಅವರ ಜೊತೆ ಇರಬೇಕು. ಅದನ್ನು ನಾನು ಒಪ್ಪುತ್ತೇನೆ. ಆದರೆ ಈ ರಾಜ್ಯದಲ್ಲಿ ಆಗುವಂತಹ ಸಮಸ್ಯೆಗಳನ್ನು ಜನರ ಮುಂದೆ ಇಡುವಂಥದ್ದು ನಮ್ಮ ಕೆಲಸ ಇತ್ತು. ಅದನ್ನು ನಾವು ಇಟ್ಟಿದ್ದೇವೆಯೇ ಹೊರತು ರಾಜಕಾರಣ ಮಾಡತಕ್ಕಂಥ ಉದ್ದೇಶವಿಲ್ಲ. ಜನರ ಆತಂಕವನ್ನು ನಾನು ವ್ಯಕ್ತಪಡಿಸಿದ್ದೇನೆ.

**(ಮುಂದು)**

(357)12.3.2026/4.40/ಎಂ.ಎಂ-ಬಿ.ಎಸ್.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):-**

ಎಲ್ಲವೂ ಸರಿ ಹೋಗುತ್ತದೆ ಎಂದು ಮಾನ್ಯ ಸಚಿವರು ಹೇಳಿದರು. ಮಾನ್ಯ ಸಚಿವರು ಏನು ಹೇಳಿದರೂ ಕೇಂದ್ರ ಸರ್ಕಾರವನ್ನು ಅವಲಂಬಿಸಿ ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡು ಹೇಳಬೇಕೇ ಹೊರತು ಅವರ ಕೈಯಲ್ಲಿ ಏನೂ ಇಲ್ಲ. Because this is not a State subject. ಹಾಗಾಗಿ ಇವತ್ತು ದೇಶದ ರಾಜಕಾರಣದಲ್ಲಿ 'ವಿಶ್ವಗುರು' ಪ್ರಧಾನ ಮಂತ್ರಿ ಸನ್ಮಾನ್ಯ ನರೇಂದ್ರ ಮೋದಿಯವರು ನಾವು ಎಲ್ಲವನ್ನೂ ಸರಿ ಮಾಡುತ್ತೇವೆ ಎಂದು ಹೇಳಿದವರು ಇವತ್ತು ನಾವು ಎಲ್ಲಿಂದ ಅನಿಲವನ್ನು ತೆಗೆದುಕೊಳ್ಳಬೇಕು, ಅಮೆರಿಕದಿಂದ ತೆಗೆದುಕೊಳ್ಳಬೇಕೇ . . .

**ಸಭಾಪತಿಯವರು:-** ಮಾನ್ಯ ಐವನ್ ಡಿಸೋಜಾರವರೆ, politics ಏತಕ್ಕೆ ಮಾತನಾಡುತ್ತೀರಿ?

**ಶ್ರೀ ಸಿ.ಟಿ. ರವಿ:-** ಮೋದಿಯವರು ವಿಶ್ವಗುರು ಎಂದು ಹೇಳಿದ್ದು ಭಾರತವನ್ನು . . .

**ಶ್ರೀ ಐವನ್ ಡಿ'ಸೋಜಾ:-** ಇದನ್ನು ಕೇಳುವ ಪರಿಸ್ಥಿತಿಗೆ ಬಂದದ್ದು ದುರಾದೃಷ್ಟ. So, I say that the Indian foreign policy has failed. ಈ crisis ಗೆ ಪ್ರಧಾನ ಮಂತ್ರಿಗಳೇ ಕಾರಣ ಎನ್ನುವುದನ್ನು ನಾನು ಹೇಳಬಯಸುತ್ತೇನೆ.

**ಶ್ರೀ ಸಿ.ಟಿ. ರವಿ:- (ಗೊಂದಲ)** ಭಾರತವನ್ನು 'ವಿಶ್ವಗುರು' ಎಂದಿದ್ದು.

**ಸಭಾಪತಿಯವರು:-** ಮಾನ್ಯ ರವಿಯವರೆ ಕುಳಿತುಕೊಳ್ಳಿ. ಮಾನ್ಯ ಶಿವಕುಮಾರ್‌ರವರೆ ಮಾತನಾಡಿ.

(ಗೊಂದಲ)

**ಶ್ರೀ ಕೆ. ಶಿವಕುಮಾರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, Hon'ble Food and Civil Supplies Minister ಉತ್ತರ ಕೊಟ್ಟಿದ್ದಾರೆ. ನಾನು ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಏಕೆಂದರೆ ಇವತ್ತು ಕಮರ್ಷಿಯಲ್ ಸಿಲಿಂಡರ್‌ಗಳ ಬಗ್ಗೆ ಸಮಸ್ಯೆ ಇದೆ ಎಂದು ಹೇಳಿದರು. ಕರ್ನಾಟಕದಲ್ಲಿ ಶೇ.14ರಷ್ಟು economy hotel industry ನಲ್ಲಿದೆ. ಆ 14% hotel industry ಯವರು ಶೇ.40ರಷ್ಟು hospitality industry ಯಲ್ಲಿ employment create ಮಾಡಿದ್ದಾರೆ. ಇವತ್ತು ಹೋಟೆಲ್‌ಗಳನ್ನು ಮುಚ್ಚಿದರೆ ಲಕ್ಷಾಂತರ ಕಾರ್ಮಿಕರಿಗೆ ತೊಂದರೆಯಾಗುತ್ತದೆ. ಅವರು food production ಮಾಡಬೇಕು. ಊಟ ಇಲ್ಲದಿದ್ದರೆ ಹೋಟೆಲ್ ಮುಚ್ಚುತ್ತದೆ. ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಮನೆಗಳಿಗೆ ಆದ್ಯತೆಯನ್ನು ಕೊಡಬೇಕು. ಇಲ್ಲವೆಂದಲ್ಲ. North-East India ನಿಂದ ಕೆಲಸಗಾರರನ್ನು, cooks, chefs ಎಲ್ಲರನ್ನು ಕರೆದುಕೊಂಡು ಬಂದು ಹೋಟೆಲ್‌ಗಳಲ್ಲಿ ಇಟ್ಟುಕೊಂಡಿದ್ದಾರೆ. ಒಬ್ಬೊಬ್ಬ ಚೆಫ್‌ಗೆ 1.50 ಲಕ್ಷ, 2 ಲಕ್ಷ ರೂಪಾಯಿಗಳನ್ನು ಕೊಟ್ಟು ಹೋಟೆಲ್‌ಗಳಲ್ಲಿ ಇಟ್ಟುಕೊಂಡಿದ್ದಾರೆ. ಇವರೇನಾದರೂ ಹೋಟೆಲ್‌ಗಳನ್ನು ಮುಚ್ಚಿದರೆ ಇವರಿಗೆಲ್ಲಾ ಬಹಳ ತೊಂದರೆಯಾಗುತ್ತದೆ ಹಾಗೂ hotel industry ನೇ turmoil ಆಗಿಬಿಡುತ್ತದೆ. ಹಾಗಾಗಿ ಕಮರ್ಷಿಯಲ್ ಸಿಲಿಂಡರ್‌ಗಳನ್ನು ಆದಷ್ಟು ಬೇಗನೆ ಕೊಟ್ಟು ಹೋಟೆಲ್‌ಗಳನ್ನು ಮುಚ್ಚದಿರುವ ಹಾಗೆ ಮಾಡಬೇಕು. ಇದು ಮೊದಲನೆಯದು. ಎರಡನೆಯದಾಗಿ, ನಾನು ಬಿ.ಜೆ.ಪಿ. ಪಕ್ಷದ ಸ್ನೇಹಿತರುಗಳನ್ನು ಅಭಿನಂದಿಸುತ್ತೇನೆ. ಸರ್ಕಾರದ ಜೊತೆ ನಾವು ಇರುತ್ತೇವೆಂದು ಹೇಳಿದ್ದಾರೆ. ಬಹಳ ಸಂತೋಷ, ಈ ತರಹದ ಬೆಳವಣಿಗೆ ನನಗೆ ಇಷ್ಟವಾಯಿತು. ಅದೇ ರೀತಿ ಜಲಸಂಪನ್ಮೂಲ ಸಚಿವರಿಗೆ ರೂ. 5,300/- ಕೋಟಿ ರೂಪಾಯಿಗಳು ಭದ್ರಾ ಯೋಜನೆಯಲ್ಲಿ ಬರಬೇಕು ಅದನ್ನು ಕೊಡಿಸಿಕೊಟ್ಟರೆ ಬಹಳ ಸಂತೋಷವಾಗುತ್ತದೆ, ಇದೇ ತರಹ ನಿಮ್ಮ ಸಹಕಾರವಿರಲಿ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ಒಂದೇ ನಿಮಿಷ. ನಾನು ಹೋಟೆಲ್ ಒಂದರ ಮಾಲೀಕನಾಗಿದ್ದೇನೆ.

**ಸಭಾಪತಿಯವರು:-** ಇಲ್ಲ, ಅವಕಾಶ ಕೊಡುವುದಿಲ್ಲ. ಮಾನ್ಯ ಸಚಿವರೆ, ಉತ್ತರ ಕೊಡಿ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಇದು ಖಂಡಿತವಾಗಿಯೂ ಮುಖ್ಯವಾದ ಚರ್ಚೆಯಾಗಿದೆ. ಸಾರ್ವಜನಿಕರು ಯಾವುದೇ ರೀತಿಯ ಆತಂಕಕ್ಕೆ ಒಳಗಾಗದ ರೀತಿಯಲ್ಲಿ ನೋಡಿಕೊಳ್ಳುವುದು ಮತ್ತು ನೈಜ ಪರಿಸ್ಥಿತಿಗಳ ಬಗ್ಗೆ ಜನರಿಗೆ ಗೊತ್ತಾಗುವಂಥದ್ದು ಕೂಡ ಅಷ್ಟೇ ಮುಖ್ಯವಾಗಿದೆ. ಮಾನ್ಯ ಸಚಿವರು ಇದರ ಬಗ್ಗೆ ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡಿ ಹೇಳಿದ್ದಾರೆ. ಈ ಒಂದು ಚರ್ಚೆಯಲ್ಲಿ ಬಹಳಷ್ಟು ಜನರು ಮಾತನಾಡಿದ್ದಾರೆ. ಕೆಲವು ಕಡೆ ಯಾವ ರೀತಿ ಅದನ್ನು ಬಿಂಬಿಸುತ್ತಿದ್ದಾರೆಂದರೆ, 2014ನೇ ಇಸವಿಯಿಂದ ಬಹಳ ವ್ಯವಸ್ಥಿತವಾಗಿ ನಡೆಯುತ್ತಿದೆ, ಅದಕ್ಕೂ

ಹಿಂದೆ ಸರಿಯಾಗಿ ನಡೆಯುತ್ತಿರಲಿಲ್ಲ ಎಂಬ ರೀತಿ ಕೆಲವರು ಹೇಳಿದ್ದಾರೆ. ಗ್ಯಾಸ್ ವಿಚಾರದಲ್ಲಿ ಬಹಳ ಹಿಂದೆಯೆ ಸುಧಾರಣೆಯಾಗಿತ್ತು. ಸುಧಾರಣೆಯಾಗಿ ಸರಿಯಾದ ರೀತಿ ಸರಬರಾಜಾಗುವುದು ನಮ್ಮ ಯು.ಪಿ.ಎ. ಸರ್ಕಾರ ಇದ್ದಾಗಲೇ ಪ್ರಾರಂಭವಾಗಿತ್ತು. ಇವತ್ತು ತೈಲ ಉತ್ಪನ್ನಗಳು 100 ಡಾಲರ್‌ಗೆ ಮುಟ್ಟುತ್ತದೆ ಎಂದು ಆತಂಕ ಪಡುತ್ತಿದ್ದೇವೆ. ಆಗ 2008, 10 ವರ್ಷಗಳ ಕಾಲ ರೂ. 100, ರೂ. 120, 2013-14ನೇ ಇಸವಿಯವರೆಗೆ ರೂ. 140 ಡಾಲರ್‌ಗೆ ಹೋಗಿತ್ತು. ಆಗ ಇರಾನ್ ಮೇಲೆ sanctions ಆಗಿತ್ತು Libya war ಆಗಿತ್ತು, ಬೇರೆ ಬೇರೆ ಅನೇಕ ಘಟನೆಗಳಿಂದ ಮತ್ತು ವಿಶ್ವದ ಬೇರೆ ಬೇರೆ ಆರ್ಥಿಕ ಬೆಳವಣಿಗೆಗಳಿಂದ ಅಂತಹ ಪರಿಸ್ಥಿತಿಯಲ್ಲಿ ಲಕ್ಷಾಂತರ ಕೋಟಿ ಸಬ್ಸಿಡಿ ಕೊಟ್ಟು ನಮ್ಮ ಯು.ಪಿ.ಎ. ಸರ್ಕಾರ ಜನರಿಗೆ ಗ್ಯಾಸ್, ಪೆಟ್ರೋಲ್, ಡೀಸೆಲ್ ಎಲ್ಲವನ್ನೂ ಕೊಡುತ್ತಿದ್ದೆವು. ಎನ್.ಡಿ.ಎ. ಸರ್ಕಾರ ಬಂದ ಮೇಲೆ ವಿಶ್ವದಲ್ಲಿ ಬೆಲೆಗಳು ಹೆಚ್ಚಾದಾಗ ಅವರು ಬೆಲೆಗಳನ್ನು ಹೆಚ್ಚು ಮಾಡುತ್ತಿದ್ದರು. ವಿಶ್ವದಲ್ಲಿ ತೈಲದ ಬೆಲೆ ಕಡಿಮೆಯಾದಾಗ ಗ್ರಾಹಕರಿಗೆ ಆ ಕಡಿಮೆ ಬೆಲೆಯನ್ನು ವರ್ಗಾವಣೆ ಮಾಡಲಿಲ್ಲ. ಕಡಿಮೆ ಬೆಲೆ ಮೇಲೆ ಹೆಚ್ಚು ತೆರಿಗೆ ಹಾಕಿ ಕೇಂದ್ರ ಸರ್ಕಾರ ಲಕ್ಷಾಂತರ ಕೋಟಿ ರೂಪಾಯಿಗಳ ಲಾಭ ಮಾಡಿಕೊಂಡರೇ ಹೊರತು ಗ್ರಾಹಕರಿಗೆ ಯಾವುದೇ ರೀತಿಯ ಅನುಕೂಲ ಮಾಡಿಕೊಡಲಿಲ್ಲ. ಅಂತಹ ಒಂದು ಕಷ್ಟಕರವಾದಂತಹ ಪರಿಸ್ಥಿತಿ; ನಿಮಗೆ ಇಷ್ಟವಾದುದನ್ನು ನೀವು ಹೊಗಳುತ್ತೀರಿ. ನಿಜಾಂಶವನ್ನು ನಾನು ಹೇಳುತ್ತಿದ್ದೇನೆ, ಸ್ವಲ್ಪ ಕೇಳಿ ತಿಳಿದುಕೊಳ್ಳಿ. ಅಷ್ಟೊಂದು ಕಷ್ಟ ಕಾಲದಲ್ಲಿ ಅವತ್ತು ಸರ್ಕಾರ ಜವಾಬ್ದಾರಿಯುತವಾಗಿ ನಡೆಸಿ ಈ ದೇಶಕ್ಕೋಸ್ಕರ ಹಿಂದಿನ ಸರ್ಕಾರ ಕೂಡ ಕೆಲಸ ಮಾಡಿದೆ. ಇವತ್ತು ಇವರು ಬಂದ ತಕ್ಷಣ ಎಲ್ಲವೂ ಚೆನ್ನಾಗಿ ಆಗಿಹೋಗಿದೆ, ಇದರ ಹಿಂದೆ ಚೆನ್ನಾಗಿರಲಿಲ್ಲ; ಇವರಿಗೆ ಇತಿಹಾಸ ಪ್ರಾರಂಭವಾಗುವುದೇ 2014ನೇ ಇಸವಿಯಿಂದ. ಇನ್ನೊಂದು ವಿಚಾರವನ್ನು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತೇನೆ. ಯಾರಿಗೂ ಕೂಡ ಆತಂಕ ಸೃಷ್ಟಿ ಮಾಡಬಾರದು. ನಿಜಾಂಶವನ್ನು ಇವತ್ತು ನಮ್ಮ ಆಹಾರ ಸಚಿವರು ಹೇಳಿದ್ದಾರೆ. ಇವತ್ತು ಅದನ್ನು ಸದ್ಬಳಕೆ ಮಾಡಿಕೊಳ್ಳುವುದು ಮತ್ತು ಮಿತವ್ಯಯ ಮಾಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ. ಅದನ್ನು ಅವರು ಹೇಳಿದ್ದಾರೆ. ಆ ಸಂದೇಶವನ್ನು ಸಾರ್ವಜನಿಕರಿಗೆ ಕೊಡೋಣ. ಆದರೆ ಯಾರೋ ಒಬ್ಬರಿಂದಲೇ ಆಯಿತು ಎಂಬ ತಪ್ಪು ಸಂದೇಶ ಹೋಗಬಾರದು.

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನ್ನ ಒಂದು ಸಲಹೆ ಇದೆ. ನಾನು ಮಾನ್ಯ ಸಚಿವರ ಹತ್ತಿರ ವಿನಂತಿಯನ್ನೂ ಮಾಡಿದ್ದೇನೆ.

**ಸಭಾಪತಿಯವರು:-** ಮಾನ್ಯ ನವೀನ್‌ರವರೆ, ನಿಮ್ಮದು ಹೋಟೆಲ್ ಇದೆ ಎಂದು ಹೇಳಿದಿರಲ್ಲಾ ಅದಕ್ಕೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಕೆ.ಎಸ್. ನವೀನ್:-** ಮಾನ್ಯ ಸಭಾಪತಿಯವರೆ, ಹೋಟೆಲ್ ಮಾಲೀಕರ ಒಂದು ಸಭೆ ಕರೆದು ಅವರಿಗೆ ಇವತ್ತು ಯುದ್ಧದ ಪರಿಸ್ಥಿತಿ, ಅಭಾವದ ಪರಿಸ್ಥಿತಿ ಇದೆ. ಎಲ್ಲವೂ ನಾರ್ಮಲ್ ಆಗಿದ್ದಾಗ ಯಾರೂ ಹೆಚ್ಚು ಖರ್ಚು ಮಾಡಬೇಡಿ ಎಂದು ಹೇಳುವುದಿಲ್ಲ. ಆದರೆ ಇವತ್ತು ಯಾವತ್ತು ಯುದ್ಧ ಸರಿ ಹೋಗುತ್ತದೆ, ಯಾವಾಗ ನಮಗೆ

normalise ಆಗುತ್ತದೆ ಎಂಬ ಕಲ್ಪನೆ ಯಾರಿಗೂ ಇಲ್ಲ. ಅಂದರೆ ಇದು ಮಾಧ್ಯಮದ ಮೂಲಕ ಹಾಗೂ ಬೇರೆ ಬೇರೆ ಸಾಮಾಜಿಕ ಜಾಲತಾಣದ ಮೂಲಕ ಎಲ್ಲಿಯೂ ಏನೂ ಸಿಗುತ್ತಿಲ್ಲ, ಅವರು ಬಾಗಿಲು ಹಾಕಿದ್ದಾರೆ, ಬೋರ್ಡ್ ಹಾಕಿದ್ದಾರೆ ಅವರ ಹತ್ತಿರ ಕೆಲಸ ಮಾಡುತ್ತಿರುವವರಿಗೂ ತೊಂದರೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ತಾವು ಹೋಟೆಲ್ ಮಾಲೀಕರ ಸಂಘದ ಜೊತೆ ಮೀಟಿಂಗ್ ಒಂದನ್ನು ಕರೆದು ಅವರೊಂದಿಗೆ specific ಆಗಿ ಚರ್ಚೆ ಮಾಡಿ ಅವರಿಗೆ ಎಷ್ಟು ಅವಶ್ಯಕತೆ ಇದೆ ಅಷ್ಟು ಸಿಲಿಂಡರ್‌ಗಳನ್ನು ಕೊಡುವುದಕ್ಕೆ ನಮ್ಮ ಕಡೆಯಿಂದ ಏನು ಮಾಡಬೇಕೋ ಅದನ್ನು ಮಾಡುತ್ತೇವೆ, ಆದರೆ ಸ್ವಲ್ಪ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಬೇಕೆಂದು ನಿಮ್ಮ ಕಡೆಯಿಂದ ಸೂಚನೆ ಹೋದರೆ, ಏಕೆಂದರೆ ತಮ್ಮ ಇಲಾಖೆಯ ಅಧಿಕಾರಿಗಳ ಕಡೆಯಿಂದ ಆ ಸಂದೇಶ ಹೋದರೆ ಇದು ಸರಿ ಹೋಗಬಹುದು ಎಂಬ ಒಂದು ವಿನಂತಿ ಇದೆ. ಮತ್ತೊಂದು ವಿನಂತಿಯೇನೆಂದರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಇಂದು ಸದನದಲ್ಲಿರುವುದರಿಂದ ನಾನು ಕಳೆದ ಸಲವೂ ಕೂಡ ಅವರಿಗೆ ಸಲಹೆ ಕೊಟ್ಟಿದ್ದೆ. Bio-waste ಇಂದ ಕೆಲವು ದೊಡ್ಡ ದೊಡ್ಡ ನಗರಗಳು ಇಂಧೋರ್ ಇಂತಹ ಕಡೆಗಳಲ್ಲಿ ಇವತ್ತು ಎಲ್.ಪಿ.ಜಿ. ಮುಕ್ತ ಮಾಡಿ ಪೈಪ್‌ಲೈನ್ ಮೂಲಕ ಕೊಡುತ್ತಿದ್ದಾರೆ. ನಮ್ಮಲ್ಲಿ ಬೆಂಗಳೂರಿನಲ್ಲಿ huge garbage collection ಆಗುತ್ತಿದೆ. ಆದರೆ ನಾವು GAIL (India) Ltd., ಎನ್ನುವ ಒಂದೇ ಸಂಸ್ಥೆ ಮೇಲೆ ನಿರ್ಭರವಾಗಿದ್ದೇವೆ. ನಮ್ಮ ಕಡೆಯಿಂದಲೇ ನಮಗೆ ಬೇಕಾದಷ್ಟು ಬೆಂಗಳೂರಿಗೆ ಬೇಕಾಗಿರುವಂತಹ ಅಷ್ಟೂ ಬಯೋ ಗ್ಯಾಸ್ ಅನ್ನು liquefy ಮಾಡಿ ಬಳಕೆ ಮಾಡುವಂತಹ ಅವಕಾಶ ನಮಗಿದೆ. `Necessity is the mother of all inventions' ಎಂದು ಹೇಳುತ್ತಾರೆ. ಯಾವಾಗ ಇಂತಹ ಸಮಸ್ಯೆ ಬರುತ್ತದೆ ಆಗಲೇ ನಾವು ಹೊಸದಾಗಿ ಏನಾದರೂ ಸ್ಥಾಪನೆ ಮಾಡುವುದಕ್ಕೆ ನಮಗೆ ಅವಕಾಶ ಸಿಗುತ್ತದೆ. ಈ ಒಂದು ತುರ್ತು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ನಮ್ಮ self sufficiency ಕಡೆಗೆ ಮುಂದಕ್ಕೆ ಹೋಗುವುದಕ್ಕೆ ಬೇಕಾಗಿರುವಂತಹ ಪ್ರಯತ್ನ ಕೂಡ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ಹಿಂದೆಯೂ ಕೂಡ ಕೇಂದ್ರದಲ್ಲಿ ಆಹಾರ ಸಚಿವರಾಗಿ ಕೆಲಸ ಮಾಡಿದ್ದಾರೆ, ರಾಜ್ಯದಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ತಾವು ಇದಕ್ಕೆ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಕೆಲಸ ಮಾಡಬೇಕೆಂದು ಹೋಟೆಲ್ ಮಾಲೀಕರ ಪರವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಹೆಚ್. ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದ ಪೆಟ್ರೋಲಿಯಂ ಸಚಿವರಿಗೆ ಪತ್ರ ಬರೆದು ಒಂದು ವೇಳೆ ಕಮರ್ಷಿಯಲ್ ಸಿಲಿಂಡರ್‌ಗಳನ್ನು ತೀರ ನಿಲ್ಲಿಸಿದರೆ ಬಹಳ ದೊಡ್ಡ ಪರಿಣಾಮವಾಗುತ್ತದೆ, ತಕ್ಷಣವೇ ಅದರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿದ್ದಾರೆ. ಆ ವಿಷಯವನ್ನು ಕೂಡ ಸದನಕ್ಕೆ ತಿಳಿಸುತ್ತೇನೆ. ಕಮರ್ಷಿಯಲ್ ಸಿಲಿಂಡರ್‌ಗಳದ್ದು ಸ್ವಲ್ಪ ತೊಂದರೆ ಇರುವುದಕ್ಕೆ ತಕ್ಷಣ ಮುಖ್ಯಮಂತ್ರಿಗಳು ಪತ್ರವನ್ನು ಬರೆದಿದ್ದಾರೆ. ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ನಾಗರಾಜುರವರು ಅತಿ ಹೆಚ್ಚು ಮಾತನಾಡಿದ್ದಾರೆ. ನಾನು ಅವರಿಗೆ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ನಮಗೆ ಇದು ಅರ್ಥವಾಗುತ್ತದೆ.

ಬೇರೆ ಬೇರೆ ದೇಶಗಳಿಂದ ಬಂದು ಇಲ್ಲಿ ಕೆಲಸ ಮಾಡುವ ಜನರಿದ್ದಾರೆ. ಹೋಟೆಲ್ ಕಾರ್ಮಿಕರಿದ್ದಾರೆ ಅದು ಕೂಡ ಅಷ್ಟೇ ಪ್ರಮುಖವಾಗಿದೆ. ನಾನು ಇದಕ್ಕೊಂದು ಯೋಚನೆ ಮಾಡಿದ್ದೇನೆ. ನಾನು ಮಾನ್ಯ ಸಭಾಪತಿಯವರಿಗೆ ತಿಳಿಸುತ್ತೇನೆ. ನಾಳೆ ಮತ್ತೆ ತೈಲ ಕಂಪನಿಗಳವರನ್ನು ಕರೆಸಿ ಅವರ ಜೊತೆ ಮಾತನಾಡಿ ಎಷ್ಟರಮಟ್ಟಿಗೆ ಕಮರ್ಷಿಯಲ್ ಸಿಲಿಂಡರ್‌ಗಳನ್ನು ಕೊಡಲು ಸಾಧ್ಯವಾಗುತ್ತದೆ ಎಂದು ಗೊತ್ತಾದ ಮೇಲೆ ಮತ್ತೆ ಹೋಟೆಲ್ ಮಾಲೀಕರನ್ನು ಕರೆಸಿ ಮಾತನಾಡುತ್ತೇನೆ. ಸಾಧ್ಯವಾದಷ್ಟು ಅವರಿಗೂ ಸ್ವಲ್ಪ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ಗೃಹ ಬಳಕೆ ಸಿಲಿಂಡರ್‌ಗಳು ಬಹಳ ಪ್ರಾಧಾನ್ಯವಾಗಿರುತ್ತದೆ. ಅದಾದ ಮೇಲೆ ಇವತ್ತಿನ ಕಾಲದಲ್ಲಿ ಹೋಟೆಲ್‌ಗಳು ಕೂಡ ಅಷ್ಟೇ ಪ್ರಮುಖವಾಗಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪೆಟ್ರೋಲಿಯಂ ಸಚಿವರಿಗೆ ಜರೂರಾಗಿ ಪತ್ರವನ್ನು ಬರೆದು ಇದರ ಬಗ್ಗೆ ಕ್ರಮ ವಹಿಸಿದ್ದಾರೆ. ಮುಖ್ಯ ಕಾರ್ಯದರ್ಶಿಯವರಿಗೆ weekly meeting ಮಾಡಿ ರಿಪೋರ್ಟ್ ಕೊಡಬೇಕೆಂದು ಹೇಳಿದ್ದಾರೆ. ನಾಳೆ ದಿವಸ ನಾನು ಕೂಡ ತುರ್ತಾಗಿ ಒಂದು ಸಭೆಯನ್ನು ಕರೆದು ಕಮರ್ಷಿಯಲ್ ಸಿಲಿಂಡರ್‌ಗಳ ಸಮಸ್ಯೆ ಬಗೆಹರಿಸಲು ಸಾಧ್ಯವಿದೆಯೇ ಅಥವಾ ಆ ಸಮಸ್ಯೆಯನ್ನು ಯಾವಾಗ ಪರಿಹಾರ ಮಾಡುತ್ತಾರೆ, ಇವರಿಗೆ ಎಷ್ಟು ದಿನಗಳಲ್ಲಿ ಸಹಾಯ ಮಾಡುವುದಕ್ಕಾಗುತ್ತದೆ ಎನ್ನುವುದನ್ನು ನಾಳೆ ಮೀಟಿಂಗ್ ಮಾಡಿ ಸದನಕ್ಕೆ ತಿಳಿಸುತ್ತೇನೆ.

**ಇ) ವಿಷಯ:- ರಾಜ್ಯದಲ್ಲಿ ಮಂಗಳಮುಖಿಯರು ಸಮಾಜದ ಮುಖ್ಯವಾಹಿನಿಯಲ್ಲಿ ಶೋಷಣೆಗಳಿಗೆ ಒಳಪಡುತ್ತಿರುವುದರಿಂದ ಅವರ ಬದುಕನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಲು ಮತ್ತು ಸದರಿಯವರ ಮೇಲೆ ನಡೆಯುತ್ತಿರುವ ಶೋಷಣೆಯನ್ನು ತಪ್ಪಿಸಲು ಪ್ರತ್ಯೇಕ ನಿರ್ದೇಶನಾಲಯವನ್ನು ಹಾಗೂ ಗೃಹ ಇಲಾಖೆಯಲ್ಲಿ ಪ್ರತ್ಯೇಕ ಸೆಲ್ ಅನ್ನು ಸ್ಥಾಪಿಸುವ ಕುರಿತು.**

- - - - -

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ವಂದನೆಗಳು. ಇವತ್ತು ಪ್ರಪಂಚದಲ್ಲಿ ಅತಿ ದೊಡ್ಡ ಲಿಖಿತ ಸಂವಿಧಾನ ನಮ್ಮದು. ಎಲ್ಲಾ ಭಾರತೀಯರಿಗೆ ಈ ಸಂವಿಧಾನ ಒಂದು ರಕ್ಷಾ ಕವಚ ಎಂದು ಹೇಳಿದರೆ ತಪ್ಪಾಗುವುದಿಲ್ಲ.

(ಮುಂದು)

(358) 12.3.2026 4.50 ಪಿಕೆ:ಕೆಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು)**

ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಸರ್ವರಿಗೂ ಸಮಬಾಳು-ಸರ್ವರಿಗೂ ಸಮಪಾಲು ಕೊಡಬೇಕು ಎನ್ನುವ ನಿಟ್ಟಿನಲ್ಲಿ ಆಯಾ ಸರ್ಕಾರಗಳು ಎಲ್ಲಾ ಪ್ರಜೆಗಳಿಗೋಸ್ಕರ ಕೆಲಸ ಮಾಡಿರುವುದನ್ನು ನಾವು ನೋಡಿದ್ದೇವೆ. ಸ್ವಾತಂತ್ರ್ಯ ಬಂದನಂತರ ಈ ದೇಶದಲ್ಲಿರುವ ಕೆಲವು ಶೋಷಿತ ಸಮುದಾಯಗಳನ್ನು ಗುರುತಿಸುವ ಕೆಲಸ ಮಾಡಿದ್ದೇವೆ. 30-40 ವರ್ಷದ ಹಿಂದೆ ಕೂಡ, ಶೋಷಣೆಗೆ ಒಳಗಾದವರನ್ನು ಊರಿನಿಂದಲೇ ಹೊರಗೆ ಹಾಕುತ್ತಿದ್ದರು. ಬಾವಿಯನ್ನು ಮುಟ್ಟುವುದಕ್ಕೆ ಬಿಡುತ್ತಿರಲಿಲ್ಲ, ದೇವಸ್ಥಾನದ ಒಳಗೆ ಬಿಡುತ್ತಿರಲಿಲ್ಲ, ಮನೆಯೊಳಗೆ ಬರುವ ಹಾಗಿರಲಿಲ್ಲ. ಗೆರಟೆ ಚಿಪ್ಪಿನಲ್ಲಿ ಅವರಿಗೆ ನೀರು ಕೊಡುವಂಥದ್ದು. ತಲೆಯಲ್ಲಿ ಮುಟ್ಟೆಲೆಯನ್ನು ಇಟ್ಟು, ತಿಂದು ಬಿಟ್ಟ ಎಂಜಲು ಎಲೆಯಲ್ಲಿ ಊಟ ಮಾಡುವಂಥದ್ದು, ಈ ರೀತಿ ಅತ್ಯಂತ ಶೋಷಣೆಗೆ ಒಳಗಾದ ಸಮುದಾಯವನ್ನು ಮುಖ್ಯ ವಾಹಿನಿಗೆ ತರಬೇಕಾಗಿದ್ದರೆ ಅವರಿಗೆ ಶಿಕ್ಷಣ ಕೊಟ್ಟರು, ಅವರಿಗೆ ಬೇಕಾದ ಕಾನೂನು ರಚನೆ ಮಾಡಿದರು. ಅವರಿಗೆ ವಸತಿ, ಉದ್ಯೋಗ ಕೊಡುವಂಥದ್ದು ಈ ರೀತಿ ಅವರಿಗೆ ಎಲ್ಲವನ್ನೂ ಕೊಟ್ಟು ಅವರನ್ನು ಮುಖ್ಯ ವಾಹಿನಿಗೆ ತರುವಂತಹ ಕೆಲಸ ಮಾಡಿದ ಪರಿಣಾಮ ಇವತ್ತು ಆ ಸಮುದಾಯ ನಮ್ಮೆಲ್ಲರಲ್ಲಿ ಒಂದಾಗಿ, ಗೌರವಯುತವಾಗಿ ಬಾಳುವಂಥದ್ದು ಆಯಿತು. ಇವತ್ತು ಅತ್ಯಂತ ಶೋಷಣೆ ಒಳಗಾದ, ಶೋಷಣೆಯಲ್ಲಿ ಶೋಷಣೆಗೆ ಒಳಗಾದ ಸಮಾಜ ಎಂದರೆ ಮಂಗಳಮುಖಿಯರ ಸಮಾಜ. ಎರಡು ರೂಪ ಒಂದು ಜೀವ. ಅವರು ನಮ್ಮಂಥ ತಂದೆ ತಾಯಿಗಳು ಹುಟ್ಟಿಸಿದ ಮಕ್ಕಳು. ಅವರದೇನೂ ತಪ್ಪಿರುವುದಿಲ್ಲ. ಅವರ ಬದುಕು ಯಾವರೀತಿ ಇದೆ? ಇದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. 10-11 ವರ್ಷಗಳ ತನಕ ಅವರ ಬದುಕು

ಸರಿಯಾಗಿರುತ್ತದೆ. ಮನೆಯಲ್ಲಿ ಅವರನ್ನು ತಂದೆ ತಾಯಿಗಳು ಕೂಡ ಚೆನ್ನಾಗಿ ನೋಡಿಕೊಳ್ಳುತ್ತಾರೆ. ನಂತರ ಅವರಲ್ಲಿ ಆಗುವ ದೈಹಿಕ ಬದಲಾವಣೆಯಿಂದ, ಅವರು ಗಂಡು ಮಕ್ಕಳ ಜೊತೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ, ಹೆಣ್ಣು ಮಕ್ಕಳ ಜೊತೆ ಇರಬೇಕು ಎಂದೆನಿಸುತ್ತದೆ. ಬಳೆ ಹಾಕಬೇಕು, ಸೀರೆ ಉಡಬೇಕು, ಹೆಣ್ಣು ಮಕ್ಕಳ ಹತ್ತಿರ ಮಾತನಾಡಬೇಕು ಎಂದೆನಿಸುತ್ತದೆ. ಅವರ ಭಾವನೆಗಳನ್ನು ಯಾರ ಹತ್ತಿರವೂ ಹೇಳಿಕೊಳ್ಳುವುದಕ್ಕೆ ಅಗದ ಸ್ಥಿತಿ ಅವರದ್ದಾಗಿರುತ್ತದೆ. ತಂದೆ ತಾಯಿಗಳಿಗೆ, ನೀವು ಗಂಡು ಹುಡುಗರ ಹತ್ತಿರ ಏಕೆ ಹೋಗುತ್ತೀರಿ ಎಂದು ಬೈಯುತ್ತಾರೆ. ಕೆಲವರು ಅವರ ಹತ್ತಿರ ಮಾತನಾಡುವುದಕ್ಕೆ ಬರುವುದಿಲ್ಲ. ಶಾಲೆಗೆ ಹೋದರೆ ಸ್ನೇಹಿತರು ಇರುವುದಿಲ್ಲ. 15-16 ವರ್ಷದವರಾದಾಗ ಅವರ ಬದುಕು, ಕುಕ್ಕರ್‌ನಲ್ಲಿ ತರಕಾರಿ ಹಾಕಿ, ಅದು ಬೆಂದು ಸ್ಫೋಟಗೊಳ್ಳುವ ರೀತಿಯಲ್ಲಿ ಆಗಿರುತ್ತದೆ. ಕೆಲವು ತಂದೆ ತಾಯಿಗಳೇ ಅವರನ್ನು ಮನೆಯಿಂದ ಹೊರಗೆ ಹಾಕುತ್ತಾರೆ. ಇನ್ನೂ ಕೆಲವರು ಮನೆ ಒಳಗೆ ಕೂರಿಸುತ್ತಾರೆ, ಹೊರಗೆ ಹೋಗುವುದಕ್ಕೆ ಬಿಡುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರು ಅವರಂಥ ಮನಸ್ಥಿತಿಯಲ್ಲಿರುವವರನ್ನು ಹುಡುಕಿಕೊಂಡು ಹೋಗಿ ಜೀವನ ಮಾಡುತ್ತಾರೆ. ಶೋಷಣೆಯಲ್ಲಿ ಶೋಷಣೆಗೆ ಒಳಗಾಗುತ್ತಾರೆ. ದೈಹಿಕವಾಗಿ ಬದಲಾವಣೆ ಆಗಿರಬಹುದು. ಅವರ ದೇಹದಲ್ಲಿ ಯಾವ ಅಂಗ ಇದೆ, ಯಾವ ಅಂಗ ಇಲ್ಲ ಎನ್ನುವುದು ಗೊತ್ತಿಲ್ಲ. ಆದರೆ ಆ ಜೀವಕ್ಕೆ ಹಸಿವು ಇರುತ್ತದೆ. ಅವರಿಗೆ ಹಸಿವಾದಾಗ ಅವರು ಏನು ಮಾಡಬೇಕು? ಭಿಕ್ಷೆ ಬೇಡಬೇಕು ಇಲ್ಲದೇ ಇದ್ದರೆ ಸೆಕ್ಸ್ ವರ್ಕ್ ಮಾಡಬೇಕು. ನನಗೆ ಅವರ ಬಗ್ಗೆ ಬಹಳಷ್ಟು ವಿಷಯಗಳು ಗೊತ್ತಿರಲಿಲ್ಲ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಹೀಗೆ ಒಂದು ಸಲ ಮಾತನಾಡಿ, ಅವರಿಗೆ ಏನೂ ಕೊಡುವುದಿಲ್ಲವೇ ಎಂದು ಕೇಳಿದಕ್ಕೆ ಅವರು, ಅವರಿಗೆ ತಿಂಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡೋಣ ಎಂದು ಹೇಳಿದರು. ನಂತರ ತಿಂಗಳಿಗೆ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟರು. ನನಗೆ ಮಂಗಳಮುಖಿಯರ ಬದುಕಿನ ಬಗ್ಗೆ ಅಷ್ಟು ದೊಡ್ಡ ಕಲ್ಪನೆ ಇರಲಿಲ್ಲ. ಮಂಗಳಮುಖಿಯರು ಎಂದರೆ ನಮ್ಮ ಮನೆಗಳಿಗೆ ಮಂಗಳ ಹಾಡುವುದಕ್ಕೆ ಬರುತ್ತಿದ್ದರು. ಎಲ್ಲಾದರೂ ಒಳ್ಳೆಯ ಕೆಲಸವಾದರೆ, ಮಗು ಹುಟ್ಟಿದ್ದರೆ ಅಲ್ಲಿಗೆ ಬಂದು ಹರಸುತ್ತಾರೆ. ಶುಭ ಕೆಲಸಕ್ಕೆ ಹೋದರೆ ದುಡ್ಡು ಕೊಡುತ್ತಾರೆ. ಕಣ್ಣು ಮುಚ್ಚಿ ನಮಗೆ ಹರಸುವಂಥದ್ದು ಮಾಡುತ್ತಾರೆ. ನಗು ನಗುತ್ತಾ ಇರುತ್ತಾರೆ. ಈ ಸಮಾಜದಲ್ಲಿ ಅವರಷ್ಟು ಕನಿಷ್ಟ ಬಾಳು ಯಾರದೂ ಇಲ್ಲ. ವಿದ್ಯೆ ಇದ್ದರೆ ಕೆಲಸವಿಲ್ಲ, ವಿದ್ಯೆ ಇದ್ದರೂ ಅವರಿಗೆ ಕೆಲಸ ಸಿಗುವುದಿಲ್ಲ. ಭಿಕ್ಷೆ ಬೇಡುತ್ತಾರೆ. ನಾನು ಅವರ "ಶಿವಲೀಲಾ" ಎನ್ನುವ ಸಿನಿಮಾ ನೋಡಿದೆ. ಬಹಳಷ್ಟು ವಿಷಯಗಳು ನನಗೆ ಗೊತ್ತಿರಲಿಲ್ಲ. ಒಬ್ಬೊಬ್ಬರ ಕತೆ ಕೇಳಿದರೆ ಕರುಳು ಕಿತ್ತು ಬರುತ್ತದೆ. ಮೆಜೆಸ್ಟಿಕ್‌ನಲ್ಲಿ ಆ ದಂಧೆ ಮಾಡಿದರು, ಕಿಸೆಯಿಂದ ದುಡ್ಡು ಕಿತ್ತುಕೊಂಡು ಹೋದರು ಎಂದು ಹೇಳುತ್ತೇವೆ. ಹಾಗಾದರೆ ಅವರು ಏನು ಮಾಡಬೇಕು? ಕೆಟ್ಟವರು ಎಲ್ಲಾ ಸಮಾಜಗಳಲ್ಲೂ ಇರುತ್ತಾರೆ. ಕಣ್ಣು, ಕಾಲು, ಬಾಯಿ ಎಲ್ಲಾ ನೆಟ್ಟಗಿರುವವರೂ ಕೂಡ ಕೆಟ್ಟವರಾಗಿರುತ್ತಾರೆ. ಅವರಲ್ಲೂ ಕೂಡ ಶಿಕ್ಷಣ ಇಲ್ಲ. ಯಾರೊಟ್ಟಿಗೆ ಬದುಕುವಂತಹ ವ್ಯವಸ್ಥೆ ಇಲ್ಲ, ಮನೆ ಇಲ್ಲ. ಅವರಿಗೆ ಬಾಡಿಗೆ ಮನೆ ಕೂಡುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಅವರ ಬದುಕು ಹೇಗಿದೆ ಎಂದರೆ,

ಒಬ್ಬಳನ್ನು ಸ್ಮಶಾನಕ್ಕೆ ಕರೆದುಕೊಂಡು ಹೋಗಿ ನಾಲ್ಕೈದು ಜನ ಸೇರಿ ರೇಪ್ ಮಾಡಿ ಬಟ್ಟೆಯನ್ನು ಎತ್ತಿಕೊಂಡು ಹೋಗಿದ್ದಾರೆ. ಇನ್ನೊಬ್ಬಳನ್ನು ಲಾಡ್ಜ್‌ಗೆ ಕರೆದುಕೊಂಡು ಹೋಗಿ, 7-8 ದಿವಸ ಕೂಡಿ ಹಾಕಿ ಪ್ರತಿದಿನ ಒಬ್ಬೊಬ್ಬರು ಬರುತ್ತಿದ್ದರಂತೆ. ಒಬ್ಬಳು ಮೆಜೆಸ್ಟಿಕ್‌ನಲ್ಲಿ ನಿಂತಿದ್ದವಳು ತನ್ನ ಕೆಲಸ ಮುಗಿಸಿಕೊಂಡು ಹೋಗುತ್ತಿರುವಾಗ ಪೋಲೀಸ್‌ನವರು ಠಾಣೆಗೆ ಕರೆದುಕೊಂಡು ಹೋಗಿ, ರಾತ್ರಿಯೆಲ್ಲ ಇಟ್ಟುಕೊಂಡು, ಟಾಯ್ಲೆಟ್ ತೊಳೆಸಿ ಕಳುಸಿಕೊಟ್ಟಿದ್ದರಂತೆ. ಇವತ್ತು ಸರ್ಕಾರ ಅವರಿಗೆ ಏನು ಮಾಡಿದೆ? ಕೆಲವರಂತೂ 10-20-30 ರೂಪಾಯಿಗೆ ತಮ್ಮ ಬಾಳನ್ನು ಕಳೆದುಕೊಳ್ಳುವಂತಹ ಕೆಲಸವನ್ನು ಮಾಡಿದ್ದಾರೆ. ನಮ್ಮಲ್ಲಿ ವೋಟರ್ ಲಿಸ್ಟ್ ಇದೆ. ಈ ಸಲ ಆ ವೋಟ್ ಲಿಸ್ಟ್‌ನಲ್ಲಿ "ಇತರರು" ಎನ್ನುವ ಹೊಸ ಕಾಲಂ ಇದೆ. ಅದರಲ್ಲಿ ಅವರು ನೋಂದಣಿ ಮಾಡಿಕೊಳ್ಳುತ್ತಾರೆ. ಸರ್ಕಾರದ ಅಂಕಿಅಂಶಗಳ ಪ್ರಕಾರ ಅವರ ಸಂಖ್ಯೆ 70,000. ವೋಟರ್ ಲಿಸ್ಟ್‌ನಲ್ಲಿ 4,700 ಜನ ನೋಂದಣಿ ಆಗಿದ್ದಾರೆ. 2013ರಲ್ಲಿ 2,100 ಜನ ನೋಂದಣಿಯಾಗಿದ್ದರು. ವಿಧಾನಸಭೆ ಓಟು ಹಾಕಿದ್ದು ಕೇವಲ 49 ಜನ. 2014ರಲ್ಲಿ 3,890 ಜನ ನೋಂದಣಿಯಾಗಿದ್ದರೆ, ಲೋಕಸಭೆಗೆ 167 ಜನ ಓಟ್ ಮಾಡಿದ್ದರು. ಅದೇರೀತಿ 2018ರಲ್ಲಿ ವಿಧಾನಸಭೆಯ ವೋಟರ್ಸ್ ಲಿಸ್ಟ್‌ನಲ್ಲಿ 4844 ಜನ ಇದ್ದರೆ ಆ ಪೈಕಿ 462 ಜನ ಮತ ಹಾಕಿದ್ದಾರೆ. ಐ.ಡಿ. ಕಾರ್ಡ್ ಸಹ ಕೆಲವರಿಗೆ ಕೊಟ್ಟಿಲ್ಲ. ಮಾನ್ಯ ಸಭಾಪತಿಗಳೆ, ಶಿವಲೀಲಾ ಎನ್ನುವ ಸಿನಿಮಾದಲ್ಲಿ, ಪದ್ಮಶ್ರೀ ಪ್ರಶಸ್ತಿ ವಿಜೇತರಾದ ಮಂಜಮ್ಮ ಜೋಗತಿ ಎನ್ನುವವರು ಪಾತ್ರ ಮಾಡಿದ್ದಾರೆ. ಸದನದಲ್ಲಿ ಉಪ ಮುಖ್ಯಮಂತ್ರಿಗಳು ಇದ್ದಾರೆ. ಆ ಒಂದು ಸಮಾಜಕ್ಕೆ ನ್ಯಾಯ ಒದಗಿಸಬೇಕು ಎಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ದೇಶದಲ್ಲೇ, ಮೊದಲನೆ ಸಲ ಕರ್ನಾಟಕದ ಮಂಗಳಮುಖಿಯಾದ ಮಂಜಮ್ಮ ಜೋಗತಿಯವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಲಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಅವರಿಗೆ ಸಂಬಂಧಪಟ್ಟ ಪಾಠ ಇದೆ. ಕನ್ನಡದಲ್ಲಿ "ನಡುವೆ ಸುಳಿವ ಹೆಣ್ಣು" ಮತ್ತು ಇಂಗ್ಲಿಷ್‌ನಲ್ಲಿ "Manjunath to Manjamma Jogati ಎನ್ನುವ ಪಾಠ ಇದೆ. ಸುಮಾರು 40 ವರ್ಷದಿಂದ ಸಾಹಿತ್ಯ, ಕಲೆಗೆ ಸಲ್ಲಿಸಿದ ಸೇವೆಗೆ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಅವರೆಲ್ಲಾ ಸೇರಿ ಪ್ರಥಮ ಬಾರಿಗೆ "ಶಿವಲೀಲಾ" ಎನ್ನುವ ಸಿನಿಮಾ ತೆಗೆದರು. ನಾಲ್ಕು ಜನ ಮಂಗಳಮುಖಿಯರು ಅದರಲ್ಲಿ ಅಭಿನಯಿಸಿದರು. ನಮ್ಮಲ್ಲೇ ಅನೇಕ ಜನ ಆ ಸಿನಿಮಾವನ್ನು ನೋಡಿದ್ದಾರೆ. ಸಿನಿಮಾದ ಕೊನೆಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಕೊಡುವುದಕ್ಕೆ ನಮ್ಮ ಹತ್ತಿರ ಉತ್ತರವೇ ಇಲ್ಲ. ಸಿನಿಮಾ ತೆಗೆಯುವಾಗ ಸಹ ಅವರಿಗೆ ಕಷ್ಟ ಕೊಟ್ಟಿದ್ದಾರೆ. ಯಾರೂ ಕೂಡ ಬಾಡಿಗೆ ಮನೆ ಕೊಡುತ್ತಿರಲಿಲ್ಲವಂತೆ. ಅವರ ಟೆಂಟನ್ನು ಸುಟ್ಟು ಹಾಕಿದ್ದರು. ಡಬ್ಬಿಂಗ್‌ಗೆ ಹೋದರೆ ಅಲ್ಲಿ ಒಳಗೆ ಬಿಡುತ್ತಿರಲಿಲ್ಲವಂತೆ. ಆ ಸಿನಿಮಾ ತೆಗೆದವನು ಮುಳುಗಿ ಹೋಗಿದ್ದಾನೆ. ಮಾನ್ಯ ಸಭಾಪತಿಗಳೆ, ಇತ್ತೀಚಿಗೆ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಸಮಾರಂಭದಲ್ಲಿ ತಾವು ಒಂದು ಮಾತು ಹೇಳಿದಿರಿ. ಸಿನಿಮಾ ಸಮಸ್ಯೆಗಳ ಕುರಿತು ಚರ್ಚೆ ನಡೆಯಬೇಕು ಎಂದು ಹೇಳಿದ್ದಿರಿ. ಮುಖ್ಯಮಂತ್ರಿಗಳು ಕೂಡ, ಸಮಾಜಮುಖಿ ಸಿನಿಮಾ ಮಾಡುವವರಿಗೆ ನಮ್ಮ ಸರ್ಕಾರ ಸಹಕಾರ ಕೊಡಲು ಸದಾ ಸಿದ್ಧವಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಸದನದಲ್ಲಿ ಸಭಾನಾಯಕರು, ಉಪ ಮುಖ್ಯಮಂತ್ರಿಗಳು, ಗೃಹ ಸಚಿವರುಗಳಿದ್ದಾರೆ. ಈ

ಸಿನಿಮಾವನ್ನು ಪ್ರತಿಯೊಂದು ಮಕ್ಕಳಿಗೆ ತೋರಿಸುವ ವ್ಯವಸ್ಥೆ ಮಾಡಬೇಕು. ನಾವು ಚಿಕ್ಕವರಿದ್ದಾಗ ಒಳ್ಳೊಳ್ಳೆ ಸಮಾಜಮುಖಿ ಸಿನಿಮಾಗಳನ್ನು ತೋರಿಸುತ್ತಿದ್ದರು. ಈ ಸಮಾಜದಲ್ಲಿ ಆ ವರ್ಗ ಬದುಕುವಂತಹ ಸ್ಥಿತಿಯ ಬಗ್ಗೆ ಶಾಲೆಗಳಲ್ಲಿ ತಿಳಿಸುವಂತಾಗಬೇಕು. ಸರ್ಕಾರ ಒಂದು ಸುತ್ತೋಲೆ ಹೊರಡಿಸಿ ಆ ಸಿನಿಮಾ ನೋಡುವಂತಹ ವ್ಯವಸ್ಥೆ ಮಾಡಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

(ಮುಂದು)

(359) 12-3-2026 5.00 ಡಿಎಸ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**

ಅದೇ ರೀತಿ ಕರ್ನಾಟಕ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿ ಅವರನ್ನೆಲ್ಲಾ ಇಟ್ಟುಕೊಂಡು ಬಹಳ ದೊಡ್ಡ ಹೋರಾಟ ಮಾಡಿದೆ. ಮಾಜಿ ಶಾಸಕರಾದ ಶ್ರೀ ಸಂಪಂಗಿಯವರು ಆ ಹೋರಾಟದ ನೇತೃತ್ವವನ್ನು ವಹಿಸಿದ್ದರು. ಈ ಸರ್ಕಾರ ಅಲ್ಲಿಗೆ ಬಂದಿತ್ತು. ವಾಸಿಸಲು ನಿವೇಶನ ಮಂಜೂರು ಮಾಡಬೇಕೆಂದು ಇವರು ಬೇಡಿಕೆಗಳನ್ನು ಇಟ್ಟಿದ್ದರು. ಇವರಿಗೆ ನಿವೇಶನ ಕೊಡುವಂತಹ ಕೆಲಸ ಆಗಬೇಕು. ಇವರು ವಿದ್ಯಾಭ್ಯಾಸ ಮಾಡಲು ಪ್ರತ್ಯೇಕವಾದ ಶಾಲಾ-ಕಾಲೇಜುಗಳನ್ನು ತೆರೆಯುವುದು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವಂಥದ್ದಾಗಬೇಕು. ಇವರಿಗೆ ಆಯಕಟ್ಟಿನ ಪ್ರದೇಶಗಳಲ್ಲಿ ಶೌಚಾಲಯವನ್ನು ನಿರ್ಮಿಸುವುದಾಗಬೇಕು. ಅವರಿಗೆ ವಯೋಮಿತಿಯನ್ನು ಆಧರಿಸಿ ಮಾಸಾಶನವನ್ನು ಮಂಜೂರು ಮಾಡಬೇಕು. ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಅರ್ಹತೆಗೆ ಅನುಗುಣವಾಗಿ ಉದ್ಯೋಗ ಸಿಗುವಂತೆ ಮೀಸಲಾತಿ ನೀಡಬೇಕು. ಇವರಿಗೆ ಆಧಾರ್ ಕಾರ್ಡ್, ಮತದಾರ ಪಟ್ಟಿಯಲ್ಲಿ ನೋಂದಣಿ ಮತ್ತು PAN (Permanent Account Number) ಕಾರ್ಡ್ ನೀಡುವಂಥದ್ದಾಗಬೇಕು. ಒಬ್ಬರು ವಿಮಾನ ನಿಲ್ದಾಣಕ್ಕೆ ಹೋದರೆ ವಿಮಾನ ಹತ್ತುವುದಕ್ಕೆ ಬಿಟ್ಟಿಲ್ಲ. ಟಿಕೆಟ್ ಇದ್ದರೂ ಕೂಡ ವಿಮಾನ ನಿಲ್ದಾಣ ಒಳಗೆ ಬಿಡಲಿಲ್ಲ. ಇವರ ಐ.ಡಿ. ಕಾರ್ಡ್ ನೋಡಿ ಏನೆಂದು ಗೊತ್ತಾಗದೆ ಒಳಗೆ ಹೋಗುವುದಕ್ಕೆ ಬಿಟ್ಟಿಲ್ಲ. ಮಂಗಳಮುಖಿಯರು ಅಭಿನಯಿಸಿರುವ ಚಿತ್ರಕ್ಕೆ ಸಬ್ಸಿಡಿಯನ್ನು ಕೊಡುವ ಕೆಲಸ ಮಾಡಬೇಕು. ಆ ಚಿತ್ರ ತೆಗೆದವರು ಪೂರ್ತಿಯಾಗಿ ಪಾಪರ್ ಆಗಿದ್ದಾರೆ. ಅವರಿಗೂ ಒಂದು ಮೊತ್ತ ಕೊಡುವಂತಹ ಕೆಲಸ ಈ ಸರ್ಕಾರದಿಂದ ಆಗಬೇಕು. ಆನಂತರ ಶ್ರೀಮತಿ ಮಂಜಮ್ಮ ಜೋಗತಿಯವರು 2021 ರಲ್ಲಿ ಪ್ರವಾಸೋದ್ಯಮ ಇಲಾಖೆಗೆ ಮತ್ತು ಹೊಸಕೋಟೆ ಜಿಲ್ಲಾಧಿಕಾರಿಯವರಿಗೆ ಮನವಿಯನ್ನು ಕೊಟ್ಟಿದ್ದಾರೆ. ಪದ್ಮಶ್ರೀ ಮಾತಾ ಮಂಜಮ್ಮ ಜೋಗತಿ ಪ್ರತಿಷ್ಠಾನ ಎಂದು ಅದರಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಅಲ್ಲಿ ಜಾತಿ, ಮತ, ಧರ್ಮ, ಲಿಂಗ ಯಾವುದನ್ನು ಲೆಕ್ಕಿಸದೆ ಸಮಾಜದ ಒಳಿತಿಗಾಗಿ ಚಟುವಟಿಕೆಗಳು ಮಾಡತಕ್ಕಂಥದ್ದು. ಸಮಾಜಮುಖಿ ಕಾರ್ಯಕರ್ತರಿಗೆ ಮಾಡಬೇಕಾದ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದಾರೆ. ಮಂಗಳಮುಖಿಯರಿಗೆ ಕಲೆ, ಸಾಹಿತ್ಯ, ಈ ರೀತಿ ಕಲಿಸಿಕೊಡುವಂತಹ ಒಂದು ಪ್ರತಿಷ್ಠಾನವನ್ನು ಮಾಡಬೇಕೆಂದು ಅವರು ಕೇಳಿಕೊಂಡಿದ್ದಾರೆ. ಇಲಾಖೆಯಲ್ಲಿ ಅವರಿಗೆ ಒಪ್ಪಿ ಕೊಡುತ್ತೇವೆಂದು ಹೇಳಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಹಿಂಭಾಗ ಮತ್ತು ಮಲ್ಲಪ್ಪನ ಗುಡಿ

ಪಂಚಾಯಿತಿ ಸರ್ವೆ ನಂ.229 ಜಾಗದಲ್ಲಿ ಸುಮಾರು 2.7 ಎಕರೆಯನ್ನು ಇಲಾಖೆಯಿಂದ ಸಮಾಜದ ಕಾರ್ಯಕ್ಕೆ ನೀಡಬೇಕೆಂದು ಕೋರಿದ್ದಾರೆ. ಅವರು ಕೊಟ್ಟಂತಹ ಪತ್ರ ಕೂಡ ಸರ್ಕಾರದ ಮುಂದಿದೆ. ಅವರಿಗೆ ಪ್ರತಿಷ್ಠಾನ ಮಾಡುವುದಕ್ಕೆ ಅವಕಾಶವನ್ನು ಈ ಸರ್ಕಾರ ಕೊಡಬೇಕು. ಅದೇ ರೀತಿಯಲ್ಲಿ ನಮ್ಮ ಮಾನ್ಯ ಗೃಹ ಸಚಿವರು ಕೊಟ್ಟಿರುವ ಉತ್ತರದಲ್ಲಿ ನಾನು ನೋಡಿದ್ದೇನೆ. ಅವರಿಗೆ ಪೂರಕವಾಗುವಂತಹ ಶಕ್ತಿ ಕೊಡುವಂತಹ ಎಲ್ಲಾ ಕೆಲಸಗಳನ್ನು ನಾವು ಮಾಡುತ್ತೇವೆ ಎಂದು ಉಲ್ಲೇಖ ಮಾಡಿದ್ದಾರೆ. ಮಾನ್ಯ ಸಚಿವರು ಇಂತಹ ಸಮಾಜಮುಖಿ ಕೆಲಸದಲ್ಲಿ ಮುಂದಾಳತ್ವ ಇಟ್ಟುಕೊಂಡು ಅನೇಕ ಕೆಲಸಗಳನ್ನು ಮಾಡುತ್ತಿದ್ದಾರೆ. ಆಸಿಡ್ ದಾಳಿಯಾದವರಿಗೆ ನ್ಯಾಯ ಒದಗಿಸುವಂತಹ ಕೆಲಸ ಮಾಡಿದ್ದಾರೆ. ಈಗಾಗಲೇ ಗೃಹಲಕ್ಷ್ಮಿ ಯೋಜನೆಯಿಂದ ಅವರಿಗೆ ಸಿಗುವಂಥದ್ದು ಇದೆ. ನನ್ನ ಹತ್ತಿರ ಅಂಕಿ-ಅಂಶ ಇದೆ. 2,278 ಮಂಗಳಮುಖಿಯವರಿಗೆ ಗೃಹಲಕ್ಷ್ಮಿ ಯೋಜನೆ ಸಿಗುತ್ತಿದೆ. ಅವರಿಗೆ 30,000 ರೂಪಾಯಿಗಳಷ್ಟು ಪ್ರೋತ್ಸಾಹ ಧನವನ್ನು ಸರ್ಕಾರ ಕೊಡುತ್ತಿದೆ. ಸುಮಾರು 12 ವರ್ಷಗಳಿಂದ ಕೇವಲ 10,000 ಜನರಿಗೆ ಮಾತ್ರ ಕೊಡುವುದಕ್ಕೆ ಆಗಿದೆ. ಈ ಮೊತ್ತ ಜಾಸ್ತಿಯಾಗಬೇಕು, ಜಾಸ್ತಿ ಜನರಿಗೆ ಸಿಗಬೇಕು. ಅವರು ಆರ್ಥಿಕವಾಗಿ ಸದೃಢರಾಗಬೇಕು. ಅವರಿಗೆ ಕೆಲಸ ಸಿಗಬೇಕು. ನಾನು ಮಾನ್ಯ ಸಭಾಪತಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ಒಬ್ಬ ಮಂಗಳಮುಖಿಯವರಿಗೆ ವಿಧಾನ ಪರಿಷತ್ತಿನಲ್ಲಿ ಕೆಲಸ ಕೊಡುವಂಥದ್ದನ್ನು ಮಾಡಿದ್ದಾರೆ. ಅವರಿಗೆ ಎಲ್ಲಾ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ನೀವು ಅವರ ಹತ್ತಿರ ಹೋಗಿ ಕೇಳಿ, ಈ ಸೌಲಭ್ಯ ಒಬ್ಬರಿಗೂ ಕೂಡ ಸಿಕ್ಕಿಲ್ಲ. ಯಾವ ಮಂಗಳಮುಖಿಯರಿಗೂ ಕೂಡ ಮನೆ ಸಿಕ್ಕಿಲ್ಲ. ಆದ್ದರಿಂದ ಇದರ ಬಗ್ಗೆ ಕೂಡ ಗಮನಹರಿಸಬೇಕೆಂದು ವಿನಂತಿ ಮಾಡುತ್ತೇನೆ. ನಿಜವಾಗಿಯೂ ಅವರಿಗೆ ನ್ಯಾಯ ಒದಗಿಸುವಂತಹ ಕೆಲಸ ಮಾಡದಿದ್ದರೆ ನಾವು ಕೂಡ ತಪ್ಪಿತಸ್ಥರು ಎಂದಾಗುತ್ತೇವೆ. ಅವರ ಬದುಕಿಗೆ ನ್ಯಾಯವನ್ನು ಒದಗಿಸಿಕೊಡಬೇಕು. ಏಕೆಂದರೆ, ಯಾರ ಹಣೆಬರಹವನ್ನು ಬದಲಾಯಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅವರಿಗೆ ನಾವು ಉತ್ತಮವಾದ ಮಾರ್ಗದರ್ಶನವನ್ನು ಕೊಡಬೇಕು. "ನಿನಗೆ ಅವಕಾಶ ಸಿಕ್ಕಿದಾಗ ಸ್ವಾರ್ಥಿಯಾಗಬೇಡ, ಸಾರಥಿಯಾಗು" ಎಂದು ಪರಮಾತ್ಮ ಹೇಳುತ್ತಾನೆ. ಅನೇಕ ಸಾರಥಿಗಳು ಸದನದಲ್ಲಿ ಕುಳಿತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ತಾವು ಉನ್ನತ ಸ್ಥಾನದಲ್ಲಿ ಅಲ್ಲಿ ಕುಳಿತ್ತಿದ್ದೀರಿ. ಇಲ್ಲಿ ನಮ್ಮ ಸಭಾನಾಯಕರು, ಮಾನ್ಯ ಉಪ ಮುಖ್ಯಮಂತ್ರಿಯವರು, ಮಾನ್ಯ ಗೃಹ ಸಚಿವರು, ಮಾನ್ಯ ಆರೋಗ್ಯ ಸಚಿವರು, ಅನೇಕ ಸಚಿವರುಗಳು ಇದ್ದಾರೆ. ನಾವೆಲ್ಲಾ ಸದಸ್ಯರುಗಳು ಸೈನಿಕರಾಗಿ ನಿಮ್ಮ ಜೊತೆಯಲ್ಲಿದ್ದೇವೆ. ಸಾರಥಿತನವನ್ನು ಹೊತ್ತು ಅವರಿಗೆ ನ್ಯಾಯವನ್ನು ಒದಗಿಸುವಂತಹ ಕೆಲಸ ಖಂಡಿತವಾಗಿಯೂ ಬಜೆಟ್‌ನಲ್ಲಿ ಒದಗಿಸುವಂತಹ ಕೆಲಸ ಆಗಬೇಕು. ಬಜೆಟ್‌ನಲ್ಲಿ 'ಶಿವಲೀಲಾ' ಸಿನಿಮಾಕ್ಕೆ ಅನುಕೂಲ ಮಾಡಿಕೊಡಬೇಕು. ಇದರ ಬಗ್ಗೆ ಸುತ್ತೋಲೆ ಹೊರಡಿಸಬೇಕು. ನಮ್ಮ ಮಕ್ಕಳಿಗೆ ಅವರ ಬದುಕಿನ ಬಗ್ಗೆ ಕಲ್ಪನೆ ಇಲ್ಲ. ಅವರ ತಪ್ಪೇ ಇಲ್ಲ, ಅವರು ಹೇಗೆ ಬದುಕುಬೇಕು?

**ಸಭಾಪತಿಯವರು:-** ಶ್ರೀಮತಿ ಭಾರತಿಶೆಟ್ಟಿಯವರೇ, ಮೊಟ್ಟ ಮೊದಲು ಕರ್ನಾಟಕ ರಾಜ್ಯದಲ್ಲಿ ವಿಧಾನ ಪರಿಷತ್ತಿನಲ್ಲಿ ಒಬ್ಬರನ್ನು ನೇಮಕಾತಿ ಮಾಡಿಕೊಂಡಿದ್ದೇವೆ. ಇಡೀ ರಾಜ್ಯದಲ್ಲಿ ಎಲ್ಲಿ ಕೊಟ್ಟಿದ್ದಾರೆ, ನಮ್ಮಲ್ಲಿ ಕೊಟ್ಟಿದ್ದೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಒಂದು ಪರ್ಸೆಂಟ್ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಮಾನ್ಯ ಗೃಹ ಸಚಿವರ ಇಲಾಖೆಯಲ್ಲಿ ಪೋಲೀಸ್ ಗಾಗಿ ಒಬ್ಬ ಹೆಣ್ಣುಮಗಳು ಆಯ್ಕೆಯಾಗುವಾಗ ನಾವು ಗಂಡು ಮಕ್ಕಳಿಗೆ ಮಾತ್ರ ಕೊಡುವುದು ಎಂದು ಹೇಳಿದರು. ಅವಳದ್ದು ಕೂಡ ರಿಪೋರ್ಟ್ ನನ್ನ ಹತ್ತಿರ ಇದೆ. ಕೊನೆಗೂ ಕೊಟ್ಟಿಲ್ಲ, ಅಂತಿಮ ಆಗುವಾಗ ಯಾವುದಾದರೂ ಕೊಕ್ಕೆ ಹಾಕಿ ನಿಲ್ಲಿಸಿಬಿಡುತ್ತಾರೆ. ಈ ರೀತಿ ಆಗಬಾರದು. ಅವರಿಗೆ ಮನೆಯಂತೂ ಕೊಡಲೇಬೇಕು. ಅವರು ಬದುಕುವುದಕ್ಕೆ ಕೆಲಸಗಳನ್ನು ಕೊಡುವಂಥದ್ದಾಗಬೇಕು, ಶ್ರೀಮತಿ ಮಂಜಮ್ಮ ಜೋಗತಿಯ ಹೆಸರಿನಲ್ಲಿ ಪ್ರತಿಷ್ಠಾನ ಒಂದು ಸ್ಥಾಪನೆಯಾಗಬೇಕು. 'ಶಿವಲೀಲಾ' ಸಿನಿಮಾವನ್ನು ನಮ್ಮ ಎಲ್ಲಾ ಮಕ್ಕಳು ನೋಡಿದರೆ ಸಮಾಜದಲ್ಲಿ ಯಾರಿದ್ದಾರೆ, ಯಾರು ಇಲ್ಲ ಎಂಬುದು ಗೊತ್ತಾಗುತ್ತದೆ. ಅವರ ಬಗ್ಗೆ ನನಗೆ ಏನು ಗೊತ್ತಿಲ್ಲ, ಅವರ ಬಗ್ಗೆ ನನಗೆ 2-3 ಅಂಶಗಳು ಮಾತ್ರ ಗೊತ್ತಿತ್ತು. ನಿಮಗೂ ಗೊತ್ತಿರುವುದಿಲ್ಲ, ಆ ಸಿನಿಮಾದಲ್ಲಿ ಕೊನೆಯ ಸೀನ್ ನೋಡಿದರೆ ಖಂಡಿತವಾಗಿಯೂ ನಿಮಗೆ ಯಾರಿಗೂ ಉತ್ತರ ಕೊಡುವುದಕ್ಕಾಗುವುದಿಲ್ಲ, ಆ ಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ. ಅವರಿಗೆ ನಾವೇನು ಮಾಡದೇ ಆಯಿತು, ನೋಡುತ್ತೇವೆ ಎಂದು ಹೇಳುತ್ತೇವೆ. ಅವರು ಎಷ್ಟು ನೋವು ತಿಂದುಕೊಂಡು ಚಪ್ಪಾಳೆ ತಟ್ಟಿ ನಗುತ್ತಾರೆ, ಅವರ ಮನಸ್ಸಿನಲ್ಲಿ ಎಷ್ಟು ನೋವು ಇರಬಹುದು, ಎರಡು ರೂಪ ಒಂದು ಜೀವ ಇಟ್ಟುಕೊಂಡಿರುವುದು ಅವರ ತಪ್ಪಾ? ಅವರದ್ದೇನು ತಪ್ಪು ಇದೆ, ಅವರು ಹೇಗೆ ಬದುಕಬೇಕು ಎಂಬುದು 'ಶಿವಲೀಲಾ' ಸಿನಿಮಾದಲ್ಲಿ ತೋರಿಸಿದ್ದಾರೆ, ಅವಳು ನೆಟ್ಟಗೆ ಬದುಕಬೇಕು ಎಂದು ಇದ್ದಳು, ಹಸಿವು ತಡೆದುಕೊಳ್ಳುವುದಕ್ಕಾಗುವುದಿಲ್ಲ ಏನು ಮಾಡುವುದು, ಹಣ ಕೇಳಿದರೆ ಹಣ ಕೊಡುವುದಿಲ್ಲ, ಅದಕ್ಕೆ ಆಟೋ ಡ್ರೈವರ್‌ನ ಕಿಸೆಗೆ ಕೈ ಹಾಕಿ ಹಣವನ್ನು ಎತ್ತಿಬಿಟ್ಟಳು. ಆ ಹೆಣ್ಣುಮಗಳು 3-4 ದಿನಗಳಿಂದ ಊಟ ಮಾಡಿಲ್ಲ, ಏನು ಮಾಡಬೇಕು? ಆದ್ದರಿಂದ ಇದಕ್ಕೆಲ್ಲಾ ಸಮಾಜ ಜವಾಬ್ದಾರಿ ಆಗಿರುತ್ತದೆ. ಸಮಾಜ ತಿರಸ್ಕಾರ ಮಾಡಿದೆ, ತಂದೆ-ತಾಯಿಯವರು ತಿರಸ್ಕಾರ ಮಾಡಿರುತ್ತಾರೆ, ನಮಗೆ ಅವರ ಬಗ್ಗೆ ಸರಿಯಾದ ಮಾಹಿತಿ ಗೊತ್ತಿಲ್ಲ. ಇವತ್ತು ಗೊತ್ತಾದ ನಂತರವೂ ಕೂಡ ಸುಮ್ಮನೆ ಕುಳಿತರೆ ಖಂಡಿತವಾಗಿಯೂ ನಮ್ಮನ್ನು ಯಾರು ಮೆಚ್ಚುವುದಿಲ್ಲ. ಮಹಾ ಸಾರಥಿಗಳೆಲ್ಲರೂ ಇದ್ದಾರೆ, ಅವರಿಗೂ ನಾನು ಕೈಮುಗಿದು ಬೇಡುತ್ತೇನೆ. ಇದೇ ಬಜೆಟ್‌ನಲ್ಲಿ ಅವರಿಗೆ ನ್ಯಾಯ ಒದಗಿಸಿಕೊಡಬೇಕು. 'ಶಿವಲೀಲಾ' ಸಿನಿಮಾದ ಬಗ್ಗೆ ಸುತ್ತೋಲೆ ಹೋಗಬೇಕು. ಸಮಾಜ ಜಾಗೃತಿಯಾಗಬೇಕು, ಶೋಷಿತ ವರ್ಗದವರು ಹೇಗೆ ನಮ್ಮ ಮುಂಚೂಣಿಗೆ ಬಂದು ಬಾಳ ಬದುಕುತ್ತಿದ್ದಾರೆ, ಅದೇ ರೀತಿ ಅವರು ಕೂಡ ನಮ್ಮಲ್ಲಿ ಒಬ್ಬರಾಗಿ ಬದುಕುವಂತಹ ವ್ಯವಸ್ಥೆ ಸಮಾಜದಲ್ಲಿ ಆಗಬೇಕು. ತಾವು ಇದ್ದೀರಿ, ತಾವು ಅನೇಕ ವಿಷಯಗಳಿಗೆ ನ್ಯಾಯವನ್ನು ಒದಗಿಸಿಕೊಟ್ಟಿದ್ದೀರಿ. ನಮ್ಮ ಸಭಾನಾಯಕರ ಬಗ್ಗೆ ನನಗೆ ಬಹಳ ಹೆಮ್ಮೆ ಇದೆ. ಇಂತಹ 2-3 ಕೆಲಸಗಳನ್ನು

ಹೇಳಿದ ಕೂಡಲೇ ತುರ್ತಾಗಿ ಅವರು ಮಾಡಿಕೊಟ್ಟಿದ್ದಾರೆ. ಕುಮುಟಾದಲ್ಲಿ ಆ ಶಾಲೆಗಳನ್ನು ತಕ್ಷಣವೇ ಮಾಡಿಕೊಟ್ಟಿದ್ದಾರೆ. ಮಾನ್ಯ ಗೃಹ ಸಚಿವರು ಮೊನ್ನೆ ಇಲ್ಲಿಗೆ ಬಂದು ಅಷ್ಟು ಚೆನ್ನಾಗಿ ಉತ್ತರ ಕೊಟ್ಟು ನಾನು ಮಾಡೇ ಮಾಡುತ್ತೇನೆ ಎಂದು ಹೇಳಿದರು. ಕಿರೀಟದ ಹಾಗೆ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಇದಕ್ಕೆ ನೇತೃತ್ವ ವಹಿಸಿಕೊಂಡು ನ್ಯಾಯವನ್ನು ಒದಗಿಸುವಂತಹ ಕೆಲಸವನ್ನು ದಯಮಾಡಿ ಮಾಡಬೇಕು. ಮಾಡದಿದ್ದರೆ ನಾನು ಇನ್ನೂ ದೊಡ್ಡ ಭಾಷಣವನ್ನು ಮಾಡುತ್ತಾ ಹೋಗುತ್ತೇನೆ. ಅವರು ಯಾರೇ ಆಗಿರಲಿ, ಎಲ್ಲಿಯವರೆಗೂ ನ್ಯಾಯ ಒದಗಿಸಿ ಕೊಡುವುದಿಲ್ಲವೋ, ಅಲ್ಲಿಯವರೆಗೆ ನಾನು ಸುಮ್ಮನೆ ಇರುವುದಿಲ್ಲ. ಅವರು 70,000 ಜನರಿದ್ದಾರೆ, 70,000 ಜನರಿಗೆ ನಾವು ನ್ಯಾಯ ಒದಗಿಸಿಕೊಡುವುದಕ್ಕಾಗುವುದಿಲ್ಲವೆಂದರೆ ಹೇಗೆ? ನಮಗೆಲ್ಲರಿಗೂ ಅವರ ಬಾಳಿನ ಅನುಭವವೇ ಇಲ್ಲ, ಅವರ ನೋವಿನ ಅನುಭವವೇ ಇಲ್ಲ. ಅವರು ಒಬ್ಬರಿಗೊಬ್ಬರು ಬಹಳಷ್ಟು ನೋವು ತಿನ್ನುತ್ತಿದ್ದರೂ ಕೂಡ ಅಲಂಕಾರ ಮಾಡಿಕೊಂಡು ಖುಷಿ ಖುಷಿಯಾಗಿ ಅವರು ಹಾರೈಕೆ ಮಾಡುವುದನ್ನು ನೋಡಿದರೆ ನನಗೆ ನಾಚಿಕೆಯಾಗುತ್ತಿತ್ತು. ಅವರು ನಮಗೆ ಒಳ್ಳೆಯದಾಗಲಿ ಎಂದು ಆಶೀರ್ವಾದ ಮಾಡಿ ಒಂದು ರೂಪಾಯಿ, ಹತ್ತು ರೂಪಾಯಿ ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಈ ಬಜೆಟ್‌ನಲ್ಲಿ ನ್ಯಾಯ ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ನಂತರ clarification ಕೇಳಿ.

**ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರು ತಂದಿರುವಂತಹ ಗಂಭೀರವಾದ ವಿಚಾರವನ್ನು ನಾನು ಬೆಂಬಲಿಸುತ್ತೇನೆ. ಇವತ್ತು ರಾಜ್ಯದಲ್ಲಿ ಇದನ್ನು ಸಾಮಾಜಿಕ ಪಿಡುಗು ಎಂದು ಹೇಳಬೇಕೋ ಯಾವ ರೀತಿ ಹೇಳಬೇಕು ಎಂಬುದು ಗೊತ್ತಾಗುತ್ತಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಸಾಮಾಜಿಕ ಪಿಡುಗು ಅಲ್ಲ.

**ಶ್ರೀ ಶಿವಕುಮಾರ್ ಕೆ.:-** ಮಾನ್ಯ ಸಭಾಪತಿಯವರೇ, ಅದನ್ನು ಯಾವ ರೀತಿ ಬಣ್ಣಿಸಬೇಕೋ ಗೊತ್ತಾಗುತ್ತಿಲ್ಲ. ಆದರೆ, ಸರ್ಕಾರ ಕಾಲಕಾಲಕ್ಕೆ ಕೆಲವು ಕಾರ್ಯಕ್ರಮಗಳನ್ನು ಕೊಡುತ್ತಾ ಬಂದಿದೆ. ನಾನು ಪತ್ರಕರ್ತನಾಗಿರಬೇಕಾದರೆ ಅವರ ಬದುಕಿನ ಬಗ್ಗೆ ಬರೆಯಬೇಕೆಂದು 2-3 ದಿನಗಳ ಕಾಲ ಅವರ ಜೊತೆಯಲ್ಲಿ ಇದ್ದು, ಅವರು ಹೇಗೆ ಬದುಕುತ್ತಾರೆ, ಯಾವ ರೀತಿ ಮನೆಯಲ್ಲಿರುತ್ತಾರೆ, ಪಾಳು ಬಿದ್ದಿರುವ ಮನೆಯಲ್ಲಿ ಹೇಗೆ ಬದುಕುತ್ತಿರುತ್ತಾರೆ, ಏನೇನು ಸಮಸ್ಯೆಗಳಿರುತ್ತವೆ ಎಂದು ಅವರ ಜೊತೆ ನಾನು ಹೋಗಿ ಲೇಖನಗಳನ್ನು ಬರೆಯುವುದಕ್ಕೆ ಒಂದು ಅವಕಾಶ ಸಿಕ್ಕಿತ್ತು. 20 ವರ್ಷಗಳ ನಂತರವೂ ಅವರ ಬದುಕು ಸುಧಾರಣೆಯಾಗಿಲ್ಲ. ಇಡೀ ಸಮಾಜದ ಬದ್ಧತೆ ಅವರ ಕಡೆ ಬರಬೇಕಾಗುತ್ತದೆ.

(ಮುಂದು)

(360) 12/03/2026 5:10 ಎಸ್‌ಪಿಆರ್/ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಶಿವಕುಮಾರ್ (ಮುಂದು):-**

ಈಗಾಗಲೇ ಬಹಳಷ್ಟು ವಿಚಾರಗಳ ಬಗ್ಗೆ ಶ್ರೀಮತಿ ಭಾರತಿ ಶೆಟ್ಟಿ ರವರು ಹೇಳಿದ್ದಾರೆ. ಆದರೆ, ಇವತ್ತಿನ ದಿವಸ ಇದರಿಂದಾಗಿ ನಮ್ಮ ರಾಜ್ಯದಲ್ಲಿ ಕೆಲವು ಸಮಸ್ಯೆಗಳಾಗುತ್ತಿವೆ. ಸರ್ಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಜೊತೆಗೆ, social audit of Transgenders ನಡೆಯಬೇಕು. ಸಾಮಾಜಿಕವಾದ ಆಡಿಟ್ ನಡೆದರೆ as per my observation in recent days, ನೆರೆಯ ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಿಂದ ಅಲ್ಲಿನ ಲಾಭಗಳನ್ನು ಪಡೆದುಕೊಂಡು ಬೆಂಗಳೂರು ನಗರಕ್ಕೆ ವಲಸೆ ಬರುತ್ತಿರುವುದರಿಂದ ಬಹಳ ಸಮಸ್ಯೆಯಾಗುತ್ತಿದೆ. ಇದರಿಂದಾಗಿ ನಮ್ಮ ರಾಜ್ಯದಲ್ಲಿರುವ ತೃತಿಯ ಲಿಂಗಿಗಳಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ ನಮ್ಮ ರಾಜ್ಯದಲ್ಲಿರುವ ಇಂತಹವರನ್ನು ಸರ್ಕಾರವು ಗುರ್ತಿಸಿ, ಇವರುಗಳಿಗಾಗಿ 10, 20, 50 ಮತ್ತು 100 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡುವುದಕ್ಕೆ ಏನೂ ಕಷ್ಟವಾಗುವುದಿಲ್ಲ. Beggars Cess ಎಷ್ಟು ಇದೆ ಎನ್ನುವುದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆನು. 7,600 ಕೋಟಿ ರೂಪಾಯಿಗಳಷ್ಟು Beggars Cess ಸಂಗ್ರಹವಾಗಿದೆ ಸರ್ಕಾರವು ಉತ್ತರಿಸಿದೆ. ಇವರೂ ಸಹ ಭಿಕ್ಷಾಟನೆಯನ್ನೇ ಮಾಡುತ್ತಿದ್ದಾರೆ. ಇವತ್ತಿನ ದಿವಸ ಇವರು ರಸ್ತೆ ಬದಿಗಳಲ್ಲಿ, ಸಿಗ್ನಲ್‌ಗಳಲ್ಲಿ, ಎಲ್ಲಾ ಕಡೆಗಳ ಫ್ಲೈಓವರ್‌ಗಳ ಮೇಲೆಯೂ ಸಹ ಬಂದು ನಿಂತಿರುತ್ತಾರೆ. ಹೀಗಾಗಿ ಸಂಗ್ರಹಣೆಗೊಂಡ 7,600 ಕೋಟಿ ರೂಪಾಯಿಗಳಷ್ಟು Beggars Cess ಏನಿದೆ, ದಯಮಾಡಿ ಸರ್ಕಾರವು ಅದರಲ್ಲಿನ ಸ್ವಲ್ಪ ದುಡ್ಡನ್ನು ಉಪಯೋಗಿಸಿಕೊಂಡು ಇವರಿಗೆ ಪುನಶ್ಚೇತನ ಹಾಗೂ ಪುನರ್ವಸತಿ ಕಲ್ಪಿಸಲು ಪ್ಯಾಕೇಜ್‌ವೊಂದನ್ನು ತೆಗೆದುಕೊಂಡು ಬಂದು ಒಂದೇ ಬಾರಿಗೆ ಇದನ್ನು ಕ್ಲೀಯರ್ ಮಾಡಬೇಕು.

ಪ್ರಸ್ತುತ ಸದನದಲ್ಲಿ ಗೃಹ ಸಚಿವರು ಉಪಸ್ಥಿತರಿರುವುದರಿಂದ ಇದನ್ನು ನಾನು ಹೇಳುತ್ತೇನೆ. ಸ್ಥಳೀಯ ಪೋಲೀಸ್ ಠಾಣೆಗಳಲ್ಲಿ ಇವರುಗಳ ಮೇಲೆ ಆಗುವ ಕಿರುಕುಳ ನಿಲ್ಲಬೇಕು. ಮತ್ತೊಂದೆಡೆ, ಇವರ ಜೊತೆಗೆ hand in glove ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ಇವತ್ತಿನ ದಿವಸ ಹೆಬ್ಬಾಳ ಫ್ಲೈಓವರ್. ಇಲ್ಲಿ ಯಾರಾದರೂ ಹೋಗಿ ನೋಡಬಹುದು. ಸಂಜೆ 7 ಗಂಟೆಯಿಂದ ರಾತ್ರಿ 12:30 ಗಂಟೆಯವರೆಗೆ ಅಲ್ಲಿ ಒಂದೇ ಒಂದು ಬೀದಿ ದೀಪ ಉರಿದಿಲ್ಲ. ಇದನ್ನು ನಾನು ಕಳೆದ 25 ವರ್ಷಗಳಿಂದ ನೋಡುತ್ತಿದ್ದೇನೆ. ಶ್ರೀ ಎಸ್.ಎಂ.ಕೃಷ್ಣ ರವರು ಈ ಹಿಂದೆ ಅಧಿಕಾರದಲ್ಲಿದ್ದಾಗ ಅಲ್ಲಿ ಒಂದು ದೊಡ್ಡ ಫ್ಲೈಓವರ್ ಅನ್ನು ಮಾಡಿಸಿ, ಅಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಚೆನ್ನಾಗಿ ಮಾಡಿದ್ದಾರೆ. ಅಲ್ಲಿ ಏನಾಗುತ್ತಿದೆ ಎಂದರೆ, ಈ ರೀತಿಯಾದ anti-social activities ಗಳನ್ನು ನಡೆಸುವುದಕ್ಕೆ ಪೋಲೀಸರು ಅಲ್ಲಿನವರೊಂದಿಗೆ ಶಾಮೀಲಾಗಿದ್ದು, ಇವತ್ತಿನ ದಿವಸ ಇದು ಒಂದು ರೀತಿಯ social hazard ಆಗಿದೆ. ಹೀಗಾಗಿ ಇದನ್ನು ತಪ್ಪಿಸಬೇಕಾದರೆ ಸರ್ಕಾರವು...., ಇವತ್ತಿನ ದಿವಸ ನೆರೆಯ ತಮಿಳುನಾಡು ರಾಜ್ಯದಲ್ಲಿ ಅಲ್ಲಿನ ಸರ್ಕಾರವು ಒಳ್ಳೋಳ್ಳೆಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಮೊದಲಿಗೆ ಇವರಿಗೆ ವಸತಿ, ಉದ್ಯೋಗ, ವಿದ್ಯಾಭ್ಯಾಸಕ್ಕಾಗಿ ಅವಕಾಶ, ಆರೋಗ್ಯ ಸೌಲಭ್ಯ ಇತ್ಯಾದಿಗಳನ್ನು ನೀಡಬೇಕು. ಇವರುಗಳಿಗೆ

ಪೋಲೀಸ್ ಮತ್ತು ಸಾರ್ವಜನಿಕರಿಂದಾಗುವ ಕಿರುಕುಳಗಳು ತಪ್ಪಬೇಕು. ಇವರುಗಳನ್ನು ಪ್ರೀತಿಯಿಂದ ನೋಡುವ ಕೆಲಸವಾದರೆ, ಅನುಕೂಲವಾಗುತ್ತದೆ. ಇವರುಗಳು ಯಾವ ಕಾರಣಕ್ಕಾಗಿ ಹೀಗೆ ಆಗುತ್ತಾರೆ ಎಂದು ನಾನು biologically ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತಿನ ದಿವಸ ಇವರುಗಳ ಬಗ್ಗೆ social audit ಮಾಡಿದರೆ, ಇದರಿಂದ ಏನು ಮತ್ತು ಯಾವ ರೀತಿಯಾಗಿ ಮಾಡಬೇಕು ಎನ್ನುವುದು ನಮಗೆ ಗೊತ್ತಾಗುತ್ತದೆ. ಇಲ್ಲವೆಂದಾದರೆ, ಏನು ಆಗುತ್ತಿದೆ ಎಂದರೆ, ಕೆಲವೊಂದಿಷ್ಟು ಎನ್.ಜಿ.ಓ. ಗಳು ಇವರ ಪರವಾಗಿ ಕೆಲಸವನ್ನು ಮಾಡುತ್ತಿದ್ದು, ಇವರುಗಳಿಗೆ ಸೌಲಭ್ಯಗಳನ್ನು ನೀಡುತ್ತಿದ್ದಾರೆ. Sex Workers, Lesbians, Transgenders ಗಳ ಜೊತೆ ಕೆಲಸ ಮಾಡುತ್ತಿದ್ದಾರೆ, ಇಲ್ಲವೆಂತಲ್ಲ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ. ಸಿಂಗಾಪೂರ್‌ನಲ್ಲಿ ಇಂತಹವರೆಲ್ಲಾ ಡ್ರೆಸ್ ಮಾಡಿಕೊಂಡು ಕುಳಿತುಕೊಂಡಿದ್ದಾರೆ. ಅಲ್ಲಿನ ಬಾಲಾಜಿ ಇಡ್ಲಿ ಎಂಬ ಹೋಟೆಲ್‌ಗೆ ನಾನು ಇಡ್ಲಿ ತಿನ್ನಲು ಹೋದಾಗ, ಅಲ್ಲಿದ್ದವರೆನ್ನೆಲ್ಲಾ ನೋಡಿ ನಾನು ಅಲ್ಲಿನ ಪೋಲೀಸರಿಗೆ ಫೋನ್ ಮಾಡಿ, why they have been locked? ಎಂದು ಕೇಳಿದೆ. ಆಗ ಅಲ್ಲಿಗೆ ಬಂದ ಪೋಲೀಸರು ಸಾಯಂಕಾಲವಾದರೆ, ಅವರಿಗೆ ಒಂದು ರೀತಿಯ psychology ಇರುತ್ತದೆ, ಅವರುಗಳು ನೀಟಾಗಿ ಡ್ರೆಸ್ ಮಾಡಿಕೊಂಡು ಕುಳಿತುಕೊಂಡಿರುತ್ತಾರೆ. ಅವರುಗಳನ್ನು ಬಿಟ್ಟರೆ ಸ್ವಲ್ಪ ಕಷ್ಟವಾಗುತ್ತದೆ; ಹೀಗಾಗಿ ಅವರುಗಳನ್ನು ಅಲ್ಲಿ ಇಡಿಸಲಾಗಿದೆ ಎಂಬುದಾಗಿ ನನಗೆ ತಿಳಿಸಿದರು. ಇದು ನನಗೆ ಗೊತ್ತಿರಲಿಲ್ಲ. But, this is not Singapore; this is Bengaluru. ಹೀಗಾಗಿ ಈ ರೀತಿಯ ಒಂದು ವಾತಾವರಣವನ್ನು ಉಳಿಸಬೇಕೆಂದರೆ, ಸರ್ಕಾರ ಇದರ ಬಗ್ಗೆ ಗಂಭೀರವಾದ ಕ್ರಮಗಳನ್ನು ತೆಗೆದುಕೊಂಡು, ಅವರಿಗೆ ಉದ್ಯೋಗ ಹಾಗೂ ಇನ್ನಿತರೆ ಎಲ್ಲಾ ರೀತಿಯ ಅವಕಾಶಗಳನ್ನು ನೀಡಬೇಕು. ತೃತೀಯ ಲಿಂಗದವರಿಗೆ ಇಲ್ಲಿ ಕೆಲಸ ನೀಡಿದ್ದೇನೆ ಎಂದು ತಾವು ಹೇಳಿದ್ದಕ್ಕಾಗಿ ಎಲ್ಲಾ ಸದಸ್ಯರುಗಳ ಪರವಾಗಿ ತಮಗೆ ಅಭಿನಂದಿಸುತ್ತೇನೆ. ಈ ರೀತಿಯಾದ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ ಶ್ರೀಮತಿ ಭಾರತಿ ಶೆಟ್ಟಿರವರಿಗೆ ಸದನ ಹಾಗೂ ಎಲ್ಲರೂ ಇದಕ್ಕೆ ಬೆಂಬಲಿಸಿ, ಸರ್ಕಾರ ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಬೇಕೆಂದು ನಾನು ಮನವಿ ಮಾಡಿ ಕೊಳ್ಳುತ್ತೇನೆ.

**ಡಾ|| ಜಿ. ಪರಮೇಶ್ವರ್ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಬಹಳ ಉತ್ತಮವಾದ ಮಾನವೀಯತೆಯನ್ನು ಪ್ರಶ್ನೆ ಮಾಡುವ ವಿಚಾರದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅನೇಕ ಸಂದರ್ಭದಲ್ಲಿ ನಾವು ಸೃಷ್ಟಿಯಲ್ಲಿ ದೇವರನ್ನು ದೂಷಣೆ ಮಾಡುತ್ತೇವೆ. ಏನ್ರೀ ದೇವರು ಹಿಂಗೆ ಹುಟ್ಟಿಸಿಬಿಟ್ಟಿದ್ದಾನೆ. ಇದು ದೇವರ ಸೃಷ್ಟಿ ಹಾಗೂ ನಂಬಿಕೆಯ ಪ್ರಶ್ನೆ. ಆದರೆ, ವಿಜ್ಞಾನದ ವಿಪರ್ಯಾಸ ಹೇಗಿದೆ ಎಂದರೆ, ಇಂತಹ ಘಟನೆಗಳು, ವಿಚಾರಗಳು ನನ್ನ ದೃಷ್ಟಿಯಲ್ಲಿ ಒಬ್ಬ ವಿಜ್ಞಾನದ ವಿದ್ಯಾರ್ಥಿಯಾಗಿ ಬಹಳ ಆಶ್ಚರ್ಯವನ್ನು ಮಾಡುವಂತಾಗಿದೆ. ನಮ್ಮ ಶರೀರದಲ್ಲಿ 46 chromosomes ಇವೆ. ಅಂದರೆ, 23 ಜೋಡಿಗಳಿವೆ. ಅದರಲ್ಲಿ ಗಂಡು, ಹೆಣ್ಣು ಹೇಗೆ ಆಗುತ್ತದೆ ಎಲ್ಲರಿಗೂ ತಿಳಿದಿದೆ. XX chromosomes ಆದರೆ,

ಅದು ಹೆಣ್ಣು ಆಗುತ್ತದೆ. XY chromosomes ಆದರೆ, ಗಂಡು ಆಗುತ್ತದೆ. ಇದು genetic engineering ಆಗಿದೆ. ನಾವು ದೇವರು ಹೀಗೆ ಮಾಡಿದ, ಹಾಗೆ ಮಾಡಿದ ಎಂದು ದೇವರ ಮೇಲೆ ಹೇಳಿಕೊಳ್ಳುತ್ತೇವೆ. ಆದರೆ, ವಿಜ್ಞಾನದ ದೃಷ್ಟಿಯಲ್ಲಿ ಇದು ಒಂದು accidental ಆಗಿದೆ. ಏಕೆಂದರೆ, ಇದು ಹೀಗೆ ಆಗುತ್ತದೆ, ಹೀಗೆ ಆಗಬೇಕು ಎನ್ನುವುದನ್ನು ಯಾರೂ ಸಹ ನಿರ್ಣಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಲ್ಲಿ ಇಂತಹವರು ಹುಟ್ಟುತ್ತಾರೆ. ಸಮಾಜವು ಇದನ್ನು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಸಮಾಜದ ದೃಷ್ಟಿಯಲ್ಲಿ ಗಂಡು, ಹೆಣ್ಣು ಎರಡು ಮಾತ್ರವೇ ಇದೆ. ಬೇರೆ ಏನೂ ಇಲ್ಲ. ಕೇವಲ ಗಂಡು, ಹೆಣ್ಣು ಅಷ್ಟೇ ಎಂದು ಹೇಳುತ್ತಾರೆ. ಆದರೆ, ಇವರನ್ನು ಸಮಾಜವು ಒಪ್ಪುವುದಿಲ್ಲ. ಇಡೀ ಪ್ರಪಂಚದಲ್ಲಿ ನಾವು ಇದನ್ನು ನೋಡಿದ್ದೇವೆ. ಬಹಳಷ್ಟು ವರ್ಷಗಳ ಕಾಲ ಇವರನ್ನು ಬೇರೆ ಬೇರೆ ದೇಶಗಳಲ್ಲಿಯೂ ಸಹ ಗುರ್ತಿಸಲೂ ಇಲ್ಲ. ಅತ್ಯಂತ ಮುಂದುವರೆದ ಪಾಶ್ಚಿಮಾತ್ಯ ದೇಶಗಳಲ್ಲಿಯೂ ಕೂಡ ಇವರನ್ನು ಒಪ್ಪಿಕೊಳ್ಳಲಿಲ್ಲ. ಆ ನಂತರ, ಒಂದು ರೀತಿಯಲ್ಲಿ revolution ಆದ ಹಾಗೆ ಇವರುಗಳನ್ನು ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಒಪ್ಪಿಕೊಳ್ಳುತ್ತಿದ್ದಾರೆ. ನಮ್ಮ ಭಾರತ ದೇಶದಲ್ಲಿಯೂ ಸಹ ಇನ್ನುವರೆಗೆ ಇವರನ್ನು ಸಮಾಜವು ಅಷ್ಟು ಸುಲಭವಾಗಿ ಒಪ್ಪುತ್ತಿಲ್ಲ. ಆದರೆ, ಇವರುಗಳನ್ನು ಕಾನೂನಾದರೂ ಒಪ್ಪಿಕೊಳ್ಳಬೇಕು. ಅದಕ್ಕಾಗಿ 2014 ರಲ್ಲಿ National Legal Services Authority v/s Union of India ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು ಹೊರಡಿಸಿದ ತೀರ್ಪಿನಲ್ಲಿ ಇವರುಗಳನ್ನು ತೃತಿಯ ಲಿಂಗಿಗಳಾಗಿ ಮೊದಲನೆಯದಾಗಿ ಕಾನೂನಿನಲ್ಲಿ ಕಾನೂನಾತ್ಮಕವಾಗಿ ಘೋಷಣೆ ಮಾಡಲಾಗುತ್ತದೆ. ಇವರನ್ನು Transgender ಅಥವಾ ಇನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇವುಗಳ ಹೆಸರುಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಇವರನ್ನು ತೃತಿಯ ಲಿಂಗಿಗಳಾಗಿ ಮಾನ್ಯತೆ ಮಾಡುತ್ತಾರೆ. ಇದಾದ ಮೇಲೆ ಕಾನೂನಿನ ಪ್ರಕಾರ ಅದಕ್ಕಾಗಿ ಪ್ರತಿ ರಾಜ್ಯಗಳಿಗೂ ಕೂಡ ತಿಳಿಸುತ್ತಾರೆ. ಇವರುಗಳನ್ನು ತೃತಿಯ ಲಿಂಗಿಗಳೆಂದು ಕರೆಯಬೇಕು ಮತ್ತು ಅದಕ್ಕೆ ಬೇಕಾದ ಕಾನೂನುಗಳನ್ನು ಮಾಡಬೇಕು ಮತ್ತು ಅವರ ರಕ್ಷಣೆ, ಅಭಿವೃದ್ಧಿ ಹಾಗೂ ಅವರುಗಳಿಗೆ ಮಾಡುವ ಸಹಾಯಗಳಿರಬಹುದು; ಇವುಗಳನ್ನು ಮಾಡಬೇಕೆಂಬ ತೀರ್ಮಾನವನ್ನು ಮಾಡುತ್ತಾರೆ. ಕರ್ನಾಟಕ ರಾಜ್ಯದಲ್ಲಿ 2017 ನೇ ಇಸ್ವಿಯಲ್ಲಿ The Karnataka State Policy on Transgenders ಯನ್ನು ಜಾರಿಗೆ ತರಲಾಯಿತು. ಅದರಲ್ಲಿ ಅನೇಕ ಶಿಫಾರಸ್ಸುಗಳಿದ್ದು, ಇದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ ಸಮೀಕ್ಷೆಯೊಂದನ್ನು ಮಾಡಲಾಯಿತು. ಇದರ ಪ್ರಕಾರ ರಾಜ್ಯದ 31 ಜಿಲ್ಲೆಗಳಲ್ಲಿ 15 ನೇ ಸೆಪ್ಟೆಂಬರ್ 2025 ರಿಂದ 21 ನೇ ನವೆಂಬರ್ 2025 ರ ವರೆಗೆ ಸಮೀಕ್ಷೆ ಮಾಡಿ 10,365 Transgenders ಇದ್ದಾರೆ ಎಂಬುದಾಗಿ ವರದಿ ಮಾಡಿದ್ದಾರೆ. ಶ್ರೀಮತಿ ಭಾರತಿ ಶೆಟ್ಟಿಯವರು ಇವರುಗಳ ಸಂಖ್ಯೆ 70,000 ಎಂದು ಹೇಳಿದ್ದಾರೆ. ಇದನ್ನು ಪರಿಶೀಲನೆ ಮಾಡೋಣ. ಏಕೆಂದರೆ, ಬಹಳ ಜನ ತಮ್ಮನ್ನು ಈ ರೀತಿಯಾಗಿ ಗುರ್ತಿಸಿಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಹೀಗಾಗಿ ಇವರುಗಳ ಒಟ್ಟು ಸಂಖ್ಯೆಯನ್ನು ನಾನು ಪರೀಶಿಲನೆ ಮಾಡಿಸುತ್ತೇನೆ. 10,365 Transgender ಗಳನ್ನು ಗುರ್ತಿಸಿದ್ದಾರೆ. ಇದಾದ ನಂತರ

ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಇವರುಗಳಿಗಾಗಿ ಒಂದು ಸಹಾಯವಾಣಿಯನ್ನು ಮಾಡಿಕೊಡಲಾಗಿದೆ. ಇವರಿಗಾಗಿ ಅನೇಕ ಶಿಫಾರಸ್ಸು ಮಾಡಿ, ಇವರಿಗೆ ಏನೇಲ್ಲಾ ಮಾಡಬೇಕು ಎನ್ನುವುದನ್ನು…, ಇವರಿಗೆ ಗುರ್ತಿನ ಚೀಟಿ ಮತ್ತು ಚುನಾವಣಾ ಗುರ್ತಿನ ಚೀಟಿಗಳನ್ನು ನೀಡಬೇಕು.

(ಮುಂದು)

(361)12-03-2026/5-20/bkp-md (ಸಭಾಪತಿಯವರ ಉಪಸ್ಥಿತಿ)

**ಡಾ॥ ಜಿ. ಪರಮೇಶ್ವರ (ಮುಂದು):**

ಚುನಾವಣೆಯ ಸಂಬಂಧ ಕಾರ್ಡ್ ಕೊಡಬೇಕು, ಅಮೇಲೆ ಬೋರ್ಡ್ ಮಾಡಬೇಕು, ಇದೆಲ್ಲಾ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಡಾ॥ಉಮಾಶ್ರೀಯವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿದ್ದಾಗ ಈ ರೀತಿ ಶಿಫಾರಸ್ಸುಗಳನ್ನೂ ಕೂಡ ಅವರು ಮಾಡಿದ್ದಾರೆ. ಇವತ್ತಿನ ಪ್ರಶ್ನೆ ಏನೆಂದರೆ ಈ ಬಗ್ಗೆ ನಾವು ಏನೆಲ್ಲಾ ಮಾಡಬಹುದು ಎಂದು ಕೇಳಿದ್ದಾರೆ. 1% ಮೀಸಲಾತಿಯನ್ನು ಉದ್ಯೋಗದಲ್ಲಿ ಕೊಡಬೇಕೆಂದು ಹೇಳಿ ಕಾನೂನನ್ನು ಮಾಡಿದ್ದೇವೆ.

2020-21 ರಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪ್ರಕಾರ ರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಾತಿಯಲ್ಲಿ ಶೇಕಡ 1 ರಷ್ಟು ಮೀಸಲಾತಿಯನ್ನು ಕಲ್ಪಿಸಬೇಕೆಂದು ಈಗಾಗಲೇ ಈ ಸಂಬಂಧ ನೇಮಕಾತಿಯನ್ನೂ ಕೂಡ ಮಾಡುತ್ತಿದ್ದಾರೆ. ತಾವು ನಮ್ಮ ಇಲಾಖೆಯ ವಿಷಯವನ್ನು ಹೇಳಿದ್ದೀರಿ. 4 ಜನರನ್ನು ಈ ಒಂದು ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆ ಮಾಡಿದ್ದರು. ಆದರೆ, ಅಲ್ಲಿ ಅವರು ಹೋದಂತಹ ಸಂದರ್ಭದಲ್ಲಿ ಅಲ್ಲಿ acceptance ಬೇಕಲ್ಲವೇ? ಅವರುಗಳನ್ನು ಒಪ್ಪಿಕೊಳ್ಳುವುದಕ್ಕೆ ತಯಾರು ಇರುವುದಿಲ್ಲ. ಬಹಳ ಕಷ್ಟಪಟ್ಟುಕೊಂಡು ಅಲ್ಲಿ ತರಬೇತಿಯಲ್ಲಿ ಇದ್ದರು. ಅನಂತರ ಅವರು ಅಲ್ಲಿ ಆಗುವುದಿಲ್ಲವೆಂದು ಹೇಳಿ ಅಲ್ಲಿಂದ ಬಿಟ್ಟು ಬಂದಿದ್ದಾರೆ. ಮತ್ತೆ ಅವರಿಗೆ ನಮ್ಮ ಇಲಾಖೆಯಲ್ಲಿ ಕೆಲಸ ಕೊಡತಕ್ಕಂತ ಕೆಲಸವನ್ನು ಖಂಡಿತವಾಗಿಯೂ ಮಾಡುತ್ತೇವೆ, ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಮೇಲೆ Transgender Cell ಮಾದರಿಯಲ್ಲಿ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಈಗಾಗಲೇ ನಮ್ಮ ಇಲಾಖೆಯಲ್ಲಿ ಒಂದು 'Transgender Protection Cell' ಎಂದು ಮಾಡಿ ಅದಕ್ಕೆ ಒಬ್ಬ ಅಧಿಕಾರಿಯನ್ನು ಸಹಿತ ಮಾಡಿದ್ದೇವೆ. ಅಮೇಲೆ ಪ್ರತಿಯೊಂದು ಪೊಲೀಸ್ ಸ್ಟೇಷನ್‌ನಲ್ಲಿಯೂ ಸಹ ಒಬ್ಬ Focal Point Officer ಎಂದು ಹೇಳಿ ನೇಮಕ ಮಾಡಿದ್ದೇವೆ. ಏನಾದರೂ ಕೂಡ ತೊಂದರೆಯಾದಾಗ ಅವರು ಅಲ್ಲಿಗೆ ಬಂದು ಸಂಪರ್ಕ ಮಾಡಿ, ಅದಕ್ಕೆ Focal Point Officer ಎಂದು ನೇಮಕ ಮಾಡಿದ್ದೇವೆ. ಅವರಿಗೆ ಅವರು ಸಂಪರ್ಕ ಮಾಡಬಹುದು. ಇತ್ತೀಚೆಗೆ ಒಂದು ಹೊಸ programme ಅನ್ನು ತೆಗೆದುಕೊಂಡು ಬರಲಾಗಿದೆ. ಮನೆ ಮನೆಗೆ ಪೊಲೀಸ್ ಎಂದು ಮಾಡಿದ್ದಾರೆ. ಆ ಮನೆ ಮನೆಗೆ ಪೊಲೀಸ್ ಎಂದು ಹೇಳಿ ಅವರು ಆ ಮನೆಗಳಿಗೆ ಭೇಟಿ ಕೊಡುವಂತಹ ಸಂದರ್ಭದಲ್ಲಿ

ಪೋಲೀಸ್‌ನವರು ಅವರ ಜೊತೆಯಲ್ಲಿ ಕುಳಿತುಕೊಂಡು ಅವರಿಗೆ ಏನು ತೊಂದರೆ ಇದೆ ಎಂದು ತಿಳಿದುಕೊಂಡು ಬಂದು ಸಂಬಂಧಪಟ್ಟ ಇಲಾಖೆಗಳಿಗೆ ತಿಳಿಸಬೇಕೆಂದು ನಾವು ಆದೇಶ ಮಾಡಿದ್ದೇವೆ. ಅವರಿಗೆ ಮಹಿಳಾ ಮತ್ತು ಮಕ್ಕಳ ಇಲಾಖೆ ಇರಬಹುದು. ಮತ್ತೆ ಅವರಿಗೆ ವಸತಿ ಕೊಡುವ ವಿಚಾರದಲ್ಲಿ ಹೇಳಿದ್ದೀರಿ. ಅಥವಾ ಬೇರೆ ಬೇರೆ ಇಲಾಖೆಯಲ್ಲಿ ಅಂದರೆ, ಅವರಿಗೆ ಯಾವ ಒಂದು ಇಲಾಖೆಯಿಂದ ಸಹಾಯ ಬೇಕು ಅಥವಾ ತೊಂದರೆಯಾಗುತ್ತಿದೆ. ಇದೆಲ್ಲವನ್ನು ಕೂಡ ಮನೆ ಮನೆಗೆ ಪೋಲೀಸ್ ಹೋಗುವಂತಹ ಸಂದರ್ಭದಲ್ಲಿ ಅದನ್ನು ತಿಳಿಸಬೇಕೆಂದು ಹೇಳಿ ಅವರಿಗೆ ನಾವು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ. ಮಾನ್ಯ ಸಭಾಪತಿಯವರೆ, ಇತ್ತೀಚೆಗೆ ಅನೇಕ ವಿಚಾರಗಳು ಬೆಳಕಿಗೆ ಬಂದ ಮೇಲೆ ನಮ್ಮ ಡಿ.ಜಿ.ಪಿ. ಮತ್ತು ಐ.ಜಿ.ಪಿ.ಯವರು ಇದೇ ಒಂದು ವಿಚಾರವನ್ನು ಇಟ್ಟುಕೊಂಡು ಪ್ರತಿಯೊಂದು ಎಸ್.ಪಿ.ಯವರಿಗೂ ಕೂಡ ಸೂಚನೆಯನ್ನು ಕೊಟ್ಟಿದ್ದಾರೆ. ಇತ್ತೀಚೆಗೂ ಕೂಡ ಅ ಎಲ್ಲಾ ಎಸ್.ಪಿ.ಗಳಿಗೂ ಕೂಡ ತಮ್ಮ ತಮ್ಮ ಘಟಕಗಳಲ್ಲಿ ಜನಸಂಪರ್ಕ ಸಭೆಯನ್ನು ಮಾಡುವಾಗಲೂ ಕೂಡ ಅವರುಗಳಿಗೆ ಗುರುತಿಸಬೇಕೆಂದು ಹೇಳಿ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ, ಈ ಒಂದು ಸಮಸ್ಯೆ ಏನಿದೆ, ಇದು ಒಂದು ದಿನದಲ್ಲಿ ಬಗೆಹರಿಯುವಂತಹ ಸಮಸ್ಯೆಯಲ್ಲ. ಅವರಿಗೆ identity ಅನ್ನು ಕೊಡಬೇಕು, ಅವರನ್ನು ಒಪ್ಪಿಕೊಳ್ಳಬೇಕು. ಅವರಿಗೆ ವಸತಿ ವಿಷಯ ಇರಬಹುದು, ಅವರಿಗೆ ಉದ್ಯೋಗ ನೀಡುವಲ್ಲಿ ಸಹಾಯ ಮಾಡುವುದು ಇರಬಹುದು. ಈ ಎಲ್ಲಾ ವಿಚಾರಗಳನ್ನೂ ಕೂಡ ಒಂದೇ ಇಲಾಖೆಯಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಪೋಲೀಸ್‌ನವರು ಅವರಿಗೆ ರಕ್ಷಣೆ ಕೊಡಬಹುದು, ಅವರಿಗೆ ಕಷ್ಟದಲ್ಲಿ ಯಾರಾದರೂ ಹೊಡೆದರೆ ಅಥವಾ ಅವರ ಮೇಲೆ ಗಲಾಟೆ ಮಾಡಿದರೆ ಅಥವಾ ಬೇರೆ ರೀತಿಯಲ್ಲಿ ಅವರನ್ನು ಕಂಡರೆ ಅದರ ಬಗ್ಗೆ ಅವರು ಪೋಲೀಸ್‌ನವರಿಗೆ ದೂರು ಕೊಟ್ಟಾಗ ಅವರಿಗೆ ಆ ಒಂದು 'Transgender Protection Cell' ಎಂದು ನಾವು ಏನು ಮಾಡಿದ್ದೇವೆ, ಅವರಿಗೆ ಆ ಒಂದು protection ಅನ್ನು ಕೊಡುವಂತಹದ್ದನ್ನು ಪೋಲೀಸ್‌ನವರು ಮಾಡಬಹುದು. ಆದರೆ, ಬೇರೆ ಬೇರೆ ವಿಚಾರಗಳು ಏನಿದೆ, ಅವೆಲ್ಲವನ್ನೂ ಕೂಡ ಬೇರೆ ಬೇರೆ ಇಲಾಖೆಗಳಲ್ಲಿ ಪಡೆಯಬಹುದು. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳನ್ನು ಅಂದರೆ, ಅದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇರಬಹುದು ಅಥವಾ ವಸತಿ ಇಲಾಖೆ ಇರಬಹುದು, ಉದ್ಯೋಗ ವಿಚಾರವಾಗಿ ಸಣ್ಣ ಕೈಗಾರಿಕೆ ಇಲಾಖೆ ಅಥವಾ ಬೇರೆ ಬೇರೆ ಇಲಾಖೆಯ ಕಾರ್ಯಕ್ರಮಗಳು ಇರಬಹುದು ಅವರುಗಳಿಗೆ ಈ ಸಂಬಂಧವಾಗಿ ಜಂಟಿಯಾಗಿ ಒಂದು ಸಭೆಯನ್ನು ಕರೆದು, ಅವರುಗಳಿಗೆ ಸೂಚನೆಯನ್ನು ಕೊಡುವಂತಹ ಕೆಲಸವನ್ನು ನಾನು ಮಾಡುತ್ತೇನೆ ಎನ್ನುವ ವಿಚಾರವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು 'Transgender Protection Cell' ಅನ್ನು ಮಾಡುತ್ತೇವೆಂದು ಹೇಳಿದ್ದರು. ಇವರುಗಳು ಅಂದರೆ, ಮಂಗಳಮುಖಿಯರು ಬಹಳ strong ಇದ್ದಾರೆ, ಇವರುಗಳಿಗೆ ಬಹಳ ಶಕ್ತಿ ಇರುತ್ತದೆ. ಅವರದ್ದೇ ಆದಂತಹ ಒಂದು ಶೆಲ್ ಅನ್ನು ಏತಕ್ಕೆ ಮಾಡಬಾರದು? ಅವರುಗಳು ಗಂಡು ಮಕ್ಕಳಿಗಿಂತ ಹೆಚ್ಚು ಗಟ್ಟಿಯಾಗಿರುತ್ತಾರೆ. ಅವರನ್ನು ದೂಡಲಿಕ್ಕೆ ಆಗುವುದಿಲ್ಲ. ಅವರು ಅಷ್ಟೊಂದು ಗಟ್ಟಿಯಾಗಿರುತ್ತಾರೆ. ಇವರ ಪೈಕಿ ಪದವಿ ಪಡೆದವರಿಗೆ ತರಬೇತಿಯನ್ನು ಕೊಟ್ಟು ಇವರದ್ದೇ ಅದಂತಹ cell ಅನ್ನು ನೀವು ಏತಕ್ಕೆ ಮಾಡಬಾರದು? ಈ ವಿಚಾರದಲ್ಲಿ ನಾನು ಕೇಂದ್ರ ಸರ್ಕಾರಕ್ಕೂ ಸಹ ಇವರುಗಳನ್ನು ಆರ್ಮಿಯಲ್ಲಿಯೂ ತೆಗೆದುಕೊಳ್ಳಿ ಎಂದು ಹೇಳಿ ಪತ್ರವನ್ನು ಬರೆಯುತ್ತಿದ್ದೇನೆ. ಇದು ಒಂದು ವಿಚಾರವಾದರೆ ಇನ್ನೊಂದು ವಿಚಾರ ಏನೆಂದರೆ, ರಾಜೀವ್ ಗಾಂಧಿ ವಸತಿ ನಿಗಮ, ನಿಯಮಿತ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದ್ದೀರಿ. 179 ಲಿಂಗತ್ವ ಅಲ್ಪ ಸಂಖ್ಯಾತ ವಸತಿ ಸೌಲಭ್ಯ ಕಲ್ಪಿಸಿಕೊಡಲು ರೂ. 805.50 ಲಕ್ಷಗಳನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದೆ. ನೀವು ಹಣವನ್ನು ಬಿಡುಗಡೆ ಮಾಡಿದ್ದೀರಿ. ಆದರೆ, ಇದರ ಸೌಲಭ್ಯ ಒಬ್ಬರಿಗೂ ಸಹಿತ ಮನೆ ಇವತ್ತಿನವರೆಗೂ ಸಿಕ್ಕಿರುವುದಿಲ್ಲ. ಅದನ್ನು ಕೊಡುವಂತಹದ್ದು ಆಗಬೇಕು. ಇಲ್ಲಿ ಮಾನ್ಯ ಸಭಾಪತಿಯವರು ಇದ್ದೀರಿ ಮತ್ತು ಸಭಾನಾಯಕರು ಇದ್ದೀರಿ. ನಾನು ಸಿನಿಮಾದ ಬಗ್ಗೆ ಉಲ್ಲೇಖ ಮಾಡಿದ್ದೆ. ಇದು ಒಂದು ಶಾಲಾ ಮಕ್ಕಳಿಗೆ ತೋರಿಸುವಂತಹ ಸುತ್ತೋಲೆಯನ್ನು ಕೊಡುವಂತಹದ್ದು, ಜೂನ್ ತಿಂಗಳಿಗೆ ಎಲ್ಲಾ ಶಾಲೆಗಳು ಪ್ರಾರಂಭವಾಗುತ್ತವೆ. ಎಲ್ಲಾ ಶಾಲೆಗಳಲ್ಲಿ ಸಿನಿಮಾ ನೋಡುವಂತಹ ಈ ಒಂದು ಸುತ್ತೋಲೆ ಮತ್ತು ಈ ಒಂದು ಸಿನಿಮಾದಲ್ಲಿ ಸುಮಾರು 400 ಮಂದಿ ಮಂಗಳಮುಖಿಯರು ಇದರಲ್ಲಿ ಕೆಲಸ ಮಾಡಿದ್ದಾರೆ. ಆದರೆ, ಕೆಲವು ಸಿನಿಮಾಗಳಲ್ಲಿ ಬೇರೆಯವರು ಮಂಗಳಮುಖಿಯರಾಗಿ work ಮಾಡಿರುವುದಾಗಿದೆ. ಆದರೆ, ಇದರಲ್ಲಿ ಮಂಗಳಮುಖಿಯರೇ, ಮಂಗಳಮುಖಿಯರ ಪಾತ್ರವನ್ನು ಮಾಡಿರುವುದಾಗಿದೆ. ಜೊತೆಗೆ ಈ ಒಂದು ಸಿನಿಮಾಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳವರೆಗೆ ಅವರು ಖರ್ಚು ಮಾಡಿದ್ದಾರೆ. ಅವರುಗಳು ಇದಕ್ಕೆ ಎಲ್ಲವನ್ನೂ ಮಾರಿಕೊಂಡು ದುಡ್ಡೇ ಇಲ್ಲದೇ ಕುಳಿತಿದ್ದಾರೆ. ಆದ್ದರಿಂದ, ಇದಕ್ಕೆ ಸರ್ಕಾರದಿಂದಲೂ ಸಹ ದುಡ್ಡು ಕೊಡುವಂತಹದ್ದನ್ನು ಮಾಡಬೇಕು. ಇನ್ನು ಮಂಜಮ್ಮ ಜೋಗತಿಯವರ ಪ್ರತಿಷ್ಠಾನದ ವಿಷಯವನ್ನು ನಾನು ಕೇಳಿದ್ದೆ. ಮಾನ್ಯ ಸಭಾನಾಯಕರು ಈ ವಿಚಾರವನ್ನು ಗಮನಿಸಬೇಕು. ಮಂಜಮ್ಮ ಜೋಗತಿಯವರ ಪ್ರತಿಷ್ಠಾನದ ವಿಚಾರವಾಗಿ ಸಹ ಅವರು ಪತ್ರವನ್ನು ಕೊಟ್ಟಿದ್ದಾರೆ. ಅದಕ್ಕೆ ಜಾಗವನ್ನು ಕೊಟ್ಟಿದ್ದು, ಅಲ್ಲಿ ಮಂಗಳಮುಖಿಯರ ಪ್ರತಿಭಾನ್ವೇಷಣೆಯ ಸಂಬಂಧ ಅವರುಗಳು ಕಲಾ ಉತ್ಸವವನ್ನು ಮಾಡುತ್ತಾರೆ. ಅಮೇಲೆ ಕಲೆ, ಸಾಧಕರ ದಾಖಲೀಕರಣ, C.D., Documentary ಇದೆಲ್ಲವನ್ನು ಮಾಡುವುದರ ಜೊತೆಗೆ ಅವರುಗಳಿಗೆ ಶಿಕ್ಷಣ ಕೊಡುವಂತಹದ್ದಕ್ಕೆ ಅಗತ್ಯ ವ್ಯವಸ್ಥೆಯನ್ನು ಮಾಡಬೇಕು.

**ಡಾ॥ ಜಿ. ಪರಮೇಶ್ವರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ನಾನು Information Department and Department of School Education and Literacy ಅನ್ನು ಕೂಡ ಸೇರಿಸಿಕೊಂಡು ಒಂದು ಸಭೆಯನ್ನು ಮಾಡುತ್ತೇವೆಂದು ನಾನು ಏನು ಹೇಳಿದೆ, ಆ ಒಂದು ಸಭೆಗೆ ಅವರನ್ನೂ ಸಹ ಕರೆದು ತೀರ್ಮಾನವನ್ನು ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಏನು ಪರಿಹಾರ ಕೊಡುವಂತಹದ್ದು ಅಥವಾ ಹಣ ಕೊಡುವಂತಹದ್ದರ ಬಗ್ಗೆಯೂ ಸಹ ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:-** ಶ್ರೀಯುತ ಎಂ.ಎಲ್.ಅನಿಲ್ ಕುಮಾರ್‌ರವರು ಸದನದಲ್ಲಿ ಉಪಸ್ಥಿತರಿಲ್ಲ.

## 7. ಪ್ರಕಟಣೆ

### "ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ ಕುರಿತು"

- - - - -

**ಸಭಾಪತಿಯವರು:-** ದಿನಾಂಕ 12-03-2026ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 06-03-2026ರಂದು ಮಂಡಿಸಿದ 2026-27ನೇ ಸಾಲಿನ ರಾಜ್ಯದ ಆಯವ್ಯಯ ಅಂದಾಜುಗಳ ಮೇಲಿನ ಚರ್ಚೆಗೆ ದಿನಾಂಕ: 26-03-2026 ರಂದು ಅಪರಾಹ್ನ ಸರ್ಕಾರದಿಂದ ಉತ್ತರ;

ವಿಧಾನಸಭೆಯಿಂದ ಅಂಗೀಕೃತಗೊಂಡ ವಿಧೇಯಕಗಳು, ಹಣಕಾಸು/ಧನವಿನಿಯೋಗ ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ;

ಪ್ರಶ್ನೋತ್ತರ, ಗಮನಸೆಳೆಯು ಸೂಚನೆಗಳು ಹಾಗೂ ನಿಯಮ 330 ರ ಮೇರೆಗೆ ಚರ್ಚೆ, ನಿಯಮ 68ರ ಮೇಲಿನ ಪ್ರಸ್ತಾವನೆಗಳನ್ನು ತೆಗೆದುಕೊಳ್ಳುವುದು;

ಈ ವರದಿಗೆ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ.

8. ವಿತ್ತೀಯ ಕಾರ್ಯಕಲಾಪ

2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರಿದ ಚರ್ಚೆ

**ಡಾ॥ ತಾಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟ ತಮಗೆ ಧನ್ಯವಾದಗಳು, ಬಹುಶಃ ಇದು ನನ್ನ 6ನೇ ವರ್ಷದಲ್ಲಿ ಪ್ರಾರಂಭದಲ್ಲಿಯೇ ನನಗೆ ಮಾತನಾಡಲು ಅವಕಾಶ ಸಿಕ್ಕಿದೆ. ಅದಕ್ಕಾಗಿ, ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ತಮ್ಮ ಅನುಮತಿಯನ್ನು ಪಡೆದು, ಈ ಒಂದು ಗಾಂಧಿ ಟೋಪಿಯನ್ನು ಹಾಕಿಕೊಂಡು ಮಾತನಾಡುವುದಕ್ಕೆ ನಾನು ಇಷ್ಟಪಡುತ್ತೇನೆ.

ಸನ್ಮಾನ್ಯ ಸಭಾಪತಿಯವರೆ, ಗಾಂಧಿ ಟೋಪಿ ಎಂದರೆ ಒಂದು ಕಾಲದಲ್ಲಿ ಕಾಂಗ್ರೆಸ್‌ನವರ ಒಂದು.... (ಗೊಂದಲ)

ಈ ಬಗ್ಗೆ ಮಾತನಾಡಲು ನಾನು ತಮ್ಮ ಅನುಮತಿಯನ್ನು ಕೇಳಿರುತ್ತೇನೆ.

**ಸಭಾಪತಿಯವರು:-** ಅವರು ಹಾಕಿರುವುದನ್ನು ನಾನು ಗಮನಿಸಿರಲಿಲ್ಲ.

**ಡಾ॥ ತಾಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಗಾಂಧಿ ಟೋಪಿ ಎಂದರೆ ಪ್ರಾರಂಭದಲ್ಲಿ ಕಾಂಗ್ರೆಸ್‌ನವರು ಹೆಚ್ಚಿನ ಸಂಖ್ಯೆಯಲ್ಲಿ ಗಾಂಧಿ ಟೋಪಿಯನ್ನು ಹಾಕಿಕೊಳ್ಳುವುದು ಒಂದು ರೀತಿಯಲ್ಲಿ symbol ಆಗಿತ್ತು.

(ಮುಂದು)

(362) 12.03.2026/5.30/ಎಸ್‌ವಿ (ಎಂವಿ)-ಎಕೆ (ಸಭಾಪತಿಯವರ ಉಪಸ್ಥಿತಿ)

**ಡಾ: ತಳವಾರ್ ಸಾಬಣ್ಣ (ಮುಂದು):-**

ನಮ್ಮ ಎದುರುಗಡೆ ಇಬ್ಬರು ದಿಗ್ಗಜರು ಇದ್ದಾರೆ. ಅದರಲ್ಲಿ ಒಬ್ಬರು ಕಾಂಗ್ರೆಸ್ ಪಕ್ಷದ ರಾಷ್ಟ್ರಮಟ್ಟದ ನೇತಾರರು ಹಾಗೂ ಈ ದೇಶದ ಪ್ರಥಮ ಪ್ರಧಾನಿ ಮಂತ್ರಿಗಳಾದ ಜವಾಹರ್‌ಲಾಲ್ ನೆಹರು ರವರು ಟೋಪಿ ಹಾಕಿರುವಂತಹ ಚಿತ್ರ ನಮ್ಮ ಎದುರುಗಡೆ ಇದೆ. ಮತ್ತೊಬ್ಬರು ಕಾಂಗ್ರೆಸ್ ಪಕ್ಷದವರೆ ಅತ್ಯಂತ ಪ್ರಾಮಾಣಿಕ ಪ್ರಧಾನ ಮಂತ್ರಿಗಳಾಗಿದಂತಹ ಲಾಲ್ ಬಹುದೂರ್ ಶಾಸ್ತ್ರಿಯವರು ಸಹ ಟೋಪಿ ಹಾಕಿರುವುದು ಕಾಣುತ್ತಿದೆ. ಆದರೆ, ಇಲ್ಲಿ ಕಾಂಗ್ರೆಸ್‌ನವರು ಯಾರೂ ಇಲ್ಲ. ಆದರೆ, ಅವರು ಟೋಪಿ ಹಾಕಿರುವುದನ್ನು ಕಾಣುತ್ತೇವೆ. ಆದರೆ, ಇವತ್ತು ಕಾಂಗ್ರೆಸ್‌ನವರು ಟೋಪಿ ಹಾಕುವುದನ್ನು ಬಿಟ್ಟಿದ್ದಾರೆ. ಅವರು ಅದನ್ನು ಏಕೆ ಬಿಟ್ಟಿದ್ದಾರೆಂದರೆ, ಅವರು ಆ ಟೋಪಿಯನ್ನು ಜನರಿಗೆ ಹಾಕುತ್ತಿದ್ದಾರೆ. ಅವರು ಈ ಬಜೆಟ್ ಮುಖಾಂತರ ಕಾಂಗ್ರೆಸ್ ಪಕ್ಷದವರು ರಾಜ್ಯದ

ಏಳೂವರೆ ಕೋಟಿ ಜನರಿಗೆ ಟೋಪಿಯನ್ನು ಹಾಕಿದ್ದಾರೆ. ಆ ಏಳೂವರೆ ಕೋಟಿ ಟೋಪಿ ಹಾಕಿಸಿಕೊಂಡಿರುವುದರಲ್ಲಿ ನಾನೂ ಒಬ್ಬ ಇದ್ದೇನೆ ಎಂದು ತಿಳಿದುಕೊಂಡು ತಮ್ಮ ಎದುರುಗಡೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಪಿ.ಹೆಚ್.ಪೂಜಾರ್ ರವರು ಪೀಠವನ್ನು ಅಲಂಕರಿಸಿದರು)**

ಇವತ್ತು ಗೌರವಾನ್ವಿತ ಮುಖ್ಯಮಂತ್ರಿಗಳು ರೂ.4,48,004/- ಲಕ್ಷ ಕೋಟಿಯಷ್ಟು ದೊಡ್ಡ ಗಾತ್ರದ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಈ ಬಜೆಟ್ ಅನ್ನು ನೋಡಿದಾಗ, ಅದರ ಗಾತ್ರ ದೊಡ್ಡದಿದೆ. ನಮ್ಮ ಬೆಳಗಾವಿ ಜಿಲ್ಲೆಯಲ್ಲಿ ನಾವು ತಿರುಗಾಡಬೇಕಾದರೆ, ದೊಡ್ಡ ದೊಡ್ಡ Sweet Mart ಗಳಿವೆ. ನಾವು ಆ ಸ್ವೀಟ್‌ಗಳನ್ನು ನೋಡಿದಾಗ ಬಹಳ ಚೆನ್ನಾಗಿರುತ್ತದೆ. ಅಲ್ಲಿ ವಿವಿಧ ರೀತಿಯ ಸಿಹಿಗಳನ್ನು ಕಾಣುತ್ತೇವೆ. ನಾವು ಕೇವಲ ಅವುಗಳನ್ನು ದೂರದಿಂದ ನೋಡಬೇಕು. ಅವುಗಳನ್ನು ಹತ್ತಿರ ಹೋಗಿ ತಿನ್ನುವಂತಿಲ್ಲ. ಈಗ ಸಿಹಿರೋಗ ಇರುವುದರಿಂದ ಯಾರೂ ಸಹ ಅದರ ಬಳಿಗೆ ಹೋಗುವುದಿಲ್ಲ. ನಾವು ಆ ರೀತಿ ಇದು ದೊಡ್ಡ ಗಾತ್ರ ಇರುವಂತಹ ಈ ಒಂದು ಬಜೆಟ್ ಅನ್ನು ನೋಡಿದಾಗ, ಅದರ ಹತ್ತಿರ ಹೋದಾಗ, ಅಂದರೆ "ದೂರದ ಬೆಟ್ಟ ನುಣ್ಣಗೆ" ಎಂದು ಹೇಳುತ್ತೇವೆ. ನಮ್ಮ ಭಾಷೆಯಲ್ಲಿ ಹೇಳಬೇಕಾದರೆ, ದೂರದ ಬೆಟ್ಟ ನುಣ್ಣಗೆ ಬಹಳ ಚೆಂದವಾಗಿ ಕಾಣುತ್ತದೆ. ಆದರೆ, ಆ ಬೆಟ್ಟದ ಹತ್ತಿರ ಹೋದಾಗ, ಅಲ್ಲಿ ಕಲ್ಲು, ಮುಳ್ಳು ಮತ್ತು ಗಿಡಗಂಟೆ ಮಾತ್ರ ಕಾಣಿಸುತ್ತದೆ. ಏಕೆಂದರೆ, ಇಲ್ಲಿ 2022-23ರಲ್ಲಿ ಅಥವಾ 2023-24 ಅನ್ನು ಗಣನೆಗೆ ತೆಗೆದುಕೊಂಡಾಗ ಆಗ ಇದ್ದಂತಹ ಬಜೆಟ್‌ನ ಗಾತ್ರ ಮತ್ತು ಈಗಿನ ರೂ.4,48,004/- ಲಕ್ಷ ಕೋಟಿ ಬಜೆಟ್‌ನ ಗಾತ್ರ ತೆಗೆದುಕೊಂಡಾಗ ಹೆಚ್ಚು ಕಡಿಮೆ ಬಜೆಟ್‌ನ ಗಾತ್ರ ಡಬಲ್ ಆಗಿದೆ. ಆದರೆ, ಇಲ್ಲಿ capital expenditure ಆ ಪ್ರಮಾಣದಲ್ಲಿ ಹೆಚ್ಚಾಗಿಲ್ಲ. ಏಕೆಂದರೆ, 2024-25ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರುವಂತಹ ಬಜೆಟ್ ಗಾತ್ರದಲ್ಲಿ ಸುಮಾರು 57,000/- ಕೋಟಿ ರೂಪಾಯಿಗಳನ್ನು capital expenditure ಗೆ ಎಂದು ಇಟ್ಟಿದ್ದರು. ಆಮೇಲೆ 2025-26ರಲ್ಲಿ 68,000/- ಕೋಟಿ ರೂಪಾಯಿಗಳನ್ನು capital expenditure ಗೆ ಇಟ್ಟಿದ್ದರು. ಕೊನೆಗೆ ಫೆಬ್ರವರಿ ಮತ್ತು ಮಾರ್ಚ್‌ನ ಕೊನೆಗೆ ಬಂದಾಗ ಅದು revise ಆದಾಗ ಅದು ಸುಮಾರು 62,000/- ಕೋಟಿ ರೂಪಾಯಿಗಳಿಗೆ ಆಗಿದೆ. ಅಂದರೆ, ಅವರೇ announce ಮಾಡಿರುವಂತಹ capital expenditure ನಲ್ಲಿ ಸರಿ ಸುಮಾರು ಶೇಕಡಾ 7 ರಿಂದ 8 ರಷ್ಟು ಕಡಿಮೆಯಾಗಿರುವುದನ್ನು ಕಾಣುತ್ತೇವೆ. ಈಗ capital expenditure ಹೆಚ್ಚಿಗೆ ಆಗಬೇಕು.

ಆದರೆ, ಅದು ಕಡಿಮೆಯಾಗಿದೆ. ಈಗ ಸುಮಾರು 71,000/- ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದಾರೆ. ನಾನು ಏಕೆ capital expenditure ಬಗ್ಗೆ ಉಲ್ಲೇಖ ಮಾಡುತ್ತೇನೆಂದರೆ, ನಾನೊಬ್ಬ ಅರ್ಥಶಾಸ್ತ್ರದ ವಿದ್ಯಾರ್ಥಿ ಮತ್ತು ಪ್ರಾಧ್ಯಾಪಕ. ಈ capital expenditure ನಿಂದ ಉದ್ಯೋಗಗಳು ನಿರ್ಮಾಣವಾಗುತ್ತವೆ. Asset ನಿರ್ಮಾಣವಾಗುವುದರಿಂದ ಉದ್ಯೋಗಗಳು ನಿರ್ಮಾಣವಾಗುತ್ತವೆ. ಅವು ಅಭಿವೃದ್ಧಿಗೆ ಪೂರಕವಾಗುತ್ತವೆ. ಈಗ capital expenditure ತೆವಳುತ್ತಾ ಮೇಲಕ್ಕೆ ಹೋದರೆ, slow ಆಗಿ ಮೇಲಕ್ಕೆ ಹೋದರೆ ಇಲ್ಲಿ ಉದ್ಯೋಗ ನಿರ್ಮಾಣವೂ ಸಹ ಆ ಪ್ರಮಾಣದಲ್ಲಿ ಇರುತ್ತದೆಯೇ ವಿನಃ ಹೆಚ್ಚಿನ ಪ್ರಮಾಣದಲ್ಲಿ ಇರುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪ್ರಾರಂಭದಲ್ಲಿ ಚುನಾವಣೆಗಿಂತ ಮೊದಲು ಈ ಸರ್ಕಾರದವರು ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿದರು. ಅವರು ಕಾರ್ಡ್‌ನಲ್ಲಿ ಸಹಿ ಮಾಡಿ ಹಳ್ಳಿ ಹಳ್ಳಿಗಳಿಗೆ ಕೊಟ್ಟಿದ್ದಾರೆ. ನಂತರ 2023ರಲ್ಲಿ ಈ ಐದು ಗ್ಯಾರಂಟಿಗಳನ್ನು ಅವರು ಅನುಷ್ಠಾನಕ್ಕೂ ಸಹ ತಂದಿದ್ದಾರೆ. ಅವರು ಈ ಗ್ಯಾರಂಟಿಗಳನ್ನು ಯಾವ ಕಾರಣಕ್ಕಾಗಿ ತಂದರು ಎಂದರೆ, ಮಹಿಳೆಯರಿಗೆ, ಯುವಕರಿಗೆ ಮತ್ತು ಬಡ ಕುಟುಂಬಗಳ ಏಳಿಗೆಗಾಗಿ ಅವರಿಗೆ ಬೆಂಬಲ ಕೊಡಬೇಕು ಎಂಬ ಉದ್ದೇಶದಿಂದ ಈ ಐದು ಗ್ಯಾರಂಟಿಗಳನ್ನು ತಂದಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ಅದಕ್ಕನುಸಾರವಾಗಿ 2023ರಿಂದ ಇಲ್ಲಿಯವರೆಗೆ ಸುಮಾರು 51,000/- ರಿಂದ 52,000/- ಕೋಟಿ ರೂಪಾಯಿಗಳನ್ನು ಗ್ಯಾರಂಟಿಗಳಿಗಾಗಿ ಇಟ್ಟಿರುವುದನ್ನು ನಾವು ಕಾಣುತ್ತೇವೆ. ಇದರಿಂದ ಏನಾಯಿತು ಎಂದರೆ, ಈ ಗ್ಯಾರಂಟಿಗಳಿಗಾಗಿ ಕಾಯ್ದಿರಿಸಿದ ಹಣದಿಂದ revenue expenditure ಹೆಚ್ಚಾಯಿತು. ಈ revenue expenditure ಹೆಚ್ಚಾದುದರಿಂದ, fiscal deficit ಸಹ ಹೆಚ್ಚಾಯಿತು. ಪ್ರಾರಂಭದಲ್ಲಿ 2.6 ಇದ್ದದ್ದು, ಈಗ 2.97 ಗೆ ಬಂದು ನಿಂತಿದೆ. ಏಕೆಂದರೆ, fiscal deficit ಹೆಚ್ಚಾದಂತೆ ಇಲ್ಲಿ ಬೆಲೆಗಳು ಹೆಚ್ಚಾಗುತ್ತಾ ಹೋಗುತ್ತವೆ. ಇದರಿಂದ inflation ಹೆಚ್ಚಾಗುತ್ತಾ ಹೋಗುತ್ತದೆ. ಇದು ಅರ್ಥಶಾಸ್ತ್ರ. ನಾನು ಅರ್ಥಶಾಸ್ತ್ರವನ್ನು ಅರ್ಥ ಮಾಡಿಸುವಂತಹ ಪ್ರಯತ್ನ ಮಾಡುತ್ತಿದ್ದೇನೆ. ನಾನು ಯಾವುದನ್ನು ರಾಜಕೀಯವಾಗಿ ಮಾತನಾಡುತ್ತಿಲ್ಲ. ಇನ್ನು fiscal deficit ಹೆಚ್ಚಾಗಿರುವುದನ್ನು ನಾವು ಕಾಣುತ್ತೇವೆ. ಇನ್ನೊಂದು ಕಡೆ ಸರ್ಕಾರ ಏನು ಹೇಳುತ್ತದೆಂದರೆ, ನಾವು ಐದು ಗ್ಯಾರಂಟಿಗಳನ್ನು ಕೊಟ್ಟಿರುವುದರಿಂದ per capita income ಹೆಚ್ಚಾಗಿದೆ ಎಂದಿದೆ. ವೈಯಕ್ತಿಕ ತಲಾದಾಯ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಈಗ ತಲಾದಾಯ ಎಂದರೆ, ಈಗ ಒಂದು ಕುಟುಂಬಕ್ಕೆ ಅವರ ಮೂಲ ಆದಾಯವಿರುತ್ತದೆ. ಅಲ್ಲಿ ಮನೆಯವರು ಕೆಲಸ ಮಾಡುತ್ತಿರುತ್ತಾರೆ. ಅವರು ಇದರಿಂದ ಸುಮಾರು

ರೂ.10,000/- ರಿಂದ ರೂ.20,000/- ಆದಾಯ ಬರುತ್ತಿದ್ದರೆ. ಆ ಮನೆಯ ಗೃಹಿಣಿಗೆ ಪ್ರತಿ ತಿಂಗಳು ರೂ.2,000/- ಬಂದರೆ, ಅದು ವಾರ್ಷಿಕವಾಗಿ 24,000/- ರೂಪಾಯಿ ಆಗುತ್ತದೆ. ಆ ಮೂಲ ಕುಟುಂಬದ ಆದಾಯ ರೂ.20,000/- ಗೃಹಲಕ್ಷ್ಮಿ ಹಣ ರೂ.24,000/-. ಈ 24,000/- ರೂಪಾಯಿಗಳನ್ನು ಗೃಹಲಕ್ಷ್ಮಿಗೆ ಕೊಟ್ಟಿದ್ದು ಆದಾಯವಲ್ಲ. ಈಗ ನಾವು ಯಾವುದನ್ನು ದುಡಿದು ಹಣ ಸಂಪಾದಿಸುತ್ತೇವೆಯೋ ಅದು ಆದಾಯವಾಗುತ್ತದೆ. ಇದು ಹೆಚ್ಚುವರಿಯಾಗಿ ಬಂದಂತಹ ಸಂಭಾವನೆ. ಆದರೂ ಸಹಿತ ಸರ್ಕಾರವು ಕೊಟ್ಟಿರುವಂತಹ ದೊಡ್ಡದೊಡ್ಡ ad (advertisement) ಪ್ರಕಾರ, ಇವುಗಳನ್ನು ಪೂರ್ತಿ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅಂದರೆ, ಪೂರ್ತಿ ಪತ್ರಿಕೆಯಲ್ಲಿ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ದೊಡ್ಡ ದೊಡ್ಡ ವ್ಯಕ್ತಿಗಳು ಅವರೆಲ್ಲರೂ ಸಹ ಫೋಟೋದಲ್ಲಿದಾರೆ. ಅವರು ಇಲ್ಲಿಗಿಂತ ಬಹಳ ಸ್ಮಾರ್ಟ್ ಆಗಿ ಮತ್ತು ಚೆಂದವಾಗಿ ಕಾಣುವುದನ್ನು ನೋಡಿದ್ದೇವೆ. ಈ per capita income ಹೆಚ್ಚಾಯಿತು ಎಂದು ಹೇಳುತ್ತಾರೆ. ಅದು ಅವರ ಪ್ರಕಾರ ಒಪ್ಪಿದರೂ ಸಹ per capita expenditure ಹೆಚ್ಚಾಗಿದೆಯೆ ಎಂದು ನಾವು ಇದರ ಬಗ್ಗೆ ಯೋಚನೆ ಮಾಡಬೇಕು. ಈಗ per capita income ಹೆಚ್ಚಾದಾಗ, per capita expenditure ಸಹಿತ ಹೆಚ್ಚಾಗಬೇಕು. ಏಕೆಂದರೆ, per capita expenditure ಯಾವಾಗ ಹೆಚ್ಚಾಗುತ್ತದೆಂದರೆ, ನಮಗೆ ಬರುವಂತಹ ಆದಾಯವನ್ನು ಖರ್ಚು ಮಾಡಿದಾಗ. ನಾವು ಯಾವುದಕ್ಕೆ ಖರ್ಚು ಮಾಡುತ್ತೇವೆಂದರೆ, ನಾವು ಎರಡು ರೀತಿಯ ಉದ್ದೇಶಗಳಿಗೆ ಖರ್ಚು ಮಾಡುತ್ತೇವೆ. ಒಂದು ಉತ್ಪಾದಕ ವಸ್ತುಗಳ ಮೇಲೆ ಮತ್ತೊಂದು ಅನುತ್ಪಾದಕ ವಸ್ತುಗಳ ಮೇಲೆ ಖರ್ಚು ಮಾಡುತ್ತೇವೆ. ಈಗ ಉತ್ಪಾದಕ ವಸ್ತುಗಳ ಮೇಲೆ ನಾವು ಖರ್ಚು ಮಾಡುವುದರಿಂದ ಅದು ನಮಗೆ ಲಾಭವಾಗುತ್ತಿರುತ್ತದೆ. ಅದು ಅಲ್ಪಾವಧಿ ಉತ್ಪಾದಕತೆ. ಈಗ ಯಾವುದೋ ಒಂದು ಅಂಗಡಿಯನ್ನು ತೆರೆಯುತ್ತೇವೆ. ಆ ಅಂಗಡಿ ತೆರೆದ ಮೇಲೆ ಅದರಿಂದ ನಮಗೆ ಪ್ರತಿ ತಿಂಗಳು ಆದಾಯ ಬರುತ್ತದೆ. ಅದು ತಕ್ಷಣಕ್ಕೆ ಬರುವಂಥದ್ದು. ಇನ್ನು ದೀರ್ಘಾವಧಿಗೆ ಬರುವಂಥದ್ದು. ಅಂದರೆ, ನಾವು ಶಿಕ್ಷಣ ಮೇಲೆ ಖರ್ಚು ಮಾಡುತ್ತೇವೆ. ಆರೋಗ್ಯದ ಮೇಲೆ ಖರ್ಚು ಮಾಡುತ್ತೇವೆ. ಈ ಖರ್ಚುಗಳನ್ನು ಮಾಡಿದ ಮೇಲೆ ಅದು ಕುಟುಂಬಕ್ಕೆ ಅನುಕೂಲವಾದಾಗ ಅದರ ಪ್ರತಿಫಲ ಉತ್ಪಾದಕತೆ ಎಂದು ಹೇಳುತ್ತೇವೆ. ಇನ್ನು ಅನುತ್ಪಾದಕ ಎಂದರೆ, ಅನುತ್ಪಾದಕ ವಸ್ತುಗಳ ಮೇಲೆ ಖರ್ಚು ಮಾಡಿದಾಗ, ಅದರಿಂದ ಯಾವುದೇ ರೀತಿಯಾದಂತಹ ಲಾಭ ಬರುವುದಿಲ್ಲ. ನಾನು ಉದಾಹರಣೆಯನ್ನು ಹೇಳುತ್ತೇನೆ, ಒಬ್ಬ ಗೃಹಿಣಿಗೆ ಹಣ ಬಂದಾಗ, ಅವಳ ಗಂಡನು ಅವಳ ಹಣವನ್ನು ತೆಗೆದುಕೊಂಡು ಸೇರೆ ಅಂಗಡಿಗೆ ಹೋಗಿ ಕುಡಿದರೆ, ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅದು ಅನುತ್ಪಾದಕ. ಇನ್ನು ಉತ್ತರ

ಕರ್ನಾಟಕದಲ್ಲಿ ಸಾಮಾನ್ಯವಾಗಿ ಹಿಂದುಳಿದ ವರ್ಗದವರು ದೇವರುಗಳ ಹೆಸರಿನಲ್ಲಿ ಕುರಿ ಕಡಿಯುವಂತಹ ಕೆಲಸ ಮಾಡುತ್ತಾರೆ. ಅಂದರೆ, ಕುರಿ ಕಡಿಯುವುದು ಅನುತ್ಪಾದಕ. ಈ ರೀತಿಯಾಗಿ ಕೇವಲ ad ಮುಖಾಂತರ ನಮ್ಮ ಸಾಧನೆಯನ್ನು ಹೇಳುವುದಕ್ಕಿಂತ ಮೊದಲು, ನಾವು ಕೊಟ್ಟಂತಹ ಹಣವು ಯಾವ ರೀತಿಯಾಗಿ ಬಳಕೆಯಾಗಿದೆ? ಈಗ per capita expenditure increase ಆಗಿದೆಯೋ ಇಲ್ಲವೋ? ಅದು ಉತ್ಪಾದಕ ವಸ್ತುಗಳ ಮೇಲೆ ಆಗಿದೆಯೋ ಇಲ್ಲವೋ? ಈಗ ಎಲ್ಲೋ ಒಂದು ಕಡೆಯಲ್ಲಿ ಹೋಳಿಗೆ ಊಟ ಕೊಟ್ಟರೆ, ಮತ್ತೆ ಎಲ್ಲೋ ಒಂದು celebration ಮಾಡಿದರೆ, ಅದು ಯಾವುದೇ ರೀತಿಯ ಉತ್ಪಾದಕತೆ ಆಗುವುದಿಲ್ಲ. ಅದರಿಂದ ಉಪಯೋಗವಾಗುವುದಿಲ್ಲ. ಹೀಗಾಗಿ, ಈ ಗ್ಯಾರಂಟಿಗಳ ಪರಿಣಾಮ ಕುರಿತು ಒಂದು ಅಧ್ಯಯನ ಆಗಬೇಕು. ಅದರ ಅಧ್ಯಯನ ಆದಾಗ ಮಾತ್ರ ಅದರ ಪರಿಣಾಮ ಕುರಿತು ನಮಗೆ ಅನುಕೂಲವಾಗುತ್ತದೆ ಎಂಬುದು ನನ್ನ ಒಂದು ಸಂದೇಶ. ಇನ್ನು ಎರಡನೆಯದು ಏನೆಂದರೆ, ಸಾಮಾನ್ಯವಾಗಿ ಬಜೆಟ್‌ನಲ್ಲಿ ಎರಡು ಉದ್ದೇಶಗಳು ಇರುತ್ತವೆ. ಅದರಲ್ಲಿ ವಿಶೇಷವಾಗಿ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳ ಪ್ರಕಾರ ಒಂದು ಸಾಮಾಜಿಕ ನ್ಯಾಯ. ನಾನು ಸಾಮಾಜಿಕ ನ್ಯಾಯದ ಪರವಾಗಿ ಇದ್ದೇನೆ ಎಂದು ಘಂಟಾಘೋಷವಾಗಿ ಮಾಧ್ಯಮಗಳ ಎದುರುಗಡೆ ಮಾನ್ಯ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಮತ್ತೊಂದು ಏನು ಹೇಳುತ್ತಾರೆಂದರೆ, ನಾನು ಸಾಮಾಜಿಕ ನ್ಯಾಯದ ಪರವಾಗಿ ಇದ್ದರೂ ಸಹಿತ ಅಭಿವೃದ್ಧಿಯನ್ನು ಬಿಟ್ಟಿಲ್ಲ. ನಾನು ಅಭಿವೃದ್ಧಿಯ ಪರವಾಗಿಯೂ ಇದ್ದೇನೆ.

(ಮುಂದು)

(363) 12.03.2026 05.40 ಎಂವಿ(ಎಸ್‌ವಿ)-ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಡಾ:ತಳವಾರ್ ಸಾಬಣ್ಣ (ಮುಂದು):-**

ಒಂದು ಕಡೆ "ನಾನು ಸಾಮಾಜಿಕ ನ್ಯಾಯದ ಪರವಾಗಿ ಇದ್ದೇನೆ" ಎಂದು ಘಂಟಾಘೋಷವಾಗಿ ಮಾಧ್ಯಮಗಳೆದುರು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಇನ್ನೊಂದು ಕಡೆ "ಸಾಮಾಜಿಕ ನ್ಯಾಯದ ಪರವಾಗಿದ್ದರೂ ಸಹ ನಾನು ಅಭಿವೃದ್ಧಿ ಬಿಟ್ಟಿಲ್ಲ. ನಾನು ಅಭಿವೃದ್ಧಿ ಪರವಾಗಿ ಇದ್ದೇನೆ" ಎಂದು ಹೇಳುತ್ತಾರೆ. ಇದು ಕೇಳಲಿಕ್ಕೆ ಬಹಳ ಖುಷಿಯೆನಿಸುತ್ತದೆ. ಸಾಮಾಜಿಕ ನ್ಯಾಯ ಎಂದರೇನು? ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ. ಹಣ ತೆಗೆದುಕೊಂಡು ಗ್ಯಾರಂಟಿಗಳಿಗೆ ವರ್ಗಾವಣೆ ಮಾಡುವುದು, ಇದು ಸರಿಯೇ? ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯಲ್ಲಿರುವ ಹಣವನ್ನು ವರ್ಗಾವಣೆ ಮಾಡಿ ಹಣ ಕೊಡುವುದು ಇದು ಯಾವ ರೀತಿಯಾದ ಸಾಮಾಜಿಕ ನ್ಯಾಯ? ದಲಿತರಿಗೆ, ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ಪಂಗಡದವರಿಗೆ ಯಾವ ರೀತಿಯಾದ ನ್ಯಾಯವನ್ನು ಒದಗಿಸಲಾಗುತ್ತದೆ. ನಾವು ವಿರೋಧ ಪಕ್ಷದವರಾಗಿ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಹಣವನ್ನು ತೆಗೆದುಕೊಂಡಿದ್ದೀರೆಂದು ಆರೋಪ

ಮಾಡುತ್ತಿದ್ದೇವೆ. ಗ್ಯಾರಂಟಿಗಳಿಗೆ ಹಣ ವರ್ಗಾವಣೆ ಮಾಡಿದ್ದೀರೆಂದು ಹೇಳುತ್ತಿದ್ದೇವೆ. ಕೆಲವು ಕಡೆ ಅವರು "ಹೌದು" ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಅದಕ್ಕೆ ಶ್ವೇತಪತ್ರ ತಂದಿಲ್ಲ. ಇದು ಸತ್ಯವೋ ಅಥವಾ ಸುಳ್ಳೋ ಎನ್ನುವ ಬಗ್ಗೆ ಸರ್ಕಾರ ಒಂದು ಶ್ವೇತಪತ್ರ ತರಬೇಕು ಎನ್ನುವುದು ನನ್ನ ಆಗ್ರಹವಾಗಿದೆ. ಏಕೆಂದರೆ ಇದು ನನಗೆ ಇರುವಂಥ ಸಂಶಯ. ನಮ್ಮ ಸಂಶಯವನ್ನು ಅವರು ಪರಿಹರಿಸಬೇಕು. ನಾವು ಎಸ್.ಸಿ.ಎಸ್.ಪಿ./ ಟಿ.ಎಸ್.ಪಿ. ಹಣವನ್ನು ಬಳಸಿಲ್ಲ, ಗ್ಯಾರಂಟಿಗಳಿಗಾಗಿ ಕಾಯ್ದಿಟ್ಟ ಹಣವನ್ನು ಕೊಟ್ಟಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳುವ ಮೂಲಕ ನಮ್ಮ ಸಂಶಯವನ್ನು ಪರಿಹರಿಸಬೇಕೆಂದು ಆಗ್ರಹಿಸುತ್ತೇನೆ.

ಮಾನ್ಯ ಸಭಾಪತಿಯವರೆ, ಇನ್ನು ಸಾಮಾಜಿಕ ನ್ಯಾಯದ ಬಗ್ಗೆ ಹೇಳುವುದಾದರೆ ಒಳ ಮೀಸಲಾತಿಯ ನೆವದಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಲಾಗಿದೆ. ಈ ಬಜೆಟ್‌ನಲ್ಲಿ 56,000 ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದ್ದಾರೆ. ಈ 56,000 ಹುದ್ದೆಗಳನ್ನು ತುಂಬಬೇಕಾದರೆ ಒಳ ಮೀಸಲಾತಿಯ ಕಗ್ಗಂಟು ಅವರಿಗೆ ಅರ್ಥವಾಗುತ್ತಿಲ್ಲ. ಯಾವ ರೀತಿಯಿಂದ ಅದನ್ನು ಬಿಡಿಸಿಕೊಳ್ಳಬೇಕು? ಬಿಡಿಸಿಕೊಳ್ಳಬೇಕಾದರೆ ಯಾವ ಸಮುದಾಯಕ್ಕೆ ಧಕ್ಕೆಯಾಗುತ್ತದೆ, ಯಾವ ಸಮುದಾಯಕ್ಕೆ ಧಕ್ಕೆಯಾಗಬಾರದು ಇವೆಲ್ಲವನ್ನೂ ನೋಡಬೇಕು. ಇವರು ನಿರ್ಧಾರವನ್ನು ತೆಗೆದುಕೊಂಡ ಮೇಲೆ ಈ ಕೇಸ್ ನ್ಯಾಯಾಲಯಕ್ಕೆ ಹೋದರೆ, ಇವರು ಅದನ್ನು ಭರ್ತಿ ಮಾಡುವುದು ಯಾವಾಗ? ಅಂದರೆ 56,000 ಹುದ್ದೆಗಳನ್ನೇನು ಘೋಷಣೆ ಮಾಡಿದ್ದಾರೆ, ಅದು ಕೇವಲ ಘೋಷಣೆಯಾಗಿಯೇ ಉಳಿಯಬಾರದು ಎನ್ನುವುದು ನಮ್ಮ ಅಪೇಕ್ಷೆ. ಯುವಕರು ಕಾಯುತ್ತಿದ್ದಾರೆ. ಇತ್ತೀಚೆಗೆ ಧಾರವಾಡದಲ್ಲಿ ಸಾವಿರಾರು ನಿರುದ್ಯೋಗಿ ಯುವಕರು ಪ್ರತಿಭಟನೆ ಮಾಡಿದರು. ನಾನೂ ಸಹ ನಿರುದ್ಯೋಗಿಯಾಗಿದ್ದಾಗ ಯಾವಾಗ ನೇಮಕಾತಿ ಅಧಿಸೂಚನೆ ಬರುತ್ತದೆ, ಯಾವಾಗ ನಾನು ನೇಮಕಗೊಳ್ಳುತ್ತೇನೆ ಎಂದು ಕನಸು ಕಾಣುತ್ತಿದ್ದೆನು. ಅದೇ ರೀತಿಯಾಗಿ ಇಂದಿನ ಯುವಕರು ಕಾಯುತ್ತಿರುವುದನ್ನು ನಾವು ಇಲ್ಲಿ ಕಾಣುತ್ತೇವೆ.

ಇನ್ನೊಂದು ವಿಷಯವೆಂದರೆ ಸಾಮಾಜಿಕ ನ್ಯಾಯ ಎಂದು ಹೇಳುತ್ತಾರೆ. ಡಾ: ನಾಗಮೋಹನ್ ದಾಸ್ ಅವರು ಕೊಟ್ಟಂಥ ವರದಿಗೆ ವಿರುದ್ಧವಾಗಿ ಮೀಸಲಾತಿಯನ್ನು ಕೊಟ್ಟಿದ್ದಾರೆ. ಅಂದರೆ ಪರಿಶಿಷ್ಟ ಜಾತಿಯಲ್ಲಿ ಕೆಲವು ವರ್ಗಗಳನ್ನು ಓಲೈಸುವ ಕಾರಣಕ್ಕಾಗಿ ಅಲೆಮಾರಿ ಜನಾಂಗದವರನ್ನು ಬಲಿ ಕೊಟ್ಟಿರುವುದು ಸಾಮಾಜಿಕ ನ್ಯಾಯವೇ ಎಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಪ್ರಶ್ನೆ ಮಾಡುತ್ತೇನೆ. ಬಲಿ ಕೊಡಬಾರದಲ್ಲವೆ? ಆಮೇಲೆ ನಿಮಗೆ ಒಂದು ವ್ಯವಸ್ಥೆ ಮಾಡಿಕೊಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಯವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಈ ಆಶ್ವಾಸನೆ ಇಲ್ಲಿ ಜಾರಿಗೆ ಬರಲಿಲ್ಲ. ಅವರು ಅದೇ ರೀತಿಯಾಗಿ ಕಾಯುತ್ತಿದ್ದಾರೆ. ಅವರಿಗೆ ಏನು ಉತ್ತರ ಕೊಡುವುದು? ಪ್ರವರ್ಗ-1ರಲ್ಲಿ ಎಲ್ಲಾ ಸಮುದಾಯಗಳಿಗೆ ಮೀಸಲಾತಿ ಹೆಚ್ಚಿಗೆ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿಯಲ್ಲಿ, ಪರಿಶಿಷ್ಟ ಪಂಗಡದಲ್ಲಿ ಮೀಸಲಾತಿ ಹೆಚ್ಚಿಗೆ ಮಾಡುತ್ತಿದ್ದಾರೆ. ಪ್ರವರ್ಗ-1ರಲ್ಲಿ ಬರುವಂಥ 90 ಜಾತಿಗಳು ಆ ಕಡೆ ಮೇಲ್ವರ್ಗವೂ ಅಲ್ಲ, ಈ ಕಡೆ ಕೆಳ ವರ್ಗವೂ ಅಲ್ಲ. ಆದರೆ ಸಾಮಾಜಿಕವಾಗಿ ಮತ್ತು

ಆರ್ಥಿಕವಾಗಿ ಅತ್ಯಂತ ದುಸ್ಥಿತಿಯಲ್ಲಿರುವಂಥ ಸಮುದಾಯಗಳಾದ ಅಲೆಮಾರಿಗಳೂ ಸಹ ಇದರಲ್ಲಿ ಒಳಗೊಂಡಿದ್ದಾರೆ. 40 ಅಲೆಮಾರಿ ಸಮುದಾಯಗಳು ಅದರಲ್ಲಿ ಒಳಗೊಂಡಿವೆ. ಈ ಪ್ರವರ್ಗ-1 ರ ಸಂಖ್ಯೆ ಶೇ.8 ರಷ್ಟಿದೆ. ಆದರೆ ಈ ಸಲ ಕೊಟ್ಟಿರುವುದು ಕೇವಲ 4%. ಅಂದರೆ ಇವರಿಗೆ 7-8% ಮೀಸಲಾತಿಯನ್ನು ಕೊಡಬೇಕಾಗಿತ್ತು. ಹಾವನೂರು ವರದಿಯಲ್ಲಿ ಅವರಿಗೆ 7% ಕೊಟ್ಟಿತ್ತು. ಹೆಚ್ಚು ಮಾಡುವುದರ ಬದಲಾಗಿ ಕಡಿಮೆ ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಯಾವ ಮೀಸಲಾತಿ ಸೌಲಭ್ಯಗಳಿದ್ದವೋ ಅದು ಪ್ರವರ್ಗ-1ಕ್ಕೂ ಸಹ ಈ ಮೊದಲು ಇತ್ತು. ನಾವೇ ತೆಗೆದುಕೊಂಡಿದ್ದೇವೆ. ಆದರೆ ಇವತ್ತು ತೆಗೆದು ಹಾಕಿದ್ದಾರೆ. ಇದು ಯಾವ ರೀತಿಯಾಗಿರುವಂಥ ಮೀಸಲಾತಿ? ಅಂದರೆ ಪ್ರವರ್ಗ-1ಕ್ಕೆ ಇದು ಅನ್ಯಾಯ ಮಾಡಿದಂತಲ್ಲವೆ? ಇದರ ಬಗ್ಗೆ ನಾವು ಇಲ್ಲಿ ಯೋಚನೆ ಮಾಡಬೇಕು.

ಇವತ್ತು ಎಷ್ಟೋ ಸಮುದಾಯಗಳು ಪರಿಶಿಷ್ಟ ಪಂಗಡದಲ್ಲಿ ಸೇರಬೇಕೆಂದು ಕಾದುನಿಂತಿವೆ. ನಿನ್ನೆ ನಾವು ಕೋಲಿ, ಕಬ್ಬಲಿಗ ಸಮಾಜಗಳ ಬಗ್ಗೆ ಮಾತನಾಡಿದೆವು. ಅದೇ ರೀತಿಯಾಗಿ ಕಾಡುಗೊಲ್ಲರು ಮತ್ತು ಇನ್ನೂ ಇತರೆ ಸಮುದಾಯಗಳವರಿದ್ದಾರೆ. ಪರಿಶಿಷ್ಟ ಪಂಗಡದಲ್ಲಿ ಸೇರಬೇಕೆಂದಿದ್ದಾರೆ. ಆದರೆ ಸಾಮಾಜಿಕ ನ್ಯಾಯದ ಪರವಾಗಿರುವ ಈ ಸರ್ಕಾರ ಆ ಸಮುದಾಯಗಳ ಬಗ್ಗೆ ಆಸಕ್ತಿ ತೋರಿಸುತ್ತಿಲ್ಲ. ನಾನು ನಿನ್ನೆ ಉಲ್ಲೇಖ ಮಾಡಿದೆ. ಕೋಲಿ, ಕಬ್ಬಲಿಗ ಸಮುದಾಯದ ಕಡತವು ಕೇಂದ್ರ ಸರ್ಕಾರದಿಂದ ಬಂದು ಎರಡೂವರೆ ವರ್ಷಗಳಾಗುತ್ತಾ ಬಂದಿತು. ಅದಕ್ಕೆ ಸರ್ಕಾರ ಯಾವುದೇ ರೀತಿಯಾಗಿ ಸ್ಪಂದಿಸಿರುವುದಿಲ್ಲ. ನಾವು strike ಮಾಡಿದೆವು, ಮುಖ್ಯಮಂತ್ರಿಯವರನ್ನು ಭೇಟಿಯಾದೆವು, ಸದನದಲ್ಲಿ ಪ್ರಶ್ನೆ ಮಾಡುತ್ತಿದ್ದೇವೆ. ಆದರೂ ಸಹಿತ ಅಲ್ಲಿ ಯಾವುದೇ ರೀತಿಯಾದ ಸ್ಪಂದನೆ ಸಿಗುತ್ತಿಲ್ಲ ಎಂದು ನಾನು ತಮ್ಮ ಮೂಲಕ ಹೇಳುವುದಕ್ಕಿಚ್ಛಿಸುತ್ತೇನೆ.

ಮೂರನೆಯದಾಗಿ ಸಾಮಾನ್ಯವಾಗಿ ಅಭಿವೃದ್ಧಿ ಎಂದರೇನು? ಮುಖ್ಯಮಂತ್ರಿಗಳು ನಾನು ಅಭಿವೃದ್ಧಿ ಪರವಾಗಿದ್ದೇನೆಂದು ಹೇಳುತ್ತಾರೆ. ಹೌದು, ಅಭಿವೃದ್ಧಿ ಪರವಾಗಿದ್ದೀರಿ, ಘೋಷಣೆಯಲ್ಲಿ. ಏಕೆಂದರೆ ಅಭಿವೃದ್ಧಿ ಆಗಬೇಕಾದರೆ ಕೃಷಿ ಮತ್ತು ಕೈಗಾರಿಕೆಗಳ ಬೆಳವಣಿಗೆಯಾಗಬೇಕು. ಅಭಿವೃದ್ಧಿ ಹೊಂದಬೇಕಾದರೆ ಹಿಂದುಳಿದ ಪ್ರದೇಶಗಳಲ್ಲಿ ಆರೋಗ್ಯ ಮತ್ತು ಶಿಕ್ಷಣದ ಬೆಳವಣಿಗೆಯಾಗಬೇಕು. ಅಭಿವೃದ್ಧಿ ಹೊಂದಬೇಕಾದರೆ 'Human Development Index' ಎಂದು ಏನು ಕರೆಯುತ್ತೇವೆ, ಅದು ಹೆಚ್ಚಾಗಬೇಕು. ಸೇವಾ ವಲಯದಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ನಾವು ಹೆಚ್ಚಿನ ಉತ್ತೇಜನ ಕೊಡಬೇಕು. ನಮ್ಮ ಸಣ್ಣ ಕೈಗಾರಿಕಾ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರಿಗೆ ಸಬ್ಸಿಡಿ ಕಡಿಮೆಯಾಗಿದೆಯೆಂದು ಮೊನ್ನೆ ಒಂದು ಪತ್ರಿಕೆಯಲ್ಲಿ ಓದಿದೆನು. ಅದರ ಬಗ್ಗೆ ನಾನು ಪ್ರಶ್ನೆಯನ್ನೂ ಹಾಕಿದ್ದೇನೆ. ಸಣ್ಣ ಕೈಗಾರಿಕೆಗಳು ಮತ್ತು ಸೂಕ್ಷ್ಮ ಕೈಗಾರಿಕೆಗಳಲ್ಲಿ ಶೇ.90ರಷ್ಟು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಒಟ್ಟಾರೆ ದುಡಿಯುವ ವರ್ಗಗಳಲ್ಲಿ ಶೇ.90ರಷ್ಟು ಕಾರ್ಮಿಕರು ಈ ವರ್ಗದಲ್ಲಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಈ ಕೈಗಾರಿಕೆಗಳು ಬಿರುಗಾಳಿಗೆ ಸಿಲುಕಿತು. ಅದರ ನಂತರ ನಾವು ಆರ್ಥಿಕ ಬದಲಾವಣೆಯನ್ನು ಕಾಣುತ್ತೇವೆ. ದೊಡ್ಡ ದೊಡ್ಡ ಕೈಗಾರಿಕಾ ವಲಯಗಳನ್ನು ಕಾಣುತ್ತೇವೆ.

ಅವರಿಗೆ compete ಮಾಡದಿರುವ ಕಾರಣಕ್ಕಾಗಿ ಕೆಲವೇ ಕಾರ್ಮಿಕರು, ಸಣ್ಣ ಬಂಡವಾಳ, ಸಣ್ಣ ವ್ಯವಹಾರ, ಸಣ್ಣ ಮಾರುಕಟ್ಟೆ ಈ ಎಲ್ಲದರಿಂದಾಗಿ ಇವರ ಬದುಕು ಇವತ್ತು ದುಸ್ಥಿತಿಯಲ್ಲಿದೆ. ಇದರ ಬಗ್ಗೆಯೂ ಆಯವ್ಯಯದಲ್ಲಿ ಯಾವುದೇ ಉಲ್ಲೇಖವಿಲ್ಲ ಎಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಇನ್ನು, ನೀರಾವರಿ ಬಗ್ಗೆ ಹೇಳಬೇಕಾದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ 11 ನೀರಾವರಿ ಯೋಜನೆಗಳಿವೆ. ಸುಮಾರು 25 ಟಿ.ಎಂ.ಸಿ. ನೀರು ಕಲ್ಯಾಣ ಕರ್ನಾಟಕ ಭಾಗದ ಜೀವಾಳ. ಏಕೆಂದರೆ ಅದು ಬರದ ನಾಡು. ಅಲ್ಲಿ ಒಣ ಬೇಸಾಯ ಪದ್ಧತಿಯಿದೆ. ಅಲ್ಲಿಯಿರುವ 25 ಟಿ.ಎಂ.ಸಿ. ನೀರನ್ನು ನಾವು ಸರಿಯಾಗಿ ಬಳಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅಲ್ಲಿರುವ canal ಗಳು ಯಾವುವೂ ಸರಿಯಿಲ್ಲ. ಅಲ್ಲಿರುವ canal ಗಳನ್ನು ತಗ್ಗಿನಿಂದ ಒಡ್ಡಿನ ಕಡೆಗೆ ಹಾಕಿದ್ದಾರೆ. ಆ ಭಾಗದಲ್ಲಿ ನಾನೇ ಓಡಾಟ ಮಾಡಿ ನೋಡಿದ್ದೇನೆ. ಆ canal ಗಳಲ್ಲಿ ಗಿಡಗಂಟಿಗಳು, ಕೆಸರು, ಮಣ್ಣು ಎಲ್ಲವೂ ಬಿದ್ದಿದೆ. ಹೋದ ವರ್ಷ ನಮಗೆ ಮಳೆ ಚೆನ್ನಾಗಿ ಬಂದಿತು. ಆದರೆ ನೀರು ಹರಿಸುವುದಕ್ಕೆ canal ಗಳು, distributaries ಗಳು ಸರಿಯಾಗಿಲ್ಲ. ಇದನ್ನು ನಾವು ವ್ಯವಸ್ಥೆ ಮಾಡಬೇಕು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಇನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ನಾನು ಮತ್ತು ನಮ್ಮ ಸಹ ಸದಸ್ಯರು ಹೇಳುತ್ತಲೇ ಇರುತ್ತೇವೆ. ಆದರೆ ಯು.ಕೆ.ಪಿ. ಯೋಜನೆಗೆ ಗಮನಾರ್ಹವಾದಂಥ ಹಣದ ಪೂರೈಕೆ ಆಗಿರುವುದಿಲ್ಲ. ಭೀಮಾ ನದಿಗೆ ಅಡ್ಡಲಾಗಿ ಕಟ್ಟಿರುವ ಕೊಯ್ನಾ ಅಣೆಕಟ್ಟಿನ ಬಗ್ಗೆ ಹೇಳುವುದಾದರೆ...

**ಸಭಾಪತಿಯವರು:-** ಮಾನ್ಯ ತಳವಾರ್ ಸಾಬಣ್ಣ ಅವರೆ, 20 ನಿಮಿಷ ಆಯಿತು. ಬೇಗ ಮುಗಿಸಿ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೆ, ಇನ್ನು ಐದು ನಿಮಿಷ.. ಮುಗಿಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದಂಥ ಉಲ್ಲೇಖವನ್ನು ನಾನು ಮಾಡಬೇಕಾಗಿದೆ. ಅದೇನೆಂದರೆ ಕರ್ನಾಟಕದೊಳಗೊಂದು ಕರ್ನಾಟಕವನ್ನು ನಾವು ಕಾಣುತ್ತಿದ್ದೇವೆ. ಕರ್ನಾಟಕದೊಳಗೊಂದು ಕರ್ನಾಟಕ ಎಂದರೇನು? ಇಲ್ಲಿ ಕರ್ನಾಟಕ ಒಂದು ರಾಜ್ಯ. ಸರ್ಕಾರ ಒಂದು ರಾಜ್ಯ. ಆದರೆ ಮುಂದುವರೆದ ಭಾಗ, ಹಿಂದುಳಿದ ಭಾಗ. ಮುಂದುವರೆದ ಭಾಗ ಮತ್ತು ಹಿಂದುಳಿದ ಭಾಗ ಎನ್ನುವಂತೆ ಎರಡು ರೀತಿಯಾದ ವ್ಯತ್ಯಾಸವನ್ನು ನಾವು ಇಲ್ಲಿ ಕಾಣುತ್ತೇವೆ. ಏಕೆಂದರೆ ಪ್ರಾದೇಶಿಕ ಅಸಮತೋಲನ ನಿವಾರಣೆ ಮಾಡಬೇಕೆಂದು ಡಾ:ಡಿ.ಎಂ.ನಂಜುಂಡಪ್ಪ ಅವರ ವರದಿ ಬಂದಿತು. ಇಲ್ಲಿ ಅನುದಾನಗಳ ಆಧಾರಿತ ಅಭಿವೃದ್ಧಿ ಮಾಪನ ಅವ್ಯವಸ್ಥೆ ಸಲ್ಲದು. ಫಲಿತಾಂಶ ಆಧಾರಿತ ವ್ಯವಸ್ಥೆಗೆ ಆದ್ಯತೆ ನೀಡಿ ಅನುದಾನ ನೀಡುವ ಪದ್ಧತಿ ಜಾರಿಯಾಗಬೇಕು. ಅಂದರೆ result-oriented investment ಆಗಬೇಕು. ಇಲ್ಲಿ ಪ್ರೊ. ನಂಜುಂಡಪ್ಪನವರ ವರದಿಯ ಪ್ರಕಾರ ನಾವು ಕೆ.ಕೆ.ಆರ್.ಡಿ.ಬಿ. ಪ್ರಾರಂಭ ಮಾಡಿದ್ದೇವೆ. ವಿಶೇಷವಾಗಿ ಉತ್ತರ ಕರ್ನಾಟಕಕ್ಕೆ ರೂ.32,000 ಕೋಟಿ ಬಂದಿತ್ತು. ಸುಮಾರು 15 ವರ್ಷಗಳಲ್ಲಿ ರೂ.32,000 ಕೋಟಿ ಬಂದಿದ್ದು, ಅದರಲ್ಲಿ ರೂ.20,000 ಕೋಟಿಗಳು ಕೆ.ಕೆ.ಆರ್.ಡಿ.ಬಿ.ಗೆ ಬಂದಿದ್ದನ್ನು ನಾವು ಕಾಣುತ್ತೇವೆ.

(ಮುಂದು)

(364) 12.03.2026 05.50 LL-RN (ಸಭಾಪತಿಯವರ ಉಪಸ್ಥಿತಿ)

**ಡಾ॥ ತಳವಾರ್ ಸಾಬಣ್ಣ (ಮುಂದು):-**

ಒಂದು ವೇಳೆ ಈ ಹಣ ಕೂಡ ಸರಿಯಾಗಿ ಬಳಕೆಯಾಗಿದ್ದರೆ, ಅಲ್ಲಿ ಸ್ವರ್ಗ ನಿರ್ಮಾಣವಾಗಬೇಕಾಗಿತ್ತು. ಆದರೆ, ಕಲ್ಯಾಣ ಕರ್ನಾಟಕ ಎಂದರೆ, ಹಿಂದುಳಿದ ಭಾಗ ಎಂಬ ಹಣೆಪಟ್ಟಿ ಇವೊತ್ತಿನವರೆಗೂ ಆ ಭಾಗದಲ್ಲಿ ಇರುವುದನ್ನು ನಾವು ಕಾಣುತ್ತೇವೆ. ಏಕೆಂದರೆ, ಸಾಮಾನ್ಯವಾಗಿ ಈ ಭಾಗದಲ್ಲಿ ಒಣ ಬೇಸಾಯ ಹೆಚ್ಚಾಗಿದೆ. ಜೊತೆಗೆ, ಇರತಕ್ಕಂತಹ ಹಣದ ಬಳಕೆ ಸರಿಯಾಗಿ ಆಗುತ್ತಿಲ್ಲ. ಹಾಗಾದರೆ, ರೂ.32,0000 ಹಣ ಎಲ್ಲಿಗೆ ಹೋಯಿತು? ಏಕೆಂದರೆ, ಕಳೆದ ವರ್ಷ ನಮ್ಮ ಮಾನ್ಯ ಮುಖ್ಯಮಂತ್ರಿಗಳು ರೂ.5,000 ಕೋಟಿಗಳ ಹಣವನ್ನು ನಮ್ಮ ಭಾಗಕ್ಕೆ ಘೋಷಣೆ ಮಾಡಿದ್ದರು. ಈ ವರ್ಷವೂ ಕೂಡ ನಮ್ಮ ಭಾಗಕ್ಕೆ ರೂ.5,000 ಕೋಟಿಗಳ ಹಣವನ್ನು ಘೋಷಣೆ ಮಾಡಿರುತ್ತಾರೆ. ಅದನ್ನು ನಮ್ಮ ಭಾಗದವರೆಲ್ಲರೂ ಕೇಳಿ, ಅತ್ಯಂತ ಸಂತೋಷದಿಂದ ಚಪ್ಪಾಳೆ ತಟ್ಟಿರುತ್ತೇವೆ. ಆದರೆ, ನಮ್ಮ ಭಾಗಕ್ಕೆ ಬಂದಿದ್ದು ಎಷ್ಟು ಹಣ? ಈ ಸದನದಲ್ಲಿ ಸಭಾನಾಯಕರಾದ ಶ್ರೀ ಎನ್.ಎಸ್. ಬೋಸರಾಜುರವರು ನನ್ನ ಪ್ರಶ್ನೆಗೆ ಉತ್ತರ ನೀಡಬೇಕು. ಅದೇನೆಂದರೆ, ನನಗೆ ಗೊತ್ತಿರುವ ಹಾಗೆ ಕಳೆದ ವರ್ಷ ಘೋಷಣೆ ಮಾಡಿದಂತಹ ರೂ.5,000 ಕೋಟಿಗಳ ಹಣದಲ್ಲಿ ಕೇವಲ ರೂ.900 ಕೋಟಿಗಳ ಹಣಕ್ಕೆ ಮಾತ್ರ ಕ್ರಿಯಾ ಯೋಜನೆ ಅಪ್ರೂವಲ್ ಆಗಿರುತ್ತದೆ. ಅಂದರೆ, ಘೋಷಣೆಯಾಗಿದ್ದು ರೂ.5,000 ಕೋಟಿ. ಆದರೆ, ನಮ್ಮ ಭಾಗಕ್ಕೆ ಬಂದಂತಹ ಹಣ ಎಷ್ಟು ? ಅಂದರೆ, ಸುಮ್ಮನೆ ಘೋಷಣೆ ಮಾಡುವುದೇ ಅಥವಾ ಡಮ್, ಡಮ್ ಎಂದು ಭಾರಿಸಿದರೆ ಹೇಗೆ? ಆ ಭಾಗದ ಜನರಿಗೆ ಇದು ಗೊತ್ತಾಗಬೇಕಲ್ಲವೇ? ಈ ಹಣ ನಮ್ಮ ಭಾಗಕ್ಕೆ ಯಾವಾಗ ಬರುತ್ತದೆ? ಮಾನ್ಯ ಸಭಾಪತಿಯವರೇ, ತಾವುಗಳು ನನ್ನ ಮಾತಿಗೆ ನಗುತ್ತಿದ್ದೀರಿ. ಇದರ ಅರ್ಥ ಏನು? ಅಂದರೆ, ನಾನು ಮಾತನಾಡುತ್ತಿರುವುದು ಸರಿಯಿದೆಯೇ ಅಥವಾ ತಪ್ಪಾಗಿದೆಯೋ ಎಂದು ಅರ್ಥವೇ?

**ಸಭಾಪತಿಯವರು:-** ಮಾನ್ಯ ತಳವಾರ್ ಸಾಬಣ್ಣನವರು ನಾನು ನಿಮ್ಮ ಮಾತಿಗೆ ನಗುತ್ತಿಲ್ಲ. ಬದಲಾಗಿ, ಶ್ರೀ ಎಂ. ನಾಗರಾಜು ಮತ್ತು ಶ್ರೀ ರಮೇಶ್ ಬಾಬುರವರ ಸಲುವಾಗಿ ನಗುತ್ತಿದ್ದೇನೆ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಹಾಗದರೆ ನಮ್ಮ ಕಲ್ಯಾಣ ಕರ್ನಾಟಕ ಭಾಗಕ್ಕೆ ಘೋಷಣೆಯಾದಂತಹ ಹಣ ಎಲ್ಲಿಗೆ ಹೋಯಿತು?

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಡಾ॥ ತಳವಾರ್ ಸಾಬಣ್ಣನವರು ಮಾತನಾಡುತ್ತಾ, "ಸ್ವರ್ಗ, ನರಕ" ಎಂದು ಹೇಳಿದರು. ಅದರಂತೆ, ಈ ಸರ್ಕಾರ ಶ್ರೀ ಎನ್.ಎಸ್. ಬೋಸರಾಜುರವರಿಗೆ ಸ್ವರ್ಗ, ಇನ್ನುಳಿದವರಿಗೆ ನರಕ ಎಂದು ಇರಬಹುದು.

**ಡಾ॥ ತಳವಾರ್ ಸಾಬಣ್ಣ:-** ಏಕೆಂದರೆ, ಮಾನ್ಯ ಸಭಾನಾಯಕರೇ ಇಲ್ಲಿ ನಮಗೆ ಸೂಪರ್ ಸಿ.ಎಂ. ಆಗಿದ್ದಾರೆ. ಅಲ್ಲದೇ, ಈ ಸದನದಲ್ಲಿ ಪವರ್ ಆಫ್ ಅಟಾರ್ನಿಯನ್ನು ಅವರಿಗೆ ಕೊಟ್ಟಿರುತ್ತಾರೆ. ಅವರು ಎಲ್ಲಾ ಮಂತ್ರಿಗಳನ್ನು ಅವರೇ ನೋಡಿಕೊಳ್ಳುತ್ತಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ತಮ್ಮ ಪ್ರಶ್ನೆಗೆ ಅವರೇ ಉತ್ತರ ನೀಡುತ್ತಾರೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಹಿಂದೆ ಬಿ.ಜೆ.ಪಿ. ಸರ್ಕಾರದ ಅವಧಿಯಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಅನುದಾನ ಕೊಡದೇ ಇದ್ದ ಕಾರಣ ಆ ಭಾಗ ಹಿಂದುಳಿದಿರುತ್ತದೆ. ಆದರೆ, ಇವೊತ್ತಿನ ದಿವಸ ನಮ್ಮ ಸರ್ಕಾರ ಕಲ್ಯಾಣ ಕರ್ನಾಟಕ ಭಾಗಕ್ಕೆ ಅನೇಕ ವಿಶ್ವವಿದ್ಯಾಲಯಗಳನ್ನು ಕೊಟ್ಟಿರುತ್ತೇವೆ. ಈಗತಾನೇ, ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಮಾತನಾಡುತ್ತಾ, ಅವರು ಹೆಚ್ಚುವರಿಯಾಗಿ ಕೊಟ್ಟಿರುವುದನ್ನು ತಾವು ಈಗಾಗಲೇ ಮಾತನಾಡುವಾಗ ಹೇಳಿರುತ್ತೀರಿ. ಅದರಂತೆ, ಸುಮಾರು ರೂ.೮೦೦ ಕೋಟಿಗಳ ಹಣವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸುಮಾರು ರೂ.870 ಕೋಟಿಗಳ ಹಣವನ್ನು ಕೊಟ್ಟು ಕಲ್ಯಾಣ ಕರ್ನಾಟಕ ಭಾಗದ ಅನೇಕ ಕಡೆಗಳಲ್ಲಿ ಆಸ್ಪತ್ರೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಶ್ರೀ ಶರಣಬಸಪ್ಪ ದರ್ಶನಾಪೂರರವರು ಸಹ ಕೆ.ಕೆ.ಆರ್.ಡಿ.ಬಿ. ಸದಸ್ಯರಿದ್ದಾರೆ. ಅಲ್ಲದೇ, ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಕಡೆಗಳಲ್ಲಿ 'ಶಿರಪುರ ಮಾಡೆಲ್' ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡಿ, ಅಂತರ್ಜಲ ಮಟ್ಟವನ್ನು ಹೆಚ್ಚಿಸಲಾಗುತ್ತಿದೆ. ಇದರ ಜೊತೆಗೆ, 'ಕಲ್ಯಾಣ ಪಥ' ಯೋಜನೆಯಡಿಯಲ್ಲಿ 1000 ಕಿಲೋಮೀಟರ್‌ಗಳಿಗೂ ಹೆಚ್ಚಿನ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕೆ.ಕೆ.ಆರ್.ಡಿ.ಬಿ. ಅನುದಾನದಡಿಯಲ್ಲಿ ಹಣ ನೀಡಲಾಗಿರುತ್ತದೆ. ಹಾಗಾಗಿ, ನಮ್ಮ ಸರ್ಕಾರದ ಅವಧಿಯಲ್ಲಿ ಎಲ್ಲಾ ರೀತಿಯಿಂದಲೂ ಅಭಿವೃದ್ಧಿ ಮಾಡುತ್ತಿದ್ದೇವೆ. ಆದರೆ, ಮಾನ್ಯ ಸದಸ್ಯರಿಗೆ ಇದು ಕಾಣದೇ, ಈ ರೀತಿ ಮಾತನಾಡಿದರೆ ನಾವು ಏನು ಮಾಡುವುದು?

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಈ ರೀತಿ ಕಾಣಲಿಲ್ಲ ಎಂದು ಹೇಳಿದರೆ ನಾವು ಏನು ಹೇಳುವುದಕ್ಕಾಗುತ್ತದೆ? ಅವರಿಗೆ ಅದು ಕಂಡರೆ ಸಾಕು.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಈ ವಿಚಾರ ಅವರಿಗೂ ಸಹ ಗೊತ್ತಿದೆ. ಆದರೆ, ಇದು ಅವರ ಕೊನೆಯ ಭಾಷಣ ಎಂದು ಅವರು ಮಾತನಾಡುತ್ತಿದ್ದಾರಷ್ಟೇ.

**ಶ್ರೀ ಎಂ.ಬಿ. ಪಾಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರ ಮಾನ್ಯ ಸದಸ್ಯರಿಗೂ ಚೆನ್ನಾಗಿ ಗೊತ್ತಿದೆ. ಅದೇನೆಂದರೆ, ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರದ ಅಧಿಕಾರದಲ್ಲಿದ್ದಾಗ...

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ವಿಚಾರ ಬಿಟ್ಟು ಮಾತನಾಡಲಿ. ಯಾವಾಗಲೂ ಕೇಂದ್ರ ಸರ್ಕಾರದ ಬಗ್ಗೆ ಮಾತನಾಡುವುದಾದರೆ, ಇಲ್ಲಿ ರಾಜ್ಯ ಸರ್ಕಾರ ಏತಕ್ಕೆ ಇರಬೇಕು? ಹಾಗಾದರೆ, ನಮ್ಮ ರಾಜ್ಯದಲ್ಲಿ President's rule ಹಾಕಿಬಿಡಲಿ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಹಿಂದೆ ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರದ ಅಧಿಕಾರದಲ್ಲಿದ್ದಾಗ, ಶ್ರೀ ಎಲ್.ಕೆ. ಅಡ್ವಾಣಿಯವರು, "ಅನುಚ್ಛೇದ 371(ಜೆ) ಮಾಡುವುದಕ್ಕೆ ಬರುವುದಿಲ್ಲ" ಎಂದು ಅದನ್ನು ರಿಜೆಕ್ಟ್ ಮಾಡಿರುತ್ತಾರೆ.

(ಗೊಂದಲ)

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ತದನಂತರ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಶ್ರೀ ಧರಂ ಸಿಂಗ್‌ರವರು ಸಾಕಷ್ಟು ಪ್ರಯತ್ನ ಮಾಡಿ, ಶ್ರೀ ಮನಮೋಹನ್‌ಸಿಂಗ್ ರವರ ಕಾಲದಲ್ಲಿ ಅನುಚ್ಛೇದ 371(ಜೆ) ಕಾಯಿದೆಯನ್ನು ಜಾರಿಗೆ ತಂದಿರುತ್ತಾರೆ. ಅದಕ್ಕೆ ಮೊದಲು ಅನುಚ್ಛೇದ 371(ಜೆ) ಎಲ್ಲಿತ್ತು? ಒಂದು ಅಸಾಧ್ಯವಾದ ಮಾತು, ಕೊಡುವುದಕ್ಕೆ ಆಗುವುದಿಲ್ಲ ಎಂದು ಬಿ.ಜೆ.ಪಿ. ಯವರು ಹೇಳಿದ್ದನ್ನು ನಾವು ಸಾಧ್ಯ ಮಾಡಿ ತೋರಿಸಿರುತ್ತೇವೆ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅನುಚ್ಛೇದ 371(ಜೆ) ಅಡಿಯಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ?

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅನುಚ್ಛೇದ 371(ಜೆ) ಅಡಿಯಲ್ಲಿ ಎಷ್ಟು ಹುದ್ದೆಗಳ ನೇಮಕಾತಿ ಮಾಡಲಾಗಿದೆ ಎಂಬ ಬಗ್ಗೆ ನನ್ನ ಬಳಿ ಮಾಹಿತಿ ಇರುವುದಿಲ್ಲ. ನನಗೂ ಕೂಡ ಈ ವಿಚಾರದಲ್ಲಿ ಹೊಟ್ಟೆಹುರಿ ಇದೆ. ಏಕೆಂದರೆ, ನಮ್ಮದು ಕೂಡ ಪಕ್ಕದ ವಿಜಯಪುರ ಜಿಲ್ಲೆಯಾಗಿದ್ದು, ಅನುಚ್ಛೇದ 371(ಜೆ) ಅಡಿಯಲ್ಲಿ ನಮ್ಮ ಜಿಲ್ಲೆ ಸೇರಿಕೊಂಡಿರುವುದಿಲ್ಲ. ಆದಾಗ್ಯೂ, ನಾವು ಅನುಚ್ಛೇದ 371(ಜೆ) ಬಗ್ಗೆ ಮಾತನಾಡುತ್ತಿದ್ದೇವೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ತಾವು ನನಗೆ ಒಂದು ದಿನ ಅವಕಾಶ ನೀಡಿ. ನಾನು ಬೇಕಾದರೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಬಗ್ಗೆ ಪಾಯಿಂಟ್-ಟು-ಪಾಯಿಂಟ್ ಚರ್ಚೆ ಮಾಡುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅದಕ್ಕಿಂತಲೂ ದೊಡ್ಡ ಪಾಯಿಂಟ್‌ಗಳನ್ನು ನಾವು ಕೊಡುತ್ತೇವೆ.

**ಸಭಾಪತಿಯವರು:-** ಆಯಿತು, ಸಾಕು. ಮಾನ್ಯ ತಳವಾರ್ ಸಾಬಣ್ಣನವರೇ, ತಾವು ಮಾತನಾಡಿ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ನಮ್ಮ ಭಾಗದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ, ನಮ್ಮ ತಂದೆ-ತಾಯಂದಿರು, ಮಗ ದೊಡ್ಡವನಾಗಿದ್ದಾನೆಂದು, ನಮಗೆ ಮದುವೆ ಮಾಡುತ್ತಾರೆ. ಮದುವೆ ಮಾಡಿಕೊಂಡ ನಂತರವೂ ಆ ಮಗ ತನ್ನ ತಂದೆ-ತಾಯಂದಿರ ಮೇಲೆ ಅವಲಂಬಿತರಾದರೆ, ಮದುವೆ

ಮಾಡಿಕೊಂಡ ಮಗ ಯಾವಾಗ ದುಡಿಯಬೇಕು? ಅಂದರೆ, ತಂದೆ-ತಾಯಂದಿರ ಜವಾಬ್ದಾರಿ ಏನಿರುತ್ತದೆ, ಅದನ್ನು ಅವರು ಮಾಡುತ್ತಾರೆ. ಆದರೆ, ಮದುವೆ ಮಾಡಿಕೊಂಡ ನಂತರ ಆ ಮಗನ ಜವಾಬ್ದಾರಿ ಏನಿರುತ್ತದೆ, ಅದನ್ನು ಆ ಮಗ ಮಾಡಬೇಕು. ಅದೇ ರೀತಿ, ನಮ್ಮ ರಾಜ್ಯ ಸರ್ಕಾರ ಪ್ರತಿಯೊಂದು ವಿಷಯಕ್ಕೂ ಕೂಡ, ಕೇಂದ್ರ ಸರ್ಕಾರ ಎಂದು ಹೇಳಿದರೆ, ರಾಜ್ಯ ಸರ್ಕಾರ ಏತಕ್ಕೆ ಇರಬೇಕು? ನಮ್ಮ ರಾಜ್ಯದಲ್ಲಿ President's rule ಹಾಕಿದರೆ ಬಹಳ ಚೆನ್ನಾಗಿರುತ್ತದೆ. ಏಕೆಂದರೆ, ಪ್ರತಿಯೊಂದು ವಿಚಾರಕ್ಕೂ ಕೇಂದ್ರ ಸರ್ಕಾರ ಎಂದು ಹೇಳುವುದಾದರೆ, ಇವರು ಏನು ಮಾಡುತ್ತಾರೆ?

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಕ್ಕಳು ದುಡಿದಂತಹ ಹಣವನ್ನೆಲ್ಲವನ್ನೂ ತೆಗೆದುಕೊಂಡು, ಅದರಲ್ಲಿ ಮಕ್ಕಳಿಗೆ ಕೊಡದೇ ಇದ್ದರೆ, ಆ ಮಕ್ಕಳು ಏನು ಭಿಕ್ಷೆ ಬೇಡಬೇಕೇ? ಅದಕ್ಕಾಗಿಯೇ, ಕೇಂದ್ರ ಸರ್ಕಾರದವರು ನಮ್ಮಿಂದ ಜಿ.ಎಸ್.ಟಿ. ಯಲ್ಲಿ ರೂ.100 ತೆಗೆದುಕೊಂಡು ರೂ.0.13 ಪೈಸೆ ಕೊಡುವುದು?

**ಸಭಾಪತಿಯವರು:-** ಮಾನ್ಯ ಡಿ.ಟಿ. ಶ್ರೀನಿವಾಸ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ತಳವಾರ್ ಸಾಬಣ್ಣನವರೇ, ತಮ್ಮ ಸಮಯ ಮುಗಿದಿದೆ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಆಯಿತು ಸರ್. ಪ್ರೊ. ಎಂ. ಗೋವಿಂದರಾವ್ ರವರ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಡಾ॥ ಡಿ.ಎಂ. ನಂಜುಂಡಪ್ಪನವರ ವರದಿ ಪ್ರಕಾರ ಇಲ್ಲಿ, 114 ತಾಲ್ಲೂಕುಗಳಲ್ಲಿ ಶೇಕಡ 65 ರಷ್ಟು ಹಿಂದುಳಿದ ತಾಲ್ಲೂಕುಗಳಾಗಿರುತ್ತವೆ. ಈಗ ಪ್ರೊ. ಎಂ. ಗೋವಿಂದ ರಾವ್‌ರವರ ವರದಿಯ ಪ್ರಕಾರ ಅದು ಶೇಕಡ 75 ರಷ್ಟು ಹಿಂದುಳಿರುತ್ತವೆ. ಅಂದರೆ, ಒಂದೇ ಒಂದು ತಾಲ್ಲೂಕು ಹಿಂದುಳಿದ ತಾಲ್ಲೂಕು ಪಟ್ಟಿಯಿಂದ ಮುಂದುವರೆದ ತಾಲ್ಲೂಕಾಗಿ ಅಭಿವೃದ್ಧಿ ಹೊಂದಿರುವುದಿಲ್ಲ. ಹಾಗಾದರೆ, ನಮ್ಮ ಭಾಗಕ್ಕೆ ಬಂದಂತಹ ಹಣ ಎಲ್ಲಿ ಹೋಯಿತು? ಬೆಂಗಳೂರಿನಿಂದ ಬೆಳಗಾವಿ ಹೋಗಲಿ ಅಥವಾ ಬೆಂಗಳೂರಿನಿಂದ ಬೀದರ್‌ಗೆ ಹೋಗಲಿ. ಎಲ್ಲಿ ಹೋದರೂ ಸಹ, ನಾವು ಅಂತರ ಕಾಣುತ್ತೇವೆ. ಒಂದೇ ರಾಜ್ಯ. ಆದರೆ, ಅಂತರ ಬೇರೆ ಬೇರೆ ಕಾಣುತ್ತೇವೆ. ಅಂದರೆ, ಹಿಂದುಳಿದ ಭಾಗ ಮತ್ತು ಮುಂದುವರೆದ ಭಾಗ ಎನ್ನುವುದನ್ನು ನಾನು ಇಲ್ಲಿ ಕಾಣುತ್ತೇವೆ.

**ಸಭಾಪತಿಯವರು:-** ತಮ್ಮ ಸಮಯ ಮುಗಿದಿದೆ. ತಾವು 5 ನಿಮಿಷ ಕಾಲಾವಕಾಶ ಕೇಳಿದ್ದು, ಈಗಾಗಲೇ 7 ನಿಮಿಷ ಸಮಯ ಆಗಿರುತ್ತದೆ. ಹಾಗಾಗಿ, ತಾವು ಆದಷ್ಟು ಬೇಗ ತಮ್ಮ ಮಾತನ್ನು ಮುಕ್ತಾಯಗೊಳಿಸಿ.

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಇನ್ನು 5 ನಿಮಿಷದಲ್ಲಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಪ್ರೊ. ಎಂ. ಗೋವಿಂದ ರಾವ್‌ರವರ ವರದಿಯಲ್ಲಿ ಮೂರು ಕಾರಣಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ, ಜಿಲ್ಲಾ ಮಟ್ಟದಲ್ಲಿ ಇರತಕ್ಕಂತಹ ಕಣ್ಮರೆ ಎಂದು ಕಾರಣ ಕೊಟ್ಟಿದ್ದಾರೆ. ಅಂದರೆ, district level matching ಎಂದು ಹೇಳಿದ್ದಾರೆ. ಅಂದರೆ, ನಮ್ಮ ಭಾಗದ ಅಭಿವೃದ್ಧಿಗಾಗಿ ಏನೆಲ್ಲಾ ಕೆ.ಕೆ.ಆರ್.ಡಿ.ಬಿ. ಹಣ

ಖರ್ಚು ಮಾಡುತ್ತೇವೆ, ಅದು ಕೇವಲ ಜಿಲ್ಲಾ ಕೇಂದ್ರದಲ್ಲಿ ಮಾತ್ರ ಖರ್ಚಾಗುತ್ತಿರುತ್ತದೆ. ಉದಾಹರಣೆಗೆ, ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಸುತ್ತಲೂ ಇರುವಂತಹ ರಸ್ತೆಗಳನ್ನು ಮಾತ್ರ ಅಭಿವೃದ್ಧಿ ಮಾಡುವುದು. ಆದಾಗ್ಯೂ, ಆ ರಸ್ತೆಗಳು ಯಾವ ರೀತಿ ಇವೆ ಎಂಬುದು ಬೇರೆ ವಿಚಾರ. ಅಂದರೆ, it is focussed. ಅದೇ ರಾಯಚೂರು ಜಿಲ್ಲೆಯಲ್ಲಿರುವಂತಹ ದೇವದುರ್ಗ ಹಳ್ಳಿಗೆ ಅಥವಾ ಲಿಂಗಸುಗೂರು ಹಳ್ಳಿಯ ಅಭಿವೃದ್ಧಿಗೆ ಕೆ.ಕೆ.ಆರ್.ಡಿ.ಬಿ. ಹಣ ಹೋಗಿರುವುದಿಲ್ಲ. ಕೇವಲ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಆ ಹಣ ಖರ್ಚಾಗುತ್ತಿರುತ್ತದೆ. ಇದು ಅಲ್ಲಿ ಆಗಿರುವಂತಹ ಒಂದು ಎಡವಟ್ಟು. ಎರಡನೆಯದಾಗಿ, ಕ್ಷೇತ್ರಗಳ ಹೊಂದಾಣಿಕೆ ಇಲ್ಲ. ಅಂದರೆ, ಯಾವ ಕ್ಷೇತ್ರಕ್ಕೆ ಆದ್ಯತೆ ಕೊಡಬೇಕು? ಅಂದರೆ, ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ಕೊಡಬೇಕಾಗಿತ್ತು; ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ಕೊಡಬೇಕಾಗಿತ್ತು; ಅದರ ಬದಲಾಗಿ ರಸ್ತೆ ನಿರ್ಮಾಣಕ್ಕೆ ಹಾಗೂ ಕಟ್ಟಡಗಳನ್ನು ಕಟ್ಟುವುದಕ್ಕೆ ಹೆಚ್ಚಿನ ಆದ್ಯತೆ ಕೊಡಲಾಗುತ್ತಿರುತ್ತದೆ. ಅಂದರೆ, ಅಲ್ಲಿ ಹೆಚ್ಚು ಕಮೀಷನ್ ಇರುತ್ತದೆ ಎಂದು ಅಲ್ಲಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆಯೇ? ಇದು ಒಂದು ವಿಷಯ. ಹಾಗಾಗಿ ಮೂರನೆಯ ವಿಚಾರವೇನೆಂದರೆ, ನಮ್ಮದು ಒಂದೇ ರಾಜ್ಯ ಆಗಿದ್ದು, ಒಂದೇ ಸರ್ಕಾರ ಅಧಿಕಾರದಲ್ಲಿ ಇದ್ದರೂ ಸಹ, ಒಳಗಡೆ ಜಿಲ್ಲೆಗಳ ವಿಚಾರದಲ್ಲಿ ಸಾಕಷ್ಟು ಅಂತರ ಇದೆ. ಹಾಗಾಗಿ, ಒಳಗಡೆ ಇರುವಂತಹ ಅಂತರವನ್ನು ಸರಿಪಡಿಸದೇ ಇದ್ದರೆ, ಸರ್ವಾಂಗೀಣ ಅಭಿವೃದ್ಧಿ ಎಂದು ಏನಿದೆ, ಅದನ್ನು ಮಾಡಲು ಸಾಧ್ಯಯೇ ಇಲ್ಲ. ನಮ್ಮ ಕಲ್ಯಾಣ ಕರ್ನಾಟಕಕ್ಕೆ ಹಿಂದುಳಿದ ಭಾಗ ಎನ್ನುವಂಥ ಹಣೆಪಟ್ಟಿ ಇದೆ. ಇದರಿಂದಾಗಿ, ನಾವು ಎಲ್ಲಿ ಹೋದರೂ ಸಹ, ನಾವು ಮಾನಸಿಕವಾಗಿ ಅವಮಾನವಾಗುತ್ತಿರುತ್ತದೆ. ಏಕೆಂದರೆ, ನಾವು ಕಲಬುರಗಿ ಜಿಲ್ಲೆಯವರು ಎಂದು ಹೇಳಿದ ತಕ್ಷಣವೇ, "ನಿಮ್ಮ ಭಾಗದಲ್ಲಿ ಬಹಳ ಬಿಸಿಲು ಅಲ್ಲವೇ? ನೀವು ಬಹಳ ಹಿಂದುಳಿದ ಜಿಲ್ಲೆಯವರು" ಎಂದು ಹೇಳುತ್ತಾರೆ. ಶ್ರೀ ಶರಣಬಸಪ್ಪ ದರ್ಶನಾಪೂರರವರು ಸಹ ಇದೇ ಸದನದಲ್ಲಿ ಹಾಜರಿದ್ದು, ಅವರಿಗೂ ಸಹ ಇದು ಅನುಭವ ಆಗುತ್ತಿರುತ್ತದೆ. ಆದರೆ, ಅವರು ಹೇಳಿಕೊಳ್ಳುವುದಿಲ್ಲ. ಏಕೆಂದರೆ, ಅವರು ಆಡಳಿತ ಪಕ್ಷದ ಸ್ಥಾನದಲ್ಲಿ ಕುಳಿತಿರುತ್ತಾರೆ. ಒಂದು ವೇಳೆ ನಮ್ಮ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿ ಹೊಂದಿದ್ದರೆ, ಪ್ರತಿ ವರ್ಷ ನಾವು ಏತಕ್ಕೆ ಗುಳೆ ಹೋಗುತ್ತಿದ್ದೆವು? ಯಾದಗಿರಿ ಜಿಲ್ಲೆ ಗುಳೆ ಹೋಗುವುದಕ್ಕೆ ಏತಕ್ಕೆ ಪ್ರಸಿದ್ಧಿಯಾಗುತ್ತಿತ್ತು? ಹಾಗಾಗಿ, ಆರೋಗ್ಯಕ್ಕೆ, ಶಿಕ್ಷಣಕ್ಕೆ, ಉದ್ಯೋಗಕ್ಕೆ ನಾವು ಆದ್ಯತೆ ಕೊಡಬೇಕು ಎಂದು ಹೇಳುತ್ತೇನೆ. ಜೊತೆಗೆ, ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲ್ಯಾಣ ಪಥ, ಕಲ್ಯಾಣ ರಥ ಎಂದು ಹೇಳಿದರು. ಈ ಶಬ್ದಗಳು ಬಹಳ ಉತ್ಕೃಷ್ಟವಾಗಿವೆ. ಬಹಳ ಚೆನ್ನಾಗಿವೆ. ಆದರೆ, ಫಲಿತಾಂಶ ತೃಪ್ತಿಕರವಾಗಿರುವುದಿಲ್ಲ. ಹಾಗಾಗಿ, ಈ ವಿಷಯವನ್ನು ತಮ್ಮ ಮುಖಾಂತರ ಸರ್ಕಾರ ಗಮನಕ್ಕೆ, ಎಲ್ಲಾ ಅಭಿವೃದ್ಧಿ ಪರವಾದಂತಹ ಯೋಜನೆಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತರಬೇಕು. ಕೆ.ಕೆ.ಆರ್.ಡಿ.ಬಿ. ಘೋಷಣೆ ಮಾಡಿರುವಂತಹ ಸಂಪೂರ್ಣ ಹಣ ಬಳಕೆಯಾಗಬೇಕು. ಕೇವಲ ಘೋಷಣೆ, ಘೋಷಣೆಗಳಲ್ಲಿ ಆಗಿರಬಾರದು. ಪತ್ರಿಕಾ ಮಾಧ್ಯಮಗಳಲ್ಲಿ ಆಗಿರಬಾರದು. ಘೋಷಣೆಯಾದಂತಹ ಹಣ ಸಂಪೂರ್ಣವಾಗಿ ಬಳಕೆಯಾಗಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಪಡಿಸಿ, ತಾವು ನನಗೆ 30

ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಏಕೆಂದರೆ, ಇದು ನನ್ನ ಕೊನೆಯ ಭಾಷಣ. ತಮಗೆ ಕೃತಜ್ಞತೆ ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 10 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 5 ಗಂಟೆ 58 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ನಾಳೆ ಅಂದರೆ, ದಿನಾಂಕ 13ನೇ ಮಾರ್ಚ್ ಮಾಹೆ 2026ರಂದು ಶುಕ್ರವಾರ ಬೆಳಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)**